SUPREME AUDIT INSTITUTION OF INDIA
लोकहितार्थ सत्यनिष्ठा
Dedicated to Truth in Public Interest

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ

ಕರ್ನಾಟಕ ಸರ್ಕಾರ

2024ರ ವರದಿ ಸಂಖ್ಯೆ 06

(ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್)

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ

ಕರ್ನಾಟಕ ಸರ್ಕಾರ

2024ರ ವರದಿ ಸಂಖ್ಯೆ 06

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ–ಸಿವಿಲ್

ವಿಷಯಸೂಚಿ

ಕಂಡಿಕೆ	ವಿಷಯಸೂಚಿ	ಪುಟ ಸಂಖ್ಯೆ
	ಮುನ್ನುಡಿ	v
	ಕಾರ್ಯನಿರ್ವಾಹಣಾ ಸಾರಾಂಶ	vii
ಅಧ್ಯಾಯ–I	**ಪರಿಚಯ**	
1.1	ಪ್ರಾಥಮಿಕ ಶಿಕ್ಷಣ	1
1.2	ಪ್ರಾಥಮಿಕ ಶಿಕ್ಷಣ ಇಲಾಖೆಯ ಸಂಘಟನಾ ವ್ಯವಸ್ಥೆ	1
1.3	ಲೆಕ್ಕಪರಿಶೋಧನಾ ಉದ್ದೇಶಗಳು	2
1.4	ಕೃತಜ್ಞತೆ	3
1.5	ಲೆಕ್ಕಪರಿಶೋಧನಾ ಅವಲೋಕನಗಳ ಆಯೋಜನೆ	4
ಅಧ್ಯಾಯ–II	**ಗುರಿಗಳು, ದೂರದೃಷ್ಟಿ, ನೀತಿಗಳು ಮತ್ತು ಯೋಜನೆ**	
2.1	ಶಿಕ್ಷಣದ ಮೇಲೆ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ)–4	5
2.2	ಸುಸ್ಥಿರ ಅಭಿವೃದ್ಧಿ ಗುರಿ ಕಾರ್ಯಕ್ಷಮತೆಯಲ್ಲಿ ಕರ್ನಾಟಕದ ಸ್ಥಿತಿ	6
2.3	ವಿಷನ್–2030ರಲ್ಲಿ ಪ್ರಮುಖ ಕಾರ್ಯಕ್ಷಮತೆ ಸೂಚಕಗಳು	7
2.4	ವಿದ್ಯಾರ್ಥಿಗಳ ಟ್ರ್ಯಾಕಿಂಗ್‌ಗಾಗಿ ಎಸ್‌ಎಟಿಎಸ್ ಅನ್ನು ಬಳಸದಿರುವುದು	10
2.5	ಸುಸ್ಥಿರ ಅಭಿವೃದ್ಧಿ ಗುರಿ–4ರ ಸೂಚಕಗಳನ್ನು ಮೇಲ್ವಿಚಾರಣೆ ಮಾಡಲು ದತ್ತಾಂಶ ಸಂಗ್ರಹಣೆ	12
2.6	ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ಹೂಡಿಕೆಯ ಕೊರತೆ	13
2.7	ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ	17
2.8	ಯೋಜನೆ	19
ಅಧ್ಯಾಯ–III	**ಪ್ರವೇಶ ಮತ್ತು ಇಕ್ವಿಟಿ ಮಧ್ಯಸ್ಥಿಕೆಗಳು**	
3.1	ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಮತ್ತು ದಾಖಲಾತಿ	23
3.2	ವಿವಿಧ ಆಡಳಿತ ಮಂಡಳಿಗಳ ಅಡಿಯಲ್ಲಿ ಶಾಲೆಗಳಲ್ಲಿ ದಾಖಲಾತಿ ಪ್ರವೃತ್ತಿಗಳು	24
3.3	ಮಧ್ಯಸ್ಥಿಕೆಗಳಿಗಾಗಿ ನಿಧಿಯ ಮೂಲಗಳು	25
3.4	ಪ್ರಾಥಮಿಕ ಶಿಕ್ಷಣಕ್ಕಾಗಿ ಸಮಗ್ರ ಶಿಕ್ಷಾ ಅಭಿಯಾನ ನಿಧಿಗಳು	26
3.5	ಮಕ್ಕಳ ದತ್ತಾಂಶವನ್ನು ನಿಯತಕಾಲಿಕವಾಗಿ ತಯಾರಿಸಿರಲಿಲ್ಲ	27
3.6	ವಾಸಸ್ಥಳಗಳಿಗೆ ಶಾಲೆಗಳ ಲಭ್ಯತೆ	28
3.7	ಕಡಿಮೆ ದಾಖಲಾತಿ ಮತ್ತು ಸಂಪನ್ಮೂಲಗಳ ಸಮರ್ಥ ಬಳಕೆಯನ್ನು ನಿಭಾಯಿಸಲು ಶಾಲೆಗಳ ಏಕೀಕರಣ	31
3.8	ಶಾಲೆಯಿಂದ ಹೊರಗುಳಿದ ಮಕ್ಕಳು	33
3.9	ಸಾರಿಗೆ ಭತ್ಯೆ	38
3.10	ಶಾಲೆಗಳ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು	39
3.11	ಇಕ್ವಿಟಿ ಮಧ್ಯಸ್ಥಿಕೆಗಳು	49
3.12	ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಅಂತರ್ಗತ ಶಿಕ್ಷಣ	51

ಕಂಡಿಕೆ	ವಿಷಯಸೂಚಿ	ಪುಟ ಸಂಖ್ಯೆ
3.13	ವಿಶೇಷ ಅಗತ್ಯತೆ ಇರುವ ಮಕ್ಕಳ ಮಧ್ಯಸ್ಥಿಕೆಗಳಿಗೆ ನಿಧಿಯ ಬಳಕೆ	54
ಅಧ್ಯಾಯ–IV	**ಶಿಕ್ಷಕರು ಮತ್ತು ತಂತ್ರಜ್ಞಾನದ ಮಧ್ಯಸ್ಥಿಕೆ**	
4.1	ಶಿಕ್ಷಕರ ಲಭ್ಯತೆ ಮತ್ತು ವಿದ್ಯಾರ್ಥಿ ಶಿಕ್ಷಕರ ಒಟ್ಟಾರೆ ಅನುಪಾತ	61
4.2	ಶಿಕ್ಷಣ ಇಲಾಖೆ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತ	62
4.3	ಶಿಕ್ಷಕರ ಸಂಖ್ಯೆಗೆ ಸಂಬಂಧಿಸಿದಂತೆ ಆರ್‌ಟಿಇ ಮಾನದಂಡಗಳನ್ನು ಅನುಸರಿಸದಿರುವುದು	63
4.4	ಶಿಕ್ಷಕರ ಖಾಲಿಹುದ್ದೆಗಳು	65
4.5	ಮುಖ್ಯ ಶಿಕ್ಷಕರ ಲಭ್ಯತೆ	67
4.6	ವಿಷಯ–ನಿರ್ದಿಷ್ಟ ಶಿಕ್ಷಕರ ಲಭ್ಯತೆ	68
4.7	ಮಾಧ್ಯಮ–ಸೂಕ್ತ ಶಿಕ್ಷಕರ ಲಭ್ಯತೆ	69
4.8	ಶಿಕ್ಷಕರ ನಿಯೋಜನೆ ಮತ್ತು ಶಿಕ್ಷಕರ ತರ್ಕಬದ್ಧತೆಯಲ್ಲಿ ಅಸಮತೋಲನ	69
4.9	ಒಂದೇ ಕೊಠಡಿಯಲ್ಲಿ ಬಹು ತರಗತಿಗಳಿಗೆ ಕಲಿಸುವುದು	71
4.10	ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ	71
4.11	ಶಿಕ್ಷಕರ ಕಾರ್ಯಕ್ಷಮತೆಯ ಮೌಲ್ಯಮಾಪನ	73
4.12	ಶಿಕ್ಷಕರ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಶಿಫಾರಸುಗಳು	74
4.13	ಕಲಿಕೆಯ ಫಲಿತಾಂಶಗಳನ್ನು ಬೆಂಬಲಿಸಲು ಪಠ್ಯಕ್ರಮದ ಆವಿಷ್ಕಾರಗಳು	74
4.14	ಕಲಿಕೆಯನ್ನು ಬೆಂಬಲಿಸಲು ತಂತ್ರಜ್ಞಾನದ ಬಳಕೆ	76
ಅಧ್ಯಾಯ–V	**ಗುಣಮಟ್ಟ ಮಧ್ಯಸ್ಥಿಕೆಗಳು ಮತ್ತು ಫಲಿತಾಂಶದ ಮೌಲ್ಯಮಾಪನ**	
5.1	ಕಾರ್ಯಕ್ಷಮತೆಯ ಶ್ರೇಣೀಕರಣ ಸೂಚ್ಯಂಕ	79
5.2	ಶಿಕ್ಷಣ ಮತ್ತು ಸಂಶೋಧನೆಯ ವಾರ್ಷಿಕ ಸಮೀಕ್ಷೆ	80
5.3	ವಿದ್ಯಾರ್ಥಿಗಳಿಗೆ ಸಮಗ್ರ ವರದಿ ಕಾರ್ಡ್‌ಗಳು	81
5.4	ಅಂತರರಾಷ್ಟ್ರೀಯ ವಿದ್ಯಾರ್ಥಿ ಮೌಲ್ಯಮಾಪನ ಕಾರ್ಯಕ್ರಮಕ್ಕೆ (ಪಿಐಎಸ್‌ಎ) ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು	8
5.5	ಕಲಿಕೆಯ ಫಲಿತಾಂಶಗಳ ಮೌಲ್ಯಮಾಪನ	82
5.6	ಲೆಕ್ಕಪರಿಶೋಧನಾ ಅವಧಿಯಲ್ಲಿ ವಿದ್ಯಾರ್ಥಿಗಳ ಸಮೀಕ್ಷೆ	83
ಅಧ್ಯಾಯ–VI	**ನಿಯಂತ್ರಕ ಮಧ್ಯಸ್ಥಿಕೆಗಳು**	
6.1	ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರದ ಸ್ಥಾಪನೆ	85
6.2	ರಾಜ್ಯ ಶೈಕ್ಷಣಿಕ ಸಲಹಾ ಮಂಡಳಿಯನ್ನು ರಚಿಸದಿರುವುದು	85
6.3	ಕರ್ನಾಟಕ ಶಾಲಾ ಗುಣಮಟ್ಟ ಭರವಸೆ ಮತ್ತು ಮಾನ್ಯತೆ ಪರಿಷತ್ (ಕೆಎಸ್‌ಕ್ಯೂಎಎಸಿ) ಯಿಂದ ಮಾನ್ಯತೆ	86
6.4	ಶಾಲೆಗಳ ಶ್ರೇಣೀಕರಣ	87

ಕಂಡಿಕೆ	ವಿಷಯಸೂಚಿ	ಪುಟ ಸಂಖ್ಯೆ
6.5	ನೋಂದಣಿ, ಮಾನ್ಯತೆ ಮತ್ತು ಮಾನ್ಯತೆಯ ನವೀಕರಣ	88
6.6	ಸರ್ಕಾರಿ ಇಲಾಖೆಗಳಿಂದ ನಡೆಸಲ್ಪಡುವ ಶಾಲೆಗಳನ್ನು ನವೀಕರಣ ಮತ್ತು ಮಾನ್ಯತೆ ಕಾರ್ಯವಿಧಾನಗಳ ಹೊರಗಿಟ್ಟಿರುವುದು	89
6.7	ಶಾಲಾ ಸುರಕ್ಷತಾ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸದಿರುವುದು	90
6.8	ಆನ್‌ಲೈನ್ ಶಾಲೆಗಳ ನಿಯಂತ್ರಣ	93
6.9	ಖಾಸಗಿ ಅನುದಾನರಹಿತ ಸಂಸ್ಥೆಗಳು ವಿಧಿಸುವ ಶುಲ್ಕಗಳ ನಿಯಂತ್ರಣ	94
ಅಧ್ಯಾಯ–VII	**ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ**	
7.1	ಮೌಲ್ಯಮಾಪನ	97
7.2	ಶಾಲೆಗಳ ತಪಾಸಣೆ	97
7.3	ಸರ್ಕಾರಿ ಶಾಲೆಗಳ ಭೂ ಆಸ್ತಿಗಳ ಮೇಲ್ವಿಚಾರಣೆ	98
7.4	ಸಾಮಾಜಿಕ ಲೆಕ್ಕಪರಿಶೋಧನೆ	98
7.5	ಆಂತರಿಕ ಲೆಕ್ಕಪರಿಶೋಧನೆ	99
7.6	ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯಿಂದ ಸಮೀಕ್ಷೆ	99

ಅನುಬಂಧಗಳ ಪಟ್ಟಿ

ಅನುಬಂಧ ಸಂಖ್ಯೆ	ವಿವರಗಳು	ಪುಟ ಸಂಖ್ಯೆ
1.1	ಮಾದರಿ ಶಾಲೆಗಳ ಪಟ್ಟಿ	101
2.1	2021–22ರ ಅವಧಿಯಲ್ಲಿ ಜಿಲ್ಲಾವಾರು ನಿವ್ವಳ ದಾಖಲಾತಿ ದರದ ವಿವರಗಳು	105
2.2	2021–22ರ ಅವಧಿಯಲ್ಲಿ ಜಿಲ್ಲಾವಾರು ಶಾಲೆಯಿಂದ ಹೊರಗುಳಿದ ಮಕ್ಕಳ ದರಗಳು	107
2.3	ಎಸ್‌ಡಿಜಿ ಸೂಚಕಗಳ ಮೇಲಿನ ದತ್ತಾಂಶ	109
3.1	ಜಿಲ್ಲಾವಾರು, ನಿರ್ವಹಣಾವಾರು ಶಾಲೆಗಳ ವಿವರಗಳು	113
3.2	2020–21ರ ಅವಧಿಯಲ್ಲಿ ಜಿಲ್ಲಾವಾರು ಒಟ್ಟು ವಸತಿಗಳ ವಿವರಗಳು	115
3.3(ಎ)	ಹತ್ತಿರದ ಶಾಲೆಗಳಿಗೆ ವಸತಿಗಳ ನಡುವಿನ ಅಂತರವನ್ನು ತೋರಿಸುವ ಛಾಯಾಚಿತ್ರಗಳು	116
3.3(ಬಿ)	500 ಮೀ ವ್ಯಾಪ್ತಿಯೊಳಗಿನ ವಸತಿ ಮತ್ತು ಶಾಲೆಗಳ ನಡುವಿನ ಅಂತರವನ್ನು ತೋರಿಸುವ ಛಾಯಾಚಿತ್ರಗಳು	117
3.4	ಶಾಲೆಯಿಂದ ಹೊರಗುಳಿದ ಮಕ್ಕಳಿಗೆ (ಒಒಎಸ್‌ಸಿ) ವರ್ಷವಾರು ಮತ್ತು ಜಿಲ್ಲಾವಾರು ನಿಧಿ ಹಂಚಿಕೆಯ ವಿವರಗಳು	118
3.5	ಜಿಲ್ಲಾವಾರು ವಸತಿಗಳು ಮತ್ತು ಸಾರಿಗೆ ಭತ್ಯೆ ಬಿಡುಗಡೆ	120
3.6	ಆಯ್ಕೆ ಮಾಡಿ ಸಾರಿಗೆ ಭತ್ಯೆಯನ್ನು ಒದಗಿಸಿದ ಮಕ್ಕಳ ಜಿಲ್ಲಾವಾರು ವಿವರಗಳು	121
3.7	ವಿದ್ಯುತ್ ಸಂಪರ್ಕವಿಲ್ಲದ ಶಾಲೆಗಳ ಜಿಲ್ಲಾವಾರು ವಿವರಗಳು	122
3.8	ವರ್ಗವಾರು ವಿಶೇಷ ಅಗತ್ಯತೆ ಇರುವ ಮಕ್ಕಳ ಮತ್ತು ಸೂಕ್ತ ಮಧ್ಯಸ್ಥಿಕೆಗಳ ವಿವರಗಳು	123
4.1	2021–22ರ ಅವಧಿಯಲ್ಲಿ ಶಿಕ್ಷಣ ಇಲಾಖೆಯಿಂದ ನಿರ್ವಹಿಸಲ್ಪಡುವ ಶಾಲೆಗಳಲ್ಲಿ ಜಿಲ್ಲಾವಾರು ವಿದ್ಯಾರ್ಥಿ–ಶಿಕ್ಷಕರ ಅನುಪಾತದ (ಪಿಟಿಆರ್) ವಿವರಗಳು	125
4.2	ಜಿಲ್ಲಾವಾರು ಶಿಕ್ಷಕರ ಮಂಜೂರಾದ ಸಾಮರ್ಥ್ಯ ಮತ್ತು ಖಾಲಿ ಹುದ್ದೆಗಳು	126
4.3	ಜಿಲ್ಲಾವಾರು ಮತ್ತು ಮಾಧ್ಯಮವಾರು ಶಾಲೆಗಳ ವಿವರಗಳು	127
5.1	ಕಾರ್ಯಕ್ಷಮತೆ ದರ್ಜೆಯ ಸೂಚ್ಯಂಕದ ಮೌಲ್ಯಮಾಪನಕ್ಕಾಗಿ ಡೊಮೇನ್‌ಗಳು, ಸೂಚಕಗಳು ಮತ್ತು ಮಾನದಂಡಗಳು	128
5.2	128 ಮಾದರಿ ಶಾಲೆಗಳಲ್ಲಿ ಗ್ರೇಡ್–4ರ ವಿದ್ಯಾರ್ಥಿಗಳ ಸಾಧನೆ	130
5.3	128 ಮಾದರಿ ಶಾಲೆಗಳಲ್ಲಿ ಗ್ರೇಡ್–7ರ ವಿದ್ಯಾರ್ಥಿಗಳ ಸಾಧನೆ	131
6.1	ಆರ್‌ಟಿಇ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಆರ್‌ಟಿಇ ಶುಲ್ಕದ ಹೆಚ್ಚುವರಿ ಮರುಪಾವತಿಯ ವಿವರಗಳು	132
6.2	ಆರ್‌ಟಿಇ ಅಲ್ಲದ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹೆಚ್ಚುವರಿ ಶುಲ್ಕ	133

ಮುನ್ನುಡಿ

1. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 31 ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಈ ವರದಿಯನ್ನು ಸಂವಿಧಾನದ 151 (2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2. ವರದಿಯು 2017–22ರ ಅವಧಿಯನ್ನು ಒಳಗೊಂಡಿರುವ 'ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ' ಫಲಿತಾಂಶಗಳನ್ನು ಒಳಗೊಂಡಿದೆ.

3. ಜುಲೈ 2022ರಿಂದ ಜನವರಿ 2023ರ ಅವಧಿಯಲ್ಲಿ ನಡೆಸಿದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಕ್ಕೆ ಬಂದ ನಿದರ್ಶನಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಲೆಕ್ಕಪರಿಶೋಧನಾ ಅವಧಿಯ ಹೊರಗಿನ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಸಹ ಅಗತ್ಯವಿರುವ ಸಂದರ್ಭಗಳಲ್ಲಿ ವರದಿ ಮಾಡಲಾಗಿದೆ.

4. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

5. ಲೆಕ್ಕಪರಿಶೋಧನಾ ಪ್ರಕ್ರಿಯೆಯ ಪ್ರತಿ ಹಂತದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ನೀಡಿದ ಸಹಕಾರವನ್ನು ಸ್ಮರಿಸಲು ಲೆಕ್ಕಪರಿಶೋಧನೆ ಬಯಸುತ್ತದೆ.

6. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಕಾರ್ಯನಿರ್ವಹಣಾ ಸಾರಾಂಶ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರು ಈ ಲೆಕ್ಕಪರಿಶೋಧನೆಯನ್ನು ಏಕೆ ಮಾಡಿದರು

ಪ್ರಾಥಮಿಕ ಶಿಕ್ಷಣವು ಎಲ್ಲಾ ಕಲಿಕೆಗೆ ಅಡಿಪಾಯವನ್ನು ಒದಗಿಸುತ್ತದೆ. ಭಾರತದ ಸಂವಿಧಾನ ಮತ್ತು ಶಿಕ್ಷಣ ಹಕ್ಕು (ಆರ್‌ಟಿಇ) ಕಾಯಿದೆ 2009 ಭಾರತದಲ್ಲಿ 6 ರಿಂದ 14 ವರ್ಷದೊಳಗಿನ ಪ್ರತಿ ಮಗುವಿನ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸಿದೆ. ಹಾಗೆಯೇ, ವಿಶ್ವಸಂಸ್ಥೆಯು ಅಳವಡಿಸಿಕೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಮಾನವ ಹಕ್ಕು ಎಂದು ಪರಿಗಣಿಸುತ್ತದೆ ಮತ್ತು ಅದು ಎಲ್ಲಾ ಮಕ್ಕಳಿಗೆ ಲಭ್ಯವಿರುತ್ತದೆ. ಸರ್ಕಾರವು ಅನುಮೋದಿಸಿದ ರಾಷ್ಟ್ರೀಯ ಶಿಕ್ಷಣ ನೀತಿ 2020 ಸುಸ್ಥಿರ ಅಭಿವೃದ್ಧಿ ಗುರಿ–4 ರ ಗುರಿಗಳನ್ನು ಸಂಯೋಜಿಸುತ್ತದೆ ಮತ್ತು 21ನೇ ಶತಮಾನದ ಅಗತ್ಯಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ಒದಗಿಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ.

2017–22ರ ಅವಧಿಯಲ್ಲಿ ರಾಜ್ಯ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ₹69,070 ಕೋಟಿ ವೆಚ್ಚ ಮಾಡಿತ್ತು. ರಾಜ್ಯವು ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಪ್ರವೇಶವನ್ನು ಒದಗಿಸಲು ಸಮರ್ಥವಾಗಿತ್ತೇ, ಹಿಂದುಳಿದ ವರ್ಗಗಳಿಗೆ ಕಲಿಕೆಯ ಅವಕಾಶಗಳನ್ನು ಒದಗಿಸುವ ಮೂಲಕ ಕಲಿಕೆಯ ಅವಕಾಶಗಳಲ್ಲಿ ಸಮಾನತೆಯನ್ನು ಖಚಿತಪಡಿಸಲಾಗಿತ್ತೇ? ಮತ್ತು ರಾಜ್ಯ ಸರ್ಕಾರದ ಮಧ್ಯಸ್ಥಿಕೆಗಳು ಪ್ರಾಥಮಿಕ ಹಂತದಲ್ಲಿ ಕಲಿಕೆ ಗುಣಮಟ್ಟವನ್ನು ಹೆಚ್ಚಿಸಿದ್ದವೇ? ಎಂಬುದನ್ನು ನಿರ್ಣಯಿಸಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಯಿತು.

ಪ್ರಮುಖ ಲೆಕ್ಕಪರಿಶೋಧನಾ ಅವಿಷ್ಕಾರಗಳು

ರಾಜ್ಯವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸುಧಾರಣೆಯನ್ನು ಸಾಧಿಸಿತ್ತು ಮತ್ತು ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) 4ಅನ್ನು ಸಾಧಿಸುವಲ್ಲಿ ಮುಂಚೂಣಿಯಲ್ಲಿದೆ. ಆದರೆ, ವಿದ್ಯಾರ್ಥಿ ಪೂರ್ಣಗೊಳಿಸುವಿಕೆಯ ಪ್ರಮಾಣ, ಮಕ್ಕಳನ್ನು ಭವಿಷ್ಯಕ್ಕಾಗಿ ಸಿದ್ಧಪಡಿಸುವ ಪ್ರಮಾಣ ಇತ್ಯಾದಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡದ ಕಾರಣ ಸುಸ್ಥಿರ ಅಭಿವೃದ್ಧಿ ಗುರಿಗಳ ಗುಣಮಟ್ಟದ ಸೂಚಕಗಳನ್ನು ಸಾಧಿಸಲು ಇಲಾಖೆಯು ತನ್ನ ಸನ್ನದ್ಧತೆಯನ್ನು ಇನ್ನೂ ಪ್ರದರ್ಶಿಸಲಿಲ್ಲ. ಶಿಕ್ಷಣ ಸೂಚಕಗಳ ಲೆಕ್ಕಾಚಾರದ ಮೇಲೆ ಪರಿಣಾಮ ಬೀರುವ ರಾಜ್ಯದಲ್ಲಿ ಮಕ್ಕಳ ಜನಸಂಖ್ಯೆಯ ಬಗ್ಗೆ ಇಲಾಖೆಯು ವಿಶ್ವಾಸಾರ್ಹ ದತ್ತಾಂಶವನ್ನು ಹೊಂದಿರಲಿಲ್ಲ.

ಇಲಾಖೆಯು 2017–18ರಿಂದ 2021–22ರ ಅವಧಿಯಲ್ಲಿ ದೃಷ್ಟಿಕೋನ ಯೋಜನೆಯನ್ನು ತಯಾರಿಸಿರಲಿಲ್ಲ. ವಾರ್ಷಿಕ ಕಾರ್ಯ ಯೋಜನೆಗಳನ್ನು ತಯಾರಿಸುವುದು ಪ್ರತಿ ವರ್ಷ ವಿಳಂಬವಾಗುತ್ತಿತ್ತು.

ಶಾಲಾ ಸೌಲಭ್ಯಗಳನ್ನು ಹೊಂದಿರದ ವಾಸಸ್ಥಳಗಳನ್ನು ರಾಜ್ಯವು ಇನ್ನೂ ವ್ಯವಸ್ಥಿತವಾಗಿ ಗುರುತಿಸಿ ಅಧಿಸೂಚಿಸಬೇಕಾಗಿದೆ. ಶಾಲಾ ಪ್ರವೇಶ ಕುರಿತಾದ ಈ ದತ್ತಾಂಶದ ಅನುಪಸ್ಥಿತಿಯಲ್ಲಿ, ಸಾರಿಗೆ ಭತ್ಯೆಗೆ ಅರ್ಹರಾಗಿದ್ದ ಮಕ್ಕಳನ್ನು ನಿರ್ಧರಿಸಲಾಗಲಿಲ್ಲ. ಇದು ಅವರ ಹಕ್ಕಿನ ಭತ್ಯೆಯನ್ನು ನಿರಾಕರಿಸುವಲ್ಲಿ ಪರಿಣಮಿಸಿತು. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಭೂ–ಪ್ರಾದೇಶಿಕ ವಿಶ್ಲೇಷಣೆಯು ರಾಜ್ಯದಲ್ಲಿನ 4,87,929 ವಸತಿಗಳಲ್ಲಿ, 1,32,924 ವಸತಿಗಳು ಒಂದು ಕಿಮೀ ದೂರದೊಳಗೆ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿರಲಿಲ್ಲ ಮತ್ತು 10,278 ವಸತಿಗಳು

ಮಾನದಂಡವಾದ ಮೂರು ಕಿಮೀ ಒಳಗೆ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿರಲಿಲ್ಲ ಎಂಬುದನ್ನು ತೋರಿಸಿತು.

ಶಿಥಿಲಗೊಂಡ ತರಗತಿ ಕೊಠಡಿಗಳು, ಕಳಪೆ ನಿರ್ವಹಣೆಯ ಶೌಚಾಲಯಗಳು ಇತ್ಯಾದಿಗಳು ಶಾಲೆಗಳಲ್ಲಿ ಪ್ರಚಲಿತದಲ್ಲಿದ್ದವು. ಶಾಲೆಯಿಂದ ಹೊರಗುಳಿದ ಮಕ್ಕಳು, ವಲಸೆ ಕುಟುಂಬಗಳ ಮಕ್ಕಳು, ವಿಶೇಷ ಅಗತ್ಯತೆ ಬೇಕಿರುವ ಮಕ್ಕಳು ಇತ್ಯಾದಿಗಳನ್ನು ಗುರುತಿಸುವ ಮತ್ತು ಬೆಂಬಲಿಸುವ ಪ್ರಯತ್ನಗಳು ಅಸಮರ್ಪಕವಾಗಿದ್ದವು.

ರಾಜ್ಯದಲ್ಲಿ ಒಟ್ಟಾರೆ ವಿದ್ಯಾರ್ಥಿ–ಶಿಕ್ಷಕರ ಅನುಪಾತವು ಸಾಕಷ್ಟಿದ್ದರೂ, ಹಲವಾರು ಶಾಲೆಗಳಲ್ಲಿ ಸಾಕಷ್ಟು ವಿಷಯ–ನಿರ್ದಿಷ್ಟ ಶಿಕ್ಷಕರು ಮತ್ತು ಮಾಧ್ಯಮ ಸೂಕ್ತ ಶಿಕ್ಷಕರ ಲಭ್ಯತೆಯನ್ನು ಇಲಾಖೆಯು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಶೈಕ್ಷಣಿಕ ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಶಿಕ್ಷಕರ ನಿಯೋಜನೆಯಲ್ಲಿ ಅಸಮತೋಲನವಿದ್ದಿತು ಮತ್ತು ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಮರುನಿಯೋಜನೆ ಮಾಡಿರಲಿಲ್ಲ.

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯ (ಕೆಎಸ್‌ಕ್ಯುಎಎಸಿ) ಸಹಯೋಗದೊಂದಿಗೆ ಲೆಕ್ಕಪರಿಶೋಧನೆಯು ಕೈಗೊಂಡ ಕಲಿಕೆಯ ಮೌಲ್ಯಮಾಪನವು ಸಾಧನೆಯು ಸಾಕಷ್ಟಿರಲಿಲ್ಲ ಎಂಬುದನ್ನು ತೋರಿಸಿತು.

ರಾಜ್ಯದಲ್ಲಿ ಹಲವಾರು ಖಾಸಗಿ ಶಾಲೆಗಳು ಒಂದು ವರ್ಷದ ತಾತ್ಪೂರ್ತಿಕ ಮಾನ್ಯತೆಯ ಅಡಿಯಲ್ಲಿದ್ದವು ಮತ್ತು ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತಾ ಪ್ರಮಾಣಪತ್ರಗಳ ಲಭ್ಯತೆ ಮುಂತಾದ ಮಾನ್ಯತೆಯ ನಿಗದಿತ ಷರತ್ತುಗಳಿಗೆ ಅನುಸರಣೆಯನ್ನು ಖಚಿತಪಡಿಸಿಕೊಳ್ಳದೆ ಪ್ರತಿ ವರ್ಷ ತಾತ್ಪೂರ್ತಿಕ ಮಾನ್ಯತೆಯನ್ನು ನವೀಕರಿಸಲಾಗುತ್ತಿತ್ತು. ಸರ್ಕಾರಿ ಇಲಾಖೆಗಳು ನಡೆಸುವ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ಅನ್ವಯಿಸಲಾದ ನಿಯಂತ್ರಕ ಪ್ರಕ್ರಿಯೆಗೆ ಒಳಪಡಿಸಿರಲಿಲ್ಲ ಮತ್ತು ತತ್ಪರಿಣಾಮವಾಗಿ ಸರ್ಕಾರಿ ಶಾಲೆಗಳಲ್ಲಿ ಲಭ್ಯವಿರುವ ಮೂಲಸೌಕರ್ಯ ಮತ್ತು ಬೋಧನಾ ಸೌಲಭ್ಯಗಳ ವ್ಯವಸ್ಥಿತ ಮೌಲ್ಯಮಾಪನ ಮಾಡಿರಲಿಲ್ಲ.

ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ಶಾಲಾ ಶುಲ್ಕ ಕಡಿತ ಸಂಬಂಧವಾಗಿ ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೊಳಿಸದಿದ್ದುದು ಅನುದಾನರಹಿತ ಶಾಲೆಗಳು ನಿಗದಿತ ಮಿತಿಗಿಂತ ಹೆಚ್ಚಾಗಿ ಶುಲ್ಕಗಳನ್ನು ಸಂಗ್ರಹಿಸುವಲ್ಲಿ ಪರಿಣಮಿಸಿತು.

2017–22ರ ಅವಧಿಯಲ್ಲಿ ಶಾಲಾ ತಪಾಸಣೆಗಳನ್ನು ಯೋಜಿಸಿದಂತೆ ಕೈಗೊಂಡಿರಲಿಲ್ಲ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಿರಲಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರು ಏನು ಶಿಫಾರಸು ಮಾಡುತ್ತಾರೆ

ಶಿಫಾರಸು–1: ರಾಜ್ಯ ಸರ್ಕಾರವು ವಿವಿಧ ಭೌಗೋಳಿಕ ಪ್ರದೇಶಗಳು ಮತ್ತು ಜನಸಂಖ್ಯೆ ವಿಭಾಗಗಳಲ್ಲಿನ ನಿವ್ವಳ ದಾಖಲಾತಿ ಅನುಪಾತದಲ್ಲಿನ ಅಸಮಾನತೆಯನ್ನು ಪರಿಗಣಿಸಬೇಕು ಮತ್ತು ಸಾರ್ವತ್ರಿಕ ದಾಖಲಾತಿಯ ಗುರಿಯನ್ನು ಸಾಧಿಸಲು ಪ್ರದೇಶ ಅಥವಾ ಜನಸಂಖ್ಯೆಯ ವಿಭಾಗಕ್ಕೆ ಸೂಕ್ತವಾದ ನಿರ್ದಿಷ್ಟ ಮಧ್ಯಸ್ಥಿಕೆಗಳನ್ನು ಜಾರಿಗೆ ತರಬೇಕು.

ಶಿಫಾರಸು–2: ರಾಜ್ಯ ಸರ್ಕಾರವು ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಹಾಜರಾತಿಯ ಮೇಲ್ವಿಚಾರಣೆಯನ್ನು ಬಲಪಡಿಸಬೇಕು ಮತ್ತು ನಂತರದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್ ಮೂಲಕ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅವರು ಮುಂದಿನ ತರಗತಿಗೆ

ಪ್ರಗತಿ ಸಾಧಿಸಬೇಕು ಮತ್ತು ಹೊರಗುಳಿದ ಮಕ್ಕಳನ್ನು ಗುರುತಿಸುವುದು ಮತ್ತು ಎಸ್ಎಟಿಎಸ್ ಮೂಲಕ ವಿದ್ಯಾರ್ಥಿಗಳ ಪತ್ತೆ ಮಾಡುವುದು ಅವರ ಶಿಕ್ಷಣ ಪೂರ್ಣಗೊಳ್ಳುವವರೆಗೆ ನಿರಂತರ ಕಾರ್ಯವಾಗಿರಬೇಕು.

ಶಿಫಾರಸು–3: ರಾಜ್ಯ ಸರ್ಕಾರವು ಯೋಜನೆಗಳನ್ನು ರೂಪಿಸುವಾಗ ಕೆಳಮಟ್ಟದ ಮತ್ತು ಸಹಭಾಗಿತ್ವದ ವಿಧಾನವನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

ಶಿಫಾರಸು–4: ರಾಜ್ಯ ಸರ್ಕಾರವು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವುದನ್ನು ಖಚಿತಪಡಿಸಿಕೊಳ್ಳಬೇಕು, ಶಾಲೆಗಳಿಗೆ ಅವರ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳ ಸಾಧನೆ ಪತ್ತೆಹಚ್ಚುವ ವ್ಯವಸ್ಥೆಯ ಸಹಾಯದಿಂದ ಅವರ ವಿದ್ಯಾಭ್ಯಾಸ ಮುಂದುವರಿಕೆ ಮತ್ತು ಪೂರ್ಣಗೊಳಿಸುವಿಕೆಯನ್ನು ತಿಳಿಯಬೇಕು.

ಶಿಫಾರಸು–5: ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಲಾಗಿದೆ, ದಾಖಲಾತಿ ಮಾಡಿಕೊಳ್ಳಲಾಗಿದೆ ಮತ್ತು ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮಗಳನ್ನು ಪ್ರಾರಂಭಿಸಬೇಕು.

ಶಿಫಾರಸು–6: ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಕಲ್ಪಿಸಿದಂತೆ ಪ್ರತಿ ಶಾಲೆಯಲ್ಲಿ ಸಾಕಷ್ಟು ಸಂಖ್ಯೆಯ ಶಿಕ್ಷಕರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಶಾಲೆಗಳಲ್ಲಿ ಶಿಕ್ಷಕರ ನಿಯೋಜನೆಯನ್ನು ತರ್ಕಬದ್ಧಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮವನ್ನು ಪ್ರಾರಂಭಿಸಬೇಕು.

ಶಿಫಾರಸು–7: ರಾಜ್ಯ ಸರ್ಕಾರವು ಶಿಕ್ಷಕರ ಕಾರ್ಯಕ್ಷಮತೆಯನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡಬೇಕು ಮತ್ತು ಬೋಧನಾ ಕಲಿಕಾ ಉದ್ದೇಶಗಳಿಗಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಬೋಧನೆಯಲ್ಲಿ ಗುಣಮಟ್ಟವನ್ನು ಸುಧಾರಿಸಲು ಕ್ರಮವನ್ನು ಪ್ರಾರಂಭಿಸಬೇಕು.

ಶಿಫಾರಸು–8: ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ನಿಯತಕಾಲಿಕ ವಿಶ್ಲೇಷಣೆಯ ಜೊತೆಗೆ ಕಲಿಕಾ ಫಲಿತಾಂಶಗಳ ದತ್ತಾಂಶದ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮಗಳನ್ನು ಕೈಗೊಳ್ಳಬೇಕು.

ಶಿಫಾರಸು–9: ನಡೆಸಿದ ಸಾಧನಾ ಸಮೀಕ್ಷೆಗಳನ್ನು ಕಾರ್ಯಕ್ಷಮತೆಯ ನ್ಯೂನತೆಗಳ ವಿಶ್ಲೇಷಣೆಯೊಂದಿಗೆ ಅನುಸರಣೆ ಮಾಡಬೇಕು ಮತ್ತು ಬೋಧನಾ–ಕಲಿಕಾ ವಿಧಾನಗಳು, ಪಠ್ಯಕ್ರಮದ ಪರಿಷ್ಕರಣೆ ಮತ್ತು ಪರಿಹಾರ ಬೋಧನೆಯ ನಡವಳಿಕೆಯನ್ನು ಸುಧಾರಿಸಲು ಸಮೀಕ್ಷೆಗಳನ್ನು ನಡೆಸಬೇಕು.

ಶಿಫಾರಸು–10: ರಾಜ್ಯ ಸರ್ಕಾರವು ಎಲ್ಲಾ ಶಾಲೆಗಳು ಸುರಕ್ಷತಾ ಮಾರ್ಗಸೂಚಿಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಶಾಲೆಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಜವಾಬ್ದಾರರಾಗಿರುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

ಶಿಫಾರಸು–11: ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ಗುಣಮಟ್ಟದ ಬೋಧನೆ ಮತ್ತು ಉತ್ತಮ ಮೂಲಸೌಕರ್ಯದೊಂದಿಗೆ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಸಾರ್ವತ್ರಿಕವಾಗಿ ನಿಯಂತ್ರಕ ನಿಯಮಗಳನ್ನು ಅಳವಡಿಸಿಕೊಳ್ಳಬೇಕು.

ಶಿಫಾರಸು–12: ಖಾಸಗಿ ಅನುದಾನ ರಹಿತ ಶಾಲೆಗಳು ಮಕ್ಕಳಿಂದ ಶುಲ್ಕ ಮತ್ತು ದೇಣಿಗೆ ಸಂಗ್ರಹಿಸುವಾಗ ಕರ್ನಾಟಕ ಶಿಕ್ಷಣ ಕಾಯ್ದೆಯ ಸೆಕ್ಷನ್ 48ರ ನಿಬಂಧನೆಗಳನ್ನು ಅನುಸರಿಸುತ್ತವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಸಮರ್ಪಕ ಮಾಹಿತಿಯನ್ನು ಸಂಗ್ರಹಿಸಬೇಕು.

ಶಿಫಾರಸು–13: ಶಾಲೆಗಳು ಒದಗಿಸುವ ಕಲಿಕಾ ವಾತಾವರಣದ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರವು ಕಾಲಕಾಲಕ್ಕೆ ತಪಾಸಣೆಗಳನ್ನು ಖಚಿತಪಡಿಸಿಕೊಳ್ಳಬೇಕು.

ಶಿಫಾರಸು–14: ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸಲು ವಿವಿಧ ಮಧ್ಯಸ್ಥಿಕೆಗಳ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ಅಧ್ಯಾಯ I
ಪರಿಚಯ

ಅಧ್ಯಾಯ I

ಪರಿಚಯ

1.1 ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣ ಇಡೀ ಶಿಕ್ಷಣ ವ್ಯವಸ್ಥೆಯ ಬೆನ್ನೆಲುಬಾಗಿದೆ. 2002ರಲ್ಲಿ 86ನೇ ಸಾಂವಿಧಾನಿಕ ತಿದ್ದುಪಡಿಯು ವಿಧಿ 21ಎ ಯನ್ನು ಸೇರಿಸಿತು, ಇದು ಪ್ರಾಥಮಿಕ ಶಿಕ್ಷಣವನ್ನು[1] 6ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳ ಮೂಲಭೂತ ಹಕ್ಕಾಗಿ ಮಾಡಿತು. ವಿಧಿ 21ಎ "ರಾಜ್ಯವು ಕಾನೂನಿನ ಮೂಲಕ ನಿರ್ಧರಿಸಬಹುದಾದ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು" ಎಂದು ನಿಗದಿಪಡಿಸುತ್ತದೆ. ಇದರ ನಂತರ, ಮೂಲಭೂತ ಹಕ್ಕುಗಳ ಅನುಷ್ಠಾನವನ್ನು ಸಕ್ರಿಯಗೊಳಿಸಲು 2009ರಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆಯನ್ನು ಸಂಸತ್ತು ಅಂಗೀಕರಿಸಿತು. ಪ್ರತಿ ಮಗುವೂ ನೆರೆಹೊರೆಯ ಶಾಲೆಯಲ್ಲಿ ಶಿಕ್ಷಣ ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳ ಬಾಧ್ಯತೆಯಾಗಿದೆಯೆಂದು ಕಾಯಿದೆಯು ಕಡ್ಡಾಯ ಮಾಡಿತು.

ರಾಜ್ಯದಲ್ಲಿನ ಶೈಕ್ಷಣಿಕ ಚಟುವಟಿಕೆಯನ್ನು ಕರ್ನಾಟಕ ಶಿಕ್ಷಣ ಕಾಯಿದೆ 1983ರ ನಿಬಂಧನೆಗಳ ಪ್ರಕಾರ ಮತ್ತು ರಾಜ್ಯವು ಶಾಲಾ ಶಿಕ್ಷಣ ಇಲಾಖೆಯ ಮೂಲಕ ಜಾರಿಗೊಳಿಸಿದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅನುಸಾರವಾಗಿ ನಿರ್ವಹಿಸಲಾಗುತ್ತದೆ. ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರವು ತನ್ನ ಪ್ರಮುಖ ಕಾರ್ಯಕ್ರಮವಾದ 'ಸಮಗ್ರ ಶಿಕ್ಷಾ ಯೋಜನೆ'[2] ಮೂಲಕ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ.

1.2 ಪ್ರಾಥಮಿಕ ಶಿಕ್ಷಣ ಇಲಾಖೆಯ ಸಂಘಟನಾ ವ್ಯವಸ್ಥೆ

ಪ್ರಧಾನ ಕಾರ್ಯದರ್ಶಿಯವರ ನೇತೃತ್ವವಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ರಾಜ್ಯದ ಶಾಲಾ ಶಿಕ್ಷಣದ ಮೇಲೆ ಒಟ್ಟಾರೆ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿದೆ. ಪ್ರಧಾನ ಕಾರ್ಯದರ್ಶಿಗಳಿಗೆ ಸಾರ್ವಜನಿಕ ಶಿಕ್ಷಣ ಆಯುಕ್ತರು ಮತ್ತು ರಾಜ್ಯ ಯೋಜನಾ ನಿರ್ದೇಶಕ ಸಮಗ್ರ ಶಿಕ್ಷಣ ಕರ್ನಾಟಕ, ನಿರ್ದೇಶಕರು–ಪ್ರಾಥಮಿಕ ಶಿಕ್ಷಣ, ನಿರ್ದೇಶಕರು–ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ, ಕಾರ್ಯನಿರ್ವಾಹಕ ನಿರ್ದೇಶಕರು–ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ ಮತ್ತು ವ್ಯವಸ್ಥಾಪಕ ನಿರ್ದೇಶಕರು–ಕರ್ನಾಟಕ ಪಠ್ಯ ಪುಸ್ತಕ ಸೊಸೈಟಿ, ಪ್ರಾದೇಶಿಕ ಮಟ್ಟದಲ್ಲಿ ಹೆಚ್ಚುವರಿ ಆಯುಕ್ತರುಗಳು 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಮತ್ತು ಬ್ಲಾಕ್ ಶೈಕ್ಷಣಿಕ ಅಧಿಕಾರಿಗಳು, ಬ್ಲಾಕ್ ಮಟ್ಟದಲ್ಲಿ ಬ್ಲಾಕ್ ಸಂಪನ್ಮೂಲ ಕೇಂದ್ರಗಳು ಮತ್ತು ಸಮೂಹ ಮಟ್ಟದಲ್ಲಿ ಸಮೂಹ ಸಂಪನ್ಮೂಲ ಕೇಂದ್ರಗಳು ನೆರವು ನೀಡುತ್ತವೆ.

---

[1] ಪ್ರಾಥಮಿಕ ಶಿಕ್ಷಣವನ್ನು ಮೂಲ ಶಿಕ್ಷಣ ಎಂದೂ ಕರೆಯುತ್ತಾರೆ, ಇದು ತರಗತಿ 1ರಿಂದ ತರಗತಿ 8ರವರೆಗಿನ ಶಿಕ್ಷಣದ ಮೊದಲ ಹಂತವಾಗಿದೆ. ತರಗತಿ 1ರಿಂದ 5ರವರೆಗೆ ಕಿರಿಯ ಪ್ರಾಥಮಿಕ ಮತ್ತು 6ರಿಂದ 8ರವರೆಗೆ ಹಿರಿಯ ಪ್ರಾಥಮಿಕ ಹಂತ ಎಂದು ಕರೆಯಲಾಗುತ್ತದೆ.

[2] ಈ ಯೋಜನೆಯು ಸರ್ವ ಶಿಕ್ಷಾ ಅಭಿಯಾನ (ಎಸ್ಎಸ್ಎ), ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ (ಆರ್ಎಮ್ಎಸ್ಎ) ಮತ್ತು ಶಿಕ್ಷಕರ ಶಿಕ್ಷಣ (ಟಿಇ) ದ ಮೂರು ಹಿಂದಿನ ಯೋಜನೆಗಳನ್ನು ಒಳಗೊಂಡಿರುತ್ತದೆ.

1.3 ಲೆಕ್ಕಪರಿಶೋಧನಾ ಉದ್ದೇಶಗಳು

1.3.1 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ನಿರ್ಣಯಿಸಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಯಿತು:

- ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಪ್ರವೇಶವನ್ನು ಒದಗಿಸಲು ಸಾಧ್ಯವಾಯಿತೆ.
- ಹೆಣ್ಣು ಮಕ್ಕಳು, ವಿಶೇಷ ಅಗತ್ಯತೆಗಳನ್ನು ಹೊಂದಿರುವ ಮಕ್ಕಳು ಮತ್ತು ಇತರ ಅನಾನುಕೂಲಕರ ಗುಂಪುಗಳಿಗೆ ಸಮಾನ ಕಲಿಕೆಯ ಅವಕಾಶಗಳನ್ನು ಒದಗಿಸಿತ್ತೆ.
- ಎಲ್ಲಾ ಹಂತಗಳಲ್ಲಿ ಕಲಿಕೆಯ ಗುಣಮಟ್ಟವನ್ನು ಸುಧಾರಿಸಲು ಚಟುವಟಿಕೆಗಳು/ಮಧ್ಯಸ್ಥಿಕೆಗಳನ್ನು ಕೈಗೊಳ್ಳಲಾಯಿತೆ.

1.3.2 ಲೆಕ್ಕಪರಿಶೋಧನಾ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗೆ ಮಾನದಂಡಗಳನ್ನು ಇವುಗಳಿಂದ ಪಡೆಯಲಾಗಿತ್ತು:

- ಕರ್ನಾಟಕ ಶಿಕ್ಷಣ ಕಾಯಿದೆ 1983
- ಸಂವಿಧಾನದ ವಿಧಿ 21ಎ ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 (ಆರ್‌ಟಿಇ ಕಾಯಿದೆ)
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಕರ್ನಾಟಕ ಹಕ್ಕು ನಿಯಮಗಳು, 2012 (ಕೆಆರ್‌ಟಿಇ ನಿಯಮಗಳು)
- ಸಮಗ್ರ ಶಿಕ್ಷಾ ಯೋಜನೆಯ ಅನುಷ್ಠಾನದ ಚೌಕಟ್ಟು
- ರಾಷ್ಟ್ರೀಯ ಶಿಕ್ಷಣ ನೀತಿ 2020
- ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಕರ್ನಾಟಕದ ವಿಷನ್ 2030

1.3.3 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2017–18ರಿಂದ 2021–22ರ ಅವಧಿಯ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳನ್ನು ಒಳಗೊಂಡ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು, ಶಿಕ್ಷಣ ಇಲಾಖೆ ಮತ್ತು ಇತರ ಉನ್ನತ[3] ಮಟ್ಟದ ಸಂಸ್ಥೆಗಳು, ಎಂಟು[4] ಮಾದರಿ ಜಿಲ್ಲೆಗಳು, 16 ಬ್ಲಾಕ್ ಶಿಕ್ಷಣ ಕಛೇರಿಗಳು ಮತ್ತು ಶಿಕ್ಷಣ ಇಲಾಖೆಯ ಅಡಿಯಲ್ಲಿನ 128 ಶಾಲೆಗಳ ದಾಖಲೆಗಳ ಪರೀಕ್ಷಾ–ತನಿಖೆಯನ್ನು ಜುಲೈ 2022ರಿಂದ ಜನವರಿ 2023ರ ಅವಧಿಯಲ್ಲಿ ನಡೆಸಲಾಯಿತು. ಪರೀಕ್ಷಾ–ತನಿಖೆ ನಡೆಸಿದ ಸಂಸ್ಥೆಗಳ ವಿವರಗಳನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲು 01 ಜುಲೈ 2022 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯೊಂದಿಗೆ ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು.

---

[3] ಸಾರ್ವಜನಿಕ ಶಿಕ್ಷಣ ಆಯುಕ್ತರು, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಕರ್ನಾಟಕ ಪಠ್ಯಪುಸ್ತಕ ಸೊಸೈಟಿ, ಕರ್ನಾಟಕ ಶಾಲಾ ಗುಣಮಟ್ಟ ಭರವಸೆ ಮತ್ತು ಮೌಲ್ಯಮಾಪನ ಮಂಡಳಿ

[4] ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ರಾಯಚೂರು, ವಿಜಯನಗರ, ಬಾಗಲಕೋಟೆ, ಸಿರ್ಸಿ, ಚಾಮರಾಜನಗರ ಮತ್ತು ಮೈಸೂರು

ಕರ್ನಾಟಕದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಸುತ್ತಲಿನ ಪ್ರಮುಖ ಸಮಸ್ಯೆಗಳ ಕುರಿತು ತಮ್ಮ ಸಲಹೆಗಳಿಗಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯವನ್ನು (ಬಿಸಿಯು) ಲೆಕ್ಕಪರಿಶೋಧನೆಯು ಸಂಪರ್ಕಿಸಿತು. ವಿಶ್ವವಿದ್ಯಾನಿಲಯವು 25ಕ್ಕೂ ಹೆಚ್ಚು ಪ್ರಸಿದ್ಧ ಶಿಕ್ಷಣ ತಜ್ಞರು, ಶಿಕ್ಷಕರು, ಸಂಶೋಧಕರು, ಆಡಳಿತಗಾರರು, ಸರ್ಕಾರಿ ನೌಕರರು ಮತ್ತು ಸರ್ಕಾರೇತರ ಸಂಸ್ಥೆಗಳ ಸದಸ್ಯರನ್ನು ಐದು[5] ಗುರುತಿಸಲಾದ ವಿಷಯಗಳ ಕುರಿತು ಸಂಶೋಧನೆ ಮಾಡಲು ಮತ್ತು ಚರ್ಚಿಸಲು ಒಟ್ಟುಗೂಡಿಸಿತು. ಈ ತಜ್ಞರ ಒಳಹರಿವುಗಳನ್ನು ದಾಖಲೆಯಾಗಿ ಸಂಯೋಜಿಸಲು ವಿಶ್ವವಿದ್ಯಾನಿಲಯ ಮತ್ತು ಲೆಕ್ಕಪರಿಶೋಧನೆಯು (23 ಫೆಬ್ರವರಿ 2023) ಜಂಟಿಯಾಗಿ ವಿಚಾರ ಸಂಕಿರಣವನ್ನು ಆಯೋಜಿಸಿದವು. ಲೆಕ್ಕಪರಿಶೋಧನೆಯ ಸಹಯೋಗದಲ್ಲಿ ವಿಶ್ವವಿದ್ಯಾನಿಲಯವು ಸಮಸ್ಯೆಗಳನ್ನು ವಿಶ್ಲೇಷಿಸುವ ಮತ್ತು ಅವುಗಳನ್ನು ಪರಿಹರಿಸಲು ಸಂಭವನೀಯ ಪರಿಹಾರಗಳನ್ನು ಸೂಚಿಸುವ ವಿವರವಾದ ವರದಿಯನ್ನು ಸಿದ್ಧಪಡಿಸಿತು. ಅಧ್ಯಯನ ವರದಿಯ ಆವಿಷ್ಕಾರಗಳನ್ನು ಈ ವರದಿಯಲ್ಲಿ ಸೂಕ್ತ ಸ್ಥಳಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ರಾಜ್ಯ ಸರ್ಕಾರಕ್ಕೆ ತಿಳಿಸಲಾಯಿತು (ಮೇ 2023) ಮತ್ತು ಅವರ ಪ್ರತಿಕ್ರಿಯೆಯನ್ನು ಸ್ವೀಕರಿಸಲಾಯಿತು. ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಚರ್ಚಿಸಲು 24 ಮಾರ್ಚ್ 2023ರಂದು ಸರ್ಕಾರದೊಂದಿಗೆ ನಿರ್ಗಮನ ಸಮಾವೇಶವನ್ನು ನಡೆಸಲಾಯಿತು. ನಿರ್ಗಮನ ಸಮಾವೇಶದಲ್ಲಿ ನೀಡಿದ ಸರ್ಕಾರದ ಪ್ರತಿಕ್ರಿಯೆಯನ್ನು ಈ ವರದಿಯಲ್ಲಿ ಪರಿಗಣಿಸಲಾಗಿದೆ.

1.4 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಗಳು, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ ಪಠ್ಯಪುಸ್ತಕ ಸೊಸೈಟಿ, ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆ ಪರಿಷತ್ ಹಾಗೂ ಅನುಷ್ಠಾನ ಕಛೇರಿಗಳು ನೀಡಿದ ಸಹಕಾರ ಮತ್ತು ಸಹಾಯವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದ ವಿವಿಧ ಸಮಕಾಲೀನ ಸಮಸ್ಯೆಗಳ ಕುರಿತು ತಜ್ಞರ ಅಭಿಪ್ರಾಯವನ್ನು ಪಡೆಯಲು ಮತ್ತು ವಿಚಾರ ಸಂಕಿರಣವನ್ನು ಆಯೋಜಿಸಲು ಬೆಂಗಳೂರು ನಗರ ವಿಶ್ವವಿದ್ಯಾಲಯವು ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ. ರಾಜ್ಯದಲ್ಲಿನ ಶಾಲಾ ಸೌಲಭ್ಯಗಳ ಭೌಗೋಳಿಕ–ಪ್ರಾದೇಶಿಕ ವಿಶ್ಲೇಷಣೆಯನ್ನು ಕೈಗೊಳ್ಳುವಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

[5] (1) ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನಿವಾರಿಸುವುದು (2) ಪ್ರಾಥಮಿಕ ವಲಯದಲ್ಲಿ ಐಸಿಟಿ ಶಿಕ್ಷಣದ ಬಳಕೆ (3) ಪ್ರಾಥಮಿಕ ಹಂತದಲ್ಲಿ ಕಲಿಯುವವರ ಭಾಷಾ ಕೌಶಲ್ಯವನ್ನು ಮೌಲ್ಯಮಾಪನ ಮಾಡುವುದು (4) ಶಾಲಾ ನಾಯಕತ್ವವನ್ನು ಬಲಪಡಿಸುವುದು (5) ತಾಕ್ಷಣಿಕ ಶಾಲಾ ಶಿಕ್ಷಣವನ್ನು ನಿಯಂತ್ರಿಸುವುದು.

1.5 ಲೆಕ್ಕಪರಿಶೋಧನಾ ಅವಲೋಕನಗಳ ಆಯೋಜನೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಕೆಳಕಂಡ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ:

ಅಧ್ಯಾಯ–2 ಗುರಿಗಳು, ದೂರದೃಷ್ಟಿ, ನೀತಿಗಳು ಮತ್ತು ಯೋಜನೆ

ಅಧ್ಯಾಯ–3 ಪ್ರವೇಶ ಮತ್ತು ಇಕ್ವಿಟಿ ಮಧ್ಯಸ್ಥಿಕೆಗಳು

ಅಧ್ಯಾಯ–4 ಶಿಕ್ಷಕರು ಮತ್ತು ತಂತ್ರಜ್ಞಾನದ ಮಧ್ಯಸ್ಥಿಕೆಗಳು

ಅಧ್ಯಾಯ–5 ಗುಣಮಟ್ಟ ಮಧ್ಯಸ್ಥಿಕೆಗಳು ಮತ್ತು ಫಲಿತಾಂಶದ ಮೌಲ್ಯಮಾಪನ

ಅಧ್ಯಾಯ–6 ನಿಯಂತ್ರಕ ಮಧ್ಯಸ್ಥಿಕೆಗಳು

ಅಧ್ಯಾಯ–7 ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಅಧ್ಯಾಯ II
ಗುರಿಗಳು, ದೂರದೃಷ್ಟಿ, ನೀತಿಗಳು ಮತ್ತು ಯೋಜನೆ

ಅಧ್ಯಾಯ II

ಗುರಿಗಳು, ದೂರದೃಷ್ಟಿ, ನೀತಿಗಳು ಮತ್ತು ಯೋಜನೆ

ರಾಜ್ಯವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಸುಧಾರಣೆಯನ್ನು ಸಾಧಿಸಿದೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ಗುರಿ–4 ಅನ್ನು ಸಾಧಿಸುವಲ್ಲಿ ಮುಂಚೂಣಿಯಲ್ಲಿದೆ. 2017–18ರಿಂದ 2021–22ರ ಅವಧಿಯಲ್ಲಿ ಪ್ರವೇಶ ಮತ್ತು ಸಮಾನತೆ ಸೂಚಕಗಳಲ್ಲಿ ಸ್ಥಿರವಾದ ಸುಧಾರಣೆಗಳಿದ್ದವು. ಆದಾಗ್ಯೂ, ವಿದ್ಯಾರ್ಥಿಗಳ ಶಿಕ್ಷಣ ಪೂರ್ಣಗೊಳಿಸುವಿಕೆಯ ಪ್ರಮಾಣ, ಕನಿಷ್ಠ ಪ್ರಾವೀಣ್ಯತೆಯ ಮಟ್ಟವನ್ನು ಸಾಧಿಸುವ ಮೂಲಕ ಮಕ್ಕಳನ್ನು ಭವಿಷ್ಯಕ್ಕಾಗಿ ಸಿದ್ಧಪಡಿಸುವ ಪ್ರಮಾಣ ಇತ್ಯಾದಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡಿರಲಿಲ್ಲವಾಗಿ ಇಲಾಖೆಯು ಇನ್ನೂ ಎಸ್‌ಡಿಜಿ ಗುಣಮಟ್ಟ ಸೂಚಕಗಳ ಮೇಲೆ ತನ್ನ ಪ್ರಗತಿಯನ್ನು ಪ್ರದರ್ಶಿಸಲು ಸಾಧ್ಯವಾಗಿರಲಿಲ್ಲ. ವಿಷನ್ ಡಾಕ್ಯುಮೆಂಟ್–2030ರಲ್ಲಿ ಕಲ್ಪಿಸಲಾದ 2022ರ ಮಧ್ಯಂತರ ಗುರಿಗಳನ್ನು ಇನ್ನೂ ಸಾಧಿಸಿರಲಿಲ್ಲ. ಪಠ್ಯಕ್ರಮದ ಪರಿಷ್ಕರಣೆ, ಪ್ರಾಥಮಿಕ–ಪೂರ್ವ ಶಿಕ್ಷಣದ ಬಲವರ್ಧನೆ, ಶಾಲಾ ಸಂಕೀರ್ಣಗಳ ಸ್ಥಾಪನೆ ಮುಂತಾದ ಕ್ರಮಗಳನ್ನು ಇನ್ನೂ ಜಾರಿಗೆ ತರಬೇಕಾಗಿರುವುದರಿಂದ ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ನು ಇನ್ನೂ ಸಂಪೂರ್ಣವಾಗಿ ಕಾರ್ಯಗತಗೊಳಿಸಿರಲಿಲ್ಲ. ವಿದ್ಯಾರ್ಥಿಗಳ ಪರಿವರ್ತನೆ ಮತ್ತು ಸಾಧನೆಯನ್ನು ಪತ್ತೆಹಚ್ಚಲು ವಿದ್ಯಾರ್ಥಿಗಳ ಸಾಧನೆಯನ್ನು ಪತ್ತೆಹಚ್ಚುವ ವ್ಯವಸ್ಥೆಯ ಸಾಮರ್ಥ್ಯವನ್ನು ಇನ್ನೂ ಸಂಪೂರ್ಣವಾಗಿ ಬಳಸಿಕೊಳ್ಳಬೇಕಾಗಿದೆ. ಇಲಾಖೆಯು 2017–18ರಿಂದ 2021–22ರ ಅವಧಿಯಲ್ಲಿ ದೃಷ್ಟಿಕೋನ ಯೋಜನೆಯನ್ನು ತಯಾರಿಸಿರಲಿಲ್ಲ. ವಾರ್ಷಿಕ ಕಾರ್ಯ ಯೋಜನೆಗಳನ್ನು ತಯಾರಿಸುವುದು ಪ್ರತಿ ವರ್ಷ ವಿಳಂಬವಾಗುತ್ತಿತ್ತು.

2.1 ಶಿಕ್ಷಣದ ಮೇಲೆ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ)–4

2015ರಲ್ಲಿ ಭಾರತ ಸೇರಿದಂತೆ ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳು ಅಳವಡಿಸಿಕೊಂಡ ಸುಸ್ಥಿರ ಅಭಿವೃದ್ಧಿಗಾಗಿ–2030ರ ಕಾರ್ಯಸೂಚಿಯು 17 ಗುರಿಗಳು ಮತ್ತು 169 ಸಂಬಂಧಿತ ಗುರಿಗಳೊಂದಿಗೆ ಅಭಿವೃದ್ಧಿಗೆ ಪರಿವರ್ತಕ ದೃಷ್ಟಿಯನ್ನು ರೂಪಿಸುತ್ತದೆ. ಶಿಕ್ಷಣದ ಪ್ರಮುಖ ಪಾತ್ರವನ್ನು ಗುರುತಿಸಿ, 2030ರ ಕಾರ್ಯಸೂಚಿಯು 10 ಗುರಿಗಳೊಂದಿಗೆ ಎಸ್‌ಡಿಜಿ–4ರ ಅಡಿಯಲ್ಲಿ ಶಿಕ್ಷಣವನ್ನು ಅದ್ವಿತೀಯ ಗುರಿಯಾಗಿ ಎತ್ತಿ ತೋರಿಸುತ್ತದೆ.

ಪ್ರಾಥಮಿಕ ಶಿಕ್ಷಣ ವಲಯಕ್ಕೆ ಸಂಬಂಧಿಸಿದ ಎಸ್‌ಡಿಜಿ–4ರ ಗುರಿಗಳನ್ನು **ನಕ್ಷೆ–2.1**ರಲ್ಲಿ ಚಿತ್ರಿಸಲಾಗಿದೆ.

ನಕ್ಷೆ–2.1: ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಎಸ್‌ಡಿಜಿ–4ರ ಗುರಿಗಳು



SDG 4 aims to "ensure inclusive and equitable quality education and promote lifelong learning opportunities for all."

ಗುರಿ 4.1	•ಎಲ್ಲಾ ಬಾಲಕಿಯರು ಮತ್ತು ಬಾಲಕರು ಉಚಿತ, ಸಮಾನ ಮತ್ತು ಗುಣಮಟ್ಟದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದು ಸೂಕ್ತ ಮತ್ತು ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳಿಗೆ ಕಾರಣವಾಗುತ್ತದೆ.
ಗುರಿ 4.2	•ಎಲ್ಲಾ ಬಾಲಕಿಯರು ಮತ್ತು ಬಾಲಕರು ಗುಣಮಟ್ಟದ ಆರಂಭಿಕ ಬಾಲ್ಯದ ಅಭಿವೃದ್ಧಿ, ಆರೈಕೆ ಮತ್ತು ಪ್ರಾಥಮಿಕ–ಪೂರ್ವ ಶಿಕ್ಷಣಕ್ಕೆ ಪ್ರವೇಶವನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದರಿಂದ ಅವರು ಪ್ರಾಥಮಿಕ ಶಿಕ್ಷಣಕ್ಕೆ ಸಿದ್ಧರಾತ್ತಾರೆ.
ಗುರಿ 4.5	•ಶಿಕ್ಷಣದಲ್ಲಿನ ಲಿಂಗ ಅಸಮಾನತೆಗಳನ್ನು ನಿವಾರಿಸಬೇಕು ಮತ್ತು ಎಲ್ಲಾ ಹಂತದ ಶಿಕ್ಷಣಕ್ಕೆ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳಬೇಕು
ಗುರಿ 4ಎ	•ಮಕ್ಕಳ, ಅಂಗವೈಕಲ್ಯತೆ ಮತ್ತು ಲಿಂಗ ಸೂಕ್ಷ್ಮ ಶಿಕ್ಷಣ ಸೌಲಭ್ಯಗಳನ್ನು ನಿರ್ಮಿಸಿ ಮತ್ತು ನವೀಕರಿಸಿ ಎಲ್ಲರಿಗೂ ಸುರಕ್ಷಿತ, ಅಹಿಂಸಾತ್ಮಕ, ಅಂತರ್ಗತ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಒದಗಿಸುವುದು
ಗುರಿ 4ಸಿ	•ಅರ್ಹ ಶಿಕ್ಷಕರ ಪೂರೈಕೆಯನ್ನು ಗಣನೀಯವಾಗಿ ಹೆಚ್ಚಿಸುವುದು.

2.2 ಎಸ್‌ಡಿಜಿ ಕಾರ್ಯಕ್ಷಮತೆಯಲ್ಲಿ ಕರ್ನಾಟಕದ ಸ್ಥಿತಿ

ಸಂಯುಕ್ತ ರಾಷ್ಟ್ರ ಭಾರತದ ಸಹಭಾಗಿತ್ವದಲ್ಲಿ ಎನ್‌ಐಟಿಐ ಆಯೋಗವು (2018) 13 ಎಸ್‌ಡಿಜಿಗಳನ್ನು ಒಳಗೊಂಡಿರುವ ರಾಜ್ಯಗಳು ಮತ್ತು ಕೇಂದ್ರಶಾಸಿತ ಪ್ರದೇಶಗಳಿಗಾಗಿ ಎಸ್‌ಡಿಜಿ ಇಂಡಿಯಾ ಇಂಡೆಕ್ಸ್ ಬೇಸ್‌ಲೈನ್ ವರದಿಯನ್ನು ಅಭಿವೃದ್ಧಿಪಡಿಸಿತು[6]. ಒಟ್ಟಾರೆ ಎಸ್‌ಡಿಜಿ ಕಾರ್ಯಕ್ಷಮತೆಯಲ್ಲಿ, 2018ರಲ್ಲಿ, ಕರ್ನಾಟಕವು 64 ಅಂಕಗಳೊಂದಿಗೆ ಪ್ರದರ್ಶಕರ ವಿಭಾಗದಲ್ಲಿ 3ನೇ ಸ್ಥಾನದಲ್ಲಿದೆ. 2022ರ ಅವಧಿಯಲ್ಲಿ ರಾಜ್ಯವು 72 ಅಂಕಗಳೊಂದಿಗೆ ಸುಧಾರಣೆಯಾಗಿತ್ತು.

ಶಿಕ್ಷಣಕ್ಕಾಗಿ ಎಸ್‌ಡಿಜಿ–4ರ ಅಡಿಯಲ್ಲಿ, ಕರ್ನಾಟಕವನ್ನು ಮುಂಚೂಣಿಯ ರಾಜ್ಯವೆಂದು ವರ್ಗೀಕರಿಸಲಾಗಿದೆ. 2018ರಲ್ಲಿ, ಕರ್ನಾಟಕವು 76 ಅಂಕಗಳೊಂದಿಗೆ ಕೇರಳ, ಹಿಮಾಚಲ ಪ್ರದೇಶ

[6] 17 ಎಸ್‌ಡಿಜಿಗಳಲ್ಲಿ, ನಾಲ್ಕು ಗುರಿಗಳಾದ ಗುರಿ 12, 13, 14 ಮತ್ತು 17 ಅನ್ನು ಹೊರತುಪಡಿಸಿ ವರದಿಯಲ್ಲಿ 13 ಗುರಿಗಳನ್ನು ವ್ಯಾಪಿಸಲಾಗಿದೆ.

ಮತ್ತು ಆಂಧ್ರಪ್ರದೇಶದ ನಂತರ ನಾಲ್ಕನೆಯ ಸ್ಥಾನದಲ್ಲಿತ್ತು. ಆದರೆ, 2022ರಲ್ಲಿ ಕರ್ನಾಟಕವು 64 ಅಂಕಗಳೊಂದಿಗೆ ಕೇರಳ, ಹಿಮಾಚಲ ಪ್ರದೇಶ, ಗೋವಾ, ಉತ್ತರಾಖಂಡ, ತಮಿಳುನಾಡು ಮತ್ತು ಹರಿಯಾಣದ ನಂತರ 7ನೇ ಸ್ಥಾನದಲ್ಲಿದೆ.

2.3 ವಿಷನ್–2030ರಲ್ಲಿ ಪ್ರಮುಖ ಕಾರ್ಯಕ್ಷಮತೆ ಸೂಚಕಗಳು

ಎಸ್‌ಡಿಜಿ ಗುರಿಗಳನ್ನು ಸಾಧಿಸಲು ರಾಜ್ಯ ಸರ್ಕಾರವು ವಿಷನ್ ಡಾಕ್ಯುಮೆಂಟ್ 2030 ಅನ್ನು ಅಭಿವೃದ್ಧಿಪಡಿಸಿತು (ಡಿಸೆಂಬರ್ 2020). ವಿವಿಧ ಸೂಚಕಗಳನ್ನು ಬಳಸಿಕೊಂಡು ದಾಖಲಾತಿ ಮತ್ತು ವಿದ್ಯಾರ್ಥಿಗಳ ಸಾಧನೆಗಾಗಿ ಎಸ್‌ಡಿಜಿ–4 ಸಂಬಂಧಿತ ಸೂಚಕಗಳಿಗೆ ಸಂಬಂಧಿಸಿದಂತೆ 2022ರ ಮಧ್ಯಂತರ ಅವಧಿಯ ಗುರಿಗಳನ್ನು ಡಾಕ್ಯುಮೆಂಟ್ ನಿರ್ದಿಷ್ಟಪಡಿಸಿದೆ. ಪ್ರಾಥಮಿಕ ಶಿಕ್ಷಣ ವಲಯದಲ್ಲಿ ವಿಷನ್ ಡಾಕ್ಯುಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದ ಪ್ರಮುಖ ಕಾರ್ಯಕ್ಷಮತೆ ಸೂಚಕಗಳ ಸ್ಥಿತಿಯನ್ನು ಈ ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

2.3.1 ನಿವ್ವಳ ದಾಖಲಾತಿ ಅನುಪಾತ

ಪ್ರಾಥಮಿಕ ಶಿಕ್ಷಣದಲ್ಲಿ ನಿವ್ವಳ ದಾಖಲಾತಿ ದರ (ಎನ್‌ಇಆರ್) ಎಂಬುದು ಪ್ರಾಥಮಿಕ ಶಿಕ್ಷಣದಲ್ಲಿ ದಾಖಲಾಗಿರುವ ಅಧಿಕೃತ ಪ್ರಾಥಮಿಕ ಶಾಲಾ ಮಕ್ಕಳ ಸಂಖ್ಯೆ ಮತ್ತು ಅಧಿಕೃತ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳ ಒಟ್ಟು ಜನಸಂಖ್ಯೆಯ ಅನುಪಾತವಾಗಿದೆ ಮತ್ತು ಇದನ್ನು ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತಪಡಿಸಲಾಗುತ್ತದೆ . 2022ರ ವೇಳೆಗೆ ಕಿರಿಯ ಪ್ರಾಥಮಿಕ ಶಾಲಾ ವಯಸ್ಸಿನವರಿಗೆ ಶೇಕಡಾ 100 ಮತ್ತು ಹಿರಿಯ ಪ್ರಾಥಮಿಕ ಶಾಲಾ ವಯಸ್ಸಿನವರಿಗೆ ಶೇಕಡಾ 90ರಷ್ಟು ಎನ್‌ಇಆರ್‌ಅನ್ನು ಸಾಧಿಸುವ ಗುರಿಯನ್ನು ವಿಷನ್ ಡಾಕ್ಯುಮೆಂಟ್ ಹೊಂದಿತ್ತು.

ಅಂದಾಜುಗಳ ಪ್ರಕಾರ 2016–17ರಿಂದ 2021–22ರ ಅವಧಿಯಲ್ಲಿ ಎನ್‌ಇಆರ್‌ನಲ್ಲಿ ರಾಜ್ಯದ ಒಟ್ಟಾರೆ ಸ್ಥಾನವನ್ನು ಕೆಳಗಿನ **ಕೋಷ್ಟಕ–2.1**ರಲ್ಲಿ ನೀಡಲಾಗಿದೆ:

ಕೋಷ್ಟಕ 2.1: ವರ್ಷವಾರು ನಿವ್ವಳ ದಾಖಲಾತಿ ಅನುಪಾತ (ಶೇಕಡಾವಾರಿನಲ್ಲಿ)

ವರ್ಷ	ಕಿರಿಯ ಪ್ರಾಥಮಿಕ	ಹಿರಿಯ ಪ್ರಾಥಮಿಕ	ಪ್ರಾಥಮಿಕ
2017–18	94.45	80.35	89.17
2018–19	96.96	83.38	91.87
2019–20	96.72	85.33	92.46
2020–21	99.04	86.66	94.40
2021–22	99.16	87.55	94.81

ಆಧಾರ: ಶಿಕ್ಷಣ ಇಲಾಖೆ


2017–18ರಲ್ಲಿ ಕಿರಿಯ ಪ್ರಾಥಮಿಕ ಹಂತದಲ್ಲಿ ಎನ್‌ಇಆರ್ ಶೇಕಡಾ 94.45 ರಷ್ಟಿದ್ದು, ಗುರಿಯು 2022ರ ವೇಳೆಗೆ ಶೇಕಡಾ 100ರಷ್ಟಾಗಿತ್ತು. 2021–22ರ ಅವಧಿಯಲ್ಲಿ 34 ಶೈಕ್ಷಣಿಕ ಜಿಲ್ಲೆಗಳ ಪೈಕಿ, ಹತ್ತು ಜಿಲ್ಲೆಗಳು ಶೇಕಡಾ 100ಕ್ಕಿಂತ[7] ಹೆಚ್ಚಿನ ಎನ್‌ಇಆರ್ ಹೊಂದಿದ್ದವು, ಒಂಬತ್ತು[8] ಜಿಲ್ಲೆಗಳಲ್ಲಿ ಶೇಕಡಾ 95–100ರ ನಡುವೆ ಇದ್ದಿತು; ಮೂರು ಜಿಲ್ಲೆಗಳಲ್ಲಿ ಶೇಕಡಾ 90–95ರ ನಡುವೆ ಇದ್ದಿತು; ಐದು ಜಿಲ್ಲೆಗಳಲ್ಲಿ ಶೇಕಡಾ 85–90ರ ನಡುವೆ ಮತ್ತು ಐದು ಜಿಲ್ಲೆಗಳಲ್ಲಿ ಶೇಕಡಾ 80–85ರ ನಡುವೆ ಇದ್ದವು. ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳು ಶೇಕಡಾ 80ಕ್ಕಿಂತ ಕಡಿಮೆ ಎನ್‌ಇಆರ್

[7] ಬೆಳಗಾವಿ, ಬೆಂಗಳೂರು–ಉತ್ತರ, ಬೆಂಗಳೂರು–ದಕ್ಷಿಣ, ಬೀದರ್, ದಕ್ಷಿಣ ಕನ್ನಡ, ಧಾರವಾಡ, ಕಲಬುರಗಿ, ರಾಯಚೂರು, ಉಡುಪಿ, ವಿಜಯಪುರ.

[8] ಸೈದ್ಧಾಂತಿಕವಾಗಿ ಎನ್‌ಇಆರ್ ಶೇಕಡಾ 100ಕ್ಕಿಂತ ಹೆಚ್ಚಿರಬಾರದು. ಶೇಕಡಾ 100ಕ್ಕಿಂತ ಹೆಚ್ಚಿನ ಎನ್‌ಇಆರ್‌ಗೆ ಇಲಾಖೆಯು ಮಕ್ಕಳ ವಲಸೆ ಅಥವಾ ಮಕ್ಕಳ ಜನಸಂಖ್ಯೆಯ ಅಂಕಿಅಂಶಗಳಲ್ಲಿನ ದೋಷಗಳಿಗೆ ಅಧ್ಯಾರೋಪಿಸಿತು.

ಹೊಂದಿದ್ದವು. 2021–22ರ ಅವಧಿಯ ಜಿಲ್ಲಾವಾರು ಎನ್ಇಆರ್ ಅನ್ನು **ಅನುಬಂಧ–2.1**ರಲ್ಲಿ ನೀಡಲಾಗಿದೆ. ಎನ್ಇಆರ್ ಅನ್ನು ನಕ್ಷಾತ್ಮಕವಾಗಿ ನಕ್ಷೆ–2.2ರಲ್ಲಿ ತೋರಿಸಲಾಗಿದೆ.

ನಕ್ಷೆ–2.2: 2021–22ರಲ್ಲಿ ಪ್ರಾಥಮಿಕ ಹಂತದಲ್ಲಿ ನಿವ್ವಳ ದಾಖಲಾತಿ ಅನುಪಾತ (ಹಿರಿಯ ಮತ್ತು ಕಿರಿಯ)



ಆಧಾರ: ಇಲಾಖೆಯು ಒದಗಿಸಿದ ಮಾಹಿತಿಯ ಆಧಾರದ ಮೇಲೆ ನಕ್ಷೆಯನ್ನು ರಚಿಸಲಾಗಿದೆ

ಹಿರಿಯ ಪ್ರಾಥಮಿಕ ಹಂತದಲ್ಲಿ 2017–18ರಲ್ಲಿ ಎನ್ಇಆರ್ ಶೇಕಡಾ 80.35ರಷ್ಟಿತ್ತು ಮತ್ತು 2022ರ ವೇಳೆಗೆ ಶೇಕಡಾ 100ರಷ್ಟು ಮತ್ತು 2030ರವರೆಗೆ ಅದನ್ನು ಉಳಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಹಿರಿಯ ಪ್ರಾಥಮಿಕ ಹಂತದ ನಂತರ ಶಾಲೆಯಿಂದ ಹೊರಗುಳಿಯುವ

ವಿದ್ಯಾರ್ಥಿಗಳಿದ್ದಾರೆ ಎಂದು ಸೂಚಿಸುವ ಕಿರಿಯ ಪ್ರಾಥಮಿಕ ಹಂತದ ಎನ್ಇಆರ್‌ಗೆ ಹೋಲಿಸಿದರೆ ಹಿರಿಯ ಪ್ರಾಥಮಿಕ ಹಂತದಲ್ಲಿ ಎನ್ಇಆರ್ ಕಡಿಮೆಯಾಗಿತ್ತು. ಹಿರಿಯ ಪ್ರಾಥಮಿಕ ಹಂತದಲ್ಲಿ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಎನ್ಇಆರ್ 100ಕ್ಕಿಂತ ಹೆಚ್ಚಾಗಿದ್ದಿತು, ನಾಲ್ಕು ಜಿಲ್ಲೆಗಳಲ್ಲಿ 90–100ರ ನಡುವೆ ಇದ್ದಿತು, 19 ಜಿಲ್ಲೆಗಳಲ್ಲಿ 80–90ರ ನಡುವೆ ಮತ್ತು ಒಂಬತ್ತು ಜಿಲ್ಲೆಗಳಲ್ಲಿ 80ಕ್ಕಿಂತ ಕಡಿಮೆ ಇದ್ದಿತು.

ಹೀಗೆ, ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಎನ್ಇಆರ್‌ಗೆ ಸಂಬಂಧಿಸಿದಂತೆ ವಿಷನ್ ಡಾಕ್ಯುಮೆಂಟ್‌ನ ಗುರಿಯನ್ನು ಸಾಧಿಸಲಾಗಲಿಲ್ಲ. ಪ್ರತಿ ಗ್ರಾಮ ಪಂಚಾಯತಿ(ಜಿಪಿ) ಯಲ್ಲಿ 1 ರಿಂದ 12 ಹಂತಗಳ ಶಾಲೆಗಳನ್ನು ಸ್ಥಾಪಿಸುವುದು, ಎಲ್ಲಾ ಗ್ರಾಮಗಳಿಗೆ ಮತ್ತು ವಸತಿಗಳಿಗೆ ರಸ್ತೆಗಳು ಮತ್ತು ಪಾಯಿಂಟ್–ಟು–ಪಾಯಿಂಟ್ ಸಾರಿಗೆಯನ್ನು ಒದಗಿಸುವುದು, ಶಾಲೆಯನ್ನು ತೊರೆದವರು/ಕಾಣೆಯಾದ ಮಕ್ಕಳನ್ನು ಪತ್ತೆಹಚ್ಚಲು ಎನ್‌ಜಿಒಗಳು ಮತ್ತು ಸಮುದಾಯದಿಂದ ಬೆಂಬಲವನ್ನು ಕೋರುವುದು ಮತ್ತು ಎನ್ಇಆರ್‌ಅನ್ನು ಸುಧಾರಿಸುವ ಕಾರ್ಯತಂತ್ರವಾಗಿ ಅವರನ್ನು ಮರಳಿ ಶಾಲೆಗಳಿಗೆ ಕರೆತರುವುದನ್ನು ವಿಷನ್ ಡಾಕ್ಯುಮೆಂಟ್ ಆಲೋಚಿಸಿತ್ತು. 6,000 ಗ್ರಾಮಪಂಚಾಯಿತಿಗಳಲ್ಲಿ 1–12 ಹಂತದ ಶಾಲೆಗಳ ಸ್ಥಾಪನೆಯನ್ನು ಇನ್ನೂ ಕೈಗೊಳ್ಳಬೇಕಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ವಿಷನ್ ಡಾಕ್ಯುಮೆಂಟ್‌ನಲ್ಲಿನ ಪ್ರಸ್ತಾವಿತ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸದಿರುವುದು 2022ರ ವೇಳೆಗೆ ಶೇಕಡಾ 100ರಷ್ಟು ಎನ್ಇಆರ್ ಅನ್ನು ಸಾಧಿಸದಿರುವಲ್ಲಿ ಪರಿಣಮಿಸಿತು. ಎನ್ಇಆರ್ ಗುರಿಗಳನ್ನು ಸಾಧಿಸದಿರುವುದು ಶೈಕ್ಷಣಿಕ ಅಸಮಾನತೆಗಳನ್ನು ಉಲ್ಬಣಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ ಏಕೆಂದರೆ ಕೆಲವು ಮಕ್ಕಳನ್ನು ಔಪಚಾರಿಕ ಶಿಕ್ಷಣದ ಪ್ರಯೋಜನದಿಂದ ಹೊರಗಿಡಲಾಗಿತ್ತು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಶಾಶ್ವತಗೊಳಿಸುತ್ತದೆ ಮತ್ತು ಅಂತರ್ಗತ ಸಮಾಜವನ್ನು ರಚಿಸುವ ಪ್ರಯತ್ನಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

2.3.2 ಶಾಲೆಯಿಂದ ಹೊರಗುಳಿದವರ (ಡ್ರಾಪ್‌ಔಟ್) ದರ

ಪ್ರಾಥಮಿಕ ಶಿಕ್ಷಣಕ್ಕಾಗಿ ವಾರ್ಷಿಕ ಡ್ರಾಪ್‌ಔಟ್ ದರವು 1–8ನೇ ತರಗತಿಗಳಿಗೆ ದಾಖಲಾದ ವಿದ್ಯಾರ್ಥಿಗಳ ಪ್ರಮಾಣವನ್ನು ಅಳೆಯುತ್ತದೆ ಮತ್ತು ಅದು ಶಾಲೆಯನ್ನು ಪೂರ್ಣಗೊಳಿಸದೆ ವರ್ಷದಲ್ಲಿ ಶಾಲೆಯಿಂದ ಹೊರಗುಳಿಯುವ 1–8ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣದಲ್ಲಿ ಇರುತ್ತದೆ. 2022ರ ವೇಳೆಗೆ ಪ್ರಾಥಮಿಕ ಹಂತದಲ್ಲಿ ಶೇಕಡಾ 100ರಷ್ಟು ವಿದ್ಯಾರ್ಥಿಗಳನ್ನು ಉಳಿಸಿಕೊಳ್ಳುವ ಮತ್ತು ಶೂನ್ಯ ಡ್ರಾಪ್‌ಔಟ್ ದರದ ಗುರಿಯನ್ನು ವಿಷನ್ 2030 ಡಾಕ್ಯುಮೆಂಟ್ ಹೊಂದಿತ್ತು. 2017–18ರಿಂದ 2021–22ರ ಅವಧಿಯಲ್ಲಿ ಪ್ರಾಥಮಿಕ ಹಂತದಲ್ಲಿ ಡ್ರಾಪ್‌ಔಟ್ ದರದ ಒಟ್ಟಾರೆ ಸ್ಥಾನವನ್ನು **ಕೋಷ್ಟಕ–2.2ರಲ್ಲಿ** ನೀಡಲಾಗಿದೆ.


ಕೋಷ್ಟಕ–2.2: ವರ್ಷವಾರು ಡ್ರಾಪ್‌ಔಟ್ ದರ

ವರ್ಷ	ಕಿರಿಯ ಪ್ರಾಥಮಿಕ	ಹಿರಿಯ ಪ್ರಾಥಮಿಕ	ಪ್ರಾಥಮಿಕ
2017–18	1.62	2.56	1.95
2018–19	0.92	1.58	1.15
2019–20	2.04	2.98	2.38
2020–21	0.38	1.24	0.69
2021–22	0.09	0.49	0.17

ಆಧಾರ: ಶಿಕ್ಷಣ ಇಲಾಖೆ

ಹೀಗೆ, ಡ್ರಾಪ್‌ಔಟ್ ದರವು ವರ್ಷಗಳು ಕಳೆದಂತೆ ಸುಧಾರಿಸಿತ್ತು ಎಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. 2021–22ರ ಅವಧಿಯ ಜಿಲ್ಲಾವಾರು ಡ್ರಾಪ್‌ಔಟ್ ದರವನ್ನು **ಅನುಬಂಧ–2.2ರಲ್ಲಿ** ನೀಡಲಾಗಿದೆ. ಜಿಲ್ಲಾವಾರು ಅಂಕಿಅಂಶಗಳ ಪ್ರಕಾರ ಬೆಂಗಳೂರು ನಗರ ದಕ್ಷಿಣ (ಶೇಕಡಾ 2.62) ಮತ್ತು ಬಾಗಲಕೋಟೆ (ಶೇಕಡಾ 0.38) ಜಿಲ್ಲೆಗಳಲ್ಲಿ ಅತಿ ಹೆಚ್ಚು ಡ್ರಾಪ್‌ಔಟ್ ದರವು ವರದಿಯಾಗಿದ್ದಿತು. 2021–22ರ ಅವಧಿಯಲ್ಲಿ 24 ಶೈಕ್ಷಣಿಕ ಜಿಲ್ಲೆಗಳು ಶೂನ್ಯ ಡ್ರಾಪ್‌ಔಟ್ ದರವನ್ನು ವರದಿ ಮಾಡಿರುವುದನ್ನು ಸಹ ಗಮನಿಸಬಹುದು. ಕರ್ನಾಟಕದಲ್ಲಿ 2017–18ರಿಂದ 2021–22ರವರೆಗಿನ ಎನ್‌ಇಆರ್ ಮತ್ತು ಡ್ರಾಪ್‌ಔಟ್ ದರದ ಪ್ರಗತಿಯನ್ನು ನಕ್ಷೆ–2.3 ತೋರಿಸಲಾಗಿದೆ .

ನಕ್ಷೆ–2.3 : ಕರ್ನಾಟಕದಲ್ಲಿ 2017–18ರಿಂದ 2021–22ರವರೆಗಿನ ಎನ್‌ಇಆರ್ ಮತ್ತು ಡ್ರಾಪ್‌ಔಟ್ ದರದ ಪ್ರಗತಿ



ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಡ್ರಾಪ್‌ಔಟ್ ದರವು 2017–18ರಲ್ಲಿನ 1.95ರಿಂದ 2021–22ರ ಅವಧಿಯಲ್ಲಿ 0.17ಕ್ಕೆ ಕಡಿಮೆಯಾಗಿತ್ತು. ನಿವ್ವಳ ದಾಖಲಾತಿ ಅನುಪಾತವು ಸಹ ಶೇಕಡ 89.17ರಿಂದ ಶೇಕಡಾ 94.89ಕ್ಕೆ ಪ್ರಗತಿಶೀಲ ಪ್ರವೃತ್ತಿಯನ್ನು ಅನುಸರಿಸಿತ್ತು.

2.4 ವಿದ್ಯಾರ್ಥಿಗಳ ಟ್ರ್ಯಾಕಿಂಗ್‌ಗಾಗಿ ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್ ಅನ್ನು (ಎಸ್‌ಎಟಿಎಸ್) ಬಳಸದಿರುವುದು

2018ರಲ್ಲಿ ಇಲಾಖೆಯು ಅಳವಡಿಸಿಕೊಂಡ ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್[9] (ಎಸ್‌ಎಟಿಎಸ್) ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ ಮಕ್ಕಳ ದಾಖಲಾತಿಯನ್ನು ಪತ್ತೆಹಚ್ಚುವುದನ್ನು ಆಲೋಚಿಸಿತ್ತು. ಪ್ರತಿ ವಿದ್ಯಾರ್ಥಿಗೆ ವಿಶಿಷ್ಟ ವಿದ್ಯಾರ್ಥಿ ಐಡಿಯನ್ನು ನಿಗದಿಪಡಿಸಲಾಗಿತ್ತು. ಎಸ್‌ಎಟಿಎಸ್ ದತ್ತಾಂಶವು ಪ್ರಾಥಮಿಕ ಶಾಲಾ ಪೂರ್ಣಗೊಳಿಸುವಿಕೆ ದರ/ಧಾರಣ ದರವನ್ನು ತಯಾರಿಸಲು ಸಹಾಯ ಮಾಡುತ್ತದೆ. ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಮಕ್ಕಳ ಪ್ರಗತಿಯನ್ನು ಪತ್ತೆಹಚ್ಚಲು ಎಸ್‌ಎಟಿಎಸ್

[9] ಪ್ರತಿ ಮಗುವಿನ ದಾಖಲಾತಿ ಹಂತದಿಂದ ಪ್ರೌಢಶಿಕ್ಷಣದವರೆಗೆ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಟ್ರ್ಯಾಕ್ ಮಾಡುವ ಉದ್ದೇಶದಿಂದ ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್ (ಎಸ್‌ಎಟಿಎಸ್) ಹೆಸರಿನ ತಂತ್ರಾಂಶವನ್ನು ಶಿಕ್ಷಣ ಇಲಾಖೆಯು ಜಾರಿಗೆ ತಂದಿದೆ.

ಅನ್ನು ಬಳಸಬಹುದು. ಮಕ್ಕಳ ಸಮೂಹದ ಪ್ರಗತಿಯನ್ನು ಸಹ ಟ್ರ್ಯಾಕ್ ಮಾಡಬಹುದು. ವಿವಿಧ ವಲಯಗಳು, ಸಾಮಾಜಿಕ–ಆರ್ಥಿಕ ವಿಭಾಗಗಳು ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳ ಸಮೂಹದ ಡ್ರಾಪ್‌ಔಟ್/ಪೂರ್ಣಗೊಳಿಸುವಿಕೆಯ ದರಗಳನ್ನು ವಿಶ್ಲೇಷಿಸಬಹುದು. ಆದರೆ, ಎಸ್‌ಎಟಿಎಸ್ ಅನ್ನು ಬಳಸಿಕೊಂಡು ವಿದ್ಯಾರ್ಥಿ ಧಾರಣ/ಪೂರ್ಣಗೊಳಿಸುವಿಕೆಯ ದರವನ್ನು ನಿರ್ಣಯಿಸಲು ಅಂತಹ ವಿಶ್ಲೇಷಣೆಯನ್ನು ಕೈಗೊಂಡಿರಲಿಲ್ಲ. ಬದಲಿಗೆ, ವಿದ್ಯಾರ್ಥಿ ಡ್ರಾಪ್‌ಔಟ್ ದರಗಳು/ಪೂರ್ಣಗೊಳಿಸುವಿಕೆಯ ದರಗಳನ್ನು ತಲುಪಲು ಯೋಜಿತ ಜನಸಂಖ್ಯೆಯ ಆಧಾರದ ಮೇಲೆ ಇಲಾಖೆಯು ತುಲನಾತ್ಮಕವಾಗಿ ವಿಶ್ವಾಸಾರ್ಹವಲ್ಲದ ಅಂದಾಜುಗಳನ್ನು ಅವಲಂಬಿಸಿತ್ತು.

ಲೆಕ್ಕಪರಿಶೋಧನೆಯ ಕೋರಿಕೆಯ ಮೇಲೆ, ಎಂಟು ಮಾದರಿ ಜಿಲ್ಲೆಗಳಲ್ಲಿ 2017–18ರ ಅವಧಿಯಲ್ಲಿ ದಾಖಲಾದ 1ನೇ ಗ್ರೇಡ್ ವಿದ್ಯಾರ್ಥಿಗಳ ಸಮೂಹದ ಪರಿವರ್ತನೆಗೆ ಸಂಬಂಧಿಸಿದ ದತ್ತಾಂಶವನ್ನು ಇಲಾಖೆಯು ನೀಡಿತು. 2017–18ರ ಅವಧಿಯಲ್ಲಿ ದಾಖಲಾದ 2,17,407 1ನೇ ಗ್ರೇಡ್ ವಿದ್ಯಾರ್ಥಿಗಳ ಸ್ಥಿತ್ಯಂತರಕ್ಕೆ ಸಂಬಂಧಿಸಿದ ದತ್ತಾಂಶದ ಲೆಕ್ಕಪರಿಶೋಧನಾ ವಿಶ್ಲೇಷಣೆಯು ನಾಲ್ಕು ವರ್ಷಗಳು, ಅಂದರೆ 2021–22ರ ಶೈಕ್ಷಣಿಕ ವರ್ಷ ಪೂರ್ಣಗೊಂಡ ನಂತರ ಎಸ್‌ಎಟಿಎಸ್‌ನಲ್ಲಿ 9,213 ವಿದ್ಯಾರ್ಥಿಗಳನ್ನು (ಶೇಕಡಾ 4.2) ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ ಎಂಬುದನ್ನು ತೋರಿಸಿತು. ಜಿಲ್ಲಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ:

ಕೋಷ್ಟಕ 2.3: ಮಾದರಿ ಜಿಲ್ಲೆಗಳಲ್ಲಿ ಡ್ರಾಪ್‌ಔಟ್ ದರದ ವಿವರಗಳು

ಮಾದರಿ ಜಿಲ್ಲೆಯ ಹೆಸರು	ಸಮೂಹದ ಗಾತ್ರ	4 ವರ್ಷಗಳ ನಂತರ ಪತ್ತೆಯಾಗದ ಮಕ್ಕಳ ಸಂಖ್ಯೆ	4 ವರ್ಷಗಳ ಅವಧಿಗೆ ಮಕ್ಕಳ ಡ್ರಾಪ್‌ಔಟ್ ದರ (ಶೇಕಡಾ)	2021–22ರಲ್ಲಿ ವಾಸ್ತವಿಕ ಡ್ರಾಪ್‌ಔಟ್ ದರ (ಶೇಕಡಾ)	2021–22ರಲ್ಲಿ ವರದಿಯಾದ ಡ್ರಾಪ್‌ಔಟ್ ದರ (ಶೇಕಡಾ)
ಬೆಂಗಳೂರು ಗ್ರಾಮಾಂತರ	15,318	1,723	11.25	1.42	0
ಮೈಸೂರು	39,705	1,815	4.57	0.41	0
ರಾಯಚೂರು	44,338	2,004	4.52	0.49	0
ಶಿವಮೊಗ್ಗ	25,373	994	3.92	0.32	0
ಬಳ್ಳಾರಿ	30,088	1,016	3.38	0.48	0
ಚಾಮರಾಜನಗರ	11,492	346	3.01	0.39	0
ಬಾಗಲಕೋಟೆ	40,221	1,126	2.80	0.41	0.21
ಸಿಸಿಸಿ	10,872	189	1.74	0.22	0

ಆಧಾರ: ಎಸ್‌ಎಟಿಎಸ್ ದತ್ತಾಂಶವನ್ನು ಬಳಸಿಕೊಂಡು ಲೆಕ್ಕಪರಿಶೋಧನೆಯ ವಿಶ್ಲೇಷಣೆ.

ಆಯ್ದ ಎಂಟು ಜಿಲ್ಲೆಗಳ ಪೈಕಿ ಏಳು ಜಿಲ್ಲೆಗಳು ಶೂನ್ಯ ಡ್ರಾಪ್‌ಔಟ್ ದರವನ್ನು ವರದಿ ಮಾಡಿದ್ದವು. ಈ ಡ್ರಾಪ್‌ಔಟ್ ದರಗಳನ್ನು ಒಟ್ಟು ದಾಖಲಾತಿ ಅಂಕಿಅಂಶಗಳ ಆಧಾರದ ಮೇಲೆ ಇಲಾಖೆಯು ಲೆಕ್ಕಾಚಾರ ಮಾಡಿತ್ತು ಮತ್ತು ವಿದ್ಯಾರ್ಥಿಗಳ ಐಡಿಯನ್ನು ಬಳಸಿಕೊಂಡು ವಿದ್ಯಾರ್ಥಿಗಳನ್ನು ಟ್ರ್ಯಾಕ್ ಮಾಡುವ ಮೂಲಕ ಅಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2017–18ರ ಅವಧಿಯಲ್ಲಿ 1ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳ ಸಮೂಹ ಮತ್ತು 2021–22ನೇ ಸಾಲಿನಲ್ಲಿ ಅವರ ಧಾರಣ ಸ್ಥಿತಿಯ ವಿಶ್ಲೇಷಣೆಯನ್ನು ಇಲಾಖೆಯು ಕೈಗೊಳ್ಳಬೇಕಾಗಿತ್ತು. ಸಮೂಹ ವಿಶ್ಲೇಷಣೆಯು ಈ ಆಯ್ದ ಜಿಲ್ಲೆಗಳಲ್ಲಿ, ಸಮೂಹದ ಡ್ರಾಪ್‌ಔಟ್ ದರವು ಶೇಕಡಾ 0.22ರಿಂದ 1.42ರವರೆಗೆ ಇದ್ದಿತು ಎಂಬುದನ್ನು ತೋರಿಸಿತು. ಅಂದಾಜಿನ ಆಧಾರದ ಮೇಲೆ ಇಲಾಖೆಯು ವರದಿ ಮಾಡಿದ ಡ್ರಾಪ್‌ಔಟ್ ದರವು ತಪ್ಪಾಗಿದ್ದಿತು ಎಂಬುದನ್ನು ಇದು ಸಾಬೀತುಪಡಿಸುತ್ತದೆ. ವಿದ್ಯಾರ್ಥಿಗಳ ವಾಸ್ತವಿಕ ಡ್ರಾಪ್‌ಔಟ್‌ಅನ್ನು ನಿರ್ಧರಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಮತ್ತು ಎಲ್ಲಾ

ಶ್ರೇಣಿಗಳ ವಿದ್ಯಾರ್ಥಿಗಳ ಸಮೂಹಕ್ಕೆ ಎಸ್ಎಟಿಎಸ್ ದತ್ತಾಂಶದ ಸಮಗ್ರ ವಿಶ್ಲೇಷಣೆ ಅಗತ್ಯವಿದೆ. ಅಂತಹ ವಿಶ್ಲೇಷಣೆಯು ಡ್ರಾಪ್‌ಔಟ್‌ಗಳಿಂದ ಹೆಚ್ಚು ಪರಿಣಾಮ ಬೀರುವ ನಿರ್ದಿಷ್ಟ ಪ್ರದೇಶಗಳು, ವಲಯಗಳು ಮತ್ತು ಜನಸಂಖ್ಯೆಯ ವಿಭಾಗಗಳನ್ನು ತಿಳಿಸುತ್ತವೆ. ಸಂಬಂಧಪಟ್ಟ ಮಾಹಿತಿಯು ಎಸ್ಎಟಿಎಸ್‌ನಲ್ಲಿ ಲಭ್ಯವಿದ್ದರೂ, ಡ್ರಾಪ್‌ಔಟ್‌ಗಳನ್ನು ಪತ್ತೆಹಚ್ಚಲು ಮತ್ತು ಗುರುತಿಸಲು ಇಲಾಖೆಯು ದತ್ತಾಂಶವನ್ನು ಬಳಸಿರಲಿಲ್ಲ.

ಶೂನ್ಯ 'ಡ್ರಾಪ್‌ಔಟ್ ದರವನ್ನು' ಸಾಧಿಸದಿರುವುದು ಸಂವಿಧಾನದ ಅಡಿಯಲ್ಲಿ ಶಿಕ್ಷಣವನ್ನು ಹೊಂದಲು ಪ್ರತಿ ಮಗುವಿನ ಮೂಲಭೂತ ಹಕ್ಕನ್ನು ಎತ್ತಿಹಿಡಿಯುವಲ್ಲಿ ರಾಜ್ಯದ ಅಸಮರ್ಪಕ ಪ್ರಯತ್ನಗಳನ್ನು ಸೂಚಿಸುತ್ತದೆ. ಈ ಮೂಲಭೂತ ಹಕ್ಕಿನ ನಿರಾಕರಣೆಯು ಪ್ರತಿ ಮಗುವಿನ ಮೇಲೆ ಪರಿಣಾಮ ಬೀರುವುದಲ್ಲದೆ ಸಮಾಜ ಮತ್ತು ಅದರ ಬೆಳವಣಿಗೆಯ ಮೇಲೆ ವ್ಯಾಪಕವಾದ ಪರಿಣಾಮಗಳನ್ನು ಹೊಂದಿದೆ.

ದಾಖಲಾತಿಯನ್ನು ಹೆಚ್ಚಿಸುವುದು, ಹಾಜರಾತಿಯ ಮೇಲ್ವಿಚಾರಣೆ ಮಾಡುವುದು ಮತ್ತು ಅಂಚಿನಲ್ಲಿರುವ ಮತ್ತು ಹಿಂದುಳಿದ ಮಕ್ಕಳ ಶಿಕ್ಷಣದ ಫಲಿತಾಂಶಗಳನ್ನು ಸುಧಾರಿಸುವ ಗುರಿಯನ್ನು ಹೊಂದಲು ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದಾಗ್ಯೂ, ಎಸ್ಎಟಿಎಸ್ ದತ್ತಾಂಶವನ್ನು ಬಳಸಿ ಡ್ರಾಪ್‌ಔಟ್‌ಗಳನ್ನು ಟ್ರ್ಯಾಕ್ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಹೆಚ್ಚುವರಿ ಪ್ರಯತ್ನಗಳ ಅಗತ್ಯವಿದೆ ಮತ್ತು ಧಾರಣ ಮತ್ತು ಮುಖ್ಯವಾಹಿನಿಯ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಕೈಗೊಂಡ ಸಮನ್ವಯ ವಿಶ್ಲೇಷಣೆಯು ಇಲಾಖೆಯು ವರದಿ ಮಾಡಿದಕ್ಕಿಂತ ಹೆಚ್ಚಿನ ಸಂಖ್ಯೆಯ ಡ್ರಾಪ್–ಔಟ್‌ಗಳಿರುವುದನ್ನು ಸೂಚಿಸುತ್ತದೆ.

2.5 ಎಸ್‌ಡಿಜಿ–4 ಸೂಚಕಗಳನ್ನು ಮೇಲ್ವಿಚಾರಣೆ ಮಾಡಲು ದತ್ತಾಂಶ ಸಂಗ್ರಹಣೆ

ವಿವಿಧ ಎಸ್‌ಡಿಜಿ/ವಿಷನ್ ಡಾಕ್ಯುಮೆಂಟ್ ಸೂಚಕಗಳಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ವಿವಿಧ ಶೈಕ್ಷಣಿಕ ಸೂಚಕಗಳ ಮೇಲೆ ದತ್ತಾಂಶ ಸಂಗ್ರಹಣಾ ಪ್ರಕ್ರಿಯೆಯನ್ನು ಸುಧಾರಿಸುವುದು ಮುಖ್ಯವಾಗಿತ್ತು. ಪ್ರಾಥಮಿಕ ವಲಯದ ಎಸ್‌ಡಿಜಿ ಸೂಚಕಗಳಲ್ಲಿನ ದತ್ತಾಂಶವನ್ನು ನಿಯತಕಾಲಿಕವಾಗಿ ಲೆಕ್ಕಾಚಾರ ಮಾಡಿರಲಿಲ್ಲ ಮತ್ತು ವಿಶ್ಲೇಷಿಸಿರಲಿಲ್ಲ. ಎಸ್‌ಡಿಜಿ–4 ಸೂಚಕಗಳ ಪಟ್ಟಿಯನ್ನು **ಅನುಬಂಧ–2.3** ರಲ್ಲಿ ನೀಡಲಾಗಿದೆ ಮತ್ತು ಕೆಲವು ಪ್ರಮುಖ ಸೂಚಕಗಳನ್ನು ಕೆಳಗೆ ಚರ್ಚಿಸಲಾಗಿದೆ:

2.5.1 ಕನಿಷ್ಠ ಪ್ರಾವೀಣ್ಯತೆಯನ್ನು ಸಾಧಿಸುವ ಮಕ್ಕಳು ಮತ್ತು ಯುವಜನರ ಪ್ರಮಾಣ

ಎಸ್‌ಡಿಜಿ ಸೂಚಕ–4.1.1 ಶಿಕ್ಷಣದ ಸಂಬಂಧಿತ ಹಂತಗಳಲ್ಲಿ ಅಥವಾ ಕೊನೆಯಲ್ಲಿ ಓದುವಿಕೆ ಮತ್ತು ಗಣಿತದಲ್ಲಿ ಕನಿಷ್ಠ ಕಲಿಕೆಯ ಫಲಿತಾಂಶಗಳನ್ನು ಸಾಧಿಸಿದ ಮಕ್ಕಳು ಮತ್ತು ಯುವಜನರ ಶೇಕಡಾವಾರು ಪ್ರಮಾಣವನ್ನು ಅಳೆಯುವ ಗುರಿಯನ್ನು ಹೊಂದಿದೆ. ವಿಷನ್–2030 ಡಾಕ್ಯುಮೆಂಟ್ 2022ರ ವೇಳೆಗೆ ತರಗತಿ–3, 5 ಮತ್ತು 8ರಲ್ಲಿ ಶೇಕಡಾ 100ರಷ್ಟು ವಿದ್ಯಾರ್ಥಿಗಳಿಗೆ ಕನಿಷ್ಠ ಕಲಿಕೆಯ ಫಲಿತಾಂಶಗಳ ಸಾಧನೆಯನ್ನು ಆಲೋಚಿಸಿತ್ತು.

ಹೀಗೆ, ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿ (3, 5 ಮತ್ತು 8ನೇ ತರಗತಿ) (i) ಓದುವಿಕೆ ಮತ್ತು (ii) ಗಣಿತದಲ್ಲಿ ಕನಿಷ್ಠ ಪ್ರಾವೀಣ್ಯತೆಯ ಮಟ್ಟವನ್ನು ಸಾಧಿಸುವ ಮಕ್ಕಳು ಮತ್ತು ಯುವಜನರ ಶೇಕಡಾವಾರು ಪ್ರಮಾಣವನ್ನು ನಿರ್ಧರಿಸಲು ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಮೌಲ್ಯಮಾಪನಗಳನ್ನು ಕೈಗೊಳ್ಳಬೇಕಿತ್ತು. ಆದರೆ, ಇಲಾಖೆಯು ಈ ಸೂಚಕವನ್ನು ಲೆಕ್ಕಾಚಾರ ಹಾಕಿರಲಿಲ್ಲ ಮತ್ತು ತತ್ಪರಿಣಾಮವಾಗಿ ವಿವಿಧ ಶ್ರೇಣಿಗಳಲ್ಲಿ ಮಕ್ಕಳು ಸಾಧಿಸಿದ ಪ್ರಾವೀಣ್ಯತೆಯ

ಮಟ್ಟವನ್ನು ಕಂಡುಹಿಡಿಯಲಾಗಲಿಲ್ಲ. ಕನಿಷ್ಠ ಪ್ರಾವೀಣ್ಯತೆಯ ಮಟ್ಟಗಳ ಮಾಹಿತಿಯ ಅನುಪಸ್ಥಿತಿಯು ಮಕ್ಕಳಿಗೆ ಓದುವಿಕೆ ಮತ್ತು ಗಣಿತಶಾಸ್ತ್ರದಲ್ಲಿ ಅಗತ್ಯವಾದ ಕೌಶಲ್ಯಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ಇಲಾಖೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ .

ಗುಣಮಟ್ಟದ ಶಿಕ್ಷಣವನ್ನು ನೀಡುವ ವಿಶಾಲ ಗುರಿಯನ್ನು ಸಾಧಿಸಲು, ನಿಪುನ್ ಭಾರತ್ ಮಿಷನ್‌ನಂತಹ ಕಾರ್ಯತಂತ್ರಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ವಿದ್ಯಾರ್ಥಿಗಳ ಮೌಲ್ಯಮಾಪನಗಳನ್ನು ನಡೆಸದಿರುವುದು ಮತ್ತು ಸಂಬಂಧಿತ ದತ್ತಾಂಶವನ್ನು ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಮೂಲಕ ಎಸ್‌ಡಿಜಿ ಸೂಚಕ–4.1.1 ಅನ್ನು ಲೆಕ್ಕಾಚಾರ ಮಾಡದಿರುವ ಬಗ್ಗೆ ಉತ್ತರವು ಮೌನವಾಗಿತ್ತು.

2.5.2 ಭವಿಷ್ಯಕ್ಕಾಗಿ ತಯಾರಾದ ಮಕ್ಕಳ ಪ್ರಮಾಣ

ಎಸ್‌ಡಿಜಿ ಸೂಚಕ–4.1.0, 'ಭವಿಷ್ಯಕ್ಕಾಗಿ ತಯಾರಾದ ಮಕ್ಕಳ ಪ್ರಮಾಣ" ಮಕ್ಕಳು ಶಾಲೆಯನ್ನು ಪೂರ್ಣಗೊಳಿಸುವುದನ್ನು ಮಾತ್ರವಲ್ಲದೆ ಮಕ್ಕಳು ಸಾಕ್ಷರತೆ ಮತ್ತು ಗಣಿತದಲ್ಲಿ ಕನಿಷ್ಠ ಪ್ರಾವೀಣ್ಯತೆಯ ಮಟ್ಟವನ್ನು ಪೂರೈಸುತ್ತಾರೆಯೇ ಎಂಬುದನ್ನು ಅಳೆಯುತ್ತದೆ. ಕಲಿಕೆಯೊಂದಿಗೆ ಪೂರ್ಣಗೊಳಿಸುವಿಕೆ ಯನ್ನು ಸಂಯೋಜಿಸುವುದರಿಂದ ಮಕ್ಕಳು ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಿದ್ದಾರೆಯೇ ಎಂಬುದನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳ ಕಲಿಕೆಯ ಮಟ್ಟಕ್ಕೆ ನೀತಿ ನಿರೂಪಕರ ಗಮನವನ್ನು ಸೆಳೆಯಲು ಸೂಚಕ–4.1.0ಯನ್ನು ವಿನ್ಯಾಸಗೊಳಿಸಲಾಗಿದೆ. ಎಲ್ಲಾ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದಲ್ಲದೆ ಕನಿಷ್ಠ ಪ್ರಾವೀಣ್ಯತೆಯ ಮಟ್ಟವನ್ನು ಸಾಧಿಸಿದರೆ ಕಲಿಕೆಯ ಸೂಚಕವು ಶೇಕಡಾ 100ರಷ್ಟಾಗುತ್ತದೆ.

ಈ ಸೂಚಕದ ಆಧಾರದ ಮೇಲೆ ಶೈಕ್ಷಣಿಕ ಫಲಿತಾಂಶಗಳನ್ನು ಇಲಾಖೆಯು ಇನ್ನೂ ಅಳೆಯಬೇಕಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಸ್‌ಡಿಜಿ ಸೂಚಕ–4.1.0 ಅನ್ನು ಅಳೆಯುವ ವ್ಯವಸ್ಥೆಯ ಅನುಪಸ್ಥಿತಿ ಮತ್ತು ಮಕ್ಕಳ ಕೌಶಲ್ಯ ಮಟ್ಟಗಳ ಬಗ್ಗೆ ತಿಳುವಳಿಕೆಯ ಕೊರತೆಯಿಂದಾಗಿ ಇಲಾಖೆಯು ಸಕಾಲಿಕ ಮಧ್ಯಸ್ಥಿಕೆಗಳಿಗೆ ಅಡ್ಡಿಯುಂಟುಮಾಡುತ್ತದೆ, ಅಂತಿಮವಾಗಿ ಇದರಿಂದ ಮಕ್ಕಳು ಸೂಕ್ತವಾದ ಶೈಕ್ಷಣಿಕ ಬೆಂಬಲವನ್ನು ಕಳೆದುಕೊಳ್ಳುತ್ತವೆ.

ಕಲಿಕೆಯ ಫಲಿತಾಂಶಗಳನ್ನು ನಿರ್ಣಯಿಸಲು ವರ್ಷಕ್ಕೆ ನಾಲ್ಕು ರಚನಾತ್ಮಕ ಮೌಲ್ಯಮಾಪನಗಳು ಮತ್ತು ಎರಡು ಸಂಕಲನಾತ್ಮಕ ಮೌಲ್ಯಮಾಪನಗಳನ್ನು ಯೋಜಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಎಸ್‌ಡಿಜಿ ಸೂಚಕ "ಭವಿಷ್ಯಕ್ಕಾಗಿ ಸಿದ್ಧಪಡಿಸಿದ ಮಕ್ಕಳ ಪ್ರಮಾಣ" ದ ಲೆಕ್ಕಾಚಾರದ ಬಗ್ಗೆ ಉತ್ತರವು ಮೌನವಾಗಿದೆ.

2.6 ಎಸ್‌ಡಿಜಿ ಸಾಧಿಸಲು ಹೂಡಿಕೆಯ ಕೊರತೆ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾ ನಾಲ್ಕರಿಂದ ಆರು ಮತ್ತು/ಅಥವಾ ಒಟ್ಟು ಸಾರ್ವಜನಿಕ ವೆಚ್ಚದ ಶೇಕಡಾ 15–20ರಷ್ಟನ್ನು ಶಿಕ್ಷಣಕ್ಕಾಗಿ ಹಂಚಿಕೆ ಮಾಡುವಂತೆ ಸರ್ಕಾರಗಳಿಗೆ ವಿಷನ್ 2030 ಡಾಕ್ಯುಮೆಂಟ್ ಶಿಫಾರಸು ಮಾಡಿತ್ತು. ಜಿಎಸ್‌ಡಿಪಿಯ ಅನುಪಾತದಲ್ಲಿ ಶಿಕ್ಷಣದ ಮೇಲಿನ ವೆಚ್ಚವನ್ನು ಮೇಲ್ವಿಚಾರಣೆ ಮಾಡುವ ಪ್ರಾಮುಖ್ಯತೆಯನ್ನು ಸಹ ವಿಷನ್–2030 ಡಾಕ್ಯುಮೆಂಟ್ ಗುರುತಿಸಿತ್ತು. ಆದರೆ, ಪ್ರಾಥಮಿಕ ಶಿಕ್ಷಣಕ್ಕೆ ನಿರ್ದಿಷ್ಟವಾದ ಯಾವುದೇ ಗುರಿಗಳನ್ನು ಡಾಕ್ಯುಮೆಂಟ್‌ನಲ್ಲಿ ಉಲ್ಲೇಖಿಸಿರಲಿಲ್ಲ. ರಾಜ್ಯ ಸರ್ಕಾರವು ತನ್ನ ಒಟ್ಟು

ವೆಚ್ಚದ[10] ಸುಮಾರು ಶೇಕಡಾ 12ರಷ್ಟು ಮತ್ತು ಜಿಎಸ್‌ಡಿಪಿಯ ಶೇಕಡಾ 2ಕ್ಕಿಂತ ಕಡಿಮೆ ಹಣವನ್ನು ಶಿಕ್ಷಣದ ಮೇಲೆ ವೆಚ್ಚ ಮಾಡಿತ್ತು. ರಾಜ್ಯ ಆಯವ್ಯಯದಲ್ಲಿ ಪ್ರಾಥಮಿಕ ಶಿಕ್ಷಣದ ಪಾಲನ್ನು **ಕೋಷ್ಟಕ–2.4**ರಲ್ಲಿ ನೀಡಲಾಗಿದೆ.

ಕೋಷ್ಟಕ–2.4: ಒಟ್ಟು ವೆಚ್ಚದಲ್ಲಿ ಪ್ರಾಥಮಿಕ ಶಿಕ್ಷಣದ ವೆಚ್ಚದ ವರ್ಷವಾರು ಪಾಲು

(₹ ಕೋಟಿಯಲ್ಲಿ)

ವರ್ಷ	ಪ್ರಾಥಮಿಕ ಶಿಕ್ಷಣದ ಪರಿಷ್ಕೃತ ಆಯವ್ಯಯ ಹಂಚಿಕೆ	ಪ್ರಾಥಮಿಕ ಶಿಕ್ಷಣದ ವೆಚ್ಚ	ಕರ್ನಾಟಕ ಸರ್ಕಾರದ ಒಟ್ಟು ವೆಚ್ಚ	ಪ್ರಾಥಮಿಕ ಶಿಕ್ಷಣಕ್ಕೆ ತಗಲುವ ವೆಚ್ಚದ ಶೇಕಡಾವಾರು	ಶಿಕ್ಷಣದ ಒಟ್ಟು ವೆಚ್ಚ	ಜಿಎಸ್‌ಡಿಪಿ	ಜಿಎಸ್‌ಡಿಪಿಗೆ ಪ್ರತಿಯಾಗಿ ಶಿಕ್ಷಣ ವೆಚ್ಚದ ಶೇಕಡಾವಾರು
2016–17	10,429.68	10,297.05	1,60,071.18	6.43	19,794.51	12,08,000	1.64
2017–18	9,435.69	11,279.25	1,73,149.08	6.51	20,934.00	13,33,000	1.57
2018–19	14,673.32	12,689.53	1,98,959.17	6.38	23,100.24	14,76,000	1.57
2019–20	15,489.31	14,114.95	2,09,786.84	6.73	26,205.36	16,15,000	1.62
2020–21	14,688.20	13,795.79	2,21,459.96	6.23	24,008.83	17,31,000	1.39
2021–22	16,181.54	17,190.29	2,57,302.39	6.68	28,858.04	20,49,000	1.41

ಆಧಾರ: ಆಯಾ ವರ್ಷಗಳ ಆಯವ್ಯಯ ಸಂಪುಟಗಳು ಮತ್ತು ಶಿಕ್ಷಣ ಇಲಾಖೆ

ರಾಜ್ಯ ಸರ್ಕಾರದ ಒಟ್ಟು ವೆಚ್ಚಕ್ಕೆ ಪ್ರತಿಯಾಗಿ ಪ್ರಾಥಮಿಕ ಶಿಕ್ಷಣದ ಮೇಲಿನ ವೆಚ್ಚವು ಶೇಕಡಾ 6.23ರಿಂದ 6.73ರ ವ್ಯಾಪ್ತಿಯಲ್ಲಿತ್ತು ಎಂಬುದನ್ನು ನಾವು ಕೋಷ್ಟಕದಿಂದ ಗಮನಿಸಬಹುದು. ನಿಧಿಯ ಹಂಚಿಕೆಯು ಸಾಕಷ್ಟಿಲ್ಲವಾದ್ದರಿಂದ, ಅದು ಶಿಕ್ಷಣದ ಗುಣಮಟ್ಟವನ್ನು ಕಡಿಮೆ ಮಾಡುತ್ತದೆ ಮತ್ತು ರಾಜ್ಯದ ದೀರ್ಘಕಾಲೀನ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ. ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರ ಒಪ್ಪಿಕೊಂಡಿತು (ಮೇ 2023).

2.6.1 ವಾರ್ಷಿಕ ಕಾರ್ಯ ಯೋಜನೆ ಮತ್ತು ಆಯವ್ಯಯವನ್ನು ಎಸ್‌ಡಿಜಿ ಆದ್ಯತೆಗಳೊಂದಿಗೆ ಹೊಂದಾಣಿಕೆ ಮಾಡದಿರುವುದು

ಸುಸ್ಥಿರ ಅಭಿವೃದ್ಧಿ ಗುರಿಗಳ ಕಾರ್ಯಸೂಚಿಯು ಎಸ್‌ಡಿಜಿ ಗುರಿಗಳು ಮತ್ತು ಅನುಷ್ಠಾನದ ವಿಧಾನಗಳು ಅವಿಭಾಜ್ಯ ಮತ್ತು ಪರಸ್ಪರ ಸಂಬಂಧ ಹೊಂದಿವೆ ಎಂದು ಗುರುತಿಸುತ್ತದೆ. ಎಸ್‌ಡಿಜಿಗಳಿಗೆ ಆಯವ್ಯಯ ಮಾಡುವುದು ಸರ್ಕಾರದ ನೀತಿ ಮತ್ತು ಕಾರ್ಯಕ್ರಮದ ಅನುಷ್ಠಾನದಲ್ಲಿ ಎಸ್‌ಡಿಜಿಗಳ ಪರಿಣಾಮಕಾರಿ ಏಕೀಕರಣಕ್ಕೆ ಗಣನೀಯವಾಗಿ ಕೊಡುಗೆ ನೀಡುತ್ತದೆ. ಎಸ್‌ಡಿಜಿಗಳಿಗೆ ಪ್ರತಿಯಾಗಿ ಆಯವ್ಯಯ ಹಂಚಿಕೆಗಳನ್ನು ಮ್ಯಾಪಿಂಗ್ ಮಾಡುವ ಮೂಲಕ ಎಸ್‌ಡಿಜಿ ಅಡಿಯಲ್ಲಿ ಗುರಿಗಳನ್ನು ಆಯವ್ಯಯದೊಂದಿಗೆ ಸಂಯೋಜಿಸಬೇಕು; ಆಯವ್ಯಯ ಡಾಕ್ಯುಮೆಂಟ್‌ನಲ್ಲಿ ನಿರೂಪಣೆಯನ್ನು ಒಳಗೊಂಡಂತೆ ಆಯವ್ಯಯವು ಎಸ್‌ಡಿಜಿಗಳಿಗೆ ಹೇಗೆ ಹೊಂದಿಕೆಯಾಗುತ್ತದೆ ಎಂಬುದನ್ನು ವಿಶಾಲವಾಗಿ ವಿವರಿಸಬೇಕು; ಆಯವ್ಯಯ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು ಎಸ್‌ಡಿಜಿ ಸಾಧನೆಗಳನ್ನು ಬಳಸುವುದು ಮತ್ತು ಸಂಪನ್ಮೂಲ ಹಂಚಿಕೆಯನ್ನು ತರ್ಕಬದ್ಧಗೊಳಿಸಲು ಮತ್ತು ಹಣಕಾಸು ಆದ್ಯತೆಗಳನ್ನು ನಿರ್ಧರಿಸಲು ಎಸ್‌ಡಿಜಿಗಳನ್ನು ಸಾಧನವಾಗಿ ಬಳಸಬೇಕು.

ಸಮಗ್ರ ಶಿಕ್ಷಾ ಯೋಜನೆಯ ವಾರ್ಷಿಕ ಕಾಮಗಾರಿ ಯೋಜನೆಗಳಲ್ಲಿ ಮತ್ತು ಆಯವ್ಯಯದಲ್ಲಿ ಎಸ್‌ಡಿಜಿ ಗುರಿಗಳ ಉಲ್ಲೇಖವಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಹಿರಿಯ ನಿರ್ವಹಣಾ ಮಟ್ಟದಲ್ಲಿ ದತ್ತಾಂಶ–ಚಾಲಿತ ನಿರ್ಧಾರ ಕೈಗೊಳ್ಳಲು ಮತ್ತು ಸುಧಾರಣೆಗಾಗಿ

[10] ಸಾಲಗಳು ಮತ್ತು ಮುಂಗಡಗಳನ್ನು ಹೊರತುಪಡಿಸಿ ವೆಚ್ಚ

ಕ್ಷೇತ್ರಗಳನ್ನು ಗುರುತಿಸಲು ಇಲಾಖೆಯು ಎಸ್‌ಡಿಜಿ ಸೂಚಕಗಳ ಸಾಮರ್ಥ್ಯವನ್ನು ಬಳಸಿಕೊಂಡಿರಲಿಲ್ಲ. ಇಲಾಖೆಯ ಆಯವ್ಯಯದಲ್ಲಿ ಎಸ್‌ಡಿಜಿ ಗುರಿಗಳ ಉಲ್ಲೇಖದ ಅನುಪಸ್ಥಿತಿಯು ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಹಂಚಿಕೆಗಳ ಹೊಂದಾಣಿಕೆಗೆ ಅಡ್ಡಿಪಡಿಸುತ್ತದೆ, ಇದು ಶಿಕ್ಷಣ ವಲಯದಲ್ಲಿ ಎಸ್‌ಡಿಜಿಗಳನ್ನು ಸಾಧಿಸುವ ಪ್ರಗತಿಯನ್ನು ಪತ್ತೆಹಚ್ಚಲು ಕಷ್ಟವಾಗುತ್ತದೆ.

ಶೇಕಡಾ 100ರಷ್ಟು ಒಟ್ಟು ದಾಖಲಾತಿ ಅನುಪಾತವನ್ನು (ಜಿಇಆರ್) ಸಾಧಿಸುವ ಬಗ್ಗೆ ವಾರ್ಷಿಕ ಯೋಜನೆಗಳ ಕಾರ್ಯನಿರ್ವಹಣಾ ಸಾರಾಂಶದಲ್ಲಿ ಉಲ್ಲೇಖವಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಜಿಇಆರ್ ಜೊತೆಗೆ, ಆಯಾ ಯೋಜನಾ ವರ್ಷಕ್ಕೆ ಭೌಗೋಳಿಕ/ಅನುಕೂಲಕರ ಗುಂಪುಗಳಾದ್ಯಂತ ವಿಂಗಡಣೆಯ ರೀತಿಯಲ್ಲಿ ಅಳೆಯಬಹುದಾದ ರೀತಿಯಲ್ಲಿ ಇತರ ಎಸ್‌ಡಿಜಿ ಗುರಿಗಳನ್ನು ನಿರ್ದಿಷ್ಟಪಡಿಸುವುದು ಎಸ್‌ಡಿಜಿ ಗುರಿಗಳೊಂದಿಗೆ ಆಯವ್ಯಯದ ಏಕೀಕರಣವನ್ನು ಸುಲಭಗೊಳಿಸುತ್ತದೆ ಎಂಬುದು ಲೆಕ್ಕಪರಿಶೋಧನೆಯ ದೃಷ್ಟಿಕೋನವಾಗಿದೆ.

2.6.2 ಹೆಚ್ಚುವರಿ ಸಂಪನ್ಮೂಲಗಳನ್ನು ಸಜ್ಜುಗೊಳಿಸುವ ತಂತ್ರಗಳನ್ನು ನಿಗದಿಪಡಿಸಿಲ್ಲ

ಕಾರ್ಯಕ್ರಮಗಳ ಅನುಷ್ಠಾನಕ್ಕೆ ₹14,527.91 ಕೋಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಹಣವನ್ನು ವಿಷನ್ ಡಾಕ್ಯುಮೆಂಟ್ 2030 ಅಂದಾಜಿಸಿದೆ. 2030ರ ವೇಳೆಗೆ ರಾಜ್ಯವು ಎಸ್‌ಡಿಜಿ–4 ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬ ಭರವಸೆಯನ್ನು ಪಡೆಯಲು ಅಂತರವನ್ನು ಕಡಿಮೆ ಮಾಡಲು ಹೆಚ್ಚುವರಿ ನಿಧಿಯ ಮೂಲಗಳನ್ನು ಗುರುತಿಸುವುದು ಅತ್ಯಗತ್ಯವಾಗಿದೆ.

ಸಾರ್ವಜನಿಕ ವಲಯದ ನಿಧಿಯಲ್ಲಿನ ಅಂದಾಜು ಅಂತರವನ್ನು ಕಡಿಮೆ ಮಾಡಲು ಹೆಚ್ಚುವರಿ ಸಂಪನ್ಮೂಲಗಳನ್ನು ಸಜ್ಜುಗೊಳಿಸಲು ಇಲಾಖೆಯು ಯಾವುದೇ ಕಾರ್ಯತಂತ್ರಗಳನ್ನು ರೂಪಿಸಿರಲಿಲ್ಲ ಮತ್ತು ಕಾರ್ಯಗತಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವೈವಿಧ್ಯಮಯ ಸಂಪನ್ಮೂಲ ಕ್ರೋಢೀಕರಣ ಕಾರ್ಯತಂತ್ರದ ಅನುಪಸ್ಥಿತಿಯು 2030ರ ವೇಳೆಗೆ ತನ್ನ ಶಿಕ್ಷಣ ಗುರಿಗಳನ್ನು ಮತ್ತು ಎಸ್‌ಡಿಜಿ–4 ಗುರಿಗಳನ್ನು ಸಾಧಿಸುವ ರಾಜ್ಯದ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಹಣಕಾಸಿನ ಪರ್ಯಾಯ ಹಣದ ಮೂಲಗಳು ಮತ್ತು ಹೆಚ್ಚುವರಿ ಸಂಪನ್ಮೂಲಗಳಿಲ್ಲದೆಯೇ ಶಾಲೆಗಳು ನಿಧಿಯ ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ, ಇದು ಸಾಕಷ್ಟಿಲ್ಲದ ಮೂಲಸೌಕರ್ಯ ಮತ್ತು ಕಳಪೆ ನಿರ್ವಹಣೆಗೆ ಕಾರಣವಾಗಿ ಅಂತಿಮವಾಗಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಯೋಜನಾ ಅನುಮೋದನೆ ಮಂಡಳಿಯಿಂದ ಯೋಜಿಸಲಾದ ಮತ್ತು ಅನುಮೋದಿಸಲಾದ ಅನೇಕ ಚಟುವಟಿಕೆಗಳನ್ನು ಹಣದ ಕೊರತೆಯಿಂದಾಗಿ ಕೈಗೆತ್ತಿಕೊಳ್ಳಲಾಗಿಲ್ಲ ಮತ್ತು ಇಲಾಖೆಯು ಕೆಲವು ಶಾಲೆಗಳಿಗೆ ಸಂಬಂಧಿಸಿದಂತೆ ಎನ್‌ಜಿಒಗಳ ಸಹಾಯವನ್ನು ಪಡೆದುಕೊಂಡಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

ಆದಾಗ್ಯೂ, ಹಣಕಾಸಿನ ಸಂಪನ್ಮೂಲಗಳು ಗುರುತಿಸುವುದು ಎಸ್‌ಡಿಜಿ ಗುರಿಗಳನ್ನು ಸಾಧಿಸುವ ಒಂದು ಅವಿಭಾಜ್ಯ ಅಂಗವಾಗಿದೆ ಮತ್ತು ಹಣಕಾಸಿನ ಕೊರತೆಯನ್ನು ಕಡಿಮೆ ಮಾಡಲು ಖಾಸಗಿ ವಲಯದಿಂದ ಹೆಚ್ಚುವರಿ ಸಂಪನ್ಮೂಲಗಳನ್ನು ಸಜ್ಜುಗೊಳಿಸಲು ಉತ್ತಮ ರಚನಾತ್ಮಕ ಕಾರ್ಯತಂತ್ರಗಳನ್ನು ಸಿದ್ಧಪಡಿಸುವುದು ಮುಖ್ಯವಾಗಿದೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ. ಶಾಲೆಯ ಸೌಲಭ್ಯಗಳನ್ನು ಸುಧಾರಿಸಲು ಅಳವಡಿಸಿಕೊಳ್ಳಬಹುದಾದ ಒಂದು ಉತ್ತಮವಾದ ನಿದರ್ಶನವನ್ನು ಕೆಳಗೆ ನೀಡಲಾಗಿದೆ :

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿಗಳನ್ನು ಬಳಸುವಲ್ಲಿ ಉತ್ತಮ ನಿದರ್ಶನ

2018–19ರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಡಿಡಿಪಿಐ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಪ್ರದೇಶದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಬಾಶೆಟ್ಟಿಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಅಭಿವೃದ್ಧಿಪಡಿಸಲು ಮತ್ತು ನವೀಕರಿಸಲು ಅಜಾಕ್ಸ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್‌ಅನ್ನು ಸಂಪರ್ಕಿಸಿದರು. ಈ ಯೋಜನೆಯನ್ನು 2018–19ರಲ್ಲಿ ₹8.00 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಯಿತು ಮತ್ತು 2020–21ರಲ್ಲಿ ಪೂರ್ಣಗೊಳಿಸಲಾಯಿತು.

ಯೋಜನೆಯಡಿ ಸ್ಥಾಪಿಸಲಾದ ಹೊಸ ಶಾಲಾ ಆವರಣ ಮತ್ತು ಮೂರು ಅಂತಸ್ತಿನ ಕಟ್ಟಡವು 24 ವಿಶಾಲವಾದ ತರಗತಿ ಕೊಠಡಿಗಳು, ಮುಖ್ಯೋಪಾಧ್ಯಾಯರಿಗೆ ಕ್ಯಾಬಿನ್‌ನೊಂದಿಗೆ ಸುಸಜ್ಜಿತ ಆಡಳಿತ ಕಛೇರಿ, ಪ್ರತಿ ಮಹಡಿಯಲ್ಲಿ ಶಿಕ್ಷಕರಿಗೆ ಪ್ರತ್ಯೇಕ ಸಿಬ್ಬಂದಿ ಕೊಠಡಿಗಳನ್ನು ಒಳಗೊಂಡಿತ್ತು. ಶಾಲೆಯು 27 ಶಿಕ್ಷಕರೊಂದಿಗೆ 1:31ರ ವಿದ್ಯಾರ್ಥಿ ಶಿಕ್ಷಕರ ಅನುಪಾತವನ್ನು ನಿರ್ವಹಿಸುತ್ತದೆ. ಎಲ್ಲಾ ಮಹಡಿಗಳಲ್ಲಿ ಶುದ್ಧೀಕರಿಸಿದ ಕುಡಿಯುವ ನೀರಿನ ಲಭ್ಯತೆಯಿದ್ದಿತು. ಪ್ರತಿ ಮಹಡಿಯಲ್ಲಿ ಪ್ರತ್ಯೇಕ ಬಾಲಕಿಯರು ಮತ್ತು ಬಾಲಕರ ಶೌಚಾಲಯಗಳನ್ನು ಒದಗಿಸಲಾಗಿತ್ತು. ಶಾಲೆಯಲ್ಲಿ ಅಡುಗೆ (ಆರು) ಮನೆಗೆಲಸ (ಮೂವರು) ಮತ್ತು ಭದ್ರತೆಗೆ (ಒಬ್ಬರು) ಪ್ರತ್ಯೇಕ ಸಿಬ್ಬಂದಿಯಿದ್ದರು. ಶಾಲೆಯ ಸಂಪೂರ್ಣ ಆವರಣದಲ್ಲಿ ಸಿಸಿಟಿವಿ ಕಣ್ಗಾವಲು ಇದ್ದಿತು.

ಶಾಲೆಯು ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಅನ್ನು ಹೊಂದಿದ್ದು, ಕಂಪನಿಯು ಒದಗಿಸಿದ ಕಂಪ್ಯೂಟರ್ ಶಿಕ್ಷಕರಿಂದ ಬೆಂಬಲಿತವಾದ 40 ಕ್ಕೂ ಹೆಚ್ಚು ಕಂಪ್ಯೂಟರ್‌ಗಳನ್ನು ಹೊಂದಿತ್ತು. ಶಾಲೆಯು ಪ್ರತ್ಯೇಕ ವಿಜ್ಞಾನ ಪ್ರಯೋಗಾಲಯ, ಕಲೆ ಮತ್ತು ಕರಕುಶಲ ಕೊಠಡಿ, ಶ್ರವ್ಯ–ದೃಶ್ಯ ಕೊಠಡಿ, ಗ್ರಂಥಾಲಯ ಮತ್ತು ಮಕ್ಕಳ ಸಲಹಾ ಕೊಠಡಿಯನ್ನು ಹೊಂದಿತ್ತು. ಎಲ್ಲಾ ಮಕ್ಕಳಿಗೆ ಬೆಂಚ್ ಮತ್ತು ಡೆಸ್ಕ್ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಶಾಲೆಯು ಆಧುನಿಕ ಅಡುಗೆಮನೆ ಮತ್ತು ಊಟದ ಹಾಲ್ ಮತ್ತು 400 ಮಕ್ಕಳಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯದ ಸಭಾಂಗಣವನ್ನು ಹೊಂದಿತ್ತು. ಶಾಲೆಯು ದೊಡ್ಡ ಆಟದ ಮೈದಾನ ಮತ್ತು ಉತ್ತಮ ಕ್ರೀಡಾ ಸೌಲಭ್ಯಗಳನ್ನು ಹೊಂದಿತ್ತು.



ಪರಿಣಾಮ:

ಕೆಳಗೆ ತೋರಿಸಿದಂತೆ, ಹೆಚ್ಚುವರಿ ಸೌಲಭ್ಯಗಳೊಂದಿಗೆ ಶಾಲೆಯನ್ನು ನವೀಕರಿಸಿದ ನಂತರ ಶಾಲೆಯಲ್ಲಿ ದಾಖಲಾತಿ ಗಣನೀಯವಾಗಿ ಸುಧಾರಿಸಿತ್ತು ಎಂಬುದನ್ನು ಗಮನಿಸಲಾಯಿತು.

ವರ್ಷ	ದಾಖಲಾತಿ		
	ಬಾಲಕರು	ಬಾಲಕಿಯರು	ಒಟ್ಟು
2015–16	235	232	467
2016–17	204	213	417
2017–18	196	194	390
2018–19	189	197	386
2019–20	207	194	401
2020–21	272	235	507
2021–22	389	324	713
2022–23	424	407	831

ಹೀಗೆ, 2018–19ರ ವರ್ಷದವರೆಗೆ ಇಳಿಮುಖ ಪ್ರವೃತ್ತಿಯಲ್ಲಿದ್ದ ದಾಖಲಾತಿಯು 2019–20ನೇ ವರ್ಷದಿಂದ ವ್ಯತಿರಿಕ್ತವಾಗಿ ನಂತರ ಗಮನಾರ್ಹವಾಗಿ ಸುಧಾರಿಸಿದೆ ಎಂಬುದನ್ನು ಗಮನಿಸಲಾಯಿತು. ಇಂತಹ ಉತ್ತಮ ನಿದರ್ಶನಗಳು ಇತರ ಜಿಲ್ಲೆಗಳಲ್ಲಿ ಪುನರಾವರ್ತನೆಯಾಗಬೇಕು ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

2.7 ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ

ಜುಲೈ 2020ರಲ್ಲಿ ಭಾರತ ಸರ್ಕಾರವು ಅನುಮೋದಿಸಿದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಸುಧಾರಣೆಗಳನ್ನು ಪ್ರಸ್ತಾವಿಸಿತ್ತು. ಅನುಷ್ಠಾನದ ವಿಧಾನವನ್ನು ವಿನ್ಯಾಸಗೊಳಿಸಲು ರಾಜ್ಯ ಸರ್ಕಾರವು ಒಂದು ಕೋರ್ ಸಮಿತಿಯನ್ನು ರಚಿಸಿತು ಮತ್ತು ಸಮಿತಿಯು ಅನುಷ್ಠಾನಕ್ಕೆ ಸಮಯಾವಧಿ ಮತ್ತು ಪ್ರಮುಖ ಕ್ರಮಗಳನ್ನು ಅಂತಿಮಗೊಳಿಸಿತು (ಆಗಸ್ಟ್ 2020). ಸಮಿತಿಯು ವಿನ್ಯಾಸಗೊಳಿಸಿದ ವಿಧಾನವು ಮ್ಯಾಕ್ರೋ ಮಟ್ಟದ ಯೋಜನೆಯನ್ನು ಮತ್ತು ವರ್ಷ '0' (2020), ವರ್ಷ '3' (2023) ಮತ್ತು ವರ್ಷ '5' (2025) ರಲ್ಲಿ 'ಏನು' ಸಾಧಿಸಬೇಕು ಎಂಬುದನ್ನು ಒದಗಿಸುತ್ತದೆ. ರಾಜ್ಯದಲ್ಲಿ ಎನ್‌ಇಪಿ–2020 ಅನುಷ್ಠಾನದ ಸ್ಥಿತಿಯನ್ನು **ಕೋಷ್ಟಕ–2.5ರಲ್ಲಿ ನೀಡಲಾಗಿದೆ.**

ಕೋಷ್ಟಕ–2.5: ರಾಜ್ಯದಲ್ಲಿ ಎನ್‌ಇಪಿ–2020ರ ಅನುಷ್ಠಾನದ ಸ್ಥಿತಿ

ಪ್ರಮುಖ ಕ್ಷೇತ್ರ	ವಿವರಣೆ	ಸ್ಥಿತಿ
ಶಾಲಾ ಶಿಕ್ಷಣದ ರಚನೆ	ಶಾಲಾ ಪಠ್ಯಕ್ರಮದ ಪುನರ್ರಚನೆಯನ್ನು 3–18 ವಯಸ್ಸಿನವರನ್ನು ಒಳಗೊಂಡು 5+3+3+4 ಸ್ವರೂಪದಲ್ಲಿ ಎನ್‌ಇಪಿ–2020 ಆಲೋಚಿಸಿತ್ತು (ಐದು ವರ್ಷಗಳ ಅಡಿಪಾಯದ ಹಂತ; ಮೂರು ವರ್ಷಗಳ ಪೂರ್ವಸಿದ್ಧತಾ ಹಂತ, ಮೂರು ವರ್ಷಗಳ ಮಧ್ಯಮ ಹಂತ ಮತ್ತು ನಾಲ್ಕು ವರ್ಷಗಳ ದ್ವಿತೀಯ ಹಂತ)	ಪುನರ್ ರಚನೆ ಪ್ರಕ್ರಿಯೆಯನ್ನು ಇನ್ನೂ ಅನುಷ್ಠಾನಗೊಳಿಸಬೇಕಿದೆ.

ಪ್ರಮುಖ ಕ್ಷೇತ್ರ	ವಿವರಣೆ	ಸ್ಥಿತಿ
ಬಾಲ್ಯದ ಆರೈಕೆ ಮತ್ತು ಶಿಕ್ಷಣ	2030ರ ವೇಳೆಗೆ, ಎಲ್ಲಾ ಬಾಲಕಿಯರು ಮತ್ತು ಬಾಲಕರು ಗುಣಮಟ್ಟದ ಬಾಲ್ಯದ ಅಭಿವೃದ್ಧಿ, ಆರೈಕೆ ಮತ್ತು ಪ್ರಾಥಮಿಕ-ಪೂರ್ವ ಶಿಕ್ಷಣಕ್ಕೆ ಪ್ರವೇಶವನ್ನು ಹೊಂದಿರಬೇಕು ಎಂದು ಎಸ್‌ಡಿಜಿ-4.2 ಆಲೋಚಿಸಿತ್ತು, ಇದರಿಂದಾಗಿ ಅವರು ಪ್ರಾಥಮಿಕ ಶಿಕ್ಷಣಕ್ಕೆ ಸಿದ್ಧರಾಗುತ್ತಾರೆ. ಎಸ್‌ಡಿಜಿ-4.2 ರ ತರಹ, ಎನ್‌ಇಪಿ-2020 ಸಹ ಗುಣಮಟ್ಟದ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ಇಸಿಸಿಇ) ಸಾರ್ವತ್ರಿಕ ಲಭ್ಯತೆಯನ್ನು ಪ್ರತಿಪಾದಿಸುತ್ತದೆ.	ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಡೆಸಿದ ಸಮೀಕ್ಷೆಯು (ಜುಲೈ ಮತ್ತು ಆಗಸ್ಟ್ 2021) ನಾಲ್ಕರಿಂದ ಆರು ವರ್ಷದೊಳಗಿನ 5.33 ಲಕ್ಷ ಮಕ್ಕಳು ಯಾವುದೇ ಪ್ರಾಥಮಿಕ-ಪೂರ್ವ ಕೇಂದ್ರಗಳಲ್ಲಿ ದಾಖಲಾಗಿಲ್ಲ ಎಂದು ತೋರಿಸಿದೆ.
ಶಾಲಾ ಶಿಕ್ಷಣದ ಎಲ್ಲಾ ಹಂತಗಳಿಗೆ ಪಠ್ಯಕ್ರಮದ ಪರಿಷ್ಕರಣೆ	ವಿದ್ಯಾರ್ಥಿಗಳ ಸಾಧನೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಎನ್‌ಇಪಿ ಪಠ್ಯಕ್ರಮದ ಪರಿಷ್ಕರಣೆಯನ್ನು ಪ್ರಸ್ತಾಪಿಸಿದೆ. ಎನ್‌ಇಪಿಯ ಶಿಫಾರಸಿನ ಪ್ರಕಾರ ಶಾಲಾ ಶಿಕ್ಷಣದ ಪಠ್ಯಕ್ರಮ ಮತ್ತು ಶಿಕ್ಷಣದ ಚೌಕಟ್ಟನ್ನು ಮರು-ರಚಿಸಲು ಟಾಸ್ಕ್ ಫೋರ್ಸ್ ಶಿಫಾರಸು ಮಾಡಿತ್ತು ಮತ್ತು ಪಠ್ಯಕ್ರಮವನ್ನು ಅದರ ಮೂಲಭೂತ ಅಗತ್ಯಗಳಿಗೆ ಕಡಿಮೆ ಮಾಡಲು ವಿಶೇಷ ಒತ್ತು ನೀಡಿತ್ತು.	ಪ್ರಸ್ತುತ ರಾಜ್ಯದಲ್ಲಿನ ಪಠ್ಯಕ್ರಮವು 2007ರಲ್ಲಿ ರೂಪಿಸಲಾದ ಕರ್ನಾಟಕ ಪಠ್ಯಕ್ರಮದ ಚೌಕಟ್ಟನ್ನು ಆಧರಿಸಿದೆ. ಎನ್‌ಇಪಿ-2020ರ ಅನುಷ್ಠಾನದ ಕಾರ್ಯ ಯೋಜನೆಯು ಪಠ್ಯಕ್ರಮವನ್ನು ಅದರ ಪ್ರಮುಖ ಅಗತ್ಯಗಳಿಗೆ ಕಡಿತಗೊಳಿಸುವುದನ್ನು 2020-21ರ ವೇಳೆಗೆ ತಕ್ಷಣದ ಚಟುವಟಿಕೆಯಾಗಿ ಪೂರ್ಣಗೊಳಿಸಲು ಯೋಜಿಸಿದೆ. ಚಟುವಟಿಕೆ ಇನ್ನೂ ಪೂರ್ಣಗೊಂಡಿಲ್ಲ.
ಶಾಲಾ ಸಂಕೀರ್ಣಗಳು/ ಗುಂಪುಗಳನ್ನು ಸ್ಥಾಪಿಸುವುದು ಮತ್ತು ಶಾಲೆಗಳ ಜೋಡಣೆ	ಪರಿಣಾಮಕಾರಿ ಆಡಳಿತದ ಮೂಲಕ ಶಿಕ್ಷಣ ಪರಿಸರ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಶಾಲಾ ಸಂಕೀರ್ಣಗಳನ್ನು ಸ್ಥಾಪಿಸಲು ಎನ್‌ಇಪಿ-2020 ಶಿಫಾರಸು ಮಾಡಿತ್ತು. "ಶಾಲೆಗಳ ನಡುವಿನ ಪಾಲುದಾರಿಕೆ" ಮಧ್ಯಸ್ಥಿಕೆಯು ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳನ್ನು ಖಾಸಗಿ, ಅನುದಾನಿತ ಅಥವಾ ನಗರ ಅಥವಾ ಅರೆ ನಗರ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳೊಂದಿಗೆ ಜೋಡಿಸುವ ಗುರಿಯನ್ನು ಹೊಂದಿತ್ತು.	ಶಾಲಾ ಸಂಕೀರ್ಣಗಳ ಸ್ಥಾಪನೆಯನ್ನು ಅನುಷ್ಠಾನಗೊಳಿಸಿರಲಿಲ್ಲ. ಜೋಡಣೆ ಕಾರ್ಯಕ್ರಮಗಳನ್ನು ಕೂಡ ಅನುಷ್ಠಾನ ಗೊಳಿಸಿರಲಿಲ್ಲ.

ಆಧಾರ: ಇಲಾಖೆಯಿಂದ ಒದಗಿಸಲಾದ ಮಾಹಿತಿ

ಎನ್‌ಎಪಿ-2020 ಅನ್ನು ಅಳವಡಿಸಿಕೊಳ್ಳುವಲ್ಲಿ ರಾಜ್ಯವು ಮುಂಚೂಣಿಯಲ್ಲಿದ್ದರೂ, ರಾಜ್ಯದಲ್ಲಿ ಹಲವಾರು ನೀತಿ ಶಿಫಾರಸುಗಳನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ. ಇದು ಎನ್‌ಇಪಿ-2020 ಪ್ರತಿಪಾದಿಸಿದ ಸುಧಾರಣೆಗಳಿಗೆ ಅನುಗುಣವಾಗಿ ಮಕ್ಕಳು ಶಿಕ್ಷಣವನ್ನು ಪಡೆಯುವ ಅವಕಾಶವನ್ನು ವಂಚಿತಗೊಳಿಸಿತು.

ಎನ್‌ಸಿಎಫ್-ಎಫ್‌ಎಸ್ ಮತ್ತು ಕೆಎಸ್‌ಸಿಎಫ್-ಎಫ್‌ಎಸ್‌ಗಳ ಆಧಾರದ ಮೇಲೆ ಸಂಬಂಧಿಸಿದ ಉಪ-ಸಮಿತಿಗಳು ಪಠ್ಯಕ್ರಮ, ಟಿಎಲ್‌ಎಮ್ ಮತ್ತು ಇಸಿಸಿಇ ಇವುಗಳ ಮೂರು ವರ್ಷಗಳ ಮೌಲ್ಯಮಾಪನವನ್ನು ಅಂತಿಮಗೊಳಿಸುತ್ತಿವೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆರಂಭಿಕ ಮಕ್ಕಳ ಆರೈಕೆ ಮತ್ತು ಶಿಕ್ಷಣ ಕುರಿತು, ಕರ್ನಾಟಕ ರಾಜ್ಯ ಪಠ್ಯಕ್ರಮ ಚೌಕಟ್ಟಿನ ಅಡಿಪಾಯದ ಹಂತವನ್ನು ವಿನ್ಯಾಸಗೊಳಿಸಲಾಗಿದೆ ಮತ್ತು ಬಿಡುಗಡೆ ಮಾಡಲಾಗಿದೆ (ಮಾರ್ಚ್ 2023) ಮತ್ತು ಮೇಲಿನ ಎಲ್ಲಾ ಅಂಶಗಳಿಗೆ ದಾಖಲೆಗಳನ್ನು ಶೀಘ್ರದಲ್ಲೇ ಅಂತಿಮಗೊಳಿಸಿ ಸಲ್ಲಿಸಲಾಗುವುದು ಎಂದು ತಿಳಿಸಲಾಯಿತು.

3ರಿಂದ 12ನೇ ತರಗತಿಗಳ ಪಠ್ಯಕ್ರಮದ ಚೌಕಟ್ಟನ್ನು ಎನ್‌ಸಿಎಫ್–ಶಾಲಾ ಶಿಕ್ಷಣದ ಬಿಡುಗಡೆಯ ನಂತರ ಅಭಿವೃದ್ಧಿಪಡಿಸಲಾಗುತ್ತದೆ. ರಾಜ್ಯವು ಖಾಸಗಿ ಮತ್ತು ಅನುದಾನಿತ ಶಾಲಾ ಆಡಳಿತಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿದೆ, ಮಾನವ ಸಂಪನ್ಮೂಲ (ಶಿಕ್ಷಕರು) ಮತ್ತು ಮೂಲಸೌಕರ್ಯ ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಪ್ರಯೋಜನಗಳನ್ನು ಮತ್ತು ಟ್ವಿನ್ನಿಂಗ್‌ನ ಸಾಧಕ ಬಾಧಕಗಳನ್ನು ಚರ್ಚಿಸಿ ನಂತರ ಶಾಲೆಗಳ ನಡುವಿನ ಪಾಲುದಾರಿಕೆಗೆ ಯೋಜನೆ ರೂಪಿಸಲಾಗುತ್ತದೆ.

2.8 ಯೋಜನೆ

2.8.1 ದೃಷ್ಟಿಕೋನ ಯೋಜನೆಗಳನ್ನು ತಯಾರಿಸದಿರುವುದು

ಸಮಗ್ರ ಶಿಕ್ಷಾ ಯೋಜನೆಯ ಮಾರ್ಗಸೂಚಿಗಳ ಕಂಡಿಕೆ 14.4ರ ಪ್ರಕಾರ ನಿಗದಿತ ಸಮಯದ ಚೌಕಟ್ಟಿನೊಳಗೆ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ದೃಷ್ಟಿಕೋನ ಯೋಜನೆಯನ್ನು ಸಿದ್ಧಪಡಿಸುವ ಅಗತ್ಯವಿದೆ. ದೃಷ್ಟಿಕೋನ ಯೋಜನೆಯು ಹೆಚ್ಚಿನ ವಿವರಗಳಿಗಾಗಿ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ವಾರ್ಷಿಕ ಅಭಿವೃದ್ಧಿ ಯೋಜನೆಗಳ ತಯಾರಿಕೆಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ವಾರ್ಷಿಕ ಕಾರ್ಯ ಯೋಜನೆ ಮತ್ತು ಆಯವ್ಯಯಗಳನ್ನು (ಎಡಬ್ಲ್ಯುಪಿ ಮತ್ತು ಬಿ) ದೃಷ್ಟಿಕೋನ / ಯೋಜನೆಗಳಿಗೆ ಪೂರಕವಾಗಿ ನೋಡಬೇಕಿತ್ತು.

ಇಲಾಖೆಯು 2017–18ರಿಂದ 2022–23ರ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ದೃಷ್ಟಿಕೋನ ಯೋಜನೆಯನ್ನು ತಯಾರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ದೀರ್ಘಾವಧಿಯ ಗುರಿಗಳು, ಮಧ್ಯಮಾವಧಿಯ ಗುರಿಗಳು ಮತ್ತು ಅದರಿಂದ ನಿರೀಕ್ಷಿತ ಫಲಿತಾಂಶಗಳನ್ನು ನಿಗದಿಪಡಿಸದೆ ಇಲಾಖೆಯ ಮಧ್ಯಸ್ಥಿಕೆಗಳನ್ನು ನಡೆಸಲಾಯಿತು. ಹೀಗೆ, ದೃಷ್ಟಿಕೋನ ಯೋಜನೆಯ ಕೊರತೆಯು ಮಕ್ಕಳ ಮೇಲೆ ಸರಿಯಾದ ಮಾಹಿತಿಯ ಅಲಭ್ಯತೆ, ನಿಯಮಗಳ ಪ್ರಕಾರ ಶಾಲೆಗಳಿಲ್ಲದ ವಾಸಸ್ಥಳಗಳು, ಮಕ್ಕಳಿಗಾಗಿ ಸಾರಿಗೆ ವ್ಯವಸ್ಥೆಗಳ ಅನುಪಸ್ಥಿತಿಯಲ್ಲಿ ಪ್ರತಿಬಿಂಬಿತವಾಗಿ ದೀರ್ಘಾವಧಿಯ ಆಧಾರದ ಮೇಲೆ ಪರಿಣಾಮಕಾರಿಯಾಗಿ ಯೋಜಿಸುವ ಮತ್ತು ಅದರ ಮಧ್ಯಸ್ಥಿಕೆಗಳನ್ನು ಮೇಲ್ವಿಚಾರಣೆ ಮಾಡುವ ಇಲಾಖೆಯ ಸಾಮರ್ಥ್ಯವನ್ನು ಸೀಮಿತಗೊಳಿಸಿತು. ವಿಕಲಾಂಗ ವಿದ್ಯಾರ್ಥಿಗಳಿಗೆ ಅಸಮರ್ಪಕ ಮಧ್ಯಸ್ಥಿಕೆಗಳನ್ನು **ಕಂಡಿಕೆಗಳು 3.5, 3.6, 3.9** ಮತ್ತು **3.12**ರಲ್ಲಿ ಚರ್ಚಿಸಲಾಗಿದೆ .

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಶಿಫಾರಸುಗಳ ಪ್ರಕಾರ ಶಿಕ್ಷಣ ಮಂತ್ರಾಲಯವು ನೀಡಿದ ಸಮಗ್ರ ಕಾರ್ಯತಂತ್ರವಾಗಿರುವ ಪ್ರೋಗ್ರಾಮ್ಯಾಟಿಕ್ ಮಾನದಂಡಗಳಲ್ಲಿ ಒದಗಿಸಲಾದ ಮಾರ್ಗಸೂಚಿಗಳ ಪ್ರಕಾರ ರಾಜ್ಯ ಯೋಜನಾ ಕಛೇರಿಯಲ್ಲಿ ಆಯಾ ಮಧ್ಯಸ್ಥಿಕೆ ಅಧಿಕಾರಿಗಳಿಂದ ಸಮಾಲೋಚನಾ ಪ್ರಕ್ರಿಯೆಯ ಮೂಲಕ ಅವಶ್ಯಕತೆಗಳನ್ನು ನಿರ್ಣಯಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

ಶಿಕ್ಷಣ ಮಂತ್ರಾಲಯ ನಿರ್ದೇಶನಗಳ ಆಧಾರದ ಮೇಲೆ, ಎಸ್‌ಎಸ್‌ಕೆ ಐದು ವರ್ಷಗಳ ಅವಧಿಗೆ 2021–22ರಿಂದ 2025–26ರವರೆಗೆ ದೃಷ್ಟಿಕೋನ ಯೋಜನೆಯನ್ನು ತಯಾರಿಸಿದೆ ಮತ್ತು ಈ ವರ್ಷಗಳ ಪ್ರಸ್ತಾವನೆಗಳನ್ನು ಪ್ರಬಂಧ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ವರದಿಯನ್ನು ಗಮನಿಸಲಾಗಿದೆ ಎಂದೂ ಹೇಳಿತ್ತು.


ಆದರೆ, 2017–18ರಿಂದ 2020–21ರ ಅವಧಿಯಲ್ಲಿ ದೃಷ್ಟಿಕೋನ ಯೋಜನೆಯನ್ನು ಸಿದ್ಧಪಡಿಸುವ ವಿವರಗಳ ಬಗ್ಗೆ ರಾಜ್ಯ ಸರ್ಕಾರವು ಮೌನವಾಗಿದೆ.

2.8.2 ಯೋಜನೆಯಲ್ಲಿ ಕೆಳಮಟ್ಟದಿಂದ ವಿಧಾನವನ್ನು ಅನುಸರಿಸಿಲ್ಲ

ಈ ಯೋಜನೆಯು ಶಿಕ್ಷಣಕ್ಕಾಗಿ ತಳಮಟ್ಟದಿಂದ ಯೋಜನೆಯನ್ನು ರೂಪಿಸುತ್ತದೆ ಮತ್ತು ತಳಮಟ್ಟದಲ್ಲಿ ಭಾಗವಹಿಸುವಿಕೆಯನ್ನು, ಒತ್ತಿ ಹೇಳುತ್ತದೆ. ಯೋಜನಾ ಪ್ರಕ್ರಿಯೆಗಳು ಸಮುದಾಯಗಳು ಮತ್ತು ಗುರಿ ಗುಂಪುಗಳೊಂದಿಗೆ ಸಮಾಲೋಚನಾ ಸಭೆಗಳ ಮೂಲಕ ರೂಪುಗೊಂಡ ಸ್ಥಳೀಯ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಬೇಕು. ಇದು ಜಾಗೃತಿ, ಸಾಮರ್ಥ್ಯ–ವರ್ಧನೆ ಮತ್ತು ಸಮಸ್ಯೆ–ಪರಿಹರಣೆಯನ್ನು ಉತ್ತೇಜಿಸುತ್ತದೆ. ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಸಮುದಾಯದ ಮುಖಂಡರು ಮತ್ತು ಅಧಿಕಾರಿಗಳನ್ನು ತೊಡಗಿಸಿಕೊಳ್ಳುವುದು ಪರಿಣಾಮಕಾರಿ ಕಾರ್ಯತಂತ್ರಗಳು ಮತ್ತು ಮಧ್ಯಸ್ಥಿಕೆಗಳ ಏಕೀಕರಣವನ್ನು ಉತ್ತೇಜಿಸುತ್ತದೆ.

128 ಮಾದರಿ ಶಾಲೆಗಳಲ್ಲಿ ಯೋಜನಾ ಪ್ರಕ್ರಿಯೆಯ ಪರಿಶೀಲನೆಯು, **ನಕ್ಷೆ–2.4ರಲ್ಲಿ** ಸೂಚಿಸಿದಂತೆ ಶಾಲಾ ಮಟ್ಟದಲ್ಲಿ ಭಾಗವಹಿಸುವಿಕೆಯ ವಿಧಾನದ ಅನುಪಸ್ಥಿತಿಯಿದ್ದಿತು ಎಂಬುದನ್ನು ತೋರಿಸಿತು.

ನಕ್ಷೆ–2.4: ಶಾಲಾ ಮಟ್ಟದಲ್ಲಿ ಯೋಜನೆ



ಆಧಾರ: ಮಾದರಿ ಶಾಲೆಗಳಿಂದ ಸಂಗ್ರಹಿಸಿದ ಮಾಹಿತಿ

ಯೋಜನಾ ಪ್ರಕ್ರಿಯೆಯಲ್ಲಿ ಕೆಳಮಟ್ಟದಿಂದ ಪಾಲ್ಗೊಳ್ಳುವಿಕೆಯ ವಿಧಾನವನ್ನು ಇನ್ನೂ ಅಳವಡಿಸಿಕೊಳ್ಳಬೇಕಾಗಿದೆ. ಕೆಳಮಟ್ಟದಿಂದ ಮತ್ತು ಸಹಭಾಗಿತ್ವದ ವಿಧಾನವನ್ನು ಕಾರ್ಯಗತ ಗೊಳಿಸದಿರುವುದು ಶಿಕ್ಷಣ ಯೋಜನೆಯ ಒಟ್ಟಾರೆ ಗುಣಮಟ್ಟ ಮತ್ತು ಪರಿಣಾಮಕಾರಿತ್ವದ ಮೇಲೆ ಪರಿಣಾಮ ಬೀರಿತು.

ಸರ್ಕಾರ ಈ ವಿಷಯದ ಬಗ್ಗೆ ಯಾವುದೇ ಪ್ರತಿಕ್ರಿಯೆಗಳನ್ನು ನೀಡಲಿಲ್ಲ (ಮೇ 2023).

2.8.3 ಯೋಜನಾ ಪ್ರಕ್ರಿಯೆಯಲ್ಲಿ ಏಕೀಕರಣ ಮತ್ತು ಸಮನ್ವಯ

ಯೋಜನಾ ಮಾರ್ಗಸೂಚಿಗಳ ಪ್ರಕಾರ, ಎಡಬ್ಲ್ಯೂಪಿ ಮತ್ತು ಬಿಯನ್ನು ತಯಾರಿಸುವ ಸಮಯದಲ್ಲಿ ಇತರ ಇಲಾಖೆಗಳೊಂದಿಗೆ ಏಕೀಕರಣವನ್ನು ಖಚಿತಪಡಿಸಿಕೊಳ್ಳಬೇಕು. ರಾಜ್ಯ ಯೋಜನೆಗಳು ಇತರ ಯೋಜನೆಗಳೊಂದಿಗೆ ಏಕೀಕರಣವಾಗುವ ಪ್ರದೇಶಗಳನ್ನು ಸೂಚಿಸುತ್ತವೆ. ಇದಲ್ಲದೆ,

ಮಾರ್ಗಸೂಚಿಗಳು ವಿವಿಧ ಇಲಾಖೆಗಳೊಂದಿಗೆ ಏಕೀಕರಣ ಮತ್ತು ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಕಾರ್ಯವಿಧಾನವನ್ನು ಸ್ಥಾಪಿಸಲು ಆಲೋಚಿಸುತ್ತವೆ.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಬಳಸಬಹುದಾದ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಸಂಭಾವ್ಯ ನಿಧಿಗಳ ಬಗ್ಗೆ ವಾರ್ಷಿಕ ಯೋಜನೆಗಳು ಚರ್ಚಿಸಿರಲಿಲ್ಲ. ಇದಲ್ಲದೆ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಯೋಜನಾ ಪ್ರಕ್ರಿಯೆಯಲ್ಲಿ ಏಕೀಕರಣ ಮತ್ತು ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ಇಲಾಖೆಯಿಂದ ಯಾವುದೇ ಸಾಂಸ್ಥಿಕ ಕಾರ್ಯವಿಧಾನವನ್ನು ಸ್ಥಾಪಿಸಲಾಗಿಲ್ಲ.

ಶಿಕ್ಷಣ ಸಚಿವಾಲಯವು ಹೊರಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ ಯೋಜನೆಯನ್ನು ರೂಪಿಸಲಾಗುತ್ತದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಉತ್ತರವು ಇತರ ಯೋಜನೆಗಳೊಂದಿಗೆ ಏಕೀಕರಣವಾಗುವ ಪ್ರದೇಶಗಳ ಮ್ಯಾಪಿಂಗ್, ಇತರ ಇಲಾಖೆಗಳೊಂದಿಗೆ ಸಮನ್ವಯಕ್ಕಾಗಿ ಸಾಂಸ್ಥಿಕ ಕಾರ್ಯವಿಧಾನ ಇತ್ಯಾದಿಗಳ ಮಾರ್ಗಸೂಚಿಗಳಿಂದ ವಿಚಲನಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಅಸಮರ್ಪಕ ಏಕೀಕರಣ ಪ್ರಯತ್ನಗಳು ಮತ್ತು ಪರಿಣಾಮಕಾರಿ ಸಮನ್ವಯಕ್ಕಾಗಿ ಸಾಂಸ್ಥಿಕ ಕಾರ್ಯವಿಧಾನದ ಅನುಪಸ್ಥಿತಿ ಶೈಕ್ಷಣಿಕ ಗುರಿಗಳನ್ನು ಸಂಪೂರ್ಣವಾಗಿ ಸಾಧಿಸಲು ಇಲಾಖೆಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.

2.8.4 ಎಸ್‌ಸಿ/ಎಸ್‌ಟಿಗಳಿಗೆ ಅಭಿವೃದ್ಧಿ ಕಾರ್ಯ ಯೋಜನೆಗಳನ್ನು ತಯಾರಿಸಿರಲಿಲ್ಲ

ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಕಾಯಿದೆ, 2013ರ ಪ್ರಕಾರ ರಾಜ್ಯ ಸರ್ಕಾರವು ಪ್ರತಿ ವರ್ಷ ಎಸ್‌ಸಿ ಮತ್ತು ಎಸ್‌ಟಿ ಕಲ್ಯಾಣಕ್ಕಾಗಿ ಹಣವನ್ನು ಮೀಸಲಿಡಬೇಕಾಗುತ್ತದೆ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ನಿರ್ದಿಷ್ಟ ಮತ್ತು ನೇರ ಮಧ್ಯಸ್ಥಿಕೆಗಳೊಂದಿಗೆ ಎಸ್‌ಸಿ ಮತ್ತು ಎಸ್‌ಟಿಗಳ ಕಲಿಕೆಯ ಸಾಧನೆಗಳಲ್ಲಿನ ಅಂತರವನ್ನು ಕಡಿಮೆ ಮಾಡಲು ಎಡಬ್ಲ್ಯೂಪಿ ಮತ್ತು ಬಿಯ ಭಾಗವಾಗಿ ಎಸ್‌ಸಿ ಮತ್ತು ಎಸ್‌ಟಿಗಳಿಗೆ ನಿರ್ದಿಷ್ಟವಾಗಿ ಉಪ ಯೋಜನೆಯನ್ನು ಸಿದ್ಧಪಡಿಸಬೇಕಿತ್ತು.

ಆದರೆ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಯ ಯೋಜನೆಯನ್ನು ತಯಾರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉಪ ಯೋಜನೆಗಳನ್ನು ತಯಾರಿಸದಿರುವುದು ಹಿಂದುಳಿದ ಸಮುದಾಯಗಳಿಗೆ ಸಮಾನತೆ ಮತ್ತು ಅಂತರ್ಗತ ಶಿಕ್ಷಣವನ್ನು ಸಾಧಿಸುವ ಪ್ರಯತ್ನಗಳನ್ನು ದುರ್ಬಲಗೊಳಿಸುತ್ತದೆ ಮತ್ತು ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಸಾಮಾನ್ಯ ವರ್ಗಗಳ ನಡುವಿನ ಅಭಿವೃದ್ಧಿ ಅಂತರವನ್ನು ಕಡಿಮೆ ಮಾಡುವ ಗುರಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಸಮಗ್ರ ಶಿಕ್ಷಾ ಯೋಜನೆಯಡಿ ಯೋಜಿಸಲಾದ ಎಲ್ಲಾ ಮಧ್ಯಸ್ಥಿಕೆಗಳು ಎಸ್‌ಸಿ ಮತ್ತು ಎಸ್‌ಟಿ ಫಲಾನುಭವಿಗಳನ್ನು ಒಳಗೊಂಡಿತ್ತು ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಅಭಿವೃದ್ಧಿಯ ಕೊರತೆಯನ್ನು ಪರಿಹರಿಸಲು ಎಸ್‌ಸಿ ಮತ್ತು ಎಸ್‌ಟಿ ಫಲಾನುಭವಿಗಳಿಗೆ ಉದ್ದೇಶಿತ ಕಾರ್ಯ ಯೋಜನೆಗಳನ್ನು ಇಲಾಖೆ ಸಿದ್ಧಪಡಿಸುವ ಅಗತ್ಯವಿದೆ ಎಂಬ ಅಂಶವನ್ನು ಉತ್ತರವು ಪರಿಗಣಿಸಲಿಲ್ಲ.

2.8.5 ಖರೀದಿ ಯೋಜನೆಯನ್ನು ಅಭಿವೃದ್ಧಿಪಡಿಸಿರಲಿಲ್ಲ

ಮಾರ್ಗಸೂಚಿಗಳ ಪ್ರಕಾರ, ಖರೀದಿ ಯೋಜನೆಯನ್ನು ಸಿದ್ಧಪಡಿಸುವುದು ಅತ್ಯಗತ್ಯ ಅವಶ್ಯಕತೆಯಾಗಿದೆ. ಯೋಜನಾ ಅನುಮೋದನೆ ನಿಗಮದಿಂದ ಎಡಬ್ಲ್ಯೂಪಿ ಮತ್ತು ಬಿಯ

ಅನುಮೋದನೆಯ ಒಂದು ತಿಂಗಳೊಳಗೆ ಸಿವಿಲ್ ಕಾಮಗಾರಿಗಳು, ಉಪಕರಣಗಳು, ಸರಕುಗಳು, ವಾಹನಗಳು, ಸಲಹಾ ಸೇವೆಗಳು ಮತ್ತು ಸಂಪನ್ಮೂಲ ಬೆಂಬಲವನ್ನು ಒಳಗೊಂಡಿರುವ ಖರೀದಿ ಯೋಜನೆಯನ್ನು ಪ್ರತಿ ವರ್ಷವೂ ತಯಾರಿಸಬೇಕು. ಸಾರ್ವಜನಿಕ ಡೊಮೇನ್‌ನಲ್ಲಿ ವೀಕ್ಷಿಸಲು ರಾಜ್ಯಗಳ ಜಾಲತಾಣದಲ್ಲಿ ಖರೀದಿ ಯೋಜನೆಯನ್ನು ಅಪ್‌ಲೋಡ್ ಮಾಡಬೇಕಿತ್ತು. ಖರೀದಿ ಯೋಜನೆ ವೇಳಾಪಟ್ಟಿಯನ್ನು ಸರಕುಗಳು, ಕಾಮಗಾರಿಗಳು ಮತ್ತು ಸೇವೆಗಳಿಗೆ ಪ್ರತ್ಯೇಕವಾಗಿ ತಯಾರಿಸಬೇಕು ಮತ್ತು ಖರೀದಿಯ ಮೇಲ್ವಿಚಾರಣೆಗಾಗಿ ಬಳಸಬೇಕು.

ಆದರೆ, ಇಲಾಖೆಯು ಖರೀದಿ ಯೋಜನೆಯನ್ನು ತಯಾರಿಸಿರದಿರುವುದನ್ನು ಗಮನಿಸಲಾಯಿತು. ಖರೀದಿ ಯೋಜನೆಯ ಕೊರತೆಯು ಖರೀದಿಯ ಒಟ್ಟಾರೆ ದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಕಂಡಿಕೆ **3.10.6, 3.10.5** ಮತ್ತು **4.14.1**ರಲ್ಲಿ ಚರ್ಚಿಸಿದಂತೆ ಸಮವಸ್ತ್ರಗಳು, ಪಠ್ಯಪುಸ್ತಕಗಳು, ಐಸಿಟಿ ಸೌಲಭ್ಯಗಳ ಪೂರೈಕೆಯಲ್ಲಿ ಸಂಬಂಧಿಸಿದ ವಿಳಂಬಗಳಾಗಿ ಅಂತಿಮವಾಗಿ ಶೈಕ್ಷಣಿಕ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ.

ಖರೀದಿ ಯೋಜನೆಗಳನ್ನು ತಯಾರಿಸುವುದನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

ಶಿಫಾರಸು–1: ರಾಜ್ಯ ಸರ್ಕಾರವು ವಿವಿಧ ಭೌಗೋಳಿಕ ಪ್ರದೇಶಗಳು ಮತ್ತು ಜನಸಂಖ್ಯೆ ವಿಭಾಗಗಳಲ್ಲಿನ ನಿವ್ವಳ ದಾಖಲಾತಿ ಅನುಪಾತದಲ್ಲಿನ ಅಸಮಾನತೆಯನ್ನು ಪರಿಗಣಿಸಬೇಕು ಮತ್ತು ಸಾರ್ವತ್ರಿಕ ದಾಖಲಾತಿಯ ಗುರಿಯನ್ನು ಸಾಧಿಸಲು ಪ್ರದೇಶ ಅಥವಾ ಜನಸಂಖ್ಯೆಯ ವಿಭಾಗಕ್ಕೆ ಸೂಕ್ತವಾದ ನಿರ್ದಿಷ್ಟ ಮಧ್ಯಸ್ಥಿಕೆಗಳನ್ನು ಜಾರಿಗೆ ತರಬೇಕು.

ಶಿಫಾರಸು–2: ರಾಜ್ಯ ಸರ್ಕಾರವು ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಹಾಜರಾತಿಯ ಮೇಲ್ವಿಚಾರಣೆಯನ್ನು ಬಲಪಡಿಸಬೇಕು ಮತ್ತು ನಂತರದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್ ಮೂಲಕ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅವರು ಮುಂದಿನ ತರಗತಿಗೆ ಪ್ರಗತಿ ಸಾಧಿಸಬೇಕು ಮತ್ತು ಹೊರಗುಳಿದ ಮಕ್ಕಳನ್ನು ಗುರುತಿಸುವುದು ಮತ್ತು ಎಸ್‌ಎಟಿಎಸ್ ಮೂಲಕ ವಿದ್ಯಾರ್ಥಿಗಳ ಪತ್ತೆ ಮಾಡುವುದು ಅವರ ಶಿಕ್ಷಣ ಪೂರ್ಣಗೊಳ್ಳುವವರೆಗೆ ನಿರಂತರ ಕಾರ್ಯವಾಗಿರಬೇಕು.

ಶಿಫಾರಸು–3: ರಾಜ್ಯ ಸರ್ಕಾರವು ಯೋಜನೆಗಳನ್ನು ರೂಪಿಸುವಾಗ ಕೆಳಮಟ್ಟದ ಮತ್ತು ಸಹಭಾಗಿತ್ವದ ವಿಧಾನವನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

ಅಧ್ಯಾಯ III
ಪ್ರವೇಶ ಮತ್ತು ಈಕ್ವಿಟಿ ಮಧ್ಯಸ್ಥಿಕೆಗಳು

ಅಧ್ಯಾಯ–III

ಪ್ರವೇಶ ಮತ್ತು ಈಕ್ವಿಟಿ ಮಧ್ಯಸ್ಥಿಕೆಗಳು

ಎಲ್ಲಾ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳಿಗೆ ಸಮಾನವಾದ ಪ್ರವೇಶವನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಬದ್ಧತೆಯು ಅನುಷ್ಠಾನಗೊಂಡ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸೇರ್ಪಡೆಗೊಂಡ ಗುರಿಗಳಲ್ಲಿ ಉತ್ತಮವಾಗಿ ಸ್ಥಾಪಿತವಾಗಿದೆ. ರಾಜ್ಯವು ವಾಸಸ್ಥಾನಗಳು/ಮಾನವ ವಸಾಹತುಗಳನ್ನು ಇನ್ನೂ ನಿಖರವಾಗಿ ನಿರ್ಣಯಿಸಿರಲಿಲ್ಲ ಮತ್ತು ಮಕ್ಕಳ ನೋಂದಣಿಯನ್ನು ಇನ್ನೂ ನಿರ್ವಹಿಸಬೇಕಾಗಿದೆ. ತತ್ಪರಿಣಾಮವಾಗಿ, ದಾಖಲಾದ, ಎಂದಿಗೂ ದಾಖಲಾಗದ, ದಾಖಲಾದ ಆದರೆ ಹೊರಗುಳಿದ ಮಕ್ಕಳ ನಿಜವಾದ ಸಂಖ್ಯೆಯನ್ನು ಪತ್ತೆ ಹಚ್ಚಲಾಗಲಿಲ್ಲ. ಸಾರಿಗೆ ಸೌಲಭ್ಯಗಳಿಗೆ ಅರ್ಹವಾದ ಪ್ರದೇಶಗಳನ್ನು ರಾಜ್ಯವು ಇನ್ನೂ ಅಧಿಸೂಚಿಸಿರಲಿಲ್ಲ. ಶಾಲೆಗಳಿಗೆ ಪ್ರವೇಶವನ್ನು ಖಚಿತಪಡಿಸಲಾಗಿದ್ದರೂ, ರಾಜ್ಯದಾದ್ಯಂತ ಶಾಲೆಗಳಲ್ಲಿ ಗುಣಮಟ್ಟದ ಮೂಲಸೌಕರ್ಯ ಸೌಲಭ್ಯಗಳನ್ನು ಖಚಿತಪಡಿಸುವಲ್ಲಿ ಅಂತರಗಳು ಮುಂದುವರಿದಿದ್ದವು. ಮೂಲಸೌಕರ್ಯದ ಕೊರತೆ ಮತ್ತು ಕಳಪೆ ನಿರ್ವಹಣೆಯಿರುವ ಹೆಚ್ಚಿನ ಸಂಖ್ಯೆಯ ಶಾಲೆಗಳ ಅಸ್ತಿತ್ವವು ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಒದಗಿಸಲಾದ ಪ್ರವೇಶದ ಮಟ್ಟದಲ್ಲಿ ಪರಿಣಾಮ ಬೀರುತ್ತದೆ. ತಡೆರಹಿತ ಮೂಲಸೌಕರ್ಯದ ಪರಿಕಲ್ಪನೆಯು ಮುಖ್ಯವಾಗಿ ಅಂಗವಿಕಲರಿಗೆ ಇಳಿಜಾರುಗಳನ್ನು ಒದಗಿಸುವುದಕ್ಕೆ ಸೀಮಿತವಾಗಿತ್ತು. ವಿಶೇಷ ಅಗತ್ಯವುಳ್ಳ ಇತರ ವರ್ಗದ ಮಕ್ಕಳಿಗೆ ಅಗತ್ಯವಿರುವ ಅವಕಾಶಗಳಿಗೆ ಸಾಕಷ್ಟು ಗಮನ ನೀಡಿರಲಿಲ್ಲ.

3.1 ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಮತ್ತು ದಾಖಲಾತಿ

ರಾಜ್ಯದಲ್ಲಿನ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಅಡಿಯಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಮತ್ತು ವಿದ್ಯಾರ್ಥಿಗಳ ದಾಖಲಾತಿ ವಿವರಗಳನ್ನು ಕೆಳಗಿನ **ಕೋಷ್ಟಕ–3.1**ರಲ್ಲಿ ನೀಡಲಾಗಿದೆ:

ಕೋಷ್ಟಕ–3.1: ರಾಜ್ಯದಲ್ಲಿರುವ ಪ್ರಾಥಮಿಕ ಸಂಸ್ಥೆಗಳು

ವರ್ಷ	ಸರ್ಕಾರಿ		ಖಾಸಗಿ		ಒಟ್ಟು	
	ಶಾಲೆಗಳ ಸಂಖ್ಯೆ	ದಾಖಲಾತಿ	ಶಾಲೆಗಳ ಸಂಖ್ಯೆ	ದಾಖಲಾತಿ	ಶಾಲೆಗಳ ಸಂಖ್ಯೆ	ದಾಖಲಾತಿ
2017–18	44,922	38,16,520	17,086	40,33,024	62,008	78,49,544
2018–19	44,884	37,83,271	17,488	42,69,329	62,372	80,52,600
2019–20	44,678	37,10,221	17,773	43,85,688	62,451	80,95,909
2020–21	44,651	37,51,834	17,745	42,68,902	62,396	80,20,736
2021–22	44,612	40,57,147	17,600	41,32,024	62,212	81,89,171

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಜಿಲ್ಲಾವಾರು, ಆಡಳಿತ ಮಂಡಳಿ–ವಾರು ಶಾಲೆಗಳ ಸಂಖ್ಯೆಯನ್ನು **ಅನುಬಂಧ–3.1**ರಲ್ಲಿ ನೀಡಲಾಗಿದೆ.


ಸರ್ಕಾರಿ ಶಾಲೆಗಳು ರಾಜ್ಯದ ಒಟ್ಟು ಶಾಲೆಗಳ ಶೇಕಡಾ 72ರಷ್ಟಿದ್ದರೆ ಖಾಸಗಿ ಶಾಲೆಗಳು ಶೇಕಡಾ 28ರಷ್ಟಿದ್ದವು. ದಾಖಲಾತಿಗೆ ಸಂಬಂಧಿಸಿದಂತೆ, ಶೇಕಡಾ 51ರಷ್ಟು ಮಕ್ಕಳು ಖಾಸಗಿ ಶಾಲೆಗಳಲ್ಲಿ

ದಾಖಲಾಗಿದ್ದಾರೆ ಮತ್ತು ಉಳಿದ ಶೇಕಡಾ 49ರಷ್ಟು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿದ್ದರು.

3.2 ವಿವಿಧ ಆಡಳಿತ ಮಂಡಳಿಗಳ ಅಡಿಯಲ್ಲಿ ಶಾಲೆಗಳಲ್ಲಿ ದಾಖಲಾತಿ ಪ್ರವೃತ್ತಿಗಳು

ಶಿಕ್ಷಣ ಇಲಾಖೆ, ಅನುದಾನರಹಿತ ಮತ್ತು ಅನುದಾನಿತ ಶಾಲೆಗಳ ಆಡಳಿತ ಮಂಡಳಿಗಳ ಶಾಲೆಗಳಲ್ಲಿನ ದಾಖಲಾತಿ ಪ್ರವೃತ್ತಿಯನ್ನು **ನಕ್ಷೆ–3.1**ರಲ್ಲಿ ನೀಡಲಾಗಿದೆ.

ನಕ್ಷೆ–3.1: 1ರಿಂದ 8ನೇ ತರಗತಿಯಲ್ಲಿ ದಾಖಲಾತಿಗಳು



2021–22ರ ಅವಧಿಯಲ್ಲಿ ದಾಖಲಾದ 79.55 ಲಕ್ಷ ಮಕ್ಕಳ ಪೈಕಿ 43.97 ಲಕ್ಷ ಮಕ್ಕಳು (ಶೇಕಡಾ 55.27) ಸಾರ್ವಜನಿಕ ಅನುದಾನಿತ ಶಾಲೆಗಳಲ್ಲಿ ಮತ್ತು 35.58 ಲಕ್ಷ ಮಕ್ಕಳು ಖಾಸಗಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದರು. 2017–20ರ ಅವಧಿಯಲ್ಲಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಕ್ಷೀಣಿಸುತ್ತಿದ್ದರೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರಿಸಿತು. ಕೋವಿಡ್–19ರ ಪ್ರಭಾವದ ಅವಧಿಯಲ್ಲಿ (2020–22) ಪ್ರವೃತ್ತಿಯು ವ್ಯತಿರಿಕ್ತವಾಗಿ, ದೇಶಾದ್ಯಂತ ವರದಿ ಮಾಡಿದಂತೆ (ಯುಡಿಐಎಸ್ಇ+ ವರದಿಗಳು[11]) ಖಾಸಗಿ ಶಾಲೆಗಳಿಂದ ಸಾರ್ವಜನಿಕ ಶಾಲೆಗಳಿಗೆ ಸ್ಥಳಾಂತರಗೊಂಡ ಕಾರಣ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಯಿತು. ರಾಜ್ಯದಲ್ಲಿ ದಾಖಲಾತಿಯಲ್ಲಿನ ಹೆಚ್ಚಳಕ್ಕೆ, ಕೆಳಗೆ ಚರ್ಚಿಸಿದಂತೆ, ಕೆಆರ್‌ಟಿಇ ನಿಯಮಗಳಿಗೆ ಮಾಡಿದ ತಿದ್ದುಪಡಿಗಳು[12] ಕಾರಣವಾಗಿದ್ದವು.

ಆರ್‌ಟಿಇ ಕಾಯಿದೆಯ ಸೆಕ್ಷನ್ 12ರ ಪ್ರಕಾರ, ಖಾಸಗಿ ಅನುದಾನರಹಿತ ಶಾಲೆಗಳು, ಒಟ್ಟು ಮಕ್ಕಳಲ್ಲಿ ಹಿಂದುಳಿದ ಗುಂಪುಗಳು ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಕನಿಷ್ಠ ಶೇಕಡಾ 25ರಷ್ಟು ಮಕ್ಕಳನ್ನು 1ನೇ ತರಗತಿಗೆ ಸೇರಿಸಿಕೊಳ್ಳಬೇಕು. ರಾಜ್ಯವು ಜನವರಿ 2019ರಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಿ ನೆರೆಹೊರೆಯಲ್ಲಿ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳು ಲಭ್ಯವಿರುವಾಗ ಹಿಂದುಳಿದ ಗುಂಪು ಅಥವಾ ದುರ್ಬಲ ವರ್ಗದ ಮಕ್ಕಳ ಪ್ರವೇಶದ ಉದ್ದೇಶಕ್ಕಾಗಿ ನೆರೆಹೊರೆಯಲ್ಲಿ ಯಾವುದೇ ಅನುದಾನರಹಿತ ಶಾಲೆಯನ್ನು ಗುರುತಿಸಬಾರದು ಎಂದು ಷರತ್ತು

[11] ಯುಡಿಐಎಸ್ಇ+ ಎನ್ನುವುದು ಶೈಕ್ಷಣಿಕ ಮಾಹಿತಿಯ ಸಂಗ್ರಹಣೆ ಮತ್ತು ಬಳಕೆಗಾಗಿ ಶಿಕ್ಷಣ ಮಂತ್ರಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ನಿರ್ವಹಿಸಲ್ಪಡುವ ರಾಷ್ಟ್ರೀಯ ಮಟ್ಟದ ವ್ಯವಸ್ಥೆಯಾಗಿದೆ.

[12] ಕೆಆರ್‌ಟಿಇ ನಿಯಮಗಳ ತಿದ್ದುಪಡಿಯು ನೆರೆಹೊರೆಯಲ್ಲಿ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳು ಲಭ್ಯವಿದ್ದರೆ ಹಿಂದುಳಿದ ಗುಂಪು ಅಥವಾ ದುರ್ಬಲ ವರ್ಗದ ಮಕ್ಕಳ ಪ್ರವೇಶದ ಉದ್ದೇಶಕ್ಕಾಗಿ ನೆರೆಹೊರೆಯಲ್ಲಿ ಯಾವುದೇ ಅನುದಾನರಹಿತ ಶಾಲೆಯನ್ನು ಗುರುತಿಸಬಾರದು ಎಂದು ಷರತ್ತು ವಿಧಿಸಿದೆ.

ವಿಧಿಸಿತು. 2017–22ರ ಅವಧಿಯಲ್ಲಿ ಆರ್‌ಟಿಇ ಪಾಲಿನ ಪ್ರವೇಶ ಪಡೆದ ಮಕ್ಕಳ ವಿವರಗಳನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ.

ಕೋಷ್ಟಕ–3.2: ಆರ್‌ಟಿಇ ಪಾಲಿನ ಬಳಕೆಯ ವಿವರಗಳು

ವರ್ಷ	ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಶಾಲೆಗಳ ಒಟ್ಟು ಸಂಖ್ಯೆ (ಮಾನ್ಯತೆ ಪಡೆದ)–ಆರ್‌ಟಿಇ	ಎಲ್ಲಾ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ (ಮಾನ್ಯತೆ ಪಡೆದ) 1ನೇ ತರಗತಿಗೆ ತೆಗೆದುಕೊಳ್ಳುವ ಒಟ್ಟು ಸಾಮರ್ಥ್ಯ	ಖಾಸಗಿ ಅನುದಾನರಹಿತ (ಮಾನ್ಯತೆ ಪಡೆದ) ಶಾಲೆಗಳಲ್ಲಿ 1ನೇ ತರಗತಿಯಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯದ ಶೇಕಡಾ 25ರಷ್ಟು	ಆರ್‌ಟಿಇ ಅಧಿನಿಯಮ, 2009ರ ಸೆಕ್ಷನ್ 12(1)ರ ಪ್ರಕಾರ ಮಕ್ಕಳ ದಾಖಲಾತಿಯ ಸ್ಥಿತಿ		
				ಅರ್ಜಿ ಸ್ವೀಕರಿಸಿದ ಖಾಸಗಿ ಶಾಲೆಗಳು	ಶಾಲೆಗಳ ಸಂಖ್ಯೆ	ಮಕ್ಕಳ ಸಂಖ್ಯೆ
2017–18	13,308	5,24,919	1,28,648	ಲಭ್ಯವಿಲ್ಲ	11,918	1,09,001
2018–19	14,428	5,89,434	1,37,836	ಲಭ್ಯವಿಲ್ಲ	12,165	1,16,259
2019–20	219	2,617	654	188	167	1,803
2020–21	221	10,090	2,545	181	158	1,713
2021–22	200	7,556	1,925	152	143	1,414

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಈ ತಿದ್ದುಪಡಿಯ ಪರಿಣಾಮವಾಗಿ, ಮೇಲಿನ **ಕೋಷ್ಟಕ–3.2**ರಲ್ಲಿ ತೋರಿಸಿದಂತೆ, ಆರ್‌ಟಿಇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಅನುದಾನರಹಿತ ಶಾಲೆಗಳ ಸಂಖ್ಯೆಯು 2018–19ರಲ್ಲಿನ 14,428ರಿಂದ 2019–20ರಲ್ಲಿ 219 ಶಾಲೆಗಳಿಗೆ ಕಡಿಮೆಯಾಯಿತು. ಅನುದಾನರಹಿತ ಖಾಸಗಿ ಶಾಲೆಗಳ ಆರ್‌ಟಿಇ ಪಾಲು ಬಹುತೇಕ ಬಳಕೆಯಾಗದೆ ಉಳಿದಿತ್ತು. ಆರ್‌ಟಿಇ ವ್ಯಾಪ್ತಿಯೊಳಗಿನ ಅನುದಾನರಹಿತ ಶಾಲೆಗಳು ಕಡಿಮೆಯಾದದ್ದು ಆರ್‌ಟಿಇ ವಿದ್ಯಾರ್ಥಿಗಳು ತಮ್ಮ ಅಗತ್ಯಗಳಿಗೆ ಸೂಕ್ತವಾದ ಶಾಲೆಯನ್ನು ಆಯ್ಕೆ ಮಾಡುವುದನ್ನು ಮಿತಿಗೊಳಿಸುತ್ತದೆ. ಇದು ಅವರ ಶೈಕ್ಷಣಿಕ ಅವಕಾಶಗಳ ಮೇಲೆ ಪರಿಣಾಮ ಬೀರುತ್ತದೆ, ವಿಶೇಷವಾಗಿ ಪರ್ಯಾಯ ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣವನ್ನು ಬೆಂಬಲಿಸಲು ಸಾಕಷ್ಟು ಸೌಲಭ್ಯಗಳನ್ನು ಹೊಂದಿರದಿದ್ದರೆ.

ಶಾಲೆಗಳಲ್ಲಿ ದಾಖಲಾತಿಯನ್ನು ಹೆಚ್ಚಿಸಲು ರಾಜ್ಯ ಮತ್ತು ಜಿಲ್ಲೆಗಳೆರಡರಿಂದಲೂ ವಿವಿಧ ಉಪಕ್ರಮಗಳ ಮೂಲಕ ಶಾಲಾ ಮೂಲಸೌಕರ್ಯಗಳನ್ನು ಬಲಪಡಿಸಲು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲಕರ ಕಲಿಕೆಯ ವಾತಾವರಣವನ್ನು ಒದಗಿಸಲು ಇಲಾಖೆಯು ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

3.3 ಮಧ್ಯಸ್ಥಿಕೆಗಳಿಗಾಗಿ ನಿಧಿಯ ಮೂಲಗಳು

ವಿವಿಧ ಕಾರ್ಯಕ್ರಮಗಳು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಪ್ರಾಥಮಿಕ ಶಿಕ್ಷಣ ಇಲಾಖೆಗೆ ಆಯವ್ಯಯ ಅನುದಾನವನ್ನು ಬಿಡುಗಡೆ ಮಾಡುತ್ತದೆ. 2017–18ರಿಂದ 2021–22ರ ಅವಧಿಯಲ್ಲಿ ಒಟ್ಟು ಆಯವ್ಯಯ ಹಂಚಿಕೆ, ವೆಚ್ಚ ಮತ್ತು ಉಳಿತಾಯಗಳನ್ನು ಕೆಳಗೆ ನೀಡಲಾಗಿದೆ:

ಕೋಷ್ಠಕ–3.3: ಪ್ರಾಥಮಿಕ ಶಿಕ್ಷಣಕ್ಕಾಗಿ ಆಯವ್ಯಯ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ಆಯವ್ಯಯ ಹಂಚಿಕೆ	ವೆಚ್ಚ	ಅಧಿಕ/ ಉಳಿತಾಯ
2017–18	9,435.69	11,279.25	(–)1,843.56
2018–19	14,673.33	12,689.53	1,983.80
2019–20	15,489.31	14,114.95	1,374.36
2020–21	14,688.20	13,795.79	892.41
2021–22	16,181.54	17,190.29	(–)1,008.75

ಆಧಾರ: ಹಣಕಾಸು ಇಲಾಖೆಯ ಆಯವ್ಯಯ ದಾಖಲೆಗಳು

ಇಲಾಖೆಯು 2018–19ರಿಂದ 2020–21ರ ಅವಧಿಯಲ್ಲಿ ಆಯವ್ಯಯ ಹಂಚಿಕೆಗಳ ಬಳಕೆಯಲ್ಲಿ ಉಳಿತಾಯವನ್ನು ತೋರಿಸಿದರೆ, 2017–18 ಮತ್ತು 2021–22ರ ಅವಧಿಯಲ್ಲಿ ಆಯವ್ಯಯ ಹಂಚಿಕೆಗಿಂತ ಹೆಚ್ಚಿನ ವೆಚ್ಚವನ್ನು ಮಾಡಿತ್ತು. ಹೆಚ್ಚುವರಿ ವೆಚ್ಚ ಮತ್ತು ಉಳಿತಾಯಕ್ಕೆ ಇಲಾಖೆಯು ಯಾವುದೇ ಕಾರಣಗಳನ್ನು ತಿಳಿಸಲಿಲ್ಲ.

3.4 ಪ್ರಾಥಮಿಕ ಶಿಕ್ಷಣಕ್ಕಾಗಿ ಸಮಗ್ರ ಶಿಕ್ಷಾ ಅಭಿಯಾನ ನಿಧಿಗಳು

ಯೋಜನೆ ಅನುಮೋದನಾ ಮಂಡಳಿಯಿಂದ (ಪಿಎಬಿ) ರಾಜ್ಯಕ್ಕೆ ಅನುಮೋದಿತ ವೆಚ್ಚದ ಆಧಾರದ ಮೇಲೆ ಸಮಗ್ರ ಶಿಕ್ಷಾ ಅಭಿಯಾನ (ಎಸ್ಎಸ್ಎ) ಅನುಷ್ಠಾನಕ್ಕಾಗಿ ಭಾರತ ಸರ್ಕಾರವು ಪ್ರತಿ ವರ್ಷ ರಾಜ್ಯ ಸರ್ಕಾರಕ್ಕೆ ಹಣವನ್ನು ಬಿಡುಗಡೆ ಮಾಡುತ್ತದೆ. 2017–18ರಿಂದ 2021–22ರ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಎಸ್ಎಸ್ಎಗೆ ಧನಸಹಾಯದ ಮಾದರಿಯು 60:40 ಅನುಪಾತದಲ್ಲಿತ್ತು. ಬೇಡಿಕೆಯ ಆಧಾರದ ಮೇಲೆ, ಭಾರತ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣವನ್ನು ಬಿಡುಗಡೆ ಮಾಡಲಾಯಿತು ಮತ್ತು ರಾಜ್ಯ ಸರ್ಕಾರವು ಅವುಗಳನ್ನು ಆಯವ್ಯಯ ಅವಕಾಶಗಳ ಮೂಲಕ ಸಮಗ್ರ ಶಿಕ್ಷಾ ಕರ್ನಾಟಕ (ಎಸ್ಎಸ್ಕೆ) ಗೆ ಬಿಡುಗಡೆ ಮಾಡಿತು. 2017–18ರಿಂದ 2021–22ರ ಅವಧಿಯಲ್ಲಿ ಎಸ್ಎಸ್ಎ ಅಡಿಯಲ್ಲಿ ಅನುಮೋದಿತ ಎಡಬ್ಲ್ಯೂಪಿ ಮತ್ತು ಬಿಗೆ ಪ್ರತಿಯಾಗಿ ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಠಕ–3.4**ರಲ್ಲಿ ನೀಡಲಾಗಿದೆ.

ಕೋಷ್ಠಕ–3.4: ಎಸ್ಎಸ್ಎ ಅಡಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಹಂಚಿಕೆ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ಪ್ರಾರಂಭಿಕ ಶಿಲ್ಕು	ಅನುಮೋದಿತ ಎಡಬ್ಲ್ಯೂಪಿ&ಬಿ	ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಮೊತ್ತ	ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಮೊತ್ತ	ಬಡ್ಡಿ ಮತ್ತು ಇತರೆ ಸ್ವೀಕೃತಿಗಳು	ಒಟ್ಟು ಮೊತ್ತ	ವೆಚ್ಚ	ಮುಕ್ತಾಯ ಶಿಲ್ಕು
2017–18	72.29	1,809.89	548.82	842.70	8.04	1,471.85	1,377.78	94.08
2018–19	94.08	1,474.17	558.25	1,063.93	7.20	1,723.46	1,580.12	143.34
2019–20	143.34	1,598.05	668.48	1,292.43	93.25	2,197.50	1,864.93	332.57
2020–21	332.57	1,236.84	545.62	1,412.44	32.98	2,323.61	1,888.95	434.68
2021–22	434.68	1,565.18	462.19	2,105.40	7.21	3,009.48	1,982.66	1,026.83
ಒಟ್ಟು		**7,684.13**	**2,783.36**	**6,716.90**	**148.68**	**10,725.9**	**8,694.44**	

ಆಧಾರ: ಸಮಗ್ರ ಶಿಕ್ಷಣ ಅಭಿಯಾನ, ಕರ್ನಾಟಕ

ಬಳಕೆ ಮಾಡದ ಶಿಲ್ಕುಗಳನ್ನು ಪ್ರತಿನಿಧಿಸುವ ಅಂತಿಮ ಶಿಲ್ಕುಗಳು ₹94.08 ಕೋಟಿಯಿಂದ ₹1,026.83 ಕೋಟಿಗಳಷ್ಟಿತ್ತು. ಅಂತಹ ಹೆಚ್ಚಿನ ಅಂತಿಮ ಶಿಲ್ಕುಗಳು ಆರ್ಥಿಕ ವರ್ಷದಲ್ಲಿ ಬೇಡಿಕೆ

ಮಾಡಿದ್ದ ಮೊತ್ತವನ್ನು ಪ್ರತಿ ವರ್ಷ ಎಸ್ಎಸ್ಕೆಗೆ ವೆಚ್ಚ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಇದು ಮಧ್ಯಸ್ಥಿಕೆಗಳ ಅನುಷ್ಠಾನದ ಮೇಲೆ ಪರಿಣಾಮ ಬೀರುತ್ತದೆ.

ಪ್ರತಿ ಆರ್ಥಿಕ ವರ್ಷದಲ್ಲಿನ ಮಾರ್ಚ್ ಕೊನೆಯ ವಾರದಲ್ಲಿ ಹಣವನ್ನು ಬಿಡುಗಡೆ ಮಾಡುವ ವಿಳಂಬದಿಂದಾಗಿ ಏಪ್ರಿಲ್ 1ರಂದು ಪ್ರಾರಂಭಿಕ ಶಿಲ್ಕು ಇದ್ದಿತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023). ಆದರೂ, ವರ್ಷಾನುವರ್ಷದಿಂದ ಚಾಲ್ತಿಯಲ್ಲಿರುವ ವೆಚ್ಚ ಮಾಡದ ಬಾಕಿಗಳ ಬಗ್ಗೆ ಸರ್ಕಾರವು ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ.

3.5 ಮಕ್ಕಳ ದತ್ತಾಂಶವನ್ನು ನಿಯತಕಾಲಿಕವಾಗಿ ತಯಾರಿಸಿರಲಿಲ್ಲ

ಕೆಆರ್ಟಿಇ ನಿಯಮ 6ರ ಪ್ರಕಾರ ಸ್ಥಳೀಯ ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಮನೆ–ಮನೆಯ ಸಮೀಕ್ಷೆಯ ಮೂಲಕ ಅವರ ಜನನದಿಂದ 14 ವರ್ಷ ತುಂಬುವವರೆಗೆ ಎಲ್ಲಾ ಮಕ್ಕಳ ದಾಖಲೆಯನ್ನು ನಿರ್ವಹಿಸಬೇಕಾಗುತ್ತದೆ. ಇದಲ್ಲದೆ, ನಿಯಮ 5(2)ರ ಪ್ರಕಾರ, ಸಾರ್ವಜನಿಕ ಶಿಕ್ಷಣದ ಆಯುಕ್ತರು ಅಥವಾ ಸ್ಥಳೀಯ ಪ್ರಾಧಿಕಾರವು ಶಾಲಾ ಮ್ಯಾಪಿಂಗ್ ಅನ್ನು ಕೈಗೊಳ್ಳಬೇಕು ಮತ್ತು ದೂರ ಪ್ರದೇಶಗಳಲ್ಲಿನ ಮಕ್ಕಳು, ಹಿಂದುಳಿದ ವರ್ಗಗಳಿಗೆ ಸೇರಿದ ವಿಕಲಾಂಗ ಮಕ್ಕಳು, ದುರ್ಬಲ ವರ್ಗಗಳಿಗೆ ಸೇರಿದ, ಮಕ್ಕಳು ಮತ್ತು ಸೆಕ್ಷನ್–4ರಲ್ಲಿ ಉಲ್ಲೇಖಿಸಲಾದ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳನ್ನು ನಿಗದಿತ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮತ್ತು ನಂತರ ಪ್ರತಿ ವರ್ಷ ಗುರುತಿಸಬೇಕು. ಶೇಕಡಾ 100ರಷ್ಟು ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳ ವಿವರಗಳನ್ನು ಒಳಗೊಂಡಿರುವ ಗ್ರಾಮ ಶಿಕ್ಷಣ ರಿಜಿಸ್ಟರ್ನ ನಿರ್ವಹಣೆಯನ್ನು ಸಹ ವಿಷನ್ 2030 ಕಲ್ಪಿಸಿತ್ತು.

ನಿಯಮ–6ರ ಅಡಿಯಲ್ಲಿ ಕಡ್ಡಾಯಗೊಳಿಸಲಾದ ಅಂತಹ ದಾಖಲೆಗಳನ್ನು ಸ್ಥಳೀಯ ಸಂಸ್ಥೆಗಳು ನಿರ್ವಹಿಸಿರಲಿಲ್ಲ ಅಥವಾ ಶಿಕ್ಷಣ ಇಲಾಖೆಯೊಂದಿಗೆ ಹಂಚಿಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿಗಳ ವಾಸ್ತವಿಕ ಸಂಖ್ಯೆ, ದಾಖಲಾದ ಮಕ್ಕಳ ಸಂಖ್ಯೆ, ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆ ಇತ್ಯಾದಿಗಳನ್ನು ನಿರ್ಧರಿಸಲಾಗಲಿಲ್ಲ. ಎನ್ಇಆರ್ ಮತ್ತು ಜಿಇಆರ್ ಇತ್ಯಾದಿಗಳನ್ನು ತಯಾರಿಸಲು ರಾಜ್ಯವು 2017–18ರಿಂದ 2021–22ರ ಅವಧಿಯಲ್ಲಿ ಅದೇ ಮಕ್ಕಳ ಸಂಖ್ಯೆಯ ಅಂಕಿಅಂಶಗಳನ್ನು ಅಳವಡಿಸಿಕೊಂಡಿತ್ತು.

ಕೋಷ್ಟಕ–3.5: 6–14 ವಯಸ್ಸಿನ ಪ್ರಾಥಮಿಕ ಹಂತದ ಮಕ್ಕಳ ಸಂಖ್ಯೆ

ವರ್ಷಗಳು	6–10			11–14			6–14		
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
2017–22	27,08,276	25,41,401	52,49,677	16,42,854	14,99,692	31,42,546	43,51,130	40,41,093	83,92,223

ಆಧಾರ: ಶಿಕ್ಷಣ ಇಲಾಖೆ

ಈ ಮಕ್ಕಳ ಸಂಖ್ಯೆಯ ಅಂಕಿಅಂಶಗಳನ್ನು ಭಾರತದ ಯೋಜಿತ ಜನಸಂಖ್ಯೆ ಮತ್ತು 2011–2036ರ ರಾಜ್ಯಗಳ ವರದಿಯಿಂದ ಪಡೆಯಲಾಗಿದೆ ಎಂಬುದನ್ನು ಗಮನಿಸಲಾಯಿತು. ಮೇಲಿನ ವರದಿಯು ಒಂದು ರಾಜ್ಯ ಮಟ್ಟದ ಅಂಕಿಅಂಶವನ್ನು ಮಾತ್ರ ಒದಗಿಸುತ್ತದೆ ಮತ್ತು ಜಿಲ್ಲೆ, ಬ್ಲಾಕ್, ಗ್ರಾಮ ಮತ್ತು ವಸತಿ ಮಟ್ಟಗಳಿಗೆ ದತ್ತಾಂಶವನ್ನು ಒದಗಿಸುವುದಿಲ್ಲವಾಗಿ ರಾಜ್ಯ ಮಟ್ಟಕ್ಕಿಂತ ಕೆಳಗಿನ ಸೂಚಕಗಳನ್ನು ಲೆಕ್ಕಾಚಾರ ಮಾಡುವುದು ಕಷ್ಟಕರವಾಗುತ್ತದೆ. ಹೀಗೆ, ದಾಖಲಾತಿ ಸೂಚಕಗಳನ್ನು ಬಳಸಿಕೊಂಡು ಕಡಿಮೆ ಕಾರ್ಯಕ್ಷಮತೆಯ ಬ್ಲಾಕ್ಗಳು ಅಥವಾ ಗ್ರಾಮಗಳನ್ನು ಗುರುತಿಸುವುದು ಸಾಧ್ಯವಾಗಲಿಲ್ಲ. ಇದಲ್ಲದೆ, ನೋಂದಣಿ ಅನುಪಾತಗಳ ನಿಖರತೆಯ ಮೇಲೆ ಪರಿಣಾಮ ಬೀರುವ

ಕಳೆದ ದಶಕದಲ್ಲಿ ನಗರ ಪ್ರದೇಶಗಳ ಕಡೆಗೆ ವಲಸೆ ಸೇರಿದಂತೆ ಜನಸಂಖ್ಯಾ ಬದಲಾವಣೆಗಳನ್ನು ಈ ವಿಧಾನವು ಪರಿಗಣಿಸುವುದಿಲ್ಲ.

ಯಾವುದೇ ಇತರ ದತ್ತಾಂಶ ಲಭ್ಯವಿಲ್ಲದ ಕಾರಣ ಅಂದಾಜು ಅಂಕಿಅಂಶಗಳ ಆಧಾರದ ಮೇಲೆ ದಾಖಲಾತಿ ಅನುಪಾತಗಳನ್ನು ಸಂಕಲಿಸಲಾಗಿದೆ ಎಂದು ಸರ್ಕಾರವು ಉತ್ತರಿಸಿತು (ಮೇ 2023). ಆರ್‌ಟಿಇ ಕಾಯಿದೆಯಡಿ ಕಡ್ಡಾಯಗೊಳಿಸಿದ ಗ್ರಾಮ ಶಿಕ್ಷಣ ರಿಜಿಸ್ಟರ್‌ಗಳನ್ನು ಸಿದ್ಧಪಡಿಸುವ ಅಗತ್ಯವನ್ನು ಉತ್ತರವು ಸೂಚಿಸುತ್ತದೆ.

3.6 ವಾಸಸ್ಥಳಗಳಿಗೆ ಶಾಲೆಗಳ ಲಭ್ಯತೆ

ನೆರೆಹೊರೆಯ ವ್ಯಾಖ್ಯಾನಿತ ಮಿತಿಯೊಳಗೆ ಪ್ರಾಥಮಿಕ ಶಾಲೆಗಳಿಗೆ ಪ್ರವೇಶವನ್ನು ಒದಗಿಸಲು ಆರ್‌ಟಿಇ ಕಾಯಿದೆಯ ಸೆಕ್ಷನ್–6 ರಾಜ್ಯ ಸರ್ಕಾರವನ್ನು ಕಡ್ಡಾಯಗೊಳಿಸುತ್ತದೆ. ಮಕ್ಕಳಿಗಾಗಿ ಶಾಲೆಗಳನ್ನು ಸ್ಥಾಪಿಸಲು ಕೆಆರ್‌ಟಿಇ ನಿಯಮ–4 ದೂರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾನದಂಡಗಳನ್ನು ವ್ಯಾಖ್ಯಾನಿಸುತ್ತದೆ:

- 1ರಿಂದ 5ನೇ ತರಗತಿಯ ಮಕ್ಕಳಿಗೆ ನೆರೆಹೊರೆಯಿಂದ ಒಂದು ಕಿ.ಮೀ ನಡಿಗೆ ದೂರದಲ್ಲಿ ಶಾಲೆ.
- 6ರಿಂದ 7ನೇ ತರಗತಿಯ ಮಕ್ಕಳಿಗೆ ಸಂಬಂಧಿಸಿದಂತೆ, 3 ಕಿಮೀ ದೂರದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಬೇಕು: ಮತ್ತು
- 8ನೇ ತರಗತಿಯ ಮಕ್ಕಳಿಗೆ, ನೆರೆಹೊರೆಯಿಂದ 5 ಕಿಮೀ ವ್ಯಾಪ್ತಿಯಲ್ಲಿ ಶಾಲೆಯನ್ನು ಸ್ಥಾಪಿಸಬೇಕು.

ಶಾಲೆಗಳ ಲಭ್ಯತೆಯನ್ನು ನಿರ್ಧರಿಸಲು, ಇಲಾಖೆಯು ಹತ್ತಿರದ ಶಾಲೆಗಳಿಗೆ ವಸತಿಗಳನ್ನು ಮ್ಯಾಪಿಂಗ್ ಮಾಡಬೇಕಾಗಿತ್ತು. ಸಂಬಂಧಿಸಿದ ಶಾಲೆಗಳ ಜೊತೆಗೆ ವಸತಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಇದಕ್ಕೆ ಅವಶ್ಯಕತೆಯಾಗಿತ್ತು. ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ವರದಿ ಮಾಡುವ ವಸತಿಗಳ ಸಂಖ್ಯೆಯನ್ನು **ಕೋಷ್ಟಕ–3.6**ರಲ್ಲಿ ನೀಡಲಾಗಿದೆ ಮತ್ತು ಜಿಲ್ಲಾವಾರು ಒಟ್ಟು ವಸತಿಗಳನ್ನು **ಅನುಬಂಧ–3.2**ರಲ್ಲಿ ನೀಡಲಾಗಿದೆ.

ಕೋಷ್ಟಕ–3.6: ವಸತಿಗಳ ವಿವರಗಳು

ವರ್ಷ	ವಸತಿಗಳ ಒಟ್ಟು ಸಂಖ್ಯೆ (ಪ್ರಾಥಮಿಕ)	1 ಕಿಮೀ ಒಳಗೆ ಪ್ರಾಥಮಿಕ ಶಾಲೆ ಇಲ್ಲದಿರುವ ವಸತಿಗಳ ಸಂಖ್ಯೆ	ಅಂತಹ ವಸತಿಗಳಲ್ಲಿ ಇರುವ ಮಕ್ಕಳ ಸಂಖ್ಯೆ (ಪ್ರಾಥಮಿಕ)	3 ಕಿಮೀ ಒಳಗೆ ಹಿರಿಯ ಪ್ರಾಥಮಿಕ ಶಾಲೆ ಇಲ್ಲದಿರುವ ವಸತಿಗಳ ಸಂಖ್ಯೆ	ಅಂತಹ ವಸತಿಗಳು ಇರುವ ಮಕ್ಕಳ ಸಂಖ್ಯೆ (ಹಿರಿಯ ಪ್ರಾಥಮಿಕ)
2017–18	60,888	1,869	69	1,385	5,651
2018–19	60,888	2,306	5,790	2,780	3,464
2019–20	60,888	2,306	4,586	2,780	2,358
2020–21	60,888	2,306	4,586	2,780	2,358
2021–22	60,888	2,306	4,586	2,780	2,358

ಆಧಾರ: ಶಿಕ್ಷಣ ಇಲಾಖೆ

ಇಲಾಖೆಯು ವರದಿ ಮಾಡಿದ ವಸತಿ ಅಂಕಿಅಂಶಗಳಿಗೆ ಬೆಂಬಲ ನೀಡುವ ವಸತಿಗಳ ಪಟ್ಟಿ ಮತ್ತು ಹತ್ತಿರದ ಶಾಲೆಗಳೊಂದಿಗೆ ಅವುಗಳ ಮ್ಯಾಪಿಂಗ್ ವಿವರಗಳನ್ನು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಲಿಲ್ಲ. ವಸತಿವಾರು, ಗ್ರಾಮವಾರು, ತಾಲ್ಲೂಕುವಾರು, ಜಿಲ್ಲಾವಾರು ಪ್ರಾಥಮಿಕ ಶಿಕ್ಷಣಕ್ಕೆ ಅರ್ಹರಾಗಿದ್ದ ಮಕ್ಕಳ ದತ್ತಾಂಶವು ಇಲಾಖೆ ಬಳಿ ಲಭ್ಯವಿಲ್ಲ ಎಂದು ಸರ್ಕಾರವು ತಿಳಿಸಿತು. ಜಿಲ್ಲಾ

ಮತ್ತು ರಾಜ್ಯ ಮಟ್ಟದಲ್ಲಿ ಮಕ್ಕಳ ಜನಸಂಖ್ಯೆಯನ್ನು ಅಂದಾಜು ಮಾಡಲು ಇಲಾಖೆಯು ಜನಗಣತಿ 2011ರ ದತ್ತಾಂಶವನ್ನು ಅವಲಂಬಿಸಿತ್ತು. ಈ ಮ್ಯಾಪಿಂಗ್ ವಿವರಗಳ ಅನುಪಸ್ಥಿತಿಯಲ್ಲಿ, ರಾಜ್ಯದಲ್ಲಿನ ಶಾಲಾ ಸೌಲಭ್ಯಗಳ ವಿಶ್ಲೇಷಣೆಯನ್ನು ಕೈಗೊಳ್ಳಲು ಲೆಕ್ಕಪರಿಶೋಧನೆಯು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವನ್ನು (ಕೆಎಸ್ಆರ್ಎಸ್ಎಸಿ) ಸಂಪರ್ಕಿಸಿತು (ಜನವರಿ 2023) ಮತ್ತು ವಿಶ್ಲೇಷಣೆಯ ಫಲಿತಾಂಶಗಳನ್ನು ಕೆಳಗೆ ಚರ್ಚಿಸಲಾಗಿದೆ:

3.6.1 ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಸಹಾಯದಿಂದ ಕೈಗೊಂಡ ಶಾಲೆಗಳ ಜಿಯೋಸ್ಪೇಷಿಯಲ್ ದತ್ತಾಂಶದ ಅಧ್ಯಯನ

ಇತ್ತೀಚಿನ ವರ್ಷಗಳಲ್ಲಿ ಶೈಕ್ಷಣಿಕ ಯೋಜನೆಯಲ್ಲಿ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಶಾಲೆಯ ಮ್ಯಾಪಿಂಗ್ ಅನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಇದು ಶಿಕ್ಷಣ ಸಂಸ್ಥೆಗಳನ್ನು ಅವುಗಳ ಭೌಗೋಳಿಕ ಸ್ಥಳಗಳಿಗೆ ಅನುಗುಣವಾಗಿ ದೃಶ್ಯೀಕರಿಸುವ ಪ್ರಕ್ರಿಯೆಯಾಗಿದೆ. ಕೆಎಸ್ಆರ್ಎಸ್ಎಸಿ 4,87,929 ವಸತಿಗಳ ಮತ್ತು 76,450 ಶಾಲೆಗಳ (1ರಿಂದ 12ನೇ ತರಗತಿಯವರೆಗೆ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು) ದತ್ತಾಂಶವನ್ನು ಜಿಐಎಸ್ ಪ್ಲಾಟ್‌ಫಾರ್ಮ್‌ನಲ್ಲಿ ವೆಕ್ಟರ್[13] ಸ್ವರೂಪಗಳಲ್ಲಿ ನಿರ್ವಹಿಸುತ್ತದೆ.

4,87,929 ವಸತಿಗಳಲ್ಲಿ, 3,55,005 ವಸತಿಗಳು (ಶೇಕಡಾ 73) ಒಂದು ಕಿಲೋಮೀಟರ್ ಒಳಗೆ ಪ್ರಾಥಮಿಕ ಶಾಲೆಗಳನ್ನು ಹೊಂದಿದ್ದವು ಎಂಬುದನ್ನು ಕೆಎಸ್ಆರ್ಎಸ್ಎಸಿಯ ಜಿಯೋಸ್ಪೇಷಿಯಲ್ ವಿಶ್ಲೇಷಣೆಯು ತೋರಿಸಿತು. ಉಳಿದ 1,32,924 ವಸತಿಗಳಲ್ಲಿ, 1,29,952 ವಸತಿಗಳು (ಶೇಕಡಾ 26) ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, 2,436 ವಸತಿಗಳು 3ರಿಂದ 5 ಕಿಲೋಮೀಟರ್ ಮತ್ತು 536 ವಸತಿಗಳು ಐದು ಕಿಲೋಮೀಟರ್ ದೂರದಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿದ್ದವು. ವಾಸಸ್ಥಳದಿಂದ ಶಿಕ್ಷಣ ಸಂಸ್ಥೆಗೆ ಇರುವ ದೂರದ ಹೆಚ್ಚಳವು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆ, ಹಾಜರಾತಿ ಮತ್ತು ದಾಖಲಾತಿಗಳ ಮೇಲೆ ಪರಿಣಾಮ ಬೀರಬಹುದು ಏಕೆಂದರೆ ದೀರ್ಘ ಪ್ರಯಾಣವು ದೈಹಿಕ ಮತ್ತು ಮಾನಸಿಕ ಆಯಾಸಕ್ಕೆ ಕಾರಣವಾಗುತ್ತದೆ. ಕೆಎಸ್ಆರ್ಎಸ್ಎಸಿ ಮ್ಯಾಪಿಂಗ್ ಆಧರಿಸಿ ಆಯ್ದ ಎಂಟು ಜಿಲ್ಲೆಗಳಲ್ಲಿ ಶಾಲೆಗಳ ಲಭ್ಯತೆಯನ್ನು **ಕೋಷ್ಟಕ–3.7**ರಲ್ಲಿ ನೀಡಲಾಗಿದೆ.

ಕೋಷ್ಟಕ–3.7: ಕಿರಿಯ ಪ್ರಾಥಮಿಕ ಶಾಲೆಗಳಿಂದ ವಾಸಸ್ಥಳಗಳ ದೂರ

ಜಿಲ್ಲೆ	ಒಟ್ಟು ವಾಸಸ್ಥಳಗಳು	ಕಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿರುವ ವಾಸಸ್ಥಳಗಳು			
		1 ಕಿಮೀ ಒಳಗೆ	1ರಿಂದ 3 ಕಿಮೀ	3ರಿಂದ 5 ಕಿಮೀ	5 ಕಿಮೀ ಗಿಂತ ಹೆಚ್ಚು
ಬಾಗಲಕೋಟೆ	9,928	7,647	2,276	5	0
ಬಳ್ಳಾರಿ	1,214	1,008	198	8	0
ಬೆಂಗಳೂರು (ಗ್ರಾಮಾಂತರ)	10,753	10,135	618	0	0
ಚಾಮರಾಜನಗರ	13,481	9,575	3,853	38	15
ಮೈಸೂರು	10,157	8,933	1,212	5	7
ರಾಯಚೂರು	4,116	3,424	680	12	0
ಶಿವಮೊಗ್ಗ	23,901	16,326	7,521	54	0
ಉತ್ತರ ಕನ್ನಡ	32,102	23,704	8,233	141	24
ವಿಜಯನಗರ	2,099	1,820	275	4	0
ಒಟ್ಟು	**1,07,751**	**82,572**	**24,866**	**267**	**46**


ಆಧಾರ: ಕೆಎಸ್ಆರ್ಎಸ್ಎಸಿ

[13] ವೆಕ್ಟರ್ ಎನ್ನುವುದು ಎರಡು ಆಯಾಮದ (2ಡಿ) ಅಥವಾ ಮೂರು ಆಯಾಮದ (3ಡಿ) ಜಾಗದಲ್ಲಿ ವಸ್ತುವಿನ ಜಿಯೋಮೆಟ್ರಿಕ್ ನಿರೂಪಣೆಯಾಗಿದೆ. ಪ್ರಾದೇಶಿಕ ದತ್ತಾಂಶ ಮತ್ತು ಗುಣಲಕ್ಷಣಗಳನ್ನು ಸಂಗ್ರಹಿಸಲು ವೆಕ್ಟರ್‌ಗಳನ್ನು ಬಳಸಲಾಗುತ್ತದೆ.

ಹೀಗೆ, ಈ ಎಂಟು ಜಿಲ್ಲೆಗಳ 1,07,751 ವಾಸಸ್ಥಳಗಳ ಪೈಕಿ 82,572 ವಾಸಸ್ಥಳಗಳು ಒಂದು ಕಿಮೀ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, 24,866 ವಸತಿಗಳು 1ರಿಂದ 3 ಕಿಮೀ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, 313 ವಾಸಸ್ಥಳಗಳಿಗೆ ಪ್ರಾಥಮಿಕ ಶಾಲೆಗಳು ಮೂರು ಕಿಮೀಗಿಂತ ಹೆಚ್ಚು ದೂರದಲ್ಲಿದ್ದವು.

ಪ್ರದರ್ಶಿಕೆ–3.1 ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಹತ್ತಿರದ ಶಾಲೆಯೇ 5.13 ಕಿಮೀ ದೂರದಲ್ಲಿರುವ (ಜಿಎಲ್‌ಪಿಎಸ್ ಕೊಡತಳ್ಳಿ) ವಸತಿ ಪ್ರದೇಶವನ್ನು ಪ್ರತಿನಿಧಿಸುತ್ತದೆ.

ಪ್ರದರ್ಶಿಕೆ–3.1: ವಸತಿ ಮತ್ತು ಹತ್ತಿರದ ಶಾಲೆ



ಹತ್ತಿರದ ವಾಸಸ್ಥಳದಿಂದ 5.13 ಕಿ.ಮೀ. ದೂರದಲ್ಲಿರುವ ಜೋಯಿಡಾ ತಾಲ್ಲೂಕು ಜಿಎಲ್‌ಪಿಎಸ್ ಕೊಡತಳ್ಳಿ, ಆಧಾರ: ಕೆಎಸ್‌ಆರ್‌ಎಸ್‌ಎಸಿ ಒದಗಿಸಿದ ಚಿತ್ರ

ವಸತಿ ಮತ್ತು ಶಾಲೆಗಳ ನಡುವಿನ ದೂರವನ್ನು ತೋರಿಸುವ ಇನ್ನೂ ಕೆಲವು ಪ್ರದರ್ಶಿಕೆಗಳನ್ನು **ಅನುಬಂಧ–3.3(ಎ** ಮತ್ತು **ಬಿ)** ರಲ್ಲಿ ನೀಡಲಾಗಿದೆ.

ಅದೇ ರೀತಿ, 4,87,929 ವಸತಿಗಳಲ್ಲಿ, 4,77,651 ವಸತಿಗಳು (ಶೇಕಡಾ 98) ಮೂರು ಕಿಲೋಮೀಟರ್‌ಗಳ ಒಳಗೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿದ್ದವು ಎಂಬುದನ್ನು ವಿಶ್ಲೇಷಣೆ ತೋರಿಸಿತು. ಉಳಿದ 10,278 ವಸತಿಗಳಲ್ಲಿ, 8,992 ವಸತಿಗಳು (ಶೇಕಡಾ 1.84) ಐದು ಕಿಲೋಮೀಟರ್ ದೂರದ ಒಳಗೆ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು, 1,093 ವಾಸಸ್ಥಳಗಳು 5–8 ಕಿಮೀ ಅಂತರದಲ್ಲಿ ಮತ್ತು 193 ವಸತಿಗಳು ಎಂಟು ಕಿಲೋಮೀಟರ್‌ಗಿಂತ ಹೆಚ್ಚಿನ ದೂರದಲ್ಲಿ ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದವು. ಆಯ್ದ ಎಂಟು ಜಿಲ್ಲೆಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಲಭ್ಯತೆಯನ್ನು ಕೆಳಗೆ ತೋರಿಸಲಾಗಿದೆ:

ಕೋಷ್ಟಕ–3.8: ಹಿರಿಯ ಪ್ರಾಥಮಿಕ ಶಾಲೆಗಳಿಂದ ವಾಸಸ್ಥಳಗಳ ದೂರ

ಜಿಲ್ಲೆ	ಒಟ್ಟು ವಾಸಸ್ಥಳಗಳು	ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿರುವ ವಾಸಸ್ಥಳಗಳು			
		3 ಕಿಮೀ ಒಳಗೆ	3ರಿಂದ 5 ಕಿಮೀ	5ರಿಂದ 8 ಕಿಮೀ	8 ಕಿಮೀ ಗಿಂತ ಹೆಚ್ಚು
ಬಾಗಲಕೋಟೆ	9,928	9,770	157	1	0
ಬಳ್ಳಾರಿ	1,214	1,182	32	0	0
ಬೆಂಗಳೂರು (ಗ್ರಾಮಾಂತರ)	10,753	10,752	1	0	0
ಚಾಮರಾಜನಗರ	13,481	12,913	399	112	57
ಮೈಸೂರು	10,157	10,119	29	8	1

ಜಿಲ್ಲೆ	ಒಟ್ಟು ವಾಸಸ್ಥಳಗಳು	ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿರುವ ವಾಸಸ್ಥಳಗಳು			
		3 ಕಿಮೀ ಒಳಗೆ	3ರಿಂದ 5 ಕಿಮೀ	5ರಿಂದ 8 ಕಿಮೀ	8 ಕಿಮೀ ಗಿಂತ ಹೆಚ್ಚು
ರಾಯಚೂರು	4,116	3,999	117	0	0
ಶಿವಮೊಗ್ಗ	23,901	23,040	773	88	0
ಉತ್ತರ ಕನ್ನಡ	32,102	30,476	1,443	175	8
ವಿಜಯನಗರ	2,099	2,068	31	0	0
ಒಟ್ಟು	**1,07,751**	**1,04,319**	**2,982**	**384**	**66**

ಆಧಾರ: ಕೆಎಸ್ಆರ್ಎಸ್ಎಸಿ ಯಿಂದ ಜಿಯೋಸ್ಪೇಷಿಯಲ್ ವಿಶ್ಲೇಷಣೆ

ಆಯ್ದ ಎಂಟು ಜಿಲ್ಲೆಗಳಲ್ಲಿನ 1,07,751 ವಸತಿಗಳಲ್ಲಿ, 1,04,319 ವಸತಿಗಳು (ಶೇಕಡಾ 96.81) ಕೆಆರ್ಟಿಇ ನಿಯಮಗಳಡಿಯಲ್ಲಿ ನಿರ್ದಿಷ್ಟಪಡಿಸಿದ 5 ಕಿಮೀ.ನೊಳಗೆ ಒಂದು ಹಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದವು ಎಂಬುದನ್ನು ಕೆಎಸ್ಆರ್ಎಸ್ಎಸಿಯ ಜಿಯೋಸ್ಪೇಷಿಯಲ್ ವಿಶ್ಲೇಷಣೆಯು ತೋರಿಸಿತು. ದೂರದ ಮಾನದಂಡಗಳ ಪ್ರಕಾರ 450 ವಸತಿಗೃಹಗಳು ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿರಲಿಲ್ಲ. ಹೀಗೆ, ಈ ವಾಸಸ್ಥಳಗಳಲ್ಲಿ ಮಕ್ಕಳಿಗೆ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರವೇಶವು ಕಷ್ಟಕರವಾಗಿತ್ತು.


ವಾಸಸ್ಥಾನಗಳ ಮೇಲೆ ಇಂದೀಕರಿಸಿದ ಕೆಎಸ್ಆರ್ಎಸ್ಎಸಿ ದತ್ತಾಂಶವನ್ನು ಇಲಾಖೆಯು ವಿಶ್ಲೇಷಿಸಬಹುದು ಮತ್ತು ತನ್ನ ಸ್ವಂತ ವಸತಿ ದತ್ತಸಂಚಯದ ನಿಖರತೆ ಮತ್ತು ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಬಹುದು. ಇದಲ್ಲದೆ, ಇಲಾಖೆಯು ಶಾಲೆಗೆ ಹೋಗುವ ಮಕ್ಕಳ ವಾಸಸ್ಥಳವಾರು ದತ್ತಾಂಶವನ್ನು ಸಂಕಲಿಸಬೇಕು, ಅದರಿಂದ ರಾಜ್ಯದಲ್ಲಿನ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆಯ ಪರ್ಯಾಪ್ತತೆಯನ್ನು ಆರ್ಟಿಇ ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ಖಚಿತಪಡಿಸಿಕೊಳ್ಳಬಹುದು.

ಮುಂಬರುವ ವರ್ಷಗಳಲ್ಲಿ ಆ ವಸತಿಗಳಲ್ಲಿನ ಮಕ್ಕಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲು ಇಲಾಖೆಯು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

3.7 ಕಡಿಮೆ ದಾಖಲಾತಿ ಮತ್ತು ಸಂಪನ್ಮೂಲಗಳ ಸಮರ್ಥ ಬಳಕೆಯನ್ನು ನಿಭಾಯಿಸಲು ಶಾಲೆಗಳ ಏಕೀಕರಣ

ಕೆಆರ್ಟಿಇನ 4ನೇ ನಿಯಮವು ರಾಜ್ಯ ಸರ್ಕಾರವು ಅಸ್ತಿತ್ವದಲ್ಲಿರುವ 1ರಿಂದ 5ನೇ ತರಗತಿಯ ಶಾಲೆಗಳನ್ನು 6ರಿಂದ 8ನೇ ತರಗತಿಗಳನ್ನು ಸೇರಿಸಿ ಮೇಲ್ದರ್ಜೆಗೇರಿಸಬೇಕು ಎಂದು ನಿಗದಿಪಡಿಸುತ್ತದೆ. 6ನೇ ತರಗತಿಯಿಂದ ಪ್ರಾರಂಭವಾಗುವ ಶಾಲೆಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವಲ್ಲಿ 1ರಿಂದ 5ನೇ ತರಗತಿಗಳನ್ನು ಸೇರಿಸಲು ರಾಜ್ಯ ಸರ್ಕಾರವು ಪ್ರಯತ್ನಿಸಬೇಕು. ಹೀಗೆ, ಕೆಆರ್ಟಿಇ ನಿಯಮಗಳು ಅಸ್ತಿತ್ವದಲ್ಲಿರುವ ಶಾಲೆಗಳ ಏಕೀಕರಣವನ್ನು ಪ್ರೋತ್ಸಾಹಿಸುವುದನ್ನು ಗಮನಿಸಬಹುದು. ಶಾಲೆಗಳ ಏಕೀಕರಣವು ಸಂಪನ್ಮೂಲಗಳ ಸಮರ್ಥ ಬಳಕೆಯನ್ನು ಉತ್ತೇಜಿಸುತ್ತದೆ. ಉದಾಹರಣೆಗೆ, ಒಂದೇ ಪ್ರದೇಶದಲ್ಲಿ ಕಡಿಮೆ ದಾಖಲಾತಿ ಹೊಂದಿರುವ ಅನೇಕ ಶಾಲೆಗಳ ಅಸ್ತಿತ್ವವನ್ನು ಕೆಎಸ್ಆರ್ಎಸ್ಎಸಿ ವಿಶ್ಲೇಷಣೆಯು ತೋರಿಸಿತ್ತು.

ಪ್ರದರ್ಶಿಕೆ–3.2: 500 ಮೀಟರ್ ವ್ಯಾಪ್ತಿಯೊಳಗೆ 12ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ದಾಖಲಾತಿಯಿರುವ ಎರಡು ಪ್ರಾಥಮಿಕ ಶಾಲೆಗಳು



ಶಾಲೆಗಳ ಏಕೀಕರಣದ ಅವಕಾಶಗಳನ್ನು ಇಲಾಖೆಯು ಇನ್ನೂ ಸಂಪೂರ್ಣವಾಗಿ ವಿಶ್ಲೇಷಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೆಎಸ್ಆರ್ಎಸ್ಎಸಿ ಕೈಗೊಂಡ ಮ್ಯಾಪಿಂಗ್ **ಕೋಷ್ಟಕ–3.9**ರಲ್ಲಿ ತೋರಿಸಿರುವಂತೆ, ಅನೇಕ ಸ್ಥಳಗಳಲ್ಲಿ 500 ಮೀಟರ್‌ಗಳ ಒಳಗೆ ಅನೇಕ ಸರ್ಕಾರಿ/ಅನುದಾನಿತ ಶಾಲೆಗಳಿದ್ದವು ಎಂಬುದನ್ನು ತೋರಿಸಿತು.


ಕೋಷ್ಟಕ–3.9: 500 ಮೀಟರ್ ವ್ಯಾಪ್ತಿಯೊಳಗೆ ಒಂದಕ್ಕಿಂತ ಹೆಚ್ಚು ಸರ್ಕಾರಿ/ಅನುದಾನಿತ ಪ್ರಾಥಮಿಕ ಶಾಲೆಗಳಿರುವ ವಾಸಸ್ಥಳಗಳ ಸಂಖ್ಯೆ

ಜಿಲ್ಲೆ	ವಾಸಸ್ಥಳಗಳ ಸಂಖ್ಯೆ			
	3 ಶಾಲೆಗಳು	4–5 ಶಾಲೆಗಳು	5ಕ್ಕಿಂತ ಹೆಚ್ಚು ಶಾಲೆಗಳು	ಒಟ್ಟು ಮೊತ್ತ
ಬಾಗಲಕೋಟೆ	429	52	9	490
ಬಳ್ಳಾರಿ	216	19	17	252
ಬೆಂಗಳೂರು (ಗ್ರಾಮಾಂತರ)	222	16	9	247
ಚಾಮರಾಜನಗರ	143	16	13	172
ಮೈಸೂರು	425	27	9	461
ರಾಯಚೂರು	374	16	17	407
ಶಿವಮೊಗ್ಗ	316	23	6	345
ಉತ್ತರ ಕನ್ನಡ	423	16	0	439
ವಿಜಯನಗರ	238	22	24	284
ಒಟ್ಟು	**2,786**	**207**	**104**	**3,097**

ಆಧಾರ: ಕೆಎಸ್ಆರ್ಎಸ್ಎಸಿ ಯಿಂದ ಜಿಯೋಸ್ಪೇಷಿಯಲ್ ವಿಶ್ಲೇಷಣೆ

500 ಮೀಟರ್ ವ್ಯಾಪ್ತಿಯೊಳಗೆ 10 ಶಾಲೆಗಳನ್ನು ಹೊಂದಿರುವ ಸ್ಥಳವನ್ನು **ಪ್ರದರ್ಶಿಕೆ–3.3**ರಲ್ಲಿ ನೀಡಲಾಗಿದೆ.

ಪ್ರದರ್ಶಿಕೆ–3.3: 500 ಮೀಟರ್ ವ್ಯಾಪ್ತಿಯೊಳಗೆ ಹಲವಾರು ಶಾಲೆಗಳಿರುವ ವಾಸಸ್ಥಳಗಳು



ವಿಜಯನಗರ ಜಿಲ್ಲೆಯಲ್ಲಿ 500 ಮೀಟರ್ ವ್ಯಾಪ್ತಿಯೊಳಗೆ 10 ಶಾಲೆಗಳನ್ನು ತೋರಿಸುವ ಕೆಎಸ್ಆರ್ಎಸ್ಎಸಿ ವಿಶ್ಲೇಷಣೆ

ಹೀಗೆ, ಆಯ್ಕೆ ಮಾಡಿದ ಎಂಟು ಜಿಲ್ಲೆಗಳಲ್ಲಿ 500 ಮೀಟರ್ ವ್ಯಾಪ್ತಿಯೊಳಗೆ ಎರಡಕ್ಕಿಂತ ಹೆಚ್ಚು ಶಾಲೆಗಳನ್ನು ಹೊಂದಿರುವ 3,097 ವಾಸಸ್ಥಳಗಳಿದ್ದವು.

ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಗಳನ್ನು ಒಪ್ಪಿಕೊಂಡಿತು (ಮೇ 2023).

ಅತ್ಯುತ್ತಮ ನಿದರ್ಶನ–ಕರ್ನಾಟಕ
ಸಾರ್ವಜನಿಕ ಶಾಲೆ (ಕೆಪಿಎಸ್), ರಾಯರಕೊಪ್ಪಲು ಸ್ಥಾಪನೆ

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ರಾಯರಕೊಪ್ಪಲು ಗ್ರಾಮವು ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಹೊಂದಿತ್ತು. ವರ್ಷಗಳು ಕಳೆದಂತೆ, 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳ ಗರಿಷ್ಠ ದಾಖಲಾತಿಯಿಂದ, ಮೂರು ಸರ್ಕಾರಿ ಸಂಸ್ಥೆಗಳು ತಮ್ಮ ದಾಖಲಾತಿಯಲ್ಲಿ ಕ್ರಮೇಣ ಇಳಿಕೆ ಕಂಡವು. 2018–19ರಲ್ಲಿ ಸಂಯೋಜಿತ ಸಾಮರ್ಥ್ಯವು 140 ವಿದ್ಯಾರ್ಥಿಗಳಿಗೆ ಕಡಿಮೆಯಾಗಿತ್ತು.

2018–19ರಲ್ಲಿ, ಎಲ್ಲಾ ಮೂರು ಸಂಸ್ಥೆಗಳನ್ನು ಸಂಯೋಜಿಸಿ ಕರ್ನಾಟಕ ಪಬ್ಲಿಕ್ ಸ್ಕೂಲ್, ರಾಯರಕೊಪ್ಪಲು ಎಂದು ಪುನರ್–ರಚಿಸಲಾಯಿತು. ಶಾಲೆಯಲ್ಲಿ ಪ್ರಾಥಮಿಕ–ಪೂರ್ವ ವಿಭಾಗಗಳನ್ನು ಪ್ರಾರಂಭಿಸಲಾಯಿತು, ಶಾಲಾಕೊಠಡಿ ಮತ್ತು ಶೌಚಾಲಯಗಳ ನವೀಕರಣವನ್ನು ಕೈಗೊಳ್ಳಲಾಯಿತು, ಕುಡಿಯುವ ನೀರು ಒದಗಿಸಲಾಯಿತು ಮತ್ತು ಮೂಲಸೌಕರ್ಯಗಳನ್ನು ಸುಧಾರಿಸಲು ಇತರ ಉಪಕ್ರಮಗಳ ಜೊತೆಗೆ ಕಲಿಕೆಯ ಸಂಪನ್ಮೂಲಗಳನ್ನು ಖರೀದಿಸಲಾಯಿತು. ಎಲ್ಲಾ ಪಾಲುದಾರರ ನಿರಂತರ ಪ್ರಯತ್ನದಿಂದಾಗಿ, ರಾಯರಕೊಪ್ಪಲು ಕೆಪಿಎಸ್‌ನಲ್ಲಿ ದಾಖಲಾತಿ 2021–22ನೇ ಶೈಕ್ಷಣಿಕ ವರ್ಷದಲ್ಲಿ 658ಕ್ಕೆ ತಲುಪಿದೆ. ಪ್ರಾಥಮಿಕ ದಾಖಲಾತಿಯು 2018–19ರಲ್ಲಿನ 291ರಿಂದ 2021–22ರಲ್ಲಿ 343ಕ್ಕೆ ಏರಿತ್ತು.

3.8 ಶಾಲೆಯಿಂದ ಹೊರಗುಳಿದ ಮಕ್ಕಳು

ಶಾಲೆಗೆ ಹಾಜರಾಗದ ಮತ್ತು ಶಿಕ್ಷಣವನ್ನು ಪಡೆಯದ ಮಕ್ಕಳನ್ನು "ಶಾಲೆಯಿಂದ ಹೊರಗುಳಿದ ಮಕ್ಕಳು" (ಒಒಎಸ್‌ಸಿ) ಎಂದು ಉಲ್ಲೇಖಿಸಲಾಗುತ್ತದೆ. ಅವರು ಶಾಲೆಗಳಿಗೆ ಎಂದಿಗೂ

ದಾಖಲಾಗದ ಮಕ್ಕಳಾಗಿರಬಹುದು ಅಥವಾ ಆರಂಭಿಕ ದಾಖಲಾತಿಯ ನಂತರ ಹೊರಗುಳಿದ ಮಕ್ಕಳಾಗಿರಬಹುದು.

ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯ (ಎನ್‌ಎಸ್‌ಎಸ್‌ಒ) 75ನೇ ಸುತ್ತಿನ ಸಮೀಕ್ಷೆ (2017–18ರ ಅವಧಿಯಲ್ಲಿ ನಡೆಸಲಾದ) ರಾಜ್ಯದಲ್ಲಿ 6 ರಿಂದ 14 ವರ್ಷದೊಳಗಿನ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯನ್ನು 1.89 ಲಕ್ಷ ಎಂದು ಅಂದಾಜಿಸಿತ್ತು. 2017–18ನೇ ಸಾಲಿನಲ್ಲಿ ಇಲಾಖೆಯು ವರದಿ ಮಾಡಿದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಕೇವಲ 17,005 ಆಗಿದ್ದು, ಇಲಾಖೆ ಮತ್ತು ಎನ್‌ಎಸ್‌ಒ ಸಮೀಕ್ಷೆಯು ವರದಿ ಮಾಡಿದ ಅಂಕಿಅಂಶಗಳಲ್ಲಿ ವ್ಯತ್ಯಾಸಗಳನ್ನು ಸೂಚಿಸುತ್ತದೆ. ಸಮಗ್ರ ಶಿಕ್ಷಾ ಕರ್ನಾಟಕ (ಎಸ್‌ಎಸ್‌ಕೆ) ನಿರ್ವಹಿಸಿರುವ ಮಾಹಿತಿಯ ಪ್ರಕಾರ 2017–18ರಿಂದ 2021–22ರ ಅವಧಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯನ್ನು ಕೆಳಗಿನ **ಕೋಷ್ಟಕ–3.10**ರಲ್ಲಿ ನೀಡಲಾಗಿದೆ:

ಕೋಷ್ಟಕ–3.10: ಶಾಲೆಯಿಂದ ಹೊರಗುಳಿದ ಮಕ್ಕಳ ವಿವರಗಳು

ವರ್ಷ	ಶಾಲೆಯಿಂದ ಹೊರಗುಳಿದ ಮಕ್ಕಳು (ಒಒಎಸ್‌ಸಿ)	ಶಾಲೆಗೆ ಕರೆತಂದ ಮಕ್ಕಳ ಸಂಖ್ಯೆ	ಶಾಲೆಗೆ ಕರೆತಂದ ಮಕ್ಕಳ ಶೇಕಡಾವಾರು
2017–18	17,005	13,436	79.01
2018–19	13,507	11,302	83.68
2019–20	11,298	7,141	63.21
2020–21	9,111	5,971	65.54
2021–22	7,736	6,589	85.17
ಒಟ್ಟು	**58,657**	**44,439**	

ಆಧಾರ: ಸಮಗ್ರ ಶಿಕ್ಷಣ ಅಭಿಯಾನ, ಕರ್ನಾಟಕ

2017–22ರ ಅವಧಿಯಲ್ಲಿ ಗುರುತಿಸಲಾದ 58,657 ಶಾಲೆಯಿಂದ ಹೊರಗುಳಿದ ಮಕ್ಕಳ ಪೈಕಿ ಒಟ್ಟು 44,439 ಮಕ್ಕಳನ್ನು ಶಾಲೆಗಳಿಗೆ ಕರೆತರಲಾಗಿದ್ದು (ಮುಖ್ಯವಾಹಿನಿಗೆ), ಉಳಿದ 14,218 ಮಕ್ಕಳನ್ನು ಶಾಲೆಗಳಿಗೆ ಕರೆತರಲಾಗಿಲ್ಲ.

2020–21ರ ಅವಧಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಮಕ್ಕಳ ಮನೆ–ಮನೆ ಸಮೀಕ್ಷೆ ನಡೆಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರಾಭಿವೃದ್ಧಿ ಇಲಾಖೆಗೆ ಕರ್ನಾಟಕದ ಗೌರವಾನ್ವಿತ ಹೈಕೋರ್ಟ್ ನಿರ್ದೇಶನ ನೀಡಿತು. ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳು 2020–21ರ ಅವಧಿಯಲ್ಲಿ ಮನೆ–ಮನೆಯ ಸಮೀಕ್ಷೆಯನ್ನು ನಡೆಸಿದವು. ಸಮೀಕ್ಷೆಯು ರಾಜ್ಯದ 1,44,02,825 ಕುಟುಂಬಗಳನ್ನು ವ್ಯಾಪ್ತಿಗೊಳಪಡಿಸಿತ್ತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರಾಭಿವೃದ್ಧಿ ಇಲಾಖೆಗಳ ಸಮೀಕ್ಷೆಯ ಪ್ರಕಾರ 6ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ 15,338 ಆಗಿತ್ತು. ರಾಜ್ಯದಲ್ಲಿ ಈ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಇನ್ನೂ ಪೂರ್ಣಗೊಂಡಿರಲಿಲ್ಲ.

ಮೇಲೆ ತಿಳಿಸಿದ 15,338 ಮಕ್ಕಳಲ್ಲಿ 13,240 ಮಕ್ಕಳನ್ನು ಮಾರ್ಚ್ 2023ರ ವೇಳೆಗೆ ಟ್ರ್ಯಾಕ್ ಮಾಡಲಾಗಿದೆ ಮತ್ತು 11,108 ಮಕ್ಕಳನ್ನು ಈಗಾಗಲೇ ರಾಜ್ಯದಲ್ಲಿ ಮುಖ್ಯವಾಹಿನಿಗೆ ತರಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). 2,098 ಮಕ್ಕಳನ್ನು ಇನ್ನೂ ಪತ್ತೆಹಚ್ಚಬೇಕಾಗಿದೆ ಮತ್ತು 2,132 ಮಕ್ಕಳನ್ನು ಮುಖ್ಯವಾಹಿನಿಗೆ ತರಬೇಕಾಗಿದೆ ಎನ್ನುವುದನ್ನು ಉತ್ತರವು ಸೂಚಿಸುತ್ತದೆ.

ಮುಖ್ಯವಾಹಿನಿಗೆ ತಂದಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಅನುಸರಣೆಯಲ್ಲಿ ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಬಳಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಮುಖ್ಯವಾಹಿನಿಗೆ ತಂದ ಶಾಲೆಯಿಂದ ಹೊರಗುಳಿದ ಮಕ್ಕಳ ಸ್ಥಿತಿಯನ್ನು ಪತ್ತೆಹಚ್ಚಲಾಗಲಿಲ್ಲ, ಇದು ಮೇಲ್ವಿಚಾರಣೆಯ ಮೇಲೆ ಪರಿಣಾಮ ಬೀರಿತು. ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿನ ಸಂಖ್ಯೆಗಳ ಭೌತಿಕ ಪರಿಶೀಲನೆ ಮತ್ತು ಪರಿಶೀಲನೆಯು **ಕೋಷ್ಟಕ–3.11**ರಲ್ಲಿ ಉಲ್ಲೇಖಿಸಿದಂತೆ ವ್ಯತ್ಯಾಸಗಳನ್ನು ತೋರಿಸಿತು.

ಕೋಷ್ಟಕ–3.11: ಶಾಲೆಯಿಂದ ಹೊರಗುಳಿದ ಮಕ್ಕಳ ಮೇಲಿನ ವರದಿಗಳು

ವೀಕ್ಷಣೆ	ಮಕ್ಕಳ ಸಂಖ್ಯೆ	ಲೆಕ್ಕಪರಿಶೋಧನಾ ವೀಕ್ಷಣೆ
ಭೌತಿಕ ಪರಿಶೀಲನೆ	23	ಶಾಲೆಗಳಲ್ಲಿ ದಾಖಲಾತಿ ವಿವರಗಳನ್ನು ಪರಿಶೀಲಿಸಿದ 23 ಮಕ್ಕಳ ಪೈಕಿ 13 ಮಕ್ಕಳು ಶಾಲೆಗಳಲ್ಲಿ ಲಭ್ಯವಿರಲಿಲ್ಲ. ಇನ್ನೂ 10 ಮಕ್ಕಳು ಶಾಲೆಗಳಲ್ಲಿ ಲಭ್ಯವಿದ್ದರು, ಆದರೆ ಅವರು ಶಾಲೆಯಿಂದ ಹೊರಗುಳಿದ ಮಕ್ಕಳಾಗಿರಲಿಲ್ಲ. 10 ಮಕ್ಕಳು ಶಾಲೆಯ ಸಾಮಾನ್ಯ ವಿದ್ಯಾರ್ಥಿಗಳಾಗಿದ್ದರು.
ವಿದ್ಯಾರ್ಥಿಗಳ ಐಡಿ ಪರಿಶೀಲನೆ	105	105 ವಿದ್ಯಾರ್ಥಿಗಳ ಪೈಕಿ 11 ವಿದ್ಯಾರ್ಥಿಗಳ ಗುರುತಿನ ಸಂಖ್ಯೆ ಹೊಂದಾಣಿಕೆಯಾಗುತ್ತಿರಲಿಲ್ಲ. ಮುಖ್ಯವಾಹಿನಿಗೆ ತರಲಾದ ಮಕ್ಕಳೆಂದು ತೋರಿಸಲಾದ ವಿದ್ಯಾರ್ಥಿ ಗುರುತಿನ ಸಂಖ್ಯೆಗಳು ಬೇರೆ ಮಕ್ಕಳಿಗೆ ಸೇರಿದ್ದವು.

ಆಧಾರ: ಭೌತಿಕ ಪರಿಶೀಲನೆ ಮತ್ತು ಎಸ್‌ಎಟಿಎಸ್ ದತ್ತಸಂಚಯದ ಪರಿಶೀಲನೆ

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿನ ಕೊರತೆಗಳು ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಬಲಪಡಿಸುವ ಅಗತ್ಯವನ್ನು ಸೂಚಿಸುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಸಂಪೂರ್ಣವಾಗಿ ಮುಖ್ಯವಾಹಿನಿಗೆ ತರುವಲ್ಲಿನ ವಿಫಲತೆಯು ಅವರ ಶೈಕ್ಷಣಿಕ ಅವಕಾಶಗಳು ಮತ್ತು ಒಟ್ಟಾರೆ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ. ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತವಾದ ಏಕೀಕರಣವಿಲ್ಲದೆ, ಈ ಮಕ್ಕಳು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಎದುರಿಸುತ್ತಲೇ ಇರುತ್ತಾರೆ.

3.8.1 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಮೀಸಲಿಟ್ಟ ನಿಧಿಯ ಬಳಕೆ

ಸಮಗ್ರ ಶಿಕ್ಷಾ ಅಭಿಯಾನದಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಮೀಸಲಿಟ್ಟ ನಿಧಿಯ ವಿವರಗಳನ್ನು ಕೆಳಗಿನ **ಕೋಷ್ಟಕ–3.12**ರಲ್ಲಿ ನೀಡಲಾಗಿದೆ.

ಕೋಷ್ಟಕ–3.12: ಶಾಲೆಯಿಂದ ಹೊರಗುಳಿದ ಮಕ್ಕಳ ನಿಧಿ ಬಳಕೆ

(₹ ಕೋಟಿಗಳಲ್ಲಿ)

ವರ್ಷ	ಹಂಚಿಕೆ ಮಾಡಿದ ಮೊತ್ತ	ಬಳಕೆ ಮಾಡಿದ ಮೊತ್ತ	ಹಂಚಿಕೆಗೆ ಪ್ರತಿಯಾಗಿ ಬಳಕೆಯ ಶೇಕಡಾವಾರು
2017–18	8.01	5.51	68.79
2018–19	7.85	6.89	87.77
2019–20	2.83	1.49	52.65
2020–21	3.58	0.42	11.73
2021–22	4.10	2.08	50.73
ಒಟ್ಟು	**26.37**	**16.39**	**62.15**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಹೀಗೆ, 2017–22ರ ಅವಧಿಯಲ್ಲಿ ಮಂಜೂರಾದ ₹26.37 ಕೋಟಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮಧ್ಯಸ್ಥಿಕೆಗೆ ₹16.39 ಕೋಟಿಯನ್ನು (ಶೇಕಡಾ 62.15) ಜಿಲ್ಲೆಗಳಿಗೆ ನೀಡಲಾಗಿತ್ತು. ಆಯ್ದ ಜಿಲ್ಲೆಗಳಿಗೆ ಒದಗಿಸಲಾದ ನಿಧಿಯ ವಿವರಗಳನ್ನು **ಕೋಷ್ಟಕ–3.13**ರಲ್ಲಿ ನೀಡಲಾಗಿದೆ.

ಕೋಷ್ಟಕ–3.13: ಶಾಲೆಯಿಂದ ಹೊರಗುಳಿದ ಮಕ್ಕಳ ಜಿಲ್ಲಾವಾರು ನಿಧಿ ಅವಕಾಶ

ಜಿಲ್ಲೆ	ಗುರುತಿಸಿದ್ದು	ಮುಖ್ಯವಾಹಿನಿಗೆ ತಂದಿದ್ದು	ಮುಖ್ಯವಾಹಿನಿಗೆ ತರದಿರುವುದು	2017–22ರಲ್ಲಿ ಒದಗಿಸಿದ ಹಣ		ಹೊರಗುಳಿದ ದರ	ಎನ್‌ಇಆರ್
				ಮೊತ್ತ (₹ ಲಕ್ಷಗಳಲ್ಲಿ)	ಶೇಕಡಾವಾರು (34 ಜಿಲ್ಲೆಗಳಲ್ಲಿ)		
ಬಾಗಲಕೋಟೆ	663	470	193	6.5	0.39	0.38	92.91
ಬೆಂಗಳೂರು ಗ್ರಾಮಾಂತರ	1,632	997	635	0	0	0	95.74
ಬಳ್ಳಾರಿ	3,759	2,095	1,664	607.38	37.05	0	94.82
ಚಾಮರಾಜನಗರ	1,748	443	1,305	29.14	1.77	0	76.69
ಮೈಸೂರು	4,498	2,689	1,809	3.77	0.22	0	86.29
ರಾಯಚೂರು	1,532	1,432	100	2.5	0.15	0	95.04
ಶಿವಮೊಗ್ಗ	832	367	465	2	0.12	0	90.25
ಉತ್ತರ ಕನ್ನಡ	1,145	934	211	17.9	1.09	0	90.41
ಒಟ್ಟು	**15,809**	**9,427**	**6,382**				

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ವರ್ಷವಾರು, ಜಿಲ್ಲಾವಾರು ನಿಧಿ ಹಂಚಿಕೆಯನ್ನು **ಅನುಬಂಧ–3.4**ರಲ್ಲಿ ನೀಡಲಾಗಿದೆ. ನಿಧಿಯ ಹಂಚಿಕೆ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ/ದರದ ನಡುವೆ ಯಾವುದೇ ಸಂಬಂಧವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಜಿಲ್ಲೆಗಳಿಗೆ ಒದಗಿಸಲಾದ ಒಟ್ಟು ₹16.39 ಕೋಟಿಗಳಲ್ಲಿ, ಒಟ್ಟು ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಶೇಕಡಾ 6.02ರಷ್ಟು ಮತ್ತು 'ಶೂನ್ಯ' ಡ್ರಾಪ್‌ಔಟ್ ದರವನ್ನು ವರದಿ ಮಾಡಿದ ಬಳ್ಳಾರಿಯು ₹6.07 ಕೋಟಿ (ಶೇಕಡಾ 37.05) ಹಣವನ್ನು ಪಡೆದಿತ್ತು. 2017–22ರ ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ, ಕೊಡಗು, ಕೋಲಾರ, ತುಮಕೂರು ಮತ್ತು ಉಡುಪಿ ಜಿಲ್ಲೆಗಳು ಯಾವುದೇ ಹಣ ಪಡೆದಿರಲಿಲ್ಲ. ಕಲಬುರಗಿ (ಶೇಕಡಾ 11.2), ಯಾದಗಿರಿ (ಶೇಕಡಾ 10.89), ಮೈಸೂರು (ಶೇಕಡಾ 7.20) ಅನುಕ್ರಮವಾಗಿ ಶೇಕಡಾ 6.8, ಶೇಕಡಾ 0.89 ಮತ್ತು ಶೇಕಡಾ 0.23ರಷ್ಟು ಮಾತ್ರ ಪಡೆದಿದ್ದವು. ಹೆಚ್ಚಿನ ಡ್ರಾಪ್‌ಔಟ್ ದರಗಳನ್ನು ಹೊಂದಿದ್ದ ಜಿಲ್ಲೆಗಳಿಗೆ ಹೋಲಿಸಿದರೆ ಕಡಿಮೆ ಡ್ರಾಪ್‌ಔಟ್ ದರಗಳನ್ನು ಹೊಂದಿರುವ ಜಿಲ್ಲೆಗಳಿಗೆ ಹೆಚ್ಚಿನ ಹಣವನ್ನು ತಪ್ಪಾಗಿ ಹಂಚಿಕೆ ಮಾಡಿರುವುದು ಶೈಕ್ಷಣಿಕ ಅಸಮಾನತೆಗಳನ್ನು ಉಲ್ಬಣಗೊಳಿಸುತ್ತದೆ ಮತ್ತು ಹಿಂದುಳಿದ ಜಿಲ್ಲೆಗಳ ಮಕ್ಕಳ ಶೈಕ್ಷಣಿಕ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ.

ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿಶೇಷ ತರಬೇತಿಗಳನ್ನು ನಡೆಸಲು ವಾರ್ಷಿಕ ಯೋಜನೆಯಲ್ಲಿ ಜಿಲ್ಲೆಗಳ ಪ್ರಸ್ತಾವನೆಗಳ ಆಧಾರದ ಮೇಲೆ ಜಿಲ್ಲೆಗಳಿಗೆ ಹಣವನ್ನು ನಿಗದಿಪಡಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಮೇ 2023). ಡ್ರಾಪ್‌ಔಟ್‌ಗಳ ಸಂಖ್ಯೆ, ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಇತ್ಯಾದಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮಾನದಂಡವನ್ನು ನಿಧಿಯ ಹಂಚಿಕೆಗೆ ಇಲಾಖೆಯು ಅಭಿವೃದ್ಧಿಪಡಿಸಿರಲಿಲ್ಲ ಎಂಬುದನ್ನು ಉತ್ತರವು ದೃಢಪಡಿಸುತ್ತದೆ.

3.8.2 ಪ್ರಾಥಮಿಕ ಹಂತದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವಯಸ್ಸಿಗೆ ಸೂಕ್ತವಾದ ಪ್ರವೇಶಕ್ಕಾಗಿ ವಿಶೇಷ ತರಬೇತಿ

ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿರುವ ವಿಶೇಷ ತರಬೇತಿ ಸೌಲಭ್ಯವನ್ನು ಸೂಕ್ತ ವಯಸ್ಸಿನ ಗ್ರೇಡ್‌ಗೆ ಸೇರಿಸಿದ ಮಗುವಿಗೆ ಶೈಕ್ಷಣಿಕವಾಗಿ ಮತ್ತು ಭಾವನಾತ್ಮಕವಾಗಿ ಉಳಿದ ಗ್ರೇಡ್‌ಗಳೊಂದಿಗೆ ಸಂಯೋಜಿಸಲು ಯೋಜನೆಯಡಿ ಕಲ್ಪಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಯಸ್ಸಿಗೆ ಸೂಕ್ತವಾದ ತರಬೇತಿಯನ್ನು ಒದಗಿಸಲು ಇಲಾಖೆ ಮತ್ತು ಎಸ್‌ಎಸ್‌ಕೆ ಯಾವುದೇ ಗುರಿಯನ್ನು ನಿಗದಿಪಡಿಸಿರಲಿಲ್ಲ. 2017–18ರಿಂದ 2021–22ರ ಅವಧಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಬೆಂಬಲಿಸುವ ಮತ್ತು ವಯೋಮಾನದ ತರಗತಿಗಳಲ್ಲಿ ಮುಖ್ಯವಾಹಿನಿಗೆ ತರುವ ಕಾರ್ಯಕ್ರಮವಾದ ಚಿಣ್ಣರ ಅಂಗಳ[14] ಅಡಿಯಲ್ಲಿ ಯಾವುದೇ ಪುಸ್ತಕಗಳನ್ನು ಮುದ್ರಿಸಿ ಮತ್ತು ಸರಬರಾಜು ಮಾಡದಿರುವುದನ್ನು ಗಮನಿಸಲಾಯಿತು. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ತರಬೇತಿ ನೀಡಲು ಬಳಸಲಾದ ಪಠ್ಯಕ್ರಮದ ವಿವರಗಳು, ಒದಗಿಸಲಾದ ವಯಸ್ಸಿಗೆ ಸೂಕ್ತವಾದ ವಿಶೇಷ ತರಬೇತಿ ಇತ್ಯಾದಿಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಲಿಲ್ಲ. ಶಾಲೆಯಿಂದ ಹೊರಗುಳಿದ ಮಕ್ಕಳು ಸ್ವೀಕರಿಸುವ ವಯಸ್ಸಿಗೆ ಸೂಕ್ತವಾದ ವಿಶೇಷ ತರಬೇತಿಯ ದತ್ತಾಂಶದ ಅನುಪಸ್ಥಿತಿಯು ಶಾಲೆಗಳಲ್ಲಿ ಅವರ ಪರಿಣಾಮಕಾರಿ ಏಕೀಕರಣ ಮತ್ತು ಮುಂದಿನ ಶೈಕ್ಷಣಿಕ ಅಭಿವೃದ್ಧಿಯ ಮೇಲ್ವಿಚಾರಣೆಯನ್ನು ಕುಂಠಿತಗೊಳಿಸುತ್ತದೆ.

ಶಾಲಾ ಅವಧಿಯಲ್ಲಿ ಮಕ್ಕಳಿಗೆ ಶಾಲಾ ಆವರಣದಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ವಿಶೇಷ ತರಬೇತಿಗಾಗಿ ಬಳಸಲಾಗುವ ಪಠ್ಯಕ್ರಮ, ತರಬೇತಿಗಾಗಿ ಗುರಿಗಳನ್ನು ನಿಗದಿಪಡಿಸುವುದು ಇತ್ಯಾದಿಗಳ ಬಗ್ಗೆ ಉಲ್ಲೇಖಿಸಲಾಗಿಲ್ಲ.

3.8.3 ವಲಸೆ ಮಕ್ಕಳಿಗಾಗಿ ನೀತಿ ಮತ್ತು ಕಾರ್ಯ ಯೋಜನೆ

ವಲಸೆ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು 2019ರ ವಲಸೆ ಮಕ್ಕಳು ಮತ್ತು ವಲಸೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಹಕ್ಕಿನ ಅನುಷ್ಠಾನದ ನೀತಿಯನ್ನು ಶಿಕ್ಷಣ ಇಲಾಖೆಯು ರೂಪಿಸಿತು (ಡಿಸೆಂಬರ್ 2019). ಪ್ರಮುಖ ನೀತಿಗಳು ಮತ್ತು ಅವುಗಳ ಅನುಷ್ಠಾನದ ಸ್ಥಿತಿ ಕೆಳಗಿನಂತಿದೆ:

ಕೋಷ್ಟಕ–3.14: ವಲಸೆ ಮಕ್ಕಳ ಮೇಲಿನ ನೀತಿಯ ಅನುಷ್ಠಾನದ ಸ್ಥಿತಿ

ಮಧ್ಯಸ್ಥಿಕೆ	ವಿವರಣೆ	ಅನುಷ್ಠಾನದ ಸ್ಥಿತಿ
ವಲಸೆ ಮಕ್ಕಳನ್ನು ಪತ್ತೆಹಚ್ಚಲು ಚಲನೆಯ ರಿಜಿಸ್ಟರ್	ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆಯೊಂದಿಗೆ ಚಲನೆಯ ರಿಜಿಸ್ಟರ್ ಅನ್ನು ಡಿಜಿಟೈಜ್ ಮಾಡಿ ಸಂಯೋಜಿಸುವುದು.	ಚಲನೆಯ ರಿಜಿಸ್ಟರ್ ಅನ್ನು ತಯಾರಿಸಿರಲಿಲ್ಲ, ಡಿಜಿಟೈಸ್ ಮಾಡಲಾಗಿಲ್ಲ ಮತ್ತು ಎಸ್‌ಎಟಿಎಸ್ ನೊಂದಿಗೆ ಸಂಯೋಜಿಸಲಾಗಿಲ್ಲ.
ವಲಸೆ ಕಾರ್ಮಿಕರ ನಿರಂತರ ವರದಿ	ಕಾರ್ಮಿಕ ಇಲಾಖೆಯಿಂದ ವಲಸೆ ಕಾರ್ಮಿಕರು ಕೇಂದ್ರೀಕೃತವಾಗಿರುವ ಎಲ್ಲಾ ನಿರ್ಮಾಣ ಕೆಲಸದ ಸ್ಥಳಗಳ ನಿಯಮಿತ ಸಮೀಕ್ಷೆ ಮತ್ತು ಮ್ಯಾಪಿಂಗ್ ನಡೆಸುವುದು	ಕಾರ್ಮಿಕ ಇಲಾಖೆಯು ನಿರ್ಮಾಣ ಸ್ಥಳಗಳಲ್ಲಿ ಸಮೀಕ್ಷೆ ಕೈಗೊಂಡಿರಲಿಲ್ಲ.
ವಿಶೇಷ ಪಠ್ಯಕ್ರಮ ಮತ್ತು ತರಬೇತಿಗಳು	ಪರ್ಯಾಯ ಮತ್ತು ಹೊಂದಿಕೊಳ್ಳುವ ಪಠ್ಯಕ್ರಮದ ತಯಾರಿಕೆ, ಕಾಲೋಚಿತ ವಸತಿ ವಿಶೇಷ ತರಬೇತಿ, ಶಿಕ್ಷಣದ ಮಹತ್ವದ ಕುರಿತು ಪೋಷಕರು ಮತ್ತು ಮಕ್ಕಳನ್ನು ಪ್ರೇರೇಪಿಸುವ ಚಟುವಟಿಕೆಗಳು	ಪ್ರಸ್ತಾವಿತ ಚಟುವಟಿಕೆಗಳನ್ನು ಕೈಗೊಳ್ಳಲಾಗಿಲ್ಲ.

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

[14] ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಚಿನ್ನರ ಅಂಗಳ ಬೇಸಿಗೆ ಕೋರ್ಸ್ ಆಗಿರುತ್ತದೆ.

ನೀತಿಯನ್ನು ಜಾರಿಗೆ ತರಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

3.9 ಸಾರಿಗೆ ಭತ್ಯೆ

ಕೆಆರ್‌ಟಿಇ ನಿಯಮಗಳ ನಿಯಮ 4(5)ರ ಪ್ರಕಾರ, ಡಿಡಿಪಿಐ/ಸ್ಥಳೀಯ ಪ್ರಾಧಿಕಾರದಿಂದ ಗುರುತಿಸಲ್ಪಟ್ಟಿರುವ ನೆರೆಹೊರೆಯ ಪ್ರದೇಶದಲ್ಲಿ ಯಾವುದೇ ಶಾಲೆ ಅಸ್ತಿತ್ವದಲ್ಲಿಲ್ಲದಿರುವ ಸಣ್ಣ ವಾಸಸ್ಥಳಗಳು/ಕುಗ್ರಾಮಗಳು ಅಥವಾ ಇತರ ಯಾವುದೇ ಸ್ಥಳದಿಂದ ಮಕ್ಕಳಿಗೆ ಉಚಿತ ಸಾರಿಗೆಯಂತಹ ಸಾಕಷ್ಟು ವ್ಯವಸ್ಥೆಯನ್ನು ರಾಜ್ಯ ಸರ್ಕಾರವು ಮಾಡಬೇಕು. ಈ ಯೋಜನೆಯು ವಿರಳ ಜನಸಂಖ್ಯೆಯನ್ನು ಹೊಂದಿರುವ ಮತ್ತು ಶಾಲೆಗಳನ್ನು ತೆರೆಯಲು ಕಾರ್ಯಸಾಧ್ಯವಾಗಿರದ ದೂರದ ವಾಸಸ್ಥಳಗಳಲ್ಲಿ ಮಕ್ಕಳಿಗೆ ಸಾರಿಗೆ/ಬೆಂಗಾವಲು ಸೌಲಭ್ಯವನ್ನು ಒದಗಿಸುತ್ತದೆ. ರಾಜ್ಯವು ಅಂತಹ ವಾಸಸ್ಥಳಗಳನ್ನು ಅಧಿಸೂಚಿಸಿ ಆ ವಾಸಸ್ಥಳದಲ್ಲಿ ಈ ಸೌಲಭ್ಯವನ್ನು ಒದಗಿಸುವ ಮಕ್ಕಳ ಸಂಖ್ಯೆಯನ್ನು ಗುರುತಿಸಬೇಕು.

ಸಾರಿಗೆ ಸೌಲಭ್ಯಕ್ಕೆ ಅರ್ಹವಾಗಿರುವ ದೂರದ ವಾಸಸ್ಥಳಗಳನ್ನು ರಾಜ್ಯವು ಇನ್ನೂ ಅಧಿಸೂಚಿಸದಿರುವುದನ್ನು ಗಮನಿಸಲಾಯಿತು. ಸಂಬಂಧಪಟ್ಟ ಜಿಲ್ಲೆಗಳಿಂದ ಬಂದಿರುವ ಪ್ರಸ್ತಾವನೆ ಆಧರಿಸಿ ಹಣ ಮಂಜೂರು ಮಾಡಿರುವುದನ್ನು ಗಮನಿಸಲಾಯಿತು. ಸಮಗ್ರ ಶಿಕ್ಷಾ ಯೋಜನೆಯಡಿ ದೂರದ ವಾಸಸ್ಥಳದ ಮಕ್ಕಳು 2017–18ರಲ್ಲಿ ತಿಂಗಳಿಗೆ ₹300ರ ದರದಲ್ಲಿ ಸಾರಿಗೆ ಭತ್ಯೆಗೆ ಅರ್ಹರಾಗಿದ್ದರು, ಇದನ್ನು 2018–19ನೇ ಸಾಲಿನಿಂದ ಒಂದು ಶೈಕ್ಷಣಿಕ ವರ್ಷಕ್ಕೆ ತಿಂಗಳಿಗೆ ₹600ಕ್ಕೆ 10 ತಿಂಗಳ ಅವಧಿಗೆ ಪರಿಷ್ಕರಿಸಲಾಯಿತು.

ಸಾರಿಗೆ ಭತ್ಯೆಯ ವರ್ಷವಾರು ಹಂಚಿಕೆ ಮತ್ತು ವೆಚ್ಚವನ್ನು **ಕೋಷ್ಟಕ–3.15**ರಲ್ಲಿ ನೀಡಲಾಗಿದೆ:

ಕೋಷ್ಟಕ–3.15: ಸಾರಿಗೆ ಭತ್ಯೆಗಾಗಿ ಹಂಚಿಕೆ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ಪ್ರಸ್ತಾವಿಸಿದ ಮಕ್ಕಳ ಸಂಖ್ಯೆ	ಯೋಜನಾ ಅನುಮೋದನಾ ಮಂಡಳಿಯಿಂದ ಅನುಮೋದಿತವಾದ ಮಕ್ಕಳ ಸಂಖ್ಯೆ	ಹಂಚಿಕೆಯಾದ ಮೊತ್ತ	ವೆಚ್ಚ	ವೆಚ್ಚದ ಶೇಕಡಾವಾರು
2017–18	13,632	13,632	4.09	2.30	56.23
2018–19	9,254	9,254	5.55	1.26	22.70
2019–20	6,944	6,944	4.16	1.77	42.55
2020–21	17,636	17,636	10.58	0.28	2.65
2021–22	18,564	17,636	5.29	0.11	2.08

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಸಾರಿಗೆ ಭತ್ಯೆಗೆ ಮೀಸಲಿಟ್ಟ ಹಣದ ಬಳಕೆಯು ಶೇಕಡಾ 2.08ರಿಂದ 56.23ರ ನಡುವಿನ ವ್ಯಾಪ್ತಿಯಲ್ಲಿದ್ದಿತು ಮತ್ತು ಬಳಕೆಯಾಗದ ಶಿಲ್ಕು ಎಸ್‌ಎಸ್‌ಕೆ ಬಳಿಯಲ್ಲಿ ಉಳಿದಿತ್ತು.

ಜಿಲ್ಲಾವಾರು ವಸತಿ ಮತ್ತು ಸಾರಿಗೆ ಭತ್ಯೆಗಳ ಬಿಡುಗಡೆಯನ್ನು **ಅನುಬಂಧ–3.5**ರಲ್ಲಿ ನೀಡಲಾಗಿದೆ. ರಾಜ್ಯ ಮಟ್ಟದ ದತ್ತಾಂಶದ ವಿಶ್ಲೇಷಣೆಯು 12 ಜಿಲ್ಲೆಗಳು ಶಾಲೆಗಳಿಲ್ಲದ ವಸತಿಗಳನ್ನು 'ಶೂನ್ಯ' ಎಂದು ವರದಿ ಮಾಡಿದ್ದು ಅದರ ಪ್ರಕಾರ ಆ ಜಿಲ್ಲೆಗಳಿಗೆ ಯಾವುದೇ ಸಾರಿಗೆ ಭತ್ಯೆಯನ್ನು ನೀಡಲಾಗಿಲ್ಲ ಎಂಬುದನ್ನು ತೋರಿಸಿತು. ಆದರೆ, ಈ 12 ಜಿಲ್ಲೆಗಳು ಮೂರು ಕಿಲೋಮೀಟರ್ ವ್ಯಾಪ್ತಿಯೊಳಗೆ ಪ್ರಾಥಮಿಕ ಶಾಲೆಗಳಿಲ್ಲದ 346 ವಸತಿ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಲ್ಲದ

1,231 ವಸತಿಗಳನ್ನು ಹೊಂದಿದ್ದವು ಎಂಬುದನ್ನು ಕೆಎಸ್ಆರ್ಎಸ್ಎಸಿ ಒದಗಿಸಿದ ದತ್ತಾಂಶವು ತೋರಿಸಿತು. ಶಾಲೆಗಳಿರದ ವಾಸಸ್ಥಳಗಳ ಬಗ್ಗೆ ಸಾಕಷ್ಟು ದತ್ತಾಂಶಗಳ ಅನುಪಸ್ಥಿತಿಯು ಸಾರಿಗೆ ಭತ್ಯೆಗೆ ಅರ್ಹರಾಗಿರುವ ಮಕ್ಕಳ ಗುರುತಿಸುವಿಕೆ ಮತ್ತು ಅದರ ಬಳಕೆಯ ಮೇಲೆ ಪರಿಣಾಮ ಬೀರಿತು.

ಮಾದರಿ ಜಿಲ್ಲೆಗಳಲ್ಲಿ ಬಿಡುಗಡೆಯಾದ ಸಾರಿಗೆ ಭತ್ಯೆಯ ವಿವರಗಳನ್ನು **ಅನುಬಂಧ–3.6**ರಲ್ಲಿ ನೀಡಲಾಗಿದೆ.

ಆರ್ಟಿಇ ಕಾಯಿದೆಯಡಿ ನಿಗದಿಪಡಿಸಿದ ದೂರದ ಮಿತಿಯೊಳಗೆ ಶಾಲಾ ಸೌಲಭ್ಯವಿಲ್ಲದ ಹಲವಾರು ವಸತಿಗೃಹಗಳು ಇರುವುದರಿಂದ, ಸಾರಿಗೆ ಭತ್ಯೆಗೆ ಮೀಸಲಿಟ್ಟ ಹಣವನ್ನು ಬಳಸದಿರುವುದು ಅವರ ಹಕ್ಕಿನ ಭತ್ಯೆಯನ್ನು ನಿರಾಕರಿಸಿದಂತಾಯಿತು. ಇದು ದೂರದ ಪ್ರದೇಶಗಳಲ್ಲಿನ ಮಕ್ಕಳಿಗೆ ಸಾಕಷ್ಟು ಸಾರಿಗೆ ಬೆಂಬಲ ಸಿಗದಿರುವಲ್ಲಿ ಪರಿಣಮಿಸಿ ಅವರ ಶಿಕ್ಷಣದ ಪ್ರವೇಶದ ಮೇಲೆ ಪರಿಣಾಮ ಬೀರಿತು. ಅಲ್ಲದೆ, ಪ್ರಸ್ತಾವಿತ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯೆಯನ್ನು ಅನುಮೋದಿಸದಿರಲು ಕಾರಣಗಳು ದಾಖಲೆಯಲ್ಲಿ ಇರಲಿಲ್ಲ.

ಹೀಗೆ, ಉತ್ತಮವಾಗಿ ವ್ಯಾಖ್ಯಾನಿಸಲಾದ ಮಾನದಂಡಗಳ ಅನುಪಸ್ಥಿತಿಯಲ್ಲಿ, ಸಾರಿಗೆ ಭತ್ಯೆಯ ಅವಕಾಶ ಮತ್ತು ಬಳಕೆ ಪ್ರತಿ ವರ್ಷ ಜಿಲ್ಲೆಗಳು ಸಲ್ಲಿಸುವ ಪ್ರಸ್ತಾವನೆಗಳ ಮೇಲೆ ಅವಲಂಬಿತವಾಗಿದ್ದವು ಮತ್ತು ಮಕ್ಕಳ ಗುರುತಿಸಲಾದ ಅಗತ್ಯಗಳನ್ನು ಆಧರಿಸಿರಲಿಲ್ಲ.

ಜಿಲ್ಲೆಗಳ ಭೌಗೋಳಿಕ ಪರಿಸ್ಥಿತಿಗಳು ಬದಲಾಗುತ್ತವೆ ಮತ್ತು ದೂರದ ವಾಸಸ್ಥಾನಗಳನ್ನು ವ್ಯಾಖ್ಯಾನಿಸಲು ಒಂದೇ ಸಾಮಾನ್ಯ ಮಾನದಂಡವನ್ನು ನಿಗದಿಪಡಿಸುವುದು ಕಷ್ಟಸಾಧ್ಯ ಎಂದು ಸರ್ಕಾರವು ತಿಳಿಸಿತು (ಮೇ 2023). ಪ್ರಸ್ತುತ ವಸತಿ ಮತ್ತು ಶಾಲೆಯ ನಡುವಿನ ಅಂತರಕ್ಕೆ ಅನುಗುಣವಾಗಿ ಜಿಲ್ಲೆಗಳ ಪ್ರಸ್ತಾವನೆಯನ್ನು ಆಧರಿಸಿ ಹಣವನ್ನು ಹಂಚಿಕೆ ಮಾಡಲಾಗಿದೆ. ದೂರದ ವಾಸಸ್ಥಾನಗಳನ್ನು ವ್ಯಾಖ್ಯಾನಿಸಲು ಮತ್ತು ಅವುಗಳನ್ನು ಅಧಿಸೂಚಿಸಲು ಸೂಚಿಸಲು ಇಲಾಖೆಯು ಇನ್ನೂ ಮಾನದಂಡಗಳನ್ನು ರೂಪಿಸಬೇಕಾಗಿದೆ ಎಂಬುದನ್ನು ಉತ್ತರವು ಖಚಿತಪಡಿಸುತ್ತದೆ.

3.10 ಶಾಲೆಗಳ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು

ಸಮಗ್ರ ಶಿಕ್ಷಾ ಯೋಜನೆಯು ಹೊಸ ಶಾಲೆಗಳ ನಿರ್ಮಾಣ, ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ, ದೊಡ್ಡ ದುರಸ್ತಿ, ಸಣ್ಣ ದುರಸ್ತಿ, ಇತ್ಯಾದಿಗಳನ್ನು ಕೈಗೊಳ್ಳುವ ಮೂಲಕ ಸಾರ್ವಜನಿಕ ವಲಯದ ಶಿಕ್ಷಣ ಮೂಲಸೌಕರ್ಯವನ್ನು ಸುಧಾರಿಸಲು ಪ್ರಸ್ತಾವಿಸಿತು. 2017–18ರಿಂದ 2021–22ರ ಅವಧಿಯಲ್ಲಿ ಯೋಜನೆಯ ಅನುಮೋದನೆ ಮಂಡಳಿಯಿಂದ ಅನುಮೋದಿಸಲ್ಪಟ್ಟ ಹೊಸ ಶಾಲೆಗಳ ನಿರ್ಮಾಣ/ಪ್ರಾಥಮಿಕ ಶಾಲೆಗಳ ಉನ್ನತೀಕರಣದ ಉಪಕ್ರಮಗಳ ಕುರಿತು ಲೆಕ್ಕಪರಿಶೋಧನಾ ವರದಿಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

3.10.1 ಸಿವಿಲ್ ಕಾಮಗಾರಿಗಳು

2017–18ರಿಂದ 2021–22ರ ಅವಧಿಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಯೋಜನೆಯ ಮೂಲಕ ಆಯ್ದ ಎಂಟು ಜಿಲ್ಲೆಗಳ ಡಿಡಿಪಿಐಗಳಿಗೆ ಸರ್ಕಾರವು ₹ 759.18 ಕೋಟಿ ಮೊತ್ತವನ್ನು ಶಾಲೆಗಳಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲು ಮಂಜೂರು ಮಾಡಿತು ಮತ್ತು ಪ್ರತಿಯಾಗಿ ಡಿಡಿಪಿಐ ಕಛೇರಿಯು ಅನುಷ್ಠಾನ ಏಜೆನ್ಸಿಗಳಾದ ಎಸ್ಡಿಎಮ್ಸಿ, ಪಿಆರ್ಇಡಿ, ಪಿಡಬ್ಲ್ಯುಡಿ ಮುಂತಾದವುಗಳಿಗೆ ಹಣವನ್ನು ಬಿಡುಗಡೆ ಮಾಡಿತು. ಲಭ್ಯವಿರುವ ದಾಖಲೆಗಳ ಪ್ರಕಾರ (ಪ್ರಗತಿ ವರದಿ) ಕಾಮಗಾರಿಗಳ ವಿವರಗಳನ್ನು **ಕೋಷ್ಟಕ–3.16** ರಲ್ಲಿ ನೀಡಲಾಗಿದೆ.

ಕೋಷ್ಟಕ–3.16: ಶಾಲೆಗಳ ಸಿವಿಲ್ ಕಾಮಗಾರಿಗಳ ಸ್ಥಿತಿ

(₹ ಕೋಟಿಗಳಲ್ಲಿ)

ವರ್ಷ	ಶಾಲೆಗಳ ಸಂಖ್ಯೆ	ಶಾಲಾ ಕೊಠಡಿಗಳ ಸಂಖ್ಯೆ	ಬಿಡುಗಡೆ ಮಾಡಿದ ಹಣ (₹)	ಭರಿಸಿದ ವೆಚ್ಚ (₹)	ಉಳಿದ ಮೊತ್ತ (₹)	ಪೂರ್ಣಗೊಂಡ ಶಾಲಾ ಕೊಠಡಿಗಳ ಸಂಖ್ಯೆ	ಅಪೂರ್ಣಗೊಂಡ ಶಾಲಾ ಕೊಠಡಿಗಳ ಸಂಖ್ಯೆ	ಬಳಕೆ ಪ್ರಮಾಣ ಪತ್ರವನ್ನು ಸ್ವೀಕರಿಸಿರುವ ಮೊತ್ತ
2017–18	86	137	2.53	2.45	0.08	137	0	0
2018–19	912	1,426	179.99	149.62	30.37	1,286	140	5.2
2019–20	422	843	106.38	82.27	24.11	667	176	1.20
2020–21	2,251	3,539	378.69	298.87	79.82	2,737	802	78.69
2021–22	606	753	91.59	44.07	47.52	53	700	0.13
ಒಟ್ಟು	**4,277**	**6,698**	**759.18**	**577.28**	**181.90**	**4,880**	**1,818**	**85.23**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

2018–20ರಲ್ಲಿ ಪ್ರಾರಂಭವಾದ ಶಾಲಾ ಕೊಠಡಿಗಳ (316) ಕಾಮಗಾರಿಗಳು ಇನ್ನೂ ಪೂರ್ಣಗೊಂಡಿರಲಿಲ್ಲ. ₹577.28 ಕೋಟಿ ವೆಚ್ಚದಲ್ಲಿ ₹85.23 ಕೋಟಿಗೆ ಮಾತ್ರ ಬಳಕೆ ಪ್ರಮಾಣ ಪತ್ರಗಳನ್ನು ಸ್ವೀಕರಿಸಲಾಗಿತ್ತು. ಬಳಕೆ ಪ್ರಮಾಣಪತ್ರಗಳ ಅನುಪಸ್ಥಿತಿಯಲ್ಲಿ ಲೆಕ್ಕಪರಿಶೋಧನೆಯು ವಾಸ್ತವಿಕ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. 2018–2020ರ ನಡುವೆ ಪ್ರಾರಂಭವಾದ ತರಗತಿ ಕೊಠಡಿಗಳನ್ನು ಪೂರ್ಣಗೊಳಿಸಲು ವಿಳಂಬವಾದದ್ದು ತರಗತಿ ಕೊಠಡಿಗಳು ಲಭ್ಯವಿಲ್ಲದಿರುವುದರಲ್ಲಿ ಪರಿಣಮಿಸಿತು. ಇದು ಕಲಿಕೆಯ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಮತ್ತು ಮಕ್ಕಳ ಒಟ್ಟಾರೆ ಶೈಕ್ಷಣಿಕ ಅನುಭವ ಹಾಗೂ ಶೈಕ್ಷಣಿಕ ಪ್ರಗತಿಯ ಮೇಲೆ ಪರಿಣಾಮ ಬೀರುತ್ತದೆ.

ಬಾಕಿ ಮೊತ್ತವನ್ನು ಕಾಮಗಾರಿಗಳನ್ನು ಪೂರ್ಣಗೊಳಿಸಲು ಬಳಸಲಾಗುವುದು ಮತ್ತು ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

3.10.2 ಸಿವಿಲ್ ಕಾಮಗಾರಿಗಳ ಕಳಪೆ ಕಾರ್ಯಗತಗೊಳಿಸುವಿಕೆ

ಇಲಾಖೆಯು ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮುಂತಾದ ಏಜೆನ್ಸಿಗಳ ಮೂಲಕ ವಿವಿಧ ಸಿವಿಲ್ ಕಾಮಗಾರಿಗಳನ್ನು ಠೇವಣಿ ಕೊಡುಗೆ ಕಾಮಗಾರಿಗಳಾಗಿ ಕಾರ್ಯಗತಗೊಳಿಸುತ್ತದೆ. ಈ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಕಾರ್ಯವಿಧಾನವನ್ನು ಸ್ಥಾಪಿಸಬೇಕಿತ್ತು. ಆದರೆ, ಈ ಇಲಾಖೆಗಳು ನಿರ್ವಹಿಸುವ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯವಿಧಾನಗಳು ಅಸ್ತಿತ್ವದಲ್ಲಿರಲಿಲ್ಲ. ತತ್ಪರಿಣಾಮವಾಗಿ **ಪ್ರದರ್ಶಿಕೆ–3.4**ರಲ್ಲಿ ತೋರಿಸಿರುವಂತೆ ರಚಿಸಲಾದ ಮೂಲಸೌಕರ್ಯವು ಕಳಪೆ ಗುಣಮಟ್ಟದ್ದಾಗಿತ್ತು.

ಪ್ರದರ್ಶಿಕೆ–3.4: 2020–21ರ ಅವಧಿಯಲ್ಲಿ ಕೈಗೆತ್ತಿಕೊಂಡ ನಿರ್ಮಾಣದ ಕಳಪೆ ಗುಣಮಟ್ಟ



ಕುಂಬನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಛಾವಣಿಯ ಕಳಪೆ ನಿರ್ಮಾಣ




ತಿಮ್ಮಸಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನೆಲದ ಕಳಪೆ ನಿರ್ಮಾಣ

ಗುಣಮಟ್ಟದ ಮೂಲಸೌಕರ್ಯವನ್ನು ಖಚಿತಪಡಿಸಿಕೊಳ್ಳಲು ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ/ಸಾರ್ವಜನಿಕ ಕಾಮಗಾರಿ ಇಲಾಖೆಗೆ ಕಾಮಗಾರಿಗಳನ್ನು ವಹಿಸಲಾಗಿದೆ ಮತ್ತು ಹಣದ ಬಿಡುಗಡೆಯನ್ನು ಗುಣಮಟ್ಟದ ಲೆಕ್ಕಪರಿಶೋಧನಾ ವರದಿಗಳಿಗೆ ಲಿಂಕ್ ಮಾಡಲಾಗಿದೆ ಹಾಗೂ ಸಿವಿಲ್ ಕಾಮಗಾರಿಗಳಿಗೆ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಬಲಪಡಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

3.10.3 ಶಾಲಾ ಕೊಠಡಿಗಳು

ಕಟ್ಟಡದ ಪರಿಸ್ಥಿತಿಗಳಾದ ಸೋರುವ ತರಗತಿಗಳು, ಅಚ್ಚು ಗೋಡೆಗಳು, ಪ್ಲಾಸ್ಟರ್ ಬೀಳುವ ಛಾವಣಿಗಳು ಇತ್ಯಾದಿಗಳು ಕಲಿಕೆಯ ಪರಿಸರದ ಮೇಲೆ ಋಣಾತ್ಮಕ ಪರಿಣಾಮ ಮತ್ತು ಮಕ್ಕಳ ಕಲಿಕೆಯ ಫಲಿತಾಂಶಗಳ ಮೇಲೆ ಪರಿಣಾಮ ಬೀರುತ್ತವೆ. ಪರೀಕ್ಷಾ–ತನಿಖೆ ನಡೆಸಿದ 128 ಶಾಲೆಗಳಲ್ಲಿ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, **ನಕ್ಷೆ–3.2**ರಲ್ಲಿ ತೋರಿಸಿರುವಂತೆ, ಹಲವಾರು ಸಂದರ್ಭಗಳಲ್ಲಿ ತರಗತಿಗಳು ಅಸಮರ್ಥಕ–ಕಟ್ಟಡದ ಪರಿಸ್ಥಿತಿಗಳಲ್ಲಿ ನಡೆಯುತ್ತಿದ್ದವು.

ನಕ್ಷೆ–3.2: ಶಾಲಾ ಸೌಲಭ್ಯಗಳ ಸ್ಥಿತಿ



ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಕೆಲವು ಛಾಯಾಚಿತ್ರಗಳನ್ನು **ಪ್ರದರ್ಶಿಕೆ–3.5**ರಲ್ಲಿ ನೀಡಲಾಗಿದೆ.

ಪ್ರದರ್ಶಿಕೆ–3.5: ಶಾಲಾ ಕೊಠಡಿಗಳ ಕಳಪೆ ಸ್ಥಿತಿ

	
ಕೊರಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ನೀರು ನುಗ್ಗಿರುವುದು	ಕಾರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಛಾವಣಿಯ ಸ್ಥಿತಿ

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶಾಲಾ ಕೊಠಡಿಗಳ ದುರಸ್ತಿಗಾಗಿ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಮತ್ತು 2022–23ರ ಅವಧಿಯಲ್ಲಿ ₹100 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ ಮತ್ತು ದುರಸ್ತಿ ಕೈಗೊಳ್ಳಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಹಲವು ಶಾಲೆಗಳಲ್ಲಿ ತರಗತಿ ಕೊಠಡಿಗಳು ಕಳಪೆ ಸ್ಥಿತಿಯಲ್ಲಿಯೇ ಮುಂದುವರೆದಿದ್ದವು ಎಂಬುದು ವಾಸ್ತವಾಂಶವಾಗಿದೆ.

3.10.4 ಶೌಚಾಲಯಗಳು

ಆಡಳಿತ ಮಂಡಳಿವಾರು ಶೌಚಾಲಯವಿರದ ಪ್ರಾಥಮಿಕ ಶಾಲೆಗಳ ವಿವರಗಳನ್ನು **ಕೋಷ್ಠಕ–3.17**ರಲ್ಲಿ ನೀಡಲಾಗಿದೆ.

ಕೋಷ್ಠಕ–3.17: ಆಡಳಿತ ಮಂಡಳಿವಾರು ಶೌಚಾಲಯವಿರದ ಪ್ರಾಥಮಿಕ ಶಾಲೆಗಳ ವಿವರಗಳು

ಆಡಳಿತ ಮಂಡಳಿ	ಬಾಲಕರ ಶೌಚಾಲಯವಿಲ್ಲದ ಸಹಶಿಕ್ಷಣ ಮತ್ತು ಬಾಲಕರ ಶಾಲೆಗಳು	ಬಾಲಕಿಯರ ಶೌಚಾಲಯವಿಲ್ಲದ ಸಹಶಿಕ್ಷಣ ಮತ್ತು ಬಾಲಕಿಯರ ಶಾಲೆಗಳು
ಶಿಕ್ಷಣ ಇಲಾಖೆ	2,385	1,307
ಖಾಸಗಿ ಅನುದಾನರಹಿತ	64	64
ಸರ್ಕಾರಿ ಅನುದಾನಿತ	23	27
ಇತರೆ ರಾಜ್ಯ ಸರ್ಕಾರಿ ಶಾಲೆಗಳು	19	24
ಕೇಂದ್ರ ಸರ್ಕಾರದ ಶಾಲೆಗಳು	0	3
ಒಟ್ಟು	**2,491**	**1,426**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

128 ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ, ಏಳು ಶಾಲೆಗಳಲ್ಲಿ ಉಪಯೋಗಿಸಬಹುದಾದ ಶೌಚಾಲಯವಿರಲಿಲ್ಲ ಮತ್ತು 21 ಶಾಲೆಗಳಲ್ಲಿ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು ಲಭ್ಯವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರೀಕ್ಷಾ–ತನಿಖೆ ನಡೆಸಿದ 22 ಶಾಲೆಗಳಲ್ಲಿ ಶೌಚಾಲಯದ ಬಳಿ ಕೈ ತೊಳೆಯುವ ಸೌಲಭ್ಯಗಳು ಲಭ್ಯವಿರಲಿಲ್ಲ. ಇದಲ್ಲದೆ,

ಪ್ರದರ್ಶಿಕೆ–3.6ರಲ್ಲಿ ತೋರಿಸಿರುವಂತೆ ಅನೇಕ ಶಾಲೆಗಳಲ್ಲಿನ ಶೌಚಾಲಯಗಳಲ್ಲಿ ನಿರ್ವಹಣೆಯ ಕೊರತೆ ಕಂಡುಬಂದಿತು.

ಪ್ರದರ್ಶಿಕೆ–3.6: ಶಾಲೆಗಳಲ್ಲಿನ ಶೌಚಾಲಯಗಳ ಕಳಪೆ ಸ್ಥಿತಿ

<table>
<tr><td>  </td><td>  </td></tr>
<tr><td>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಗಳಿಪುರದಲ್ಲಿ ಅನೈರ್ಮಲ್ಯ ಶೌಚಾಲಯ</td><td>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಾರಹಳ್ಳಿಯಲ್ಲಿ ಬಾಗಿಲು ಮುರಿದ ಶೌಚಾಲಯ</td></tr>
<tr><td>  </td><td>  </td></tr>
<tr><td>ಶಿವಮೊಗ್ಗದಲ್ಲಿ ಬಾಗಿಲಿಲ್ಲದ ಶೌಚಾಲಯ</td><td>ಜೋಯಿಡಾದಲ್ಲಿ ಅಶುಚಿಯಾದ ಶೌಚಾಲಯಗಳು</td></tr>
</table>

ಶೌಚಾಲಯ ಸೌಲಭ್ಯಗಳ ಕೊರತೆ ಮತ್ತು ನಿರ್ವಹಣೆಯ ಕೊರತೆಯು ವಿದ್ಯಾರ್ಥಿಗಳ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ ಏಕೆಂದರೆ ಇದು ಅನೈರ್ಮಲ್ಯ ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ ಮತ್ತು ವಿದ್ಯಾರ್ಥಿಗಳ ಘನತೆ ಮತ್ತು ಸೌಕರ್ಯಗಳನ್ನು ರಾಜಿ ಮಾಡಿಕೊಂಡಂತಾಗುತ್ತದೆ.

ಪ್ರತಿ ವರ್ಷ ದುರಸ್ತಿ ಕಾರ್ಯಗಳಿಗೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಎಲ್ಲಾ ಶಾಲೆಗಳಲ್ಲಿ ಉಪಯೋಗಿಸಬಹುದಾದ ಶೌಚಾಲಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾವಿಸಲಾದ ಕ್ರಮಗಳು ಮತ್ತು ಅವುಗಳ ಶುಚಿತ್ವವನ್ನು ಕಾಪಾಡಿಕೊಳ್ಳಲು ನಿಯಮಿತವಾಗಿ ತೆಗೆದುಕೊಂಡ ಕ್ರಮಗಳನ್ನು ಉತ್ತರದಲ್ಲಿ ಉಲ್ಲೇಖಿಸಲಾಗಿಲ್ಲ.

3.10.5 ಉಚಿತ ಪಠ್ಯಪುಸ್ತಕಗಳು

ರಾಜ್ಯ ಸರ್ಕಾರದ ಪಠ್ಯಪುಸ್ತಕಗಳ ಪೂರೈಕೆಯ ಯೋಜನೆಯಡಿಯಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಸಮಯಕ್ಕೆ ಸರಿಯಾಗಿ ಪುಸ್ತಕಗಳ ಪೂರೈಕೆಯನ್ನು ರಾಜ್ಯವು ಖಚಿತಪಡಿಸಿಕೊಳ್ಳಬೇಕು. ಈ ಯೋಜನೆಯು ವಿಜ್ಞಾನ ಮತ್ತು ಗಣಿತಕ್ಕಾಗಿ ಉತ್ತಮ ಗುಣಮಟ್ಟದ ದ್ವಿಭಾಷಾ ಪಠ್ಯಪುಸ್ತಕಗಳು ಮತ್ತು ಬೋಧನಾ–ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವುದನ್ನು ಆಲೋಚಿಸಿತ್ತು. ಇದರಿಂದಾಗಿ ವಿದ್ಯಾರ್ಥಿಗಳು ಈ ಎರಡು ವಿಷಯಗಳ ಬಗ್ಗೆ ತಮ್ಮ ಮನೆ ಭಾಷೆ/ಮಾತೃಭಾಷೆ ಮತ್ತು ಇಂಗ್ಲಿಷ್‌ನಲ್ಲಿ ಯೋಚಿಸಲು ಮತ್ತು ಮಾತನಾಡಲು ಸಾಧ್ಯವಾಗುತ್ತದೆ.

ಕೋಷ್ಟಕ–3.18ರಲ್ಲಿ ನಮೂದಿಸಿರುವಂತೆ ಒಂದರಿಂದ ಆರು ತಿಂಗಳವರೆಗೆ ಪಠ್ಯಪುಸ್ತಕಗಳ ಪೂರೈಕೆಯಲ್ಲಿ ವಿಳಂಬವಾಗಿರುವುದನ್ನು ಗಮನಿಸಲಾಯಿತು.

ಕೋಷ್ಟಕ–3.18: ಪಠ್ಯಪುಸ್ತಕಗಳ ಸರಬರಾಜಿನಲ್ಲಿ ವಿಳಂಬ

ಶೈಕ್ಷಣಿಕ ವರ್ಷ	ಸರಬರಾಜಿನ ಶೇಕಡಾವಾರು					
	ಸಮಯಕ್ಕೆ ಸರಿಯಾಗಿ	ಮೊದಲ ತಿಂಗಳ ನಂತರ ಅಥವಾ ಶೈಕ್ಷಣಿಕ ವರ್ಷದ ಶೇಕಡಾ 10	ಎರಡನೇ ತಿಂಗಳ ನಂತರ ಅಥವಾ ಶೈಕ್ಷಣಿಕ ವರ್ಷದ ಶೇಕಡಾ 20	ಮೂರನೇ ತಿಂಗಳ ನಂತರ ಅಥವಾ ಶೈಕ್ಷಣಿಕ ವರ್ಷದ ಶೇಕಡಾ 30	ನಾಲ್ಕನೇ ತಿಂಗಳ ನಂತರ ಅಥವಾ ಶೈಕ್ಷಣಿಕ ವರ್ಷದ ಶೇಕಡಾ 40	ಐದನೇ ತಿಂಗಳ ನಂತರ ಅಥವಾ ಶೈಕ್ಷಣಿಕ ವರ್ಷದ ಶೇಕಡಾ 50
2017–18	63.04	23.82	7.85	3.33	1.6	0
2018–19	84.98	13.41	1.51	0.10	0	0
2019–20	79.91	20.05	0.04	0	0	0
2020–21	51.69	32.31	14.48	1.5	0.2	0
2021–22	0	0	8.3	36.22	47.25	8.23

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಪಠ್ಯಕ್ರಮವನ್ನು ಹೇಳಿಕೊಡುವ ಮುಖ್ಯ ಮಾಧ್ಯಮವಾಗಿರುವುದರಿಂದ, ಪಠ್ಯಪುಸ್ತಕಗಳ ಪೂರೈಕೆಯಲ್ಲಿನ ವಿಳಂಬವು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಪಠ್ಯಪುಸ್ತಕಗಳ ಅನುಪಸ್ಥಿತಿಯಲ್ಲಿ, ವಿದ್ಯಾರ್ಥಿಗಳು ಪಠ್ಯಕ್ರಮದೊಂದಿಗೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ಇದು ಅಂತಿಮವಾಗಿ ಗುಣಮಟ್ಟ ಶಿಕ್ಷಣದ ವಿತರಣೆಯ ಮೇಲೆ ಪರಿಣಾಮ ಬೀರುತ್ತದೆ.

ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿನ ವಿಳಂಬ, ಮುದ್ರಕರಿಂದ ಪಠ್ಯಪುಸ್ತಕಗಳ ಪೂರೈಕೆಯಲ್ಲಿ ವಿಳಂಬ ಮುಂತಾದವುಗಳನ್ನು ಪಠ್ಯಪುಸ್ತಕಗಳ ಪೂರೈಕೆಯಲ್ಲಿ ವಿಳಂಬಕ್ಕೆ ಇಲಾಖೆಯು ಅಧ್ಯಾರೋಪಿಸಿತು.

3.10.6 ಸಮವಸ್ತ್ರಗಳು

ಸಮವಸ್ತ್ರ ವಿತರಣಾ ಯೋಜನೆಯಡಿ, ಇಲಾಖೆಯು ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರವನ್ನು ಒದಗಿಸುತ್ತದೆ ಮತ್ತು ಶಾಲೆಗೆ ಹೋಗುವ ಮಕ್ಕಳಲ್ಲಿ ಆರ್ಥಿಕ ಅಸಮಾನತೆಯ ಭಾವನೆಯನ್ನು ಕಡಿಮೆ ಮಾಡಲು ಈ ಸಮವಸ್ತ್ರಗಳನ್ನು ಸಮಯೋಚಿತವಾಗಿ ಪೂರೈಸುವುದು ಮುಖ್ಯವಾಗಿದೆ. ಐದು ವರ್ಷಗಳಲ್ಲಿ ಮೂರು ವರ್ಷಗಳು ಹಣ ಬಿಡುಗಡೆಯಾಗಿಲ್ಲದಿರುವುದನ್ನು ಮತ್ತು ಎರಡು ವರ್ಷಗಳಲ್ಲಿ ಎಸ್‌ಡಿಎಂಸಿಗಳಿಗೆ ಹಣ ಬಿಡುಗಡೆ ಮತ್ತು ಸಮವಸ್ತ್ರ ಪೂರೈಕೆಯಲ್ಲಿ ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು **ಕೋಷ್ಟಕ–3.19**ರಲ್ಲಿ ನೀಡಲಾಗಿದೆ.

ಕೋಷ್ಟಕ–3.19: ಸಮವಸ್ತ್ರಗಳ ಸರಬರಾಜಿನಲ್ಲಿ ವಿಳಂಬ

ಶೈಕ್ಷಣಿಕ ವರ್ಷ	ಶಾಲಾ ಎಸ್‌ಡಿಎಮ್‌ಸಿಗಳಿಗೆ ಮೊತ್ತವನ್ನು ವರ್ಗಾಯಿಸಿದ ಸಮಯ	ಖರೀದಿಯ ಮತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರಗಳ ಸರಬರಾಜು ಮಾಡಿದ ಸಮಯ
2017-18	ಮೇ 2017	ಜೂನ್ 2017–ಶೇಕಡಾ 42.93ರಷ್ಟು ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ಒದಗಿಸಲಾಗಿತ್ತು. ಜುಲೈ 2017ರಿಂದ 2018 ಜನವರಿ ಮಧ್ಯದವರೆಗೆ –ಶೇಕಡಾ 29.82 ರಷ್ಟು ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಒದಗಿಸಲಾಗಿತ್ತು (ಒಟ್ಟು ಶೇಕಡಾ 72.75)

ಶೈಕ್ಷಣಿಕ ವರ್ಷ	ಶಾಲಾ ಎಸ್‌ಡಿಎಮ್‌ಸಿಗಳಿಗೆ ಮೊತ್ತವನ್ನು ವರ್ಗಾಯಿಸಿದ ಸಮಯ	ಖರೀದಿಯ ಮತ್ತು ವಿದ್ಯಾರ್ಥಿಗಳಿಗೆ ಸಮವಸ್ತ್ರಗಳ ಸರಬರಾಜು ಮಾಡಿದ ಸಮಯ
		ಉಳಿದ ಶೇಕಡಾ 27.25ರಷ್ಟು ವಿದ್ಯಾರ್ಥಿಗಳಿಗೆ ಎರಡನೇ ಸಮವಸ್ತ್ರವನ್ನು ಒದಗಿಸಿರಲಿಲ್ಲ.
2018–19	ಈ ವರ್ಷದಲ್ಲಿ ಸಮವಸ್ತ್ರಗಳನ್ನು ಒದಗಿಸಿರಲಿಲ್ಲ	
2019–20	ನವೆಂಬರ್ 2019	ಜನವರಿಯಿಂದ ಮಾರ್ಚ್ 2020 (ಶೇಕಡಾ 81.63ರಷ್ಟು ಶಾಲೆಗಳು ಎಸ್‌ಡಿಎಮ್‌ಸಿ) ಜೂನ್‌ನಿಂದ ಜುಲೈ 2021 (ಶೇಕಡಾ 18.37ರಷ್ಟು ಶಾಲೆಗಳು ಎಸ್‌ಡಿಎಮ್‌ಸಿ)
2020–21	ವರ್ಷದಲ್ಲಿ ಸಮವಸ್ತ್ರಗಳನ್ನು ಒದಗಿಸಿರಲಿಲ್ಲ	
2021–22	ವರ್ಷದಲ್ಲಿ ಸಮವಸ್ತ್ರಗಳನ್ನು ಒದಗಿಸಿರಲಿಲ್ಲ	

ಆಧಾರ: ಶಿಕ್ಷಣ ಇಲಾಖೆ

2017–18ರಿಂದ 2021–22ರ ಅವಧಿಯ ಮೂರು ವರ್ಷಗಳಲ್ಲಿ[15] ಸಮವಸ್ತ್ರಗಳನ್ನು ಸರಬರಾಜು ಮಾಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2017–22ರ ಅವಧಿಯಲ್ಲಿ ಮಂಜೂರು ಮಾಡಿದ ₹438.20 ಕೋಟಿಯಲ್ಲಿ ₹174.43 ಕೋಟಿ ಬಳಕೆ ಮಾಡಲಾಗಿದ್ದು, ಉಳಿದ ₹263.77 ಕೋಟಿ ಬಳಕೆ ಮಾಡಿರಲಿಲ್ಲ. ಬಳಕೆಯಾಗದ ಮೊತ್ತವು ಎಸ್‌ಎಸ್‌ಕೆಯ ಕೂಡು ನಿಧಿ ಖಾತೆಯ ಭಾಗವಾಗಿತ್ತು. ಎಸ್‌ಎಸ್‌ಕೆ ಖಾತೆಯಲ್ಲಿ ಸಮವಸ್ತ್ರಗಳಿಗೆ ನಿರ್ದಿಷ್ಟವಾದ ಪ್ರತ್ಯೇಕ ಖಾತೆ/ಆಯವ್ಯಯ ಶೀರ್ಷಿಕೆ ಇರಲಿಲ್ಲ.

ಹಣದ ಕೊರತೆಯಿಂದಾಗಿ ಸಮವಸ್ತ್ರವನ್ನು ಸರಬರಾಜು ಮಾಡಿರಲಿಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ನಿಧಿಗಳು ವಾಸ್ತವವಾಗಿ ಲಭ್ಯವಿದ್ದು ಬಳಕೆಯಾಗದೆ ಉಳಿದಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ತತ್ಪರಿಣಾಮವಾಗಿ, ಸಮವಸ್ತ್ರಗಳ ಪೂರೈಕೆಯಲ್ಲಿನ ವಿಳಂಬ ಮತ್ತು ಅನುಪಸ್ಥಿತಿಯು ವಿದ್ಯಾರ್ಥಿಗಳ ನಡುವಿನ ಅಸಮಾನತೆಗೆ ಕೊಡುಗೆ ನೀಡಿ ಅವರ ಸ್ವಾಭಿಮಾನ ಮತ್ತು ಒಟ್ಟಾರೆ ಶೈಕ್ಷಣಿಕ ಅನುಭವದ ಮೇಲೆ ಪರಿಣಾಮ ಬೀರುತ್ತದೆ.


3.10.7 ಮಧ್ಯಾಹ್ನದ ಊಟ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸೌಲಭ್ಯಗಳು

ಮಧ್ಯಾಹ್ನದ ಊಟದ ಯೋಜನೆ ಮಾರ್ಗಸೂಚಿಗಳ ಕಂಡಿಕೆ–6.15ರ ಪ್ರಕಾರ ಅಡುಗೆಗೆ, ಕುಡಿಯಲು ಮತ್ತು ತೊಳೆಯಲು ಬಳಸುವ ನೀರನ್ನು ರಾಸಾಯನಿಕ ಮತ್ತು ಸೂಕ್ಷ್ಮ ಜೀವವಿಜ್ಞಾನದ ಸೋಂಕಿಗಾಗಿ ಪರೀಕ್ಷಿಸಬೇಕು.

ಪರೀಕ್ಷಾ–ತನಿಖೆ ನಡೆಸಿದ ಎಲ್ಲಾ 128 ಶಾಲೆಗಳಲ್ಲಿ ಮಧ್ಯಾಹ್ನದ ಊಟವನ್ನು ತಯಾರಿಸಲು ಪ್ರತ್ಯೇಕ ಅಡುಗೆಮನೆ ಲಭ್ಯವಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕುಡಿಯುವ ನೀರು, ಕೈ ತೊಳೆಯುವ ಸೌಲಭ್ಯ ಮುಂತಾದ ಮಧ್ಯಾಹ್ನದ ಊಟದ ಸೌಲಭ್ಯಗಳ ಲಭ್ಯತೆಯನ್ನು **ನಕ್ಷೆ–3.3ರಲ್ಲಿ** ನೀಡಲಾಗಿದೆ.

[15] 2018–19, 2020–21 ಮತ್ತು 2021–22

ನಕ್ಷೆ–3.3: ಮಧ್ಯಾಹ್ನದ ಊಟದ ಸೌಲಭ್ಯಗಳ ಲಭ್ಯತೆ



ಕುಡಿಯುವ ನೀರಿನ ಕೊರತೆ, ನೀರು ಮತ್ತು ಕೈ ತೊಳೆಯುವ ಸೌಲಭ್ಯಗಳ ಪರೀಕ್ಷೆ ಮಾಡದಿರುವುದು ನೈರ್ಮಲ್ಯ ಅಭ್ಯಾಸಗಳನ್ನು ರಾಜಿ ಮಾಡಿಕೊಂಡಂತಾಗುತ್ತದೆ, ಇದು ವಿದ್ಯಾರ್ಥಿಗಳ ಒಟ್ಟಾರೆ ಆರೋಗ್ಯ ಮತ್ತು ಶೈಕ್ಷಣಿಕ ಅನುಭವದ ಮೇಲೆ ಪರಿಣಾಮ ಬೀರುತ್ತದೆ.

3.10.8 ವಿದ್ಯುತ್ ಸಂಪರ್ಕವಿಲ್ಲದ ಶಾಲೆಗಳು

ಶಾಲೆಯ ಕಾರ್ಯನಿರ್ವಹಣೆಗೆ ವಿದ್ಯುತ್ ಮೂಲಭೂತ ಅವಶ್ಯಕತೆಯಾಗಿದೆ. ರಾಜ್ಯದ ಶಿಕ್ಷಣ ಇಲಾಖೆಯ 43,194 ಶಾಲೆಗಳ ಪೈಕಿ 393 ಶಾಲೆಗಳಿಗೆ ವಿದ್ಯುತ್ ಸಂಪರ್ಕವೇ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿದ್ಯುತ್ ಸಂಪರ್ಕವಿಲ್ಲದ ಶಾಲೆಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ–3.7**ರಲ್ಲಿ ನೀಡಲಾಗಿದೆ. ಅಲ್ಲದೆ, ಆಯ್ಕೆಯಾದ 128 ಶಾಲೆಗಳಲ್ಲಿ ಎರಡು[16] ಶಾಲೆಗಳಲ್ಲಿ ವಿದ್ಯುತ್ ಸಂಪರ್ಕವಿರಲಿಲ್ಲ.

2023–24ರಲ್ಲಿ ಸಂಯೋಜನೆಯ ಮೂಲಕ ವಿದ್ಯುತ್ ಸಂಪರ್ಕವನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಕ್ರಮವನ್ನು ಪ್ರಾರಂಭಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಶಾಲೆಗಳಲ್ಲಿ ವಿದ್ಯುತ್ ಸಂಪರ್ಕದ ಕೊರತೆಯಿಂದಾಗಿ ಶಾಲೆಗಳು ತಂತ್ರಜ್ಞಾನ ಮತ್ತು ಬೋಧನಾ ಸಾಧನಗಳನ್ನು ಬಳಸಿಕೊಳ್ಳಲಾಗುವುದಿಲ್ಲ ಮತ್ತು ಇದು ಬೋಧನಾ ಚಟುವಟಿಕೆಗಳಿಗೆ ಅಡ್ಡಿಯಾಗುತ್ತದೆ ಎಂಬುದು ವಾಸ್ತವಾಂಶವಾಗಿದೆ.

3.10.9 ಕ್ರೀಡೆಗಳು ಮತ್ತು ದೈಹಿಕ ಶಿಕ್ಷಣ

ಸಮಗ್ರ ಶಿಕ್ಷಾ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಲ್ಲಿ ಆಜೀವ ಕೌಶಲ್ಯ ಮತ್ತು ಕ್ರೀಡಾ ಮನೋಭಾವನೆಯಾಗಿ ದಾರ್ಢ್ಯತೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಒಳಾಂಗಣ ಮತ್ತು ಹೊರಾಂಗಣ ಆಟಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಖರೀದಿಸುವ ವೆಚ್ಚವನ್ನು ಪೂರೈಸಲು ಸರ್ಕಾರಿ ಶಾಲೆಗಳಿಗೆ ವಾರ್ಷಿಕ ಅನುದಾನವನ್ನು ನೀಡಲಾಗುತ್ತದೆ. **ಕೋಷ್ಟಕ–3.20**ರಲ್ಲಿ ತೋರಿಸಿರುವಂತೆ

[16] ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–ಕಟ್ಟೆಗಾಲಿ ಸಿಸಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–ಉಪ್ಪಾರದೊಡ್ಡಿ ರಾಯಚೂರು

ಸಮಗ್ರ ಶಿಕ್ಷಾ ಯೋಜನೆಯಿಂದ ಜಿಲ್ಲೆಗಳಿಗೆ ಬಿಡುಗಡೆಯಾದ ಕ್ರೀಡಾ ಅನುದಾನವನ್ನು ಸಂಪೂರ್ಣವಾಗಿ ಬಳಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೋಷ್ಠಕ–3.20: ಮಾದರಿ ಜಿಲ್ಲೆಗಳಲ್ಲಿ ಕ್ರೀಡಾ ಅನುದಾನದ ಬಳಕೆ

(₹ ಲಕ್ಷಗಳಲ್ಲಿ)

ಜಿಲ್ಲೆ	ಶಾಲೆಗಳ ಸಂಖ್ಯೆ	ಬಿಡುಗಡೆ ಮಾಡಿದ ಮೊತ್ತ	ಬಳಸಿದ ಮೊತ್ತ	ಬಳಕೆಯ ಶೇಕಡಾವಾರು
ಬಾಗಲಕೋಟೆ	288	27.15	0	0.00
ಬೆಂಗಳೂರು ಗ್ರಾಮಾಂತರ	53	4.95	0	0.00
ಬೀದರ್	126	12.05	0	0.00
ಚಾಮರಾಜನಗರ	68	6.45	1.45	22.48
ಮೈಸೂರು	148	14.15	1.4	9.89
ರಾಯಚೂರು	410	34.3	0	0.00
ಶಿವಮೊಗ್ಗ	56	5.25	1.8	34.29
ಉತ್ತರ ಕನ್ನಡ ಸಿರ್ಸಿ	53	4.85	0	0.00

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಶಾಲಾ ಪರಿಸರದಲ್ಲಿ ಕ್ರೀಡೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸಲು ಆಟದ ಮೈದಾನ ಅತ್ಯಗತ್ಯವಾಗಿದೆ. ಇಲಾಖೆ ನೀಡಿರುವ ಮಾಹಿತಿ ಪ್ರಕಾರ 43,194 ಸರ್ಕಾರಿ ಶಾಲೆಗಳ ಪೈಕಿ 19,799 ಶಾಲೆಗಳಲ್ಲಿ (ಶೇಕಡಾ 46) ಆಟದ ಮೈದಾನವಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ 128 ಶಾಲೆಗಳ ಪೈಕಿ 55 ಶಾಲೆಗಳಲ್ಲಿ ಆಟದ ಮೈದಾನ ಲಭ್ಯವಿರಲಿಲ್ಲ. ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಲೆಕ್ಕಪರಿಶೋಧನೆಯಿಂದ ಸಂಕಲಿಸಲಾದ ಆಟದ ಮೈದಾನದ ಲಭ್ಯತೆಯ ಆಡಳಿತ ಮಂಡಳಿವಾರು ವಿವರಗಳನ್ನು **ಕೋಷ್ಠಕ–3.21** ನೀಡಲಾಗಿದೆ.

ಕೋಷ್ಠಕ–3.21: ಆಟದ ಮೈದಾನಗಳಿಲ್ಲದ ಶಾಲೆಗಳು

ಆಡಳಿತ ಮಂಡಳಿ	ಒಟ್ಟು ಶಾಲೆಗಳು	ಆಟದ ಮೈದಾನ ಇಲ್ಲದಿರುವ ಶಾಲೆಗಳು
ಶಿಕ್ಷಣ ಇಲಾಖೆ	43,194	19,799
ಇತರೆ ರಾಜ್ಯ ಸರ್ಕಾರಿ	1,292	336
ಸ್ಥಳೀಯ ಸಂಸ್ಥೆಗಳು	28	13
ಖಾಸಗಿ ಅನುದಾನಿತ	2,876	618
ಖಾಸಗಿ ಅನುದಾನ ರಹಿತ	14,724	2,690
ಕೇಂದ್ರ ಸರ್ಕಾರಿ	98	6

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿ ಶಾಲೆಗಳಿಗೆ ಹಣವನ್ನು ವರ್ಗಾಯಿಸುವಲ್ಲಿ ತಾಂತ್ರಿಕ ದೋಷಗಳಿದ್ದುದರಿಂದ ಶಾಲೆಗಳು ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಸ್ಥಳದ ಕೊರತೆಯಿಂದಾಗಿ ನಗರ ಪ್ರದೇಶಗಳಲ್ಲಿನ ಕೆಲವು ಶಾಲೆಗಳಿಗೆ ಆಟದ ಮೈದಾನಗಳಿಲ್ಲ ಎಂದು ಸರ್ಕಾರವು ತಿಳಿಸಿತು. ಆದರೆ, ಪ್ರಾಥಮಿಕ ಶಾಲೆಗಳಲ್ಲಿ ಆಟದ ಮೈದಾನದ ಅನುಪಸ್ಥಿತಿಯು ಅಗತ್ಯ ದೈಹಿಕ ಚಟುವಟಿಕೆಯಿಂದ ವಿದ್ಯಾರ್ಥಿಗಳನ್ನು ವಂಚಿತಗೊಳಿಸುತ್ತದೆ ಮತ್ತು ಸಮಗ್ರ ಅಭಿವೃದ್ಧಿಗೆ ಅವಕಾಶಗಳನ್ನು ಮಿತಿಗೊಳಿಸುತ್ತದೆ.

3.10.10 ಗ್ರಂಥಾಲಯ ಅನುದಾನವನ್ನು ಬಳಸದಿರುವುದು

ಗ್ರಂಥಾಲಯವು ಶಾಲೆಯ ಅತ್ಯಗತ್ಯ ಭಾಗವಾಗಿದೆ, ಇದು ಕಲಿಕೆಗೆ ಸಂಪನ್ಮೂಲವನ್ನು ಒದಗಿಸುತ್ತದೆಯಲ್ಲದೆ ಸಂತೋಷ, ಮನರಂಜನೆ ಮತ್ತು ಜ್ಞಾನ ಮತ್ತು ಕಲ್ಪನೆಯ ಮತ್ತಷ್ಟು ವೃದ್ಧಿಗಾಗಿ ಓದುವ ಕಲ್ಪನೆಯನ್ನು ಬಲಪಡಿಸುತ್ತದೆ. ಆಯ್ದ ಎಂಟು ಜಿಲ್ಲೆಗಳಿಗೆ ಬಿಡುಗಡೆಯಾದ ಗ್ರಂಥಾಲಯ ಅನುದಾನವನ್ನು **ಕೋಷ್ಠಕ–3.22**ರಲ್ಲಿ ತೋರಿಸಿರುವಂತೆ ಸಂಪೂರ್ಣವಾಗಿ ಬಳಸದಿರುವುದನ್ನು ಗಮನಿಸಲಾಯಿತು.

ಕೋಷ್ಠಕ–3.22: ಮಾದರಿ ಜಿಲ್ಲೆಗಳಲ್ಲಿ ಗ್ರಂಥಾಲಯ ಅನುದಾನಗಳ ಬಳಕೆ

(₹ ಲಕ್ಷಗಳಲ್ಲಿ)

ಜಿಲ್ಲೆ	ಶಾಲೆಗಳ ಸಂಖ್ಯೆ	ಬಿಡುಗಡೆಯಾದ ಅನುದಾನಗಳು	ಬಳಕೆಯಾದ ಅನುದಾನಗಳು	ಬಳಕೆಯ ಶೇಕಡಾವಾರು
ಬಾಗಲಕೋಟೆ	716	56.22	14.40	25.61
ಸಿಸಿ	598	29.90	5.45	18.22
ರಾಯಚೂರು	990	49.60	0	0
ಬೆಂಗಳೂರು ಗ್ರಾಮಾಂತರ	233	11.65	0	0
ಶಿವಮೊಗ್ಗ	890	42.95	11.00	25.61
ಬಳ್ಳಾರಿ	973	75.64	24.1	31.85
ಮೈಸೂರು	1,245	87.07	43.15	49.56
ಚಾಮರಾಜನಗರ	413	26.91	14.2	52.77

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಗ್ರಂಥಾಲಯ ಕೊಠಡಿಯ ಅಲಭ್ಯತೆಯೂ ಇದ್ದಿತು. ಆಡಳಿತ ಮಂಡಳಿವಾರು ಗ್ರಂಥಾಲಯ ಕೊಠಡಿಗಳ ಅಲಭ್ಯತೆಯ ವಿವರಗಳನ್ನು **ಕೋಷ್ಠಕ–3.23**ರಲ್ಲಿ ನೀಡಲಾಗಿದೆ

ಕೋಷ್ಠಕ–3.23: ಆಡಳಿತ ಮಂಡಳಿವಾರು ಗ್ರಂಥಾಲಯ ಕೊಠಡಿಗಳ ಅಲಭ್ಯತೆ

ಆಡಳಿತ ಮಂಡಳಿ	ಒಟ್ಟು ಶಾಲೆಗಳು	ಗ್ರಂಥಾಲಯ ಇಲ್ಲದಿರುವ ಶಾಲೆಗಳು
ಶಿಕ್ಷಣ ಇಲಾಖೆ	43,194	39,709
ಇತರೆ ರಾಜ್ಯ ಸರ್ಕಾರಿ	1,292	162
ಸ್ಥಳೀಯ ಸಂಸ್ಥೆಗಳು	28	15
ಖಾಸಗಿ ಅನುದಾನಿತ	2,876	1,642
ಖಾಸಗಿ ಅನುದಾನ ರಹಿತ	14,724	4,755
ಕೇಂದ್ರ ಸರ್ಕಾರಿ	98	2

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಹೀಗೆ ಶಿಕ್ಷಣ ಇಲಾಖೆ ನಡೆಸುತ್ತಿರುವ ಬಹುತೇಕ ಶಾಲೆಗಳಲ್ಲಿ (ಶೇಕಡಾ 90) ಗ್ರಂಥಾಲಯ ಕೊಠಡಿಗಳು ಲಭ್ಯವಿರಲಿಲ್ಲ. ಗ್ರಂಥಾಲಯ ಕೊಠಡಿಗಳ ಅನುಪಸ್ಥಿತಿ ಮತ್ತು ಪುಸ್ತಕಗಳ ಖರೀದಿಗೆ ಗ್ರಂಥಾಲಯ ಅನುದಾನವನ್ನು ಬಳಸದಿರುವುದು ವಿದ್ಯಾರ್ಥಿಗಳು ತಮ್ಮ ಓದುವ ಹವ್ಯಾಸ ಮತ್ತು ಸ್ವಯಂ ಕಲಿಕಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ವಂಚಿತಗೊಳಿಸಿದಂತಾಯಿತು.

ನಿಧಿ ನಿರ್ವಹಣಾ ವ್ಯವಸ್ಥೆಯಲ್ಲಿ ಶಾಲೆಗಳಿಗೆ ಹಣವನ್ನು ವರ್ಗಾಯಿಸುವಲ್ಲಿ ತಾಂತ್ರಿಕ ದೋಷಗಳಿದ್ದುದರಿಂದ ಶಾಲೆಗಳು ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಪ್ರಾಥಮಿಕ ಶಾಲೆಗಳಲ್ಲಿ ಕೊಠಡಿಗಳು ಲಭ್ಯವಿಲ್ಲದ ಕಾರಣ, ನಿಗದಿತ ಗ್ರಂಥಾಲಯ ಉದ್ದೇಶಕ್ಕಾಗಿ ಕೊಠಡಿಯನ್ನು ಮೀಸಲಿಡಲು ಸಾಧ್ಯವಾಗಲಿಲ್ಲ ಎಂದೂ

ತಿಳಿಸಲಾಯಿತು. ಮಕ್ಕಳಿಗೆ ಪುಸ್ತಕಗಳನ್ನು ಓದಲು ಶಾಲೆಗಳಲ್ಲಿ ಓದುವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ, ಹೀಗಾಗಿ ಅದು ಶಾಲೆಯ ಮಕ್ಕಳಲ್ಲಿ ಓದುವ ಕೌಶಲ್ಯವನ್ನು ಸುಗಮಗೊಳಿಸುತ್ತದೆ. ಆದರೆ, ಪೂರ್ಣ ಪ್ರಮಾಣದ ಗ್ರಂಥಾಲಯಕ್ಕೆ ಹೋಲಿಸಿದರೆ ಓದುವ ಸ್ಥಳಗಳು ವಿದ್ಯಾರ್ಥಿಗಳಿಗೆ ಸೂಕ್ತ ಅಧ್ಯಯನ ಪರಿಸರವನ್ನು ಒದಗಿಸುವುದಿಲ್ಲ.

3.11 ಇಕ್ವಿಟಿ ಮಧ್ಯಸ್ಥಿಕೆಗಳು

ಸಮಾನತೆಯು ಪ್ರಾಥಮಿಕ ಶಿಕ್ಷಣದಲ್ಲಿ ಭಾಗವಹಿಸಲು ಸಮಾಜದ ಎಲ್ಲಾ ವರ್ಗಗಳಿಗೆ ಸಮಾನ ಅವಕಾಶವನ್ನು ಸೂಚಿಸುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಾಗಿ 2030ರ ಕಾರ್ಯಕ್ರಮದಡಿಯಲ್ಲಿ ಹಿಂದುಳಿದ ಮತ್ತು ದುರ್ಬಲ ಮಕ್ಕಳಿಗೆ ಎಲ್ಲಾ ಹಂತದ ಶೈಕ್ಷಣಿಕ ಮತ್ತು ವೃತ್ತಿಪರ ತರಬೇತಿಗೆ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಭಾರತ ಬದ್ಧವಾಗಿದೆ. ಸಮಾನತೆಯ ಫಲಿತಾಂಶಗಳಿಗೆ ಸಂಬಂಧಿಸಿದ ಸೂಚಕಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

3.11.1 ಲಿಂಗ ಸಮಾನತೆ ಸೂಚ್ಯಂಕ

ಲಿಂಗ ಸಮಾನತೆ ಸೂಚ್ಯಂಕ (ಜಿಪಿಐ) ಶಿಕ್ಷಣದಲ್ಲಿನ ಲಿಂಗ ಅಸಮಾನತೆಗಳನ್ನು ನಿರ್ಣಯಿಸಲು ಬಳಸುವ ಅಳತೆಯಾಗಿದೆ. ಜಿಪಿಐ ಮೌಲ್ಯ ಒಂದು ಆಗಿದ್ದರೆ ಅದು ಲಿಂಗ ಸಮಾನತೆಯನ್ನು ಸೂಚಿಸುತ್ತದೆ, ಅಂದರೆ ಪ್ರಾಥಮಿಕ ಶಿಕ್ಷಣದಲ್ಲಿ ಬಾಲಕಿಯರು ಮತ್ತು ಬಾಲಕರ ಸಮಾನ ದಾಖಲಾತಿ ಇದೆ ಎಂಬುದನ್ನು ಸೂಚಿಸುತ್ತದೆ. ಜಿಪಿಐ ಒಂದಕ್ಕಿಂತ ಹೆಚ್ಚಿದ್ದರೆ, ಬಾಲಕರಿಗಿಂತ ಹೆಚ್ಚಿನ ಬಾಲಕಿಯರು ದಾಖಲಾಗಿದ್ದಾರೆ ಎಂದು ಸೂಚಿಸಿ ಬಾಲಕಿಯರಿಗೆ ಪ್ರಯೋಜನವನ್ನು ಸೂಚಿಸುತ್ತದೆ. ವ್ಯತಿರಿಕ್ತವಾಗಿ, ಒಂದಕ್ಕಿಂತ ಕೆಳಗಿನ ಜಿಪಿಐ ಬಾಲಕಿಯರಿಗೆ ಅನಾನುಕೂಲತೆಯನ್ನು ಸೂಚಿಸಿ, ಬಾಲಕರಿಗೆ ಹೋಲಿಸಿದರೆ ಕಡಿಮೆ ಬಾಲಕಿಯರು ದಾಖಲಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಶಿಕ್ಷಣದ ಪ್ರತಿ ಹಂತದಲ್ಲಿ (ಪ್ರಾಥಮಿಕ ಮತ್ತು ಮಾಧ್ಯಮಿಕ) ದಾಖಲಾದ ಬಾಲಕರ ಸಂಖ್ಯೆಯ ಮೂಲಕ ಇದನ್ನು ಬಾಲಕಿಯರ ಸಂಖ್ಯೆಯ ಅಂಶವಾಗಿ ಲೆಕ್ಕಹಾಕಲಾಗುತ್ತದೆ. 2017–22ರ ಅವಧಿಯಲ್ಲಿ ರಾಜ್ಯದ ಕಿರಿಯ ಪ್ರಾಥಮಿಕ ಶಾಲೆಗಳ ಜಿಪಿಐ 0.98ರಿಂದ 0.99ರ ವ್ಯಾಪ್ತಿಯಲ್ಲಿತ್ತು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಜಿಪಿಐ ಒಂದಕ್ಕಿಂತ ಹೆಚ್ಚಾಗಿದ್ದಿತು. ಇದು ರಾಜ್ಯದ ಪ್ರಾಥಮಿಕ ಶಿಕ್ಷಣದ ಪ್ರವೇಶದಲ್ಲಿ ಬಾಲಕ ಮತ್ತು ಬಾಲಕಿಯರ ನಡುವೆ ಯಾವುದೇ ಅಸಮಾನತೆ ಇರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ, ಖಾಸಗಿ ಅನುದಾನರಹಿತ ಶಾಲೆಗಳಲ್ಲಿನ ದಾಖಲಾತಿಯನ್ನು ಆಧರಿಸಿದ ಜಿಪಿಐಯ ವಿಶ್ಲೇಷಣೆಯು **ಕೋಷ್ಟಕ–3.24**ರಲ್ಲಿ ತೋರಿಸಿರುವಂತೆ ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಬಾಲಕಿಯರಿಗಿಂತ ಬಾಲಕರು ದಾಖಲಾಗುವ ಸಾಧ್ಯತೆ ಹೆಚ್ಚು ಎಂದು ತೋರಿಸಿತು.

ಕೋಷ್ಟಕ–3.24: ವಿಭಿನ್ನ ಆಡಳಿತ ಮಂಡಳಿವಾರು ಶಾಲೆಗಳಲ್ಲಿ ಲಿಂಗ ಸಮಾನತೆ ಸೂಚ್ಯಂಕ (ಜಿಪಿಐ)

ಆಡಳಿತ ಮಂಡಳಿ	ಬಾಲಕಿಯರು (ಗ್ರೇಡ್ 1ರಿಂದ 8)	ಬಾಲಕರು (ಗ್ರೇಡ್ 1ರಿಂದ 8)	ಲಿಂಗ ಅನುಪಾತ ಸೂಚಕ
ಸಮಾಜ ಕಲ್ಯಾಣ ಇಲಾಖೆ	2,787	2,235	1.25
ಶಿಕ್ಷಣ ಇಲಾಖೆ	18,46,766	17,95,529	1.03
ಗಿರಿಜನ ಕಲ್ಯಾಣ ಇಲಾಖೆ	9,008	9,395	0.96
ಸರ್ಕಾರಿ ಅನುದಾನಿತ	2,60,336	2,78,231	0.94
ಸ್ಥಳೀಯ ಸಂಸ್ಥೆಗಳು	1,727	1,928	0.90
ಖಾಸಗಿ ಅನುದಾನ ರಹಿತ	6,00,228	7,64,050	0.79

ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ಖಾಸಗಿ ಶಾಲೆಗಳು ಬಾಲಕರ ಶಿಕ್ಷಣಕ್ಕೆ ಆದ್ಯತೆ ನೀಡುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಪಕ್ಷಪಾತವನ್ನು ಪ್ರತಿಬಿಂಬಿಸುವ ವ್ಯತ್ಯಾಸವು ಕಳವಳವನ್ನು ಉಂಟುಮಾಡುತ್ತದೆ. ಲಿಂಗವನ್ನು ಲೆಕ್ಕಿಸದೆ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸರ್ಕಾರಿ ಶಾಲೆಗಳ ಒಟ್ಟಾರೆ ಗುಣಮಟ್ಟವನ್ನು ಸುಧಾರಿಸುವ ಪ್ರಾಮುಖ್ಯತೆಯನ್ನು ಇದು ಮತ್ತಷ್ಟು ಒತ್ತಿಹೇಳುತ್ತದೆ.

ಅಗತ್ಯ ಕ್ರಮಕ್ಕಾಗಿ ಅವಲೋಕನವನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

3.11.2 ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಕೆಜಿಬಿವಿ) ಬಾಲಕಿಯರಿಗಾಗಿ ಹಾಸ್ಟೆಲ್‌ಗಳ ನಿರ್ಮಾಣದಲ್ಲಿ ವಿಳಂಬ

ಇಲಾಖೆಯು 2010–12ರ ಅವಧಿಯಲ್ಲಿ, ಹೆಣ್ಣುಮಕ್ಕಳಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಲು ತಲಾ 100 ವಿದ್ಯಾರ್ಥಿಗಳ ಸಾಮರ್ಥ್ಯ ಹೊಂದಿದ 86 ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು (ಕೆಕೆಜಿಬಿವಿ) ಸ್ಥಾಪಿಸಿತು. 8,600 ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಪ್ರತಿಯಾಗಿ 2017–18ರಲ್ಲಿ 6287 ವಿದ್ಯಾರ್ಥಿಗಳು ದಾಖಲಾಗಿದ್ದು, ನಂತರ 2021–22ರಲ್ಲಿ 5897ಕ್ಕೆ ಇಳಿಕೆಯಾಯಿತು. 86 ಕೆಕೆಜಿಬಿವಿಗಳ ಪೈಕಿ 2009–10ರಿಂದ 2015–16ರ ಅವಧಿಯಲ್ಲಿ 67 ಕೆಕೆಜಿಬಿವಿಗಳ ನಿರ್ಮಾಣಕ್ಕೆ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ₹68.97 ಕೋಟಿ ಅನುದಾನವನ್ನು ಇಲಾಖೆಯು ಬಿಡುಗಡೆ ಮಾಡಿತು. 67 ಹಾಸ್ಟೆಲ್‌ಗಳ ಪೈಕಿ 39 ಹಾಸ್ಟೆಲ್‌ಗಳನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಿದ್ದು, 10 ಹಾಸ್ಟೆಲ್‌ಗಳ ನಿರ್ಮಾಣ ಪ್ರಗತಿಯಲ್ಲಿದ್ದು, 18 ಹಾಸ್ಟೆಲ್‌ಗಳಿಗೆ ಸಂಬಂಧಿಸಿದ ಮೊತ್ತವನ್ನು ಅಧ್ಯರ್ಪಣೆ ಮಾಡಲಾಗಿತ್ತು. ಬಳಕೆ ಮಾಡದ ₹14.67 ಕೋಟಿಯು ಸಾರ್ವಜನಿಕ ಶಿಕ್ಷಣ ಆಯುಕ್ತರ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಉಳಿದಿತ್ತು. ಜನವರಿ 2023ರಲ್ಲಿದ್ದಂತೆ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಕೆಕೆಜಿಬಿವಿಗಳ ನಿರ್ಮಾಣದ ಸ್ಥಿತಿಯನ್ನು **ಕೋಷ್ಠಕ–3.25**ರಲ್ಲಿ ನೀಡಲಾಗಿದೆ.

ಕೋಷ್ಠಕ–3.25: ಜನವರಿ 2023ರಲ್ಲಿದ್ದಂತೆ ಕೆಕೆಜಿಬಿವಿ ಶಾಲೆಗಳ ಭೌತಿಕ ಪ್ರಗತಿಯ ಸ್ಥಿತಿ

ಜಿಲ್ಲೆ	ತಾಲ್ಲೂಕು	ಮಂಜೂರಾದ ಅನುದಾನ (₹ ಲಕ್ಷಗಳಲ್ಲಿ)	ಭೌತಿಕ ಪ್ರಗತಿ
ರಾಯಚೂರು	ದೇವದುರ್ಗ	69.85	ನೆಲಮಹಡಿ ಮತ್ತು ಮೊದಲ ಮಹಡಿ ಕೊಠಡಿಗಳಿಗೆ ಆರ್‌ಸಿಸಿ ಕಾಮಗಾರಿ ಪೂರ್ಣಗೊಂಡಿದೆ ಮತ್ತು ಕೆಲವು ಕೊಠಡಿಗಳಿಗೆ ಪ್ಲಾಸ್ಟರಿಂಗ್ ಪೂರ್ಣಗೊಂಡಿದೆ.
	ಲಿಂಗಸುಗೂರು	69.85	ನೆಲಮಹಡಿ ಆರ್‌ಸಿಸಿ ಕಾಮಗಾರಿ ಪೂರ್ಣಗೊಂಡಿದೆ ಆದರೆ ಪ್ಲಾಸ್ಟರಿಂಗ್ ಮಾಡಿಲ್ಲ. ಮೊದಲ ಮಹಡಿ ಕಾಮಗಾರಿಗಳು ಪ್ರಾರಂಭವಾಗಿಲ್ಲ.
	ಮಾನ್ವಿ	69.85	ಕಟ್ಟಡದ ಕಾಮಗಾರಿಯು ಲಿಂಟಲ್ ಮಟ್ಟದವರೆಗೆ ಮಾತ್ರ ಪೂರ್ಣಗೊಂಡಿದೆ
	ಸಿಂಧನೂರು	69.85	ನೆಲಮಹಡಿ ಕೊಠಡಿಗಳ ಆರ್‌ಸಿಸಿ ಕಾಮಗಾರಿ ಪೂರ್ಣಗೊಂಡಿದೆ. ಮೊದಲ ಮಹಡಿಯ ಆರ್‌ಸಿಸಿ ಕಾಮಗಾರಿ ಇನ್ನೂ ಪೂರ್ಣಗೊಳ್ಳಬೇಕಿದೆ.
ಚಾಮರಾಜ ನಗರ	ಗುಂಡ್ಲುಪೇಟೆ	72.40	ಕಟ್ಟಡದ ಕಾಮಗಾರಿಯು ಛಾವಣಿ ಮಟ್ಟದವರೆಗೆ ಪೂರ್ಣಗೊಂಡಿದೆ
	ಕೊಳ್ಳೇಗಾಲ	72.40	ನಿರ್ಮಾಣವು ಅಂತಿಮ ಹಂತದಲ್ಲಿದೆ

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

414 ನಿವಾಸಿಗಳನ್ನು ಹೊಂದಿರುವ ಈ ವಸತಿ ನಿಲಯಗಳನ್ನು ಬಾಡಿಗೆ ಕಟ್ಟಡಗಳು, ಶಾಲಾ ಆವರಣ ಇತ್ಯಾದಿಗಳಲ್ಲಿ ನಡೆಸಲಾಗುತ್ತಿದ್ದು, ನಿರ್ಮಾಣ ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿದೆ

ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸೀಮಿತ ಸೌಲಭ್ಯಗಳೊಂದಿಗೆ ಬಾಡಿಗೆ ಕಟ್ಟಡಗಳಲ್ಲಿ ತಂಗುವ ವಿದ್ಯಾರ್ಥಿಗಳ ವಾಸ್ತವ್ಯವು ಅವರ ಶೈಕ್ಷಣಿಕ ಅನುಭವ, ಆರೋಗ್ಯ ಮತ್ತು ಒಟ್ಟಾರೆ ಜೀವನದ ಗುಣಮಟ್ಟದ ಮೇಲೆ ಪರಿಣಾಮ ಬೀರಿತ್ತು ಮತ್ತು ಅವರ ಶೈಕ್ಷಣಿಕ ಪ್ರಗತಿಯ ಮೇಲೆ ಪ್ರಭಾವ ಬೀರಿತ್ತು.

ನಿವೇಶನದ ಹಸ್ತಾಂತರದ ವಿಳಂಬದಿಂದಾಗಿ ಕಾರ್ಯಗೊಳಿಸುವಿಕೆಯಲ್ಲಿ ವಿಳಂಬವಾಗಿತ್ತು ಎಂದು ಸರ್ಕಾರವು ತಿಳಿಸಿತು (ಮೇ 2023).

3.12 ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಅಂತರ್ಗತ ಶಿಕ್ಷಣ

ಆರ್‌ಟಿಇ ಕಾಯಿದೆಯ ಸೆಕ್ಷನ್ 3(3) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆ 1995ರ ಅಧ್ಯಾಯ–V ರೊಂದಿಗೆ ಜೊತೆಗೂಡಿ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರವು ಪ್ರತಿ ವಿಕಲಾಂಗ ಮಗುವು ಸೂಕ್ತವಾದ ವಾತಾವರಣದಲ್ಲಿ ಶಿಕ್ಷಣಕ್ಕೆ ಉಚಿತ ಪ್ರವೇಶವನ್ನು ಹೊಂದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಸಾಮಾನ್ಯ ಶಾಲೆಗಳಲ್ಲಿ ವಿಕಲಾಂಗ ವಿದ್ಯಾರ್ಥಿಗಳ ಏಕೀಕರಣವನ್ನು ಒದಗಿಸಲು ಪ್ರಯತ್ನಿಸಬೇಕು ಎಂದು ನಿಗದಿಪಡಿಸುತ್ತದೆ.

3.12.1 ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ರಾಜ್ಯ ಮಟ್ಟದ ನೀತಿ

ಸಮಗ್ರ ಶಿಕ್ಷಾ ಅಭಿಯಾನ ಯೋಜನೆಯಡಿ ಮಾರ್ಗಸೂಚಿಗಳನ್ನು ಅನುಸರಿಸಿ ರಾಜ್ಯವು ಅಂತರ್ಗತ ಶಿಕ್ಷಣ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತದೆ. ಯೋಜನಾ ಮಧ್ಯಸ್ಥಿಕೆಗಳು ವಿಶೇಷ ತರಬೇತಿ, ಮುಕ್ತ ಕಲಿಕಾ ವ್ಯವಸ್ಥೆಯ ಮೂಲಕ ಶಿಕ್ಷಣ, ಮನೆ ಶಿಕ್ಷಣ, ಅಗತ್ಯವಿರುವಲ್ಲೆಲ್ಲಾ ಸಂಚಾರಿ ಬೋಧನೆ, ಪರಿಹಾರ ಬೋಧನೆ, ಸಮುದಾಯ–ಆಧಾರಿತ ಪುನರ್ವಸತಿ (ಸಿಬಿಆರ್) ಮತ್ತು ವೃತ್ತಿಪರ ಶಿಕ್ಷಣವನ್ನು ಬೆಂಬಲಿಸುತ್ತವೆ. ಸಾಮಾನ್ಯ ಶಾಲೆಗಳಲ್ಲಿ ವಿಶೇಷ ಅಗತ್ಯತೆ ಬೇಕಿರುವ ಎಲ್ಲಾ ಮಕ್ಕಳಿಗೆ ಅಂತರ್ಗತ ಶಿಕ್ಷಣವನ್ನು ಒದಗಿಸುವುದು ಮಧ್ಯಸ್ಥಿಕೆಯ ಪ್ರಮುಖ ಉದ್ದೇಶವಾಗಿದೆ.

ವಿಶೇಷ ಅಗತ್ಯತೆ ಬೇಕಿರುವ ಮಕ್ಕಳ ಶಿಕ್ಷಣವನ್ನು ಕುರಿತು ರಾಜ್ಯವು ಕರಡು ನೀತಿಯನ್ನು ಅಭಿವೃದ್ಧಿಪಡಿಸಿದೆ (2013). ಆದರೆ, ನೀತಿಯನ್ನು ಇನ್ನೂ ಅನುಮೋದಿಸಿರಲಿಲ್ಲ. ರಾಜ್ಯದಲ್ಲಿ ವಿಶೇಷ ಅಗತ್ಯತೆ ಬೇಕಿರುವ ಮಕ್ಕಳ ಶಿಕ್ಷಣದ ಕರಡು ನೀತಿಯನ್ನು ಅಂತಿಮಗೊಳಿಸುವಲ್ಲಿನ ವಿಳಂಬವು ಅಂತರ್ಗತ ಶಿಕ್ಷಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಮೇಲೆ ಪರಿಣಾಮ ಬೀರುತ್ತದೆ ಹಾಗೂ ವಿಶೇಷ ಅಗತ್ಯತೆ ಇರುವ ಮಕ್ಕಳನ್ನು ಅಗತ್ಯ ಶೈಕ್ಷಣಿಕ ಅಭಿವೃದ್ಧಿ ಅವಕಾಶಗಳಿಂದ ವಂಚಿತರನ್ನಾಗಿಸುತ್ತದೆ.

ವಿಶೇಷ ಅಗತ್ಯತೆ ಬೇಕಿರುವ ಮಕ್ಕಳ ಶಿಕ್ಷಣದ ಕರಡು ನೀತಿಯನ್ನು ಚರ್ಚೆಯ ನಂತರ ಅಂತಿಮಗೊಳಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023). ಕರಡು ನೀತಿಯನ್ನು ಅಂತಿಮಗೊಳಿಸುವುದನ್ನು ತ್ವರಿತಗೊಳಿಸಿ ಜಾರಿಗೊಳಿಸುವ ಅಗತ್ಯವಿದೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.


3.12.2 ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಪ್ರವರ್ಗ ಸೂಕ್ತ ಮಧ್ಯಸ್ಥಿಕೆಗಳು

ಅಂತರ್ಗತ ಶಿಕ್ಷಣದ ಗುರಿಯು ವಿಶೇಷ ಅಗತ್ಯತೆಗಳು ಬೇಕಿರುವ ಮಕ್ಕಳಿಗೆ ಸಮಾನತೆ ಮತ್ತು ಸೇರ್ಪಡೆಯನ್ನು ಖಚಿತಪಡಿಸಿ ಅವರು ಶಿಕ್ಷಣ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುವುದಾಗಿದೆ. ಆರ್‌ಪಿಡಬ್ಲ್ಯುಡಿ ಕಾಯಿದೆ, 2016 21 ಅಂಗವಿಕಲತೆಗಳನ್ನು ಐದು ವಿಶಾಲ ವಿಭಾಗಗಳಾಗಿ ವರ್ಗೀಕರಿಸಿದೆ: ಕುರುಡುತನ ಅಥವಾ ಕಡಿಮೆ ದೃಷ್ಟಿ, ಕಿವುಡುತನ ಅಥವಾ

ಶ್ರವಣ ದೋಷ, ಬೌದ್ಧಿಕ ಮತ್ತು ಮಾನಸಿಕ ಅಸಮರ್ಥತೆ, ಕಲಿಕೆಯಲ್ಲಿ ಅಸಮರ್ಥತೆ ಮತ್ತು ಚಲನಾ ಅಸಮರ್ಥತೆ. ಯೂನಿಸೆಫ್ ಸಹ ಅಂಗವಿಕಲತೆಗಳನ್ನು ಈ ಐದು ವರ್ಗಗಳಾಗಿ ವಿಂಗಡಿಸುತ್ತದೆ. ಭಾರತವು ಅನುಮೋದಿಸಿದ ಯುಎನ್‌ಸಿಆರ್‌ಪಿಡಿ ಯ 24ನೇ ವಿಧಿಯು ಬ್ರೈಲ್, ಪರ್ಯಾಯ ಸಂವಹನ ವಿಧಾನಗಳು ಮತ್ತು ಸಂಕೇತ ಭಾಷೆಯಂತಹ ಕಲಿಕೆಗೆ ಸಮಂಜಸವಾದ ಬೆಂಬಲವನ್ನು ಕಡ್ಡಾಯಗೊಳಿಸುತ್ತದೆ. ವರ್ಗವಾರು ವಿಶೇಷ ಅಗತ್ಯತೆ ಇರುವ ಮಕ್ಕಳ ಮತ್ತು ಸೂಕ್ತ ಮಧ್ಯಸ್ಥಿಕೆಗಳ ವಿವರಗಳನ್ನು **ಅನುಬಂಧ–3.8**ರಲ್ಲಿ ನೀಡಲಾಗಿದೆ.

ಎಸ್‌ಎಟಿಎಸ್ ದತ್ತಾಂಶದ ಪ್ರಕಾರ ರಾಜ್ಯದಲ್ಲಿ ವಿಶೇಷ ಅಗತ್ಯತೆ ಇರುವ ಮಕ್ಕಳ ವರ್ಗವಾರು ದಾಖಲಾತಿಯನ್ನು **ನಕ್ಷೆ–3.4**ರಲ್ಲಿ ನೀಡಲಾಗಿದೆ.

ನಕ್ಷೆ–3.4: ವರ್ಗವಾರು ವಿಶೇಷ ಅಗತ್ಯತೆ ಇರುವ ಮಕ್ಕಳ ದಾಖಲಾತಿ



ದೈಹಿಕ ವಿಕಲಾಂಗ ಮಕ್ಕಳಿಗಾಗಿ ಇಲಾಖೆಯು ಇಳಿಜಾರುಗಳ ನಿರ್ಮಾಣ, ಅಂಗವಿಕಲ ಸ್ನೇಹಿ ಶೌಚಾಲಯಗಳನ್ನು ಒದಗಿಸುವುದು ಇತ್ಯಾದಿಗಳನ್ನು ಕೈಗೆತ್ತಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ದೃಷ್ಟಿಹೀನತೆ, ಶ್ರವಣ ದೋಷ, ಬೌದ್ಧಿಕ ಮತ್ತು ಮಾನಸಿಕ ಅಸ್ವಸ್ಥತೆಗಳು, ನಿರ್ದಿಷ್ಟ ಕಲಿಕೆಯಲ್ಲಿ ಅಸಮರ್ಥತೆ ಮತ್ತು ದೈಹಿಕ/ಚಲನಾ ಅಸಾಮರ್ಥ್ಯಗಳು ಇತ್ಯಾದಿಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಸೂಕ್ತವಾದ ಪರಿಸರ ನಿರ್ಮಾಣ ಮಧ್ಯಸ್ಥಿಕೆಗಳನ್ನು ಇಲಾಖೆಯು ಅಭಿವೃದ್ಧಿಪಡಿಸಿರಲಿಲ್ಲ. ಲಭ್ಯವಿರುವ ಶಾಲಾ ಸಂಪನ್ಮೂಲಗಳ ಸಮರ್ಥ ಹಂಚಿಕೆಯ ಮೂಲಕ ವಿಕಲಾಂಗ ಮಕ್ಕಳಿಗೆ ಮೂಲಸೌಕರ್ಯ ಮತ್ತು ಇತರ ಸಂಪನ್ಮೂಲಗಳನ್ನು ಒಳಗೊಂಡಂತೆ ಎಲ್ಲಾ ಶಾಲೆಗಳಲ್ಲಿ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವ ಅಗತ್ಯತೆಯ ಕುರಿತು ರಾಜ್ಯವು 10 ವರ್ಷಗಳ ಪ್ರಕ್ಷೇಪಣವನ್ನು ಕೈಗೊಳ್ಳಬೇಕಾಗಿತ್ತು. ಮೂಲಸೌಕರ್ಯ ಅಗತ್ಯತೆಗಳ ಯೋಜನೆಗೆ ಅಂತಿಮ ರೂಪ ನೀಡುವ ಕುರಿತು ಇಲಾಖೆಯು ಇನ್ನೂ ಕ್ರಮ ಕೈಗೊಂಡಿರಲಿಲ್ಲ. ಅಲ್ಲದೆ, ಶಾಲಾ ಶಿಕ್ಷಣದಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಅಂಗವಿಕಲ ವಿದ್ಯಾರ್ಥಿಗಳ ಅಗತ್ಯತೆಗಳ ಮ್ಯಾಪಿಂಗ್‌ಅನ್ನು ರಾಜ್ಯವು ಕೈಗೊಳ್ಳುವ ಅಗತ್ಯವಿದ್ದಿತು. ಆದರೆ, ಯಾವುದೇ ಮ್ಯಾಪಿಂಗ್‌ಅನ್ನು ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳಿಗೆ ಅನುಗುಣವಾಗಿ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಗಮನ ನೀಡದಿರುವುದು ಅವರ ಭಾಗವಹಿಸುವಿಕೆ ಮತ್ತು ಶೈಕ್ಷಣಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ.

ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನಗಳನ್ನು ಅಂಗೀಕರಿಸಿತು ಮತ್ತು ಶಾಲೆಗಳಲ್ಲಿ ಲಭ್ಯವಿರುವ ಹಣದಿಂದ ಮತ್ತು ಸ್ಥಳೀಯ ಸಂಸ್ಥೆಗಳು/ದಾನಿಗಳು/ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಗಳ ಬೆಂಬಲದೊಂದಿಗೆ ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಪೂರೈಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿತು. ಸೆರೆಬ್ರಲ್ ಪಾಲ್ಸಿ, ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ ಇರುವ ಮಕ್ಕಳ ಅಗತ್ಯತೆಗಳ ಮ್ಯಾಪಿಂಗ್ ಮತ್ತು ಪೂರೈಸುವಿಕೆಯನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು ಎಂದೂ ಸಹ ತಿಳಿಸಲಾಯಿತು.

3.12.3 ಚಲನಾ ಅಸಾಮರ್ಥ್ಯವಿರುವ ಮಕ್ಕಳಿಗೆ ತಡೆಯಿಲ್ಲದ ಸೌಲಭ್ಯಗಳು

ಶಾಲೆಗಳು ಸೇರಿದಂತೆ ಸಾರ್ವಜನಿಕ ಕಟ್ಟಡಗಳಲ್ಲಿ ಸಾಮಾನ್ಯರು ಮತ್ತು ಅಂಗವಿಕಲರು ಯಾರ ಸಹಾಯವಿಲ್ಲದೆ ಪ್ರವೇಶ ಪಡೆಯಲು ಮತ್ತು ಮುಕ್ತವಾಗಿ ಕಾರ್ಯನಿರ್ವಹಿಸಲು ಶಾಲೆಗಳು ತಡೆ–ಮುಕ್ತವಾಗಿರಬೇಕು. ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ವಿಶೇಷ ಅಗತ್ಯತೆ ಇರುವ ಮಕ್ಕಳ ಸ್ನೇಹಿ ಮೂಲಸೌಕರ್ಯಗಳ ಲಭ್ಯತೆಯ ಆಡಳಿತ–ಮಂಡಳಿವಾರು ಕೊರತೆಯ ವಿವರಗಳನ್ನು **ಕೋಷ್ಟಕ–3.26**ರಲ್ಲಿ ನೀಡಲಾಗಿದೆ:

ಕೋಷ್ಟಕ–3.26: ಆಡಳಿತ–ಮಂಡಳಿವಾರು ವಿಶೇಷ ಅಗತ್ಯತೆ ಇರುವ ಮಕ್ಕಳ ಮೂಲಸೌಕರ್ಯ ಸೌಲಭ್ಯಗಳು

ಆಡಳಿತ ಮಂಡಳಿ	ಶಾಲೆಗಳ ಸಂಖ್ಯೆ	ವಿಶೇಷ ಅಗತ್ಯತೆ ಇರುವ ಮಕ್ಕಳ ವಿದ್ಯಾರ್ಥಿಗಳು	ರಾಂಪ್‌ಗಳು ಇಲ್ಲದಿರುವುದು	ರೈಲಿಂಗ್ ಇಲ್ಲದಿರುವುದು	ಅಂಗವಿಕಲ ಸ್ನೇಹಿ ಬಾಲಕರ ಶೌಚಾಲಯ ಇಲ್ಲದಿರುವುದು	ಅಂಗವಿಕಲ ಸ್ನೇಹಿ ಬಾಲಕಿಯರ ಶೌಚಾಲಯ ಇಲ್ಲದಿರುವುದು
ಶಿಕ್ಷಣ ಇಲಾಖೆ	43,194	58,372	2,436	2,322	18,694	19,158
ಇತರೆ ರಾಜ್ಯ ಸರ್ಕಾರಿ	1,292	1,331	229	38	377	362
ಸ್ಥಳೀಯ ಸಂಸ್ಥೆಗಳು	28	37	4	0	10	11
ಅನುದಾನಿತ ಶಾಲೆಗಳು	2,876	6,214	536	238	1,098	1,110
ಅನುದಾನ–ರಹಿತ ಶಾಲೆಗಳು	14,724	10,611	1,491	358	2,040	2,061
ಕೇಂದ್ರ ಸರ್ಕಾರಿ	98	294	8	6	16	17

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಹೀಗಾಗಿ, ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳು ರ್ಯಾಂಪ್‌ಗಳು, ಅಂಗವಿಕಲ–ಸ್ನೇಹಿ ಶೌಚಾಲಯಗಳು ಮುಂತಾದ ಮೂಲಸೌಕರ್ಯಗಳಿಲ್ಲದೆ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಅಧ್ಯಯನ ಮಾಡುತ್ತಿದ್ದರು. ಬಹುತೇಕ ಶಾಲೆಗಳು (ಶೇಕಡಾ 94) ರ್ಯಾಂಪ್‌ಗಳನ್ನು ಒದಗಿಸಿದ್ದರೆ, ಶೇಕಡಾ 64ರಷ್ಟು ಶಾಲೆಗಳು ಮಾತ್ರ ಅಂಗವಿಕಲ–ಸ್ನೇಹಿ ಶೌಚಾಲಯಗಳನ್ನು ಹೊಂದಿದ್ದವು. ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಲೆಕ್ಕಪರಿಶೋಧನೆಯು ಅಂತಹ ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸಿದಾಗ ಅದು ಮೇಲಿನ ಲೆಕ್ಕಪರಿಶೋಧನೆಯ ಶೋಧನೆಯನ್ನು ದೃಢಪಡಿಸಿತು. ಪರೀಕ್ಷಾ–ತನಿಖೆ ನಡೆಸಿದ 128ರಲ್ಲಿ 22 ಶಾಲೆಗಳಲ್ಲಿ ಮಾತ್ರ ಅಂಗವಿಕಲ–ಸ್ನೇಹಿ ಶೌಚಾಲಯಗಳು ಲಭ್ಯವಿದ್ದವು. 106 ಶಾಲೆಗಳಲ್ಲಿ ರ್ಯಾಂಪ್‌ಗಳು ಲಭ್ಯವಿದ್ದವು. ಆದರೆ, 38 ಶಾಲೆಗಳಲ್ಲಿ ಕಟಕಟೆ ಕಂಬಗಳು ಇರಲಿಲ್ಲ.

ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿ ತಪಾಸಣೆಯ ಸಮಯದಲ್ಲಿ ಗಮನಿಸಿದ ರ್ಯಾಂಪ್‌ಗಳ ಕಳಪೆ ಸ್ಥಿತಿಯ ಛಾಯಾಚಿತ್ರಗಳನ್ನು **ಪ್ರದರ್ಶಿಕೆ–3.7**ರಲ್ಲಿ ನೀಡಲಾಗಿದೆ.

ಪ್ರದರ್ಶಿಕೆ–3.7: ಶಾಲೆಗಳಲ್ಲಿನ ರ್ಯಾಂಪ್‌ಗಳ ಕಳಪೆ ಸ್ಥಿತಿ

<table>
<tr><td>  </td><td> 
</td></tr>
<tr><td>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೇಲಿಂಗ್‌ಗಳಲ್ಲಿದ ರ್ಯಾಂಪ್</td><td>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಳಸಲು ಯೋಗ್ಯವಲ್ಲದ ರ್ಯಾಂಪ್</td></tr>
<tr><td>  </td><td> 
</td></tr>
<tr><td>ಕೊರಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರವೇಶಸಾಧ್ಯವಿಲ್ಲದ ರ್ಯಾಂಪ್</td><td>ಮುಗಳಿಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ರ್ಯಾಂಪ್‌ನ ಕಳಪೆ ಸ್ಥಿತಿ</td></tr>
</table>

ಪೋಷಕ ಮೂಲಸೌಕರ್ಯಗಳ ಕೊರತೆಯು ಶಾಲಾ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸುವ ವಿಶೇಷ ಅಗತ್ಯತೆ ಇರುವ ಮಕ್ಕಳ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅದು ಅಂತಿಮವಾಗಿ ಅವರ ಶೈಕ್ಷಣಿಕ ಪ್ರಗತಿಯ ಮೇಲೆ ಪರಿಣಾಮ ಬೀರುತ್ತದೆ.

ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ (ಖಾಸಗಿ, ಅನುದಾನಿತ ಮತ್ತು ಇತರ ನಿರ್ವಹಣಾ ಶಾಲೆಗಳು) ತಡೆರಹಿತ ವಾತಾವರಣವನ್ನು ಹೊಂದಲು ನಿರ್ದೇಶಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

3.13 ವಿಶೇಷ ಅಗತ್ಯತೆ ಇರುವ ಮಕ್ಕಳ ಮಧ್ಯಸ್ಥಿಕೆಗಳಿಗೆ ನಿಧಿಯ ಬಳಕೆ

ವಿಶೇಷ ಅಗತ್ಯತೆ ಇರುವ ಮಕ್ಕಳಿಗಾಗಿ ನಿಧಿಯ ಬಿಡುಗಡೆಗಳು ಮತ್ತು 2017–18ರಿಂದ 2021–22ರ ಅವಧಿಯಲ್ಲಿ ಈ ಚಟುವಟಿಕೆಗಳಿಗೆ ವೆಚ್ಚವನ್ನು **ಕೋಷ್ಟಕ–3.27**ರಲ್ಲಿ ನೀಡಲಾಗಿದೆ.

ಕೋಷ್ಟಕ–3.27: ಬಿಡುಗಡೆಯಾದ ಮತ್ತು ವೆಚ್ಚ ಮಾಡಿದ ಮೊತ್ತ (ವಿಶೇಷ ಅಗತ್ಯತೆ ಇರುವ ಮಕ್ಕಳ ಮಧ್ಯಸ್ಥಿಕೆಗಳು)

(₹ ಕೋಟಿಗಳಲ್ಲಿ)


ವರ್ಷ	ಬಿಡುಗಡೆ	ವೆಚ್ಚ
2017–18	7.88	6.68
2018–19	26.90	23.98
2019–20	32.09	15.87
2020–21	30.27	11.86

ವರ್ಷ	ಬಿಡುಗಡೆ	ವೆಚ್ಚ
2021–22	23.38	16.32
ಒಟ್ಟು	**120.52**	**74.71**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

2017–18ರಿಂದ 2021–22ರ ಅವಧಿಯಲ್ಲಿ ಬಿಡುಗಡೆಯಾದ ₹120.52 ಕೋಟಿಯಲ್ಲಿ ₹74.71 ಕೋಟಿಯನ್ನು (ಶೇಕಡಾ 62) ಬಳಸಲಾಗಿತ್ತು. ಪರಿಸರ ನಿರ್ಮಾಣ ಕಾರ್ಯಕ್ರಮಗಳು, ಓದುಗರ ಭತ್ಯೆಗಳು, ವಿಶೇಷ ಶಿಕ್ಷಕರಿಗೆ ಸೇವಾ ತರಬೇತಿ ಇತ್ಯಾದಿಗಳಿಗೆ ಬಿಡುಗಡೆಯಾದ ಮೊತ್ತವು ಸಂಪೂರ್ಣವಾಗಿ ಬಳಕೆಯಾಗಿರಲಿಲ್ಲ ಮತ್ತು ಎಸ್ಎಸ್ಕೆ ಬಳಿ ಉಳಿದಿತ್ತು ಎಂಬುದನ್ನು ಕೋಷ್ಟಕದಿಂದ ಗಮನಿಸಬಹುದು. ಘಟಕ–ವಾರು ಬಿಡುಗಡೆಗಳು ಮತ್ತು ವೆಚ್ಚವನ್ನು **ನಕ್ಷೆ–3.5**ರಲ್ಲಿ ನೀಡಲಾಗಿದೆ.

ನಕ್ಷೆ–3.5: ಘಟಕವಾರು ಬಿಡುಗಡೆಗಳು ಮತ್ತು ವೆಚ್ಚ



ಬಳಕೆಯಲ್ಲಿನ ಕೊರತೆಯು, ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ, ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ಅನುಷ್ಠಾನದ ಮೇಲೆ ಪರಿಣಾಮ ಬೀರಿತು.

3.13.1 ವಿಶೇಷ ಅಗತ್ಯತೆ ಇರುವ ಮಕ್ಕಳ ಗುರುತಿಸುವಿಕೆ

ಸಮಗ್ರ ಶಿಕ್ಷಣ ಚೌಕಟ್ಟು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳ ಪ್ರಕಾರ, ವಿಶೇಷ ಅಗತ್ಯವಿರುವ ಮಕ್ಕಳನ್ನು ಮನೆಮನೆಯ ಸಮೀಕ್ಷೆಯಿಂದ ಗುರುತಿಸಬೇಕು ಮತ್ತು, ವಿಶೇಷ ಅಗತ್ಯವಿರುವ ಪ್ರತಿ ಮಗುವನ್ನು ಅಗತ್ಯವಿರುವ ಬೆಂಬಲ ಸೇವೆಗಳೊಂದಿಗೆ ಸಾಧ್ಯವಾದಷ್ಟು ಸಾಮಾನ್ಯ ಶಾಲೆಗಳಲ್ಲಿ ಪ್ರವೇಶ ಕೊಡಿಸಬೇಕು.

ಕೋಷ್ಟಕ–3.28: ಗುರುತಿಸಲ್ಪಟ್ಟ ಮತ್ತು ದಾಖಲಾತಿಯಾದ ವಿಶೇಷ ಅಗತ್ಯತೆ ಇರುವ ಮಕ್ಕಳು

ವರ್ಷ	ಸಾಮಾನ್ಯ ಶಾಲೆಗಳಲ್ಲಿ ನೋಂದಾಯಿತರಾದ ವಿಶೇಷ ಅಗತ್ಯತೆ ಇರುವ ಮಕ್ಕಳು (1ರಿಂದ 8)		
	ಬಾಲಕರು	ಬಾಲಕಿಯರು	ಒಟ್ಟು
2018–19	33,566	26,415	59,981
2019–20	37,439	29,448	66,887

ವರ್ಷ	ಸಾಮಾನ್ಯ ಶಾಲೆಗಳಲ್ಲಿ ನೋಂದಾಯಿತರಾದ ವಿಶೇಷ ಅಗತ್ಯತೆ ಇರುವ ಮಕ್ಕಳು (1ರಿಂದ 8)		
	ಬಾಲಕರು	ಬಾಲಕಿಯರು	ಒಟ್ಟು
2020–21	33,594	26,056	59,650
2021–22	33,391	24,981	58,372

ಆಧಾರ: ಶಿಕ್ಷಣ ಇಲಾಖೆ

ವಿಶೇಷ ಅಗತ್ಯತೆ ಇರುವ ಮಕ್ಕಳನ್ನು ಗುರುತಿಸಲು 2018–22ರ ಅವಧಿಯಲ್ಲಿ ಮನೆಮನೆಯ ಯಾವುದೇ ಸಮೀಕ್ಷೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಶಾಲೆಗಳಲ್ಲಿ ದಾಖಲಾದ ವಿಶೇಷ ಅಗತ್ಯತೆ ಇರುವ ಮಕ್ಕಳ ಸಂಖ್ಯೆಯನ್ನು ಇಲಾಖೆಯು ಗುರುತಿಸಿದ ವಿಶೇಷ ಅಗತ್ಯತೆ ಇರುವ ಮಕ್ಕಳ ಸಂಖ್ಯೆಯೆಂದು ಬಳಸುತ್ತಿದೆ. ಆದರೆ, ಸಮಗ್ರ ಮಾಹಿತಿಯ ಅನುಪಸ್ಥಿತಿಯಲ್ಲಿ, ಶಾಲೆಗಳಲ್ಲಿ ಎಂದಿಗೂ ದಾಖಲಾತಿಯಾಗದ ವಿಶೇಷ ಅಗತ್ಯತೆ ಇರುವ ಮಕ್ಕಳ ಸಂಖ್ಯೆಯನ್ನು ಕಂಡುಹಿಡಿಯಲಾಗಲಿಲ್ಲ. ಮನೆಮನೆಯ ಸಮೀಕ್ಷೆಯ ಕೊರತೆಯು ವಿಶೇಷ ಅಗತ್ಯತೆ ಇರುವ ಮಕ್ಕಳನ್ನು ಶಿಕ್ಷಣದಿಂದ ಹೊರಗಿಡುವಲ್ಲಿ ಪರಿಣಮಿಸಿ ಅವರ ಶೈಕ್ಷಣಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರಿತು.

ಮುಂದಿನ ಚಟುವಟಿಕೆಗಳಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ನಡೆಸಿದ ಸಮೀಕ್ಷೆಯ ದತ್ತಾಂಶವನ್ನು ಸಂಗ್ರಹಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

3.13.2 ಸಾಧನಗಳು ಮತ್ತು ಉಪಕರಣಗಳ ಪೂರೈಕೆ

ಸಮಗ್ರ ಶಿಕ್ಷಾ ಮಾರ್ಗಸೂಚಿಗಳ ಕಂಡಿಕೆ–9.4.1ರ ಪ್ರಕಾರ, ರಾಜ್ಯವು ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳ ಅಗತ್ಯತೆಗಳ ಮ್ಯಾಪಿಂಗ್‌ಅನ್ನು ಕೈಗೊಳ್ಳಬೇಕಾಗಿತ್ತು ಮತ್ತು ಸಾಧನ ಮತ್ತು ಉಪಕರಣಗಳನ್ನು[17] ಸರಬರಾಜು ಮಾಡಬೇಕಾಗಿತ್ತು. ಆದರೆ 2017–18 ಮತ್ತು 2021ರ ಅವಧಿಯಲ್ಲಿ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳಿಗೆ ಯಾವುದೇ ಸಾಧನ ಮತ್ತು ಉಪಕರಣಗಳನ್ನು ಸರಬರಾಜು ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು **ಕೋಷ್ಟಕ–3.29ರಲ್ಲಿ** ನೀಡಲಾಗಿದೆ.

ಕೋಷ್ಟಕ–3.29: ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿಗಳಿಗೆ ಸಾಧನಗಳ ಮತ್ತು ಉಪಕರಣಗಳ ಪೂರೈಕೆ

ಕ್ರ.ಸಂ.	ವರ್ಗ	ವಿಶೇಷ ಅಗತ್ಯತೆ ಇರುವ ಮಕ್ಕಳ ಒಟ್ಟು ಸಂಖ್ಯೆ					ಸಾಧನಗಳು ಮತ್ತು ಉಪಕರಣಗಳನ್ನು ಒದಗಿಸಲಾದ ಮಕ್ಕಳ ಸಂಖ್ಯೆ
		2017–18	2018–19	2019–20	2020–21	2021–22	2017ರಿಂದ 2022
1	ಕುರುಡುತನ	2,516	844	1,153	813	890	ಶೂನ್ಯ
2	ಕಡಿಮೆ ದೃಷ್ಟಿ	9,915	6,632	7,371	5,827	5,302	
3	ಶ್ರವಣ ದೋಷ (ಕಿವುಡ ಮತ್ತು ಶ್ರವಣ ದೋಷವುಳ್ಳವರು)	5,003	4,055	4,448	4,169	4,297	
4	ಮಾತು ಮತ್ತು ಭಾಷಾ ಅಸಾಮರ್ಥ್ಯ	7,992	7,308	8,154	7,658	7,814	
5	ಚಲನಾ ಅಸಾಮರ್ಥ್ಯ	14,289	11,278	12,136	11,724	11,394	
6	ಮಾನಸಿಕ ಅಸ್ವಸ್ಥತೆ	13,325	1,726	2,961	2,869	2,634	
7	ನಿರ್ದಿಷ್ಟ ಕಲಿಕಾ ಅಸಾಮರ್ಥ್ಯ	4,681	1,916	2,330	1,783	1,553	

[17] ಅಲ್ಪ ದೃಷ್ಟಿ ಸಾಧನಗಳು, ವರ್ಧಕ ಸಾಧನಗಳು, ಲೈಟ್–ಫಿಲ್ಟರಿಂಗ್ ಲೆನ್ಸ್ ಗಳು, ಬ್ರೈಲ್ ಸೂಚನೆಗಳು, ಬ್ರೈಲ್ ಡಿಸ್ಪ್ಲೇಗಳು ಮತ್ತು ನೋಟ್ ಟೇಕರ್ ಗಳು, ಸ್ಕ್ರೀನ್ ರೀಡರ್ ಸಾಫ್ಟ್ ವೇರ್, ಶ್ರವಣ ಸಾಧನಗಳು, ವೈಯಕ್ತಿಕ ಶ್ರವಣ ಸಾಧನಗಳು ಕಾಕ್ಲಿಯರ್ ಇಂಪ್ಲಾಂಟ್ ಗಳು, ಸಹಾಯಕ ಆಲಿಸುವ ಸಾಧನಗಳು, ಎಫ್ ಎಂ ವ್ಯವಸ್ಥೆಗಳು, ಪದಗಳ ವ್ಯವಸ್ಥೆಗಳ ಬಳಕೆ ಲಿಖಿತ ಕಾರ್ಯಯೋಜನೆಗಳಿಗಾಗಿ ಪ್ರೊಸೆಸರ್, ಆಡಿಯೋ ಪುಸ್ತಕಗಳು, ಅಡಾಪ್ಟಿವ್ ಟೆಕ್ನಾಲಜಿ, ಟೆಕ್ಸ್ಟ್–ಟು–ಸ್ಪೀಚ್ ಸಾಫ್ಟ್ ವೇರ್, ಸ್ಪೆಲ್ ಚೆಕ್ ಮತ್ತು ವ್ಯಾಕರಣ ಚೆಕ್ ಸಾಫ್ಟ್ ವೇರ್, ಇತ್ಯಾದಿ.

ಕ್ರ. ಸಂ.	ವರ್ಗ	ವಿಶೇಷ ಅಗತ್ಯತೆ ಇರುವ ಮಕ್ಕಳ ಒಟ್ಟು ಸಂಖ್ಯೆ					ಸಾಧನಗಳು ಮತ್ತು ಉಪಕರಣಗಳನ್ನು ಒದಗಿಸಲಾದ ಮಕ್ಕಳ ಸಂಖ್ಯೆ
		2017–18	2018–19	2019–20	2020–21	2021–22	2017ರಿಂದ 2022
8	ಸೆರೆಬ್ರಲ್ ಪಾಲ್ಸಿ	1,380	1,361	1,516	1,493	1,549	
9	ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್	775	297	342	299	339	
10	ಕಿವುಡತನ, ಕುರುಡು ಸೇರಿದಂತೆ ಬಹು ಅಂಗವೈಕಲ್ಯ	9,897	9,161	10,178	8,540	8,379	
11	ಕುಷ್ಠರೋಗ ವಾಸಿಯಾದವರು	–	37	22	44	35	
12	ಕುಬ್ಜತನ	–	378	401	416	425	
13	ಬೌದ್ಧಿಕ ಅಸಾಮರ್ಥ್ಯ	–	13,079	13,541	12,208	11,981	
14	ಸ್ನಾಯು ಕ್ಷೀಣತೆ	–	837	969	790	768	
15	ದೀರ್ಘಕಾಲದ ನರ ಕಾಯಿಲೆ	–	226	293	231	232	
16	ಮಲ್ಟಿಪಲ್ ಸ್ಕಿರೋಸಿಸ್	–	463	615	525	536	
17	ಥಲಸ್ಸೆಮಿಯಾ	–	76	90	79	99	
18	ಹಿಮೋಫಿಲಿಯಾ	–	61	71	69	63	
19	ಕುಡಗೋಲು ಕಣ ರೋಗ	–	44	55	31	26	
20	ಆಸಿಡ್ ದಾಳಿಗೆ ಒಳಗಾದವರು	–	24	24	20	17	
21	ಪಾರ್ಕಿನ್ಸನ್ ಕಾಯಿಲೆ	–	178	207	62	39	
	ಒಟ್ಟು	**69,773**	**59,981**	**66,887**	**59,650**	**58,372**	

ಆಧಾರ: ಸಮಗ್ರ ಶಿಕ್ಷಣ ಕರ್ನಾಟಕ ಒದಗಿಸಿದ ಮಾಹಿತಿ

2019–20 ಮತ್ತು 2020–21ರ ಅವಧಿಯಲ್ಲಿ ಬಿಡುಗಡೆಯಾದ ತಲಾ ₹4.00 ಕೋಟಿ ಹಣವನ್ನು ಬಳಕೆ ಮಾಡಿರಲಿಲ್ಲ. ಒಂದು ಮಾದರಿ ಶಾಲೆಯಲ್ಲಿ ಇಬ್ಬರು ಅಂಧ ಮಕ್ಕಳಿಗೆ ಯಾವುದೇ ನೆರವು ನೀಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2018–19 ಮತ್ತು 2019–20ರ ಅವಧಿಯಲ್ಲಿ ಚಟುವಟಿಕೆಯನ್ನು ನಡೆಸಲು ಸಾಧ್ಯವಾಗಲಿಲ್ಲ ಮತ್ತು 2020–21 ಮತ್ತು 2021–22ರ ಅವಧಿಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಮೌಲ್ಯಮಾಪನ ಶಿಬಿರವನ್ನು ನಡೆಸಲಾಗಲಿಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಮೌಲ್ಯಮಾಪನ ಶಿಬಿರಗಳನ್ನು ನಡೆಸದಿರುವುದು ಮತ್ತು ನೆರವು ಮತ್ತು ಉಪಕರಣಗಳನ್ನು ಒದಗಿಸದಿರುವುದು ವಿಶೇಷ ಅಗತ್ಯತೆ ಇರುವ ಮಕ್ಕಳನ್ನು ಪ್ರಸ್ತಾವಿತ ಬೆಂಬಲದಿಂದ ವಂಚಿತಗೊಳಿಸಿತ್ತು ಎಂಬುದು ವಾಸ್ತವಾಂಶವಾಗಿದೆ.

3.13.3 ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಓದುಗರ ಭತ್ಯೆ

ಸಮಗ್ರ ಶಿಕ್ಷಾ ಯೋಜನೆಯ ಕಂಡಿಕೆ–4.1.3ರಡಿಯಲ್ಲಿ ದೃಷ್ಟಿಹೀನ ಮಕ್ಕಳಿಗೆ ಓದುಗರ ಭತ್ಯೆಯನ್ನು ಪ್ರಸ್ತಾವಿಸಲಾಗಿದೆ. ಆದರೆ, **ಕೋಷ್ಟಕ–3.30**ರಲ್ಲಿ ತೋರಿಸಿರುವಂತೆ ಗಮನಾರ್ಹ ಪ್ರಮಾಣದ ದೃಷ್ಟಿಹೀನ ಮಕ್ಕಳಿಗೆ ಓದುಗರ ಭತ್ಯೆಗಳನ್ನು ನೀಡಿರಲಿಲ್ಲ.

ಕೋಷ್ಟಕ–3.30: ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಓದುಗರ ಭತ್ಯೆ

ವರ್ಷ	ಕುರುಡ ಮಕ್ಕಳ ಸಂಖ್ಯೆ (ದೃಷ್ಟಿದೋಷ + ಕುರುಡು)	ಓದುಗರ ಭತ್ಯೆಯನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಓದುಗರ ಭತ್ಯೆಯನ್ನು ಪಡೆಯದ ವಿದ್ಯಾರ್ಥಿಗಳ ಸಂಖ್ಯೆ	ಕೈಬಿಟ್ಟಿದ್ದ ಮಕ್ಕಳ ಶೇಕಡಾವಾರು	ಬೆಚ್ಚ (₹ ಲಕ್ಷಗಳಲ್ಲಿ)	ಪ್ರತಿ ವರ್ಷಕ್ಕೆ ಪ್ರತಿ ಮಗುವಿಗೆ ಭತ್ಯೆ
2018–19	7,476	1,074	6,402	85.63	23.16	2,156
2019–20	8,524	1,461	7,063	82.86	14.61	1,000
2020–21	6,640	1,138	5,502	82.86	9.07	797
2021–22	6,192	802	5,390	87.04	7.85	979

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

2018–22ರ ಅವಧಿಯಲ್ಲಿ ಓದುಗರ ಭತ್ಯೆಗಾಗಿ ₹95.04 ಲಕ್ಷ ಬಿಡುಗಡೆ ಮಾಡಿದ್ದರೂ ₹54.68 ಲಕ್ಷವನ್ನು ಮಾತ್ರ ವೆಚ್ಚ ಮಾಡಲಾಗಿತ್ತು. ದೃಷ್ಟಿಹೀನ ಮಕ್ಕಳಿಗೆ ಓದುಗರ ಭತ್ಯೆಗಳನ್ನು ನೀಡದಿರುವುದು ಅವರ ಶೈಕ್ಷಣಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ.

ಸಂಪೂರ್ಣ ಕುರುಡುತನ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಕಡಿಮೆ ದೃಷ್ಟಿ ಹೊಂದಿರುವ ಸ್ವಲ್ಪ ವಿದ್ಯಾರ್ಥಿಗಳಿಗೆ ಓದುಗರ ಭತ್ಯೆಯನ್ನು ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಅನುಮೋದಿತ ಯೋಜನೆಯ ಪ್ರಕಾರ ಕಡಿಮೆ ದೃಷ್ಟಿ ಹೊಂದಿರುವ ಎಲ್ಲಾ ಮಕ್ಕಳಿಗೆ ಓದುಗರ ಭತ್ಯೆ ನೀಡದಿರಲು ಕಾರಣಗಳನ್ನು ಉತ್ತರದಲ್ಲಿ ಉಲ್ಲೇಖಿಸಲಿಲ್ಲ.

3.13.4 ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ

ಈ ಯೋಜನೆಯು ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನವನ್ನು ಒದಗಿಸುತ್ತದೆ. ಅವರಿಗೆ ನೀಡಲಾದ ವಿದ್ಯಾರ್ಥಿವೇತನದ ಮೊತ್ತವು 2018–19ರಿಂದ 2021–22ರ ಅವಧಿಯಲ್ಲಿ ಏಕರೂಪವಾಗಿರಲಿಲ್ಲ.

ಕೋಷ್ಟಕ–3.31: ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ

ವರ್ಷ	ವಿಶೇಷ ಅಗತ್ಯತೆ ಇರುವ ಬಾಲಕಿಯರ ಸಂಖ್ಯೆ (ಪ್ರಾಥಮಿಕ)	ಒಟ್ಟು ಶಿಷ್ಯವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಶಿಷ್ಯವೇತನ ಪಡೆಯದ ವಿದ್ಯಾರ್ಥಿಗಳ ಸಂಖ್ಯೆ	ಬಿಟ್ಟ ಮಕ್ಕಳ ಶೇಕಡಾವಾರು	ವೆಚ್ಚ (₹ ಲಕ್ಷಗಳಲ್ಲಿ)	ಪ್ರತಿ ಮಗುವಿಗೆ ವಿದ್ಯಾರ್ಥಿವೇತನದ ಹಂಚಿಕೆ (₹)	ಪ್ರತಿ ಮಗುವಿಗೆ ಪ್ರತಿ ವರ್ಷಕ್ಕೆ ಶಿಷ್ಯವೇತನ (₹)
2018–19	34,814	29,230	5,584	16.04	584.6	2,000.00	2,000.00
2019–20	37,824	30,800	7,024	18.57	308	2,000.00	1,000.00
2020–21	33,628	27,729	5,899	17.54	189.93	2,000.00	684.95
2021–22	32,461	27,361	5,100	15.71	375.22	2,000.00	1,371.37

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

2018–22ರ ಅವಧಿಯಲ್ಲಿ ಬಿಟ್ಟುಹೋದ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರ ಶೇಕಡಾವಾರು ಪ್ರಮಾಣವು 16ರಿಂದ 19ರಷ್ಟಿತ್ತು. ಇದಲ್ಲದೆ, ಪ್ರತಿ ಮಗುವಿನ ವೆಚ್ಚವು ವರ್ಷದಲ್ಲಿ ಏಕರೂಪವಾಗಿರಲಿಲ್ಲ. ಇದು ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ₹685ರಿಂದ ₹2,000ವರೆಗೆ ಇದ್ದು ವಿದ್ಯಾರ್ಥಿ ವೇತನ ವಿತರಣೆಯಲ್ಲಿನ ಕೊರತೆಯನ್ನು ಸೂಚಿಸುತ್ತಿತ್ತು. ವಿಕಲಾಂಗ ಬಾಲಕಿಯರಿಗೆ ಶಿಷ್ಯವೇತನ ನೀಡದಿರುವುದು ಹಣಕಾಸಿನ ಅಡೆತಡೆಗಳನ್ನು ಉಂಟುಮಾಡಬಹುದು, ಅದು ಅವರ ಶೈಕ್ಷಣಿಕ ಭಾಗವಹಿಸುವಿಕೆಯನ್ನು ನಿರುತ್ಸಾಹಗೊಳಿಸಿ, ಶೈಕ್ಷಣಿಕ ಪ್ರಗತಿ ಮತ್ತು ಸಬಲೀಕರಣಕ್ಕಾಗಿ ಅವರ ಅವಕಾಶಗಳನ್ನು ಮತ್ತಷ್ಟು ಕಡಿಮೆಗೊಳಿಸುತ್ತದೆ ಮತ್ತು ಸೀಮಿತಗೊಳಿಸುತ್ತದೆ.

ಎಲ್ಲಾ ಅರ್ಹ ವಿದ್ಯಾರ್ಥಿನಿಯರಿಗೆ ಶಿಷ್ಯವೇತನವನ್ನು ಒದಗಿಸಲಾಗಿದೆ ಮತ್ತು ಅರ್ಹ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರಿಗೆ ಅಗತ್ಯಕ್ಕಿಂತ ಹೆಚ್ಚಿನ ಮೊತ್ತವನ್ನು ಪಿಎಬಿ ಅನುಮೋದಿಸಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಪಿಎಬಿಯ ಅನುಮೋದನೆಯನ್ನು ಕೋರುವಾಗ ಎಸ್ಎಟಿಎಸ್ ದತ್ತಸಂಚಯದ ಪ್ರಕಾರ ವಿಶೇಷ ಅಗತ್ಯತೆ ಇರುವ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಪರಿಗಣಿಸಲಾಗಿದೆ ಎಂಬ ಅಂಶವನ್ನು ಉತ್ತರವು ತಿಳಿಸಲಿಲ್ಲ.

ಶಿಫಾರಸು–4: ರಾಜ್ಯ ಸರ್ಕಾರವು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವುದನ್ನು ಖಚಿತಪಡಿಸಿಕೊಳ್ಳಬೇಕು, ಶಾಲೆಗಳಿಗೆ ಅವರ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆಯ ಸಹಾಯದಿಂದ ಅವರ ವಿದ್ಯಾಭ್ಯಾಸ ಮುಂದುವರಿಕೆ ಮತ್ತು ಪೂರ್ಣಗೊಳಿಸುವಿಕೆಯನ್ನು ಟ್ರ್ಯಾಕ್ ಮಾಡಬೇಕು.

ಶಿಫಾರಸು–5: ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಲಾಗಿದೆ, ದಾಖಲಾತಿ ಮಾಡಿಕೊಳ್ಳಲಾಗಿದೆ ಮತ್ತು ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮಗಳನ್ನು ಪ್ರಾರಂಭಿಸಬೇಕು.

ಅಧ್ಯಾಯ IV
ಶಿಕ್ಷಕರು ಮತ್ತು ತಂತ್ರಜ್ಞಾನ ಮಧ್ಯಸ್ಥಿಕೆ

ಅಧ್ಯಾಯ– IV

ಶಿಕ್ಷಕರು ಮತ್ತು ತಂತ್ರಜ್ಞಾನ ಮಧ್ಯಸ್ಥಿಕೆ

ಒಂದೇ ಶಿಕ್ಷಕರೊಂದಿಗೆ ಕಾರ್ಯನಿರ್ವಹಿಸುವ ಶಾಲೆಗಳು, ಆರ್‌ಟಿಇ ಮಾನದಂಡಗಳ ಪ್ರಕಾರ ಶಿಕ್ಷಕರಿಲ್ಲದ ಶಾಲೆಗಳು ಹೆಚ್ಚಿನ ಮಕ್ಕಳಿಗೆ ನೀಡುವ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ. ರಾಜ್ಯದಲ್ಲಿ ಒಟ್ಟಾರೆ ವಿದ್ಯಾರ್ಥಿ–ಶಿಕ್ಷಕರ ಅನುಪಾತ (ಪಿಟಿಆರ್) ಸಾಕಷ್ಟಿದ್ದರೂ, ಶಿಕ್ಷಕರ ನಿಯೋಜನೆಯಲ್ಲಿನ ಅಸಮತೋಲನದಿಂದಾಗಿ ಇಲಾಖೆಯು ಹಲವಾರು ಶಾಲೆಗಳಲ್ಲಿ ಸಾಕಷ್ಟು ವಿಷಯ–ನಿರ್ದಿಷ್ಟ ಶಿಕ್ಷಕರು ಮತ್ತು ಮಾಧ್ಯಮ ಸೂಕ್ತ ಶಿಕ್ಷಕರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ವಲಯದ ಪ್ರಾಥಮಿಕ ಶಾಲೆಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಸೌಕರ್ಯವನ್ನು ಹೊಂದಿರಲಿಲ್ಲ. ಇದು ಸಬಲ ಮತ್ತು ದುರ್ಬಲ ಮಕ್ಕಳ ನಡುವೆ ವಿಭಜನೆಯನ್ನು ಉಂಟುಮಾಡಬಹುದು.

ಶಿಕ್ಷಣ ಹಕ್ಕು (ಆರ್‌ಟಿಇ) ಕಾಯಿದೆ, 2009 ಶಾಲೆಗಳಿಗೆ ಶಿಕ್ಷಕರ ಅಗತ್ಯ ಮಾನದಂಡಗಳನ್ನು ನಿಗದಿಪಡಿಸುತ್ತದೆ. ಮಾನದಂಡಗಳ ಪ್ರಕಾರ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ–ಶಿಕ್ಷಕರ ಅನುಪಾತವನ್ನು (ಪಿಟಿಆರ್)[18] ಕ್ರಮವಾಗಿ 30:1 ಮತ್ತು 35:1 ಎಂದು ನಿಗದಿಪಡಿಸಲಾಗಿದೆ. ಶಾಲೆಗಳಲ್ಲಿ ಶಿಕ್ಷಕರ ಲಭ್ಯತೆಯನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

4.1 ಶಿಕ್ಷಕರ ಲಭ್ಯತೆ ಮತ್ತು ವಿದ್ಯಾರ್ಥಿ–ಶಿಕ್ಷಕರ ಒಟ್ಟಾರೆ ಅನುಪಾತ (ಪಿಟಿಆರ್)

ಶಿಕ್ಷಣ ಹಕ್ಕು ಕಾಯಿದೆಯ ನಿಬಂಧನೆಗಳಲ್ಲಿ ಪ್ರತಿಬಿಂಬಿತವಾದಂತೆ ಪಿಟಿಆರ್‌ಗೆ ನೀಡಿದ ಪ್ರಾಮುಖ್ಯತೆ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಮಕ್ಕಳ ಮೇಲೆ ಸಾಕಷ್ಟು ಗಮನವನ್ನು ಹರಿಸುವುದು. ಪಿಟಿಆರ್ ಎನ್ನುವುದು ವೈಯಕ್ತಿಕ ಗಮನವನ್ನು ನೀಡುವ ಮತ್ತು ಪ್ರತಿ ವಿದ್ಯಾರ್ಥಿಯ ಅಗತ್ಯತೆಯನ್ನು ಪೂರೈಸುವ ಶಾಲೆಯ ಸಾಮರ್ಥ್ಯವನ್ನು ಪ್ರತಿಬಿಂಬಿಸುವ ಸೂಚಕವಾಗಿದೆ. ಹೆಚ್ಚಿನ ಸಂಖ್ಯೆಯ ಮಕ್ಕಳಿದ್ದರೆ ಶಿಕ್ಷಕರ ವೈಯಕ್ತಿಕ ಗಮನವನ್ನು ನೀಡುವ ಸಾಮರ್ಥ್ಯವು ಕಡಿಮೆಯಾಗುವುದರಿಂದ ಹೆಚ್ಚಿನ ಪಿಟಿಆರ್ ಶಿಕ್ಷಣದ ಗುಣಮಟ್ಟ ಮತ್ತು ಕಲಿಕೆಯ ಫಲಿತಾಂಶಗಳ ಮೇಲೆ ಪರಿಣಾಮ ಬೀರುತ್ತದೆ.

ಸರ್ಕಾರಿ, ಅನುದಾನಿತ, ಅನುದಾನರಹಿತ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಟ್ಟಾರೆ ಪಿಟಿಆರ್ ಮಟ್ಟವನ್ನು ಕೆಳಗಿನ **ಕೋಷ್ಟಕ–4.1**ರಲ್ಲಿ ನೀಡಲಾಗಿದೆ:

ಕೋಷ್ಟಕ–4.1: 2017–18ರಿಂದ 2020–22ರ ಅವಧಿಯಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತ

ಆಡಳಿತ ವರ್ಗ	2017–18	2018–19	2019–20	2020–21	2021–22
ಶಿಕ್ಷಣ ಇಲಾಖೆ	21.63	22	21.87	23.1	26.19
ಖಾಸಗಿ–ಅನುದಾನ ರಹಿತ (ನೋಂದಾಯಿತ)	ಲಭ್ಯವಿಲ್ಲ	ಲಭ್ಯವಿಲ್ಲ	23.59	22.79	22.93
ಸ್ಥಳೀಯ ಸಂಸ್ಥೆಗಳು	25.92	26.97	20.63	22.7	32.22
ಸರ್ಕಾರಿ ಅನುದಾನಿತ	ಲಭ್ಯವಿಲ್ಲ	ಲಭ್ಯವಿಲ್ಲ	39.57	38.97	41.68

ಆಧಾರ: ಎಸ್‌ಎಟಿಎಸ್, ಶಿಕ್ಷಣ ಇಲಾಖೆ

[18] ವಿದ್ಯಾರ್ಥಿ ಶಿಕ್ಷಕರ ಅನುಪಾತ (ಪಿಟಿಆರ್) ಎಂಬುದು ಒಂದು ನಿರ್ದಿಷ್ಟ ಶಾಲಾ ವರ್ಷದಲ್ಲಿ ಪ್ರತಿ ಶಿಕ್ಷಕರಿಗೆ ವಿದ್ಯಾರ್ಥಿಗಳ ಸಂಖ್ಯೆಯಾಗಿದೆ. ಹೆಚ್ಚಿನ ಪಿಟಿಆರ್ ಒಬ್ಬ ಶಿಕ್ಷಕರು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು ಎಂದು ಪ್ರತಿನಿಧಿಸುತ್ತದೆ.

ಸರ್ಕಾರಿ ಶಾಲೆಗಳಲ್ಲಿನ ಒಟ್ಟಾರೆ ಪಿಟಿಆರ್ ಶಿಕ್ಷಣ ಹಕ್ಕು ಕಾಯಿದೆಯ ಮಿತಿಯೊಳಗಿದ್ದರೂ, ಅದು 2017–18ರಲ್ಲಿನ 21.63ರಿಂದ 2021–22ರಲ್ಲಿ 26.19ಕ್ಕೆ ಏರಿಕೆಯಾಗಿತ್ತು. ಸ್ಥಳೀಯ ಸಂಸ್ಥೆ ಶಾಲೆಗಳ ಪಿಟಿಆರ್ 2017–18ರಲ್ಲಿನ 25.92ರಿಂದ 2021–22ರಲ್ಲಿ 32.22ಕ್ಕೆ ಏರಿಕೆಯಾಗಿತ್ತು. ಸರ್ಕಾರಿ ಅನುದಾನಿತ ಶಾಲೆಗಳು ರಾಜ್ಯದಲ್ಲಿ ಅತಿ ಹೆಚ್ಚು ಪಿಟಿಆರ್ ಅನ್ನು ಹೊಂದಿದ್ದು ಅದು 40:1ಕ್ಕಿಂತ ಹೆಚ್ಚಾಗಿದ್ದಿತು. ಶಿಕ್ಷಕರ ಕೊರತೆಯು ಅಸ್ತಿತ್ವದಲ್ಲಿರುವ ಶಿಕ್ಷಕರಿಗೆ ಹೆಚ್ಚಿದ ಕೆಲಸದ ಹೊರೆಗೆ ಕಾರಣವಾಗುತ್ತದೆ, ವಿದ್ಯಾರ್ಥಿಗಳ ಮೇಲೆ ವೈಯಕ್ತಿಕ ಗಮನವನ್ನು ಕಡಿಮೆ ಮಾಡುತ್ತದೆ, ಇದು ಅಂತಿಮವಾಗಿ ಬೋಧನೆಯ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಹೆಚ್ಚುವರಿ ಶಿಕ್ಷಕರ ನೇಮಕಾತಿ ಪ್ರಗತಿಯಲ್ಲಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

4.2 ಶಿಕ್ಷಣ ಇಲಾಖೆ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತ

4.2.1 ಶಾಲೆಗಳಲ್ಲಿ ನೋಂದಣಿವಾರು ವಿದ್ಯಾರ್ಥಿ–ಶಿಕ್ಷಕರ ಅನುಪಾತ

ರಾಜ್ಯದ ಒಟ್ಟಾರೆ ಪಿಟಿಆರ್ ಮಾನದಂಡದ ಮಿತಿಯಲ್ಲಿದ್ದರೂ, ಶಾಲಾ ಮಟ್ಟದ ಪಿಟಿಆರ್ ವಿತರಣೆಯು ಅಸಮತೋಲನವನ್ನು ತೋರಿಸಿತು. ಹೆಚ್ಚಿನ ಸಂಖ್ಯೆಯ ಶಾಲೆಗಳ ಉಪಸ್ಥಿತಿ ಮತ್ತು ವಿದ್ಯಾರ್ಥಿಗಳ ಕಡಿಮೆ ದಾಖಲಾತಿ ಈ ಅಸಮತೋಲನಕ್ಕೆ ಕಾರಣವಾಗಿತ್ತು. ವಿವಿಧ ಹಂತದ ದಾಖಲಾತಿಯೊಂದಿಗಿನ ಶಾಲೆಗಳಲ್ಲಿನ ಪಿಟಿಆರ್ ಅನ್ನು ಕೆಳಗಿನ **ಕೋಷ್ಟಕ–4.2**ರಲ್ಲಿ ನೀಡಲಾಗಿದೆ:

ಕೋಷ್ಟಕ–4.2: ಶಾಲೆಗಳಲ್ಲಿ ವಿಭಿನ್ನ ನೋಂದಣಿ ಮಟ್ಟಗಳಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತ

ಶೈಕ್ಷಣಿಕ ವರ್ಷ	ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ ವಿದ್ಯಾರ್ಥಿ–ಶಿಕ್ಷಕರ ಅನುಪಾತ					
	20ಕ್ಕಿಂತ ಕಡಿಮೆ	20ರಿಂದ 50ರ ನಡುವೆ	50ರಿಂದ 100ರ ನಡುವೆ	100ರಿಂದ 150ರ ನಡುವೆ	150ರಿಂದ 200ರ ನಡುವೆ	200ಕ್ಕಿಂತ ಹೆಚ್ಚು
2017–18	7.08	15.74	26.7	32.61	34.55	44.08
2018–19	7.15	16.1	27.39	33.78	35.55	46.83
2019–20	6.79	16.04	27.04	31.61	35.68	45.21
2020–21	7.37	16.7	28.66	34.06	36.72	45.08
2021–22	7.99	17.37	31.48	38.27	40.92	44.96

ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ಹೀಗೆ, 150ಕ್ಕೂ ಹೆಚ್ಚು ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ಪಿಟಿಆರ್ ಶಿಕ್ಷಣ ಹಕ್ಕು ಮಾನದಂಡಗಳಿಗೆ ಅನುಗುಣವಾಗಿರಲಿಲ್ಲ ಎಂಬುದನ್ನು ಗಮನಿಸಲಾಯಿತು. 200ಕ್ಕಿಂತ ಹೆಚ್ಚು ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ಎಲ್ಲಾ ವರ್ಷಗಳಲ್ಲಿ ಪಿಟಿಆರ್ 45:1 ರಷ್ಟಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೆಚ್ಚಿನ ದಾಖಲಾತಿ ಹೊಂದಿರುವ ಶಾಲೆಗಳಲ್ಲಿ ಸರ್ಕಾರ ಹೊಸ ಶಿಕ್ಷಕರನ್ನು ನಿಯೋಜಿಸಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಸಾಕಷ್ಟು ಪಿಟಿಆರ್‌ಅನ್ನು ನಿರ್ವಹಿಸದಿರುವುದು ಈ ಶಾಲೆಗಳಲ್ಲಿನ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

4.2.2 ಜಿಲ್ಲಾವಾರು ವಿದ್ಯಾರ್ಥಿ–ಶಿಕ್ಷಕರ ಅನುಪಾತ

2021–22ರಲ್ಲಿ, ಕಿರಿಯ ಪ್ರಾಥಮಿಕ ಹಂತದಲ್ಲಿ, ಶಿಕ್ಷಣ ಇಲಾಖೆಯಡಿಯಲ್ಲಿನ ಶಾಲೆಗಳಲ್ಲಿ ಪಿಟಿಆರ್ ಕೊಡಗು ಜಿಲ್ಲೆಯಲ್ಲಿ 9.52ರಿಂದ ಯಾದಗಿರಿ ಜಿಲ್ಲೆಯಲ್ಲಿನ 33.73ರ ವ್ಯಾಪ್ತಿಯಲ್ಲಿದ್ದರೆ ಹಿರಿಯ ಪ್ರಾಥಮಿಕ ಹಂತದಲ್ಲಿ, ಶಾಲೆಗಳಲ್ಲಿ ಪಿಟಿರ್ ಉತ್ತರ ಕನ್ನಡ ಜಿಲ್ಲೆಯಲ್ಲಿನ 16.72ರಿಂದ ಯಾದಗಿರಿ ಜಿಲ್ಲೆಯಲ್ಲಿನ 49.36ರ ವ್ಯಾಪ್ತಿಯಲ್ಲಿತ್ತು. ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿಯಲ್ಲಿ ಹೆಚ್ಚಿನ ಪಿಟಿಆರ್ ಇದ್ದರೆ, ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಉಡುಪಿಯಲ್ಲಿ

ಪಿಟಿಆರ್ ಅನುಕೂಲಕರವಾಗಿತ್ತು. ಶಾಲೆಯ ಜಿಲ್ಲಾವಾರು ಪಿಟಿಆರ್‌ಅನ್ನು **ಅನುಬಂಧ–4.1**ರಲ್ಲಿ ನೀಡಲಾಗಿದೆ.

2017–18ರಿಂದ 2021–22ರ ಅವಧಿಯಲ್ಲಿ ಎಲ್ಲಾ 34 ಜಿಲ್ಲೆಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪಿಟಿಆರ್ ಏರಿಕೆಯನ್ನು ಗಮನಿಸಲಾಯಿತು. ಈ ಅವಧಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 35ಕ್ಕಿಂತ ಹೆಚ್ಚಿನ ಪಿಟಿಆರ್ ಹೊಂದಿರುವ ಜಿಲ್ಲೆಗಳ ಸಂಖ್ಯೆಯು ಒಂದು ಜಿಲ್ಲೆಯಿಂದ 10 ಜಿಲ್ಲೆಗಳಲ್ಲಿ ಹೆಚ್ಚಿರುವುದನ್ನು ಗಮನಿಸಲಾಯಿತು. ಶಾಲೆಗಳಲ್ಲಿ ಪಿಟಿಆರ್‌ಅನ್ನು ನಿರ್ವಹಿಸದಿರುವುದು ಶಿಕ್ಷಣ ಗುಣಮಟ್ಟದ ಮೇಲೆ ಪರಿಣಾಮ ಬೀರಿ ಆ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳಲ್ಲಿ ಪ್ರತಿಫಲಿಸುತ್ತದೆ.

ಕೊಡಗು ಜಿಲ್ಲೆ ಮಲೆನಾಡು ಪ್ರದೇಶದ ವ್ಯಾಪ್ತಿಗೆ ಬರುತ್ತದೆ ಮತ್ತು 61–120 ವಿದ್ಯಾರ್ಥಿಗಳಿರುವ ಮಲೆನಾಡು ಪ್ರದೇಶದ ಶಾಲೆಗಳಿಗೆ ಸಿಬ್ಬಂದಿ ಮಾದರಿಯ ಮೇಲೆ ಒಂದು ಹೆಚ್ಚುವರಿ ಶಿಕ್ಷಕರನ್ನು ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು. ಕಲ್ಯಾಣ ಕರ್ನಾಟಕ ಪ್ರದೇಶದಡಿಯಲ್ಲಿ ಬರುವ ಯಾದಗಿರಿ ಜಿಲ್ಲೆಯಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ ಮತ್ತು ಇಲಾಖೆಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ನೇಮಕಾತಿಗಾಗಿ 5,000 ಶಿಕ್ಷಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿದೆ ಮತ್ತು ಆ ಪೈಕಿ 4,194 ಶಿಕ್ಷಕರನ್ನು ಆಯ್ಕೆ ಮಾಡಿ ಅಂತಿಮಗೊಳಿಸಲಾಗಿದೆ ಎಂದೂ ಸಹ ತಿಳಿಸಲಾಯಿತು.

4.3 ಶಿಕ್ಷಕರ ಸಂಖ್ಯೆಗೆ ಸಂಬಂಧಿಸಿದಂತೆ ಶಿಕ್ಷಣ ಹಕ್ಕಿನ ಮಾನದಂಡಗಳನ್ನು ಅನುಸರಿಸದಿರುವುದು

ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 25ರ ಪ್ರಕಾರ, ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಕ್ರಮವಾಗಿ 30:1 ಮತ್ತು 35:1ರ ಪಿಟಿಆರ್‌ಅನ್ನು ನಿರ್ವಹಿಸಬೇಕು. ಈ ಆರ್‌ಟಿಇ ಮಾನದಂಡಗಳನ್ನು ಅನುಸರಿಸದಿರುವ ಶಾಲೆಗಳ ಸ್ಥಿತಿಯನ್ನು **ಕೋಷ್ಟಕ–4.3**ರಲ್ಲಿ ನೀಡಲಾಗಿದೆ.

ಕೋಷ್ಟಕ–4.3: ಶಿಕ್ಷಣ ಹಕ್ಕಿನ ಮಾನದಂಡಗಳನ್ನು ಅನುಸರಿಸದ ಶಾಲೆಗಳು

ವರ್ಷ	ಕಿ.ಪ್ರಾ.ಶಾಲೆಗಳ ಸಂಖ್ಯೆ	ಪಿಟಿಆರ್ 30:1 ಕ್ಕಿಂತ ಹೆಚ್ಚಾಗಿರುವ ಕಿ.ಪ್ರಾ.ಶಾಲೆಗಳ ಸಂಖ್ಯೆ	ಶೇಕಡಾವಾರು	ಹಿ.ಪ್ರಾ.ಶಾಲೆಗಳ ಸಂಖ್ಯೆ	ಹಿ.ಪ್ರಾ.ಶಾಲೆಗಳ ಸಂಖ್ಯೆ (ಪಿಟಿಆರ್>35)	ಅನುಪಾಲಿಸದ ಹಿ.ಪ್ರಾ.ಶಾಲೆಗಳ ಶೇಕಡಾವಾರು
2017–18	21,224	5,379	25	21,946	2,591	12
2018–19	21,011	5,946	28	21,933	2,875	13
2019–20	20,792	5,103	25	21,897	3,122	14
2020–21	20,747	5,798	28	21,897	3,629	17
2021–22	20,701	6,557	32	21,892	5,545	25


ಆಧಾರ: ಎಸ್‌ಎಟಿಎಸ್, ಶಿಕ್ಷಣ ಇಲಾಖೆ

ಪಿಟಿಆರ್ ಮಾನದಂಡಗಳಿಗೆ ಅನುಗುಣವಾಗಿಲ್ಲದ ಕಿರಿಯ ಪ್ರಾಥಮಿಕ ಶಾಲೆಯ ಸಂಖ್ಯೆಯು 2017–18ರಲ್ಲಿನ 5,379 ಶಾಲೆಗಳಿಂದ (ಶೇಕಡಾ 25) 2021–22ರಲ್ಲಿ 6,557 ಶಾಲೆಗಳಿಗೆ (ಶೇಕಡಾ 32) ಏರಿಕೆಯಾಗಿರುವುದನ್ನು ಗಮನಿಸಲಾಯಿತು. ಇದಲ್ಲದೆ, 35ಕ್ಕಿಂತ ಹೆಚ್ಚಿನ ಪಿಟಿಆರ್ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆಯು 2017–18ರಲ್ಲಿನ 2,591 ಶಾಲೆಗಳಿಂದ

(ಶೇಕಡಾ 12) 2021–22ರಲ್ಲಿ 5,545 ಶಾಲೆಗಳಿಗೆ (ಶೇಕಡಾ 25) ಏರಿಕೆಯಾಗಿ, ಲೆಕ್ಕಪರಿಶೋಧನಾ ಅವಧಿಯಲ್ಲಿ ಎರಡು ಪಟ್ಟು ಹೆಚ್ಚಾಗಿದ್ದಿತು.

ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, 35ಕ್ಕಿಂತ ಹೆಚ್ಚು ಪಿಟಿಆರ್ ಹೊಂದಿರುವ ಶಾಲೆಗಳು ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅಧಿಕವಾಗಿದ್ದವು ಎಂಬುದನ್ನು ಗಮನಿಸಲಾಯಿತು. 2021–22ರ ಅವಧಿಯಲ್ಲಿ, 35ಕ್ಕಿಂತ ಹೆಚ್ಚಿನ ಪಿಟಿಆರ್ ಹೊಂದಿದ್ದ ಒಟ್ಟು 5,545 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 4,740 ಶಾಲೆಗಳು (ಶೇಕಡಾ 85.48) ಗ್ರಾಮೀಣ ಪ್ರದೇಶಗಳಲ್ಲಿದ್ದರೆ, 805 ಶಾಲೆಗಳು (ಶೇಕಡಾ 14.52) ನಗರ ಪ್ರದೇಶಗಳಲ್ಲಿದ್ದವು. 2017–18ರಿಂದ 2021–22ರ ಅವಧಿಯಲ್ಲಿ 35ಕ್ಕಿಂತ ಹೆಚ್ಚು ಪಿಟಿಆರ್ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳ ವರ್ಷವಾರು ವಿವರಗಳನ್ನು **ನಕ್ಷೆ–4.1**ರಲ್ಲಿ ನೀಡಲಾಗಿದೆ.

ನಕ್ಷೆ–4.1: ವಿದ್ಯಾರ್ಥಿ–ಶಿಕ್ಷಕರ ಅನುಪಾತ 35ಕ್ಕಿಂತ ಹೆಚ್ಚಾಗಿರುವ ಗ್ರಾಮೀಣ ಮತ್ತು ನಗರ ಹಿರಿಯ ಪ್ರಾಥಮಿಕ ಶಾಲೆಗಳು



ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಪಿಟಿಆರ್ ಅನುಪಾತದಲ್ಲಿನ ಅಸಮಾನತೆಯು ಶೈಕ್ಷಣಿಕ ಅಸಮಾನತೆಗಳನ್ನು ಉಲ್ಬಣಗೊಳಿಸುತ್ತದೆ, ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಸಮಾನ ಅವಕಾಶಗಳನ್ನು ವಂಚಿತಗೊಳಿಸಿದಂತಾಗುತ್ತದೆ ಹಾಗೂ ನಗರ ಮತ್ತು ಗ್ರಾಮೀಣ ಶೈಕ್ಷಣಿಕ ಫಲಿತಾಂಶಗಳ ನಡುವಿನ ಅಂತರವನ್ನು ಹೆಚ್ಚಿಸುತ್ತದೆ.

ತರ್ಕಬದ್ಧಗೊಳಿಸುವ ಪ್ರಕ್ರಿಯೆಯ ಮೂಲಕ ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಗುರುತಿಸಲಾಗಿದೆ ಮತ್ತು ಅದನ್ನು ಅಗತ್ಯವಿರುವ ಶಾಲೆಗಳಿಗೆ ಮರುಹಂಚಿಕೆ ಮಾಡಲಾಗುವುದು ಎಂದು ಸರ್ಕಾರವು (ಮೇ 2023) ತಿಳಿಸಿತು.

4.3.1 ಏಕ ಶಿಕ್ಷಕ ಶಾಲೆಗಳು

60 ಮಕ್ಕಳವರೆಗೆ ದಾಖಲಾತಿ ಹೊಂದಿರುವ ಪ್ರತಿ ಶಾಲೆಯಲ್ಲಿ ಇಬ್ಬರು ಶಿಕ್ಷಕರು ಇರಬೇಕು ಎಂದು ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 25 ನಿಗದಿಪಡಿಸುತ್ತದೆ. ಆದರೆ, 2021–22ರಲ್ಲಿಯೂ ರಾಜ್ಯದಲ್ಲಿ ಏಕ ಶಿಕ್ಷಕರ ಶಾಲೆಗಳು ಅಸ್ತಿತ್ವದಲ್ಲಿದ್ದವು. ಏಕ ಶಿಕ್ಷಕರ ಶಾಲೆಗಳ ಸಂಖ್ಯೆ 2017–18ರಲ್ಲಿನ 4,652ರಿಂದ 2021–22ರಲ್ಲಿ 6,616 ಶಾಲೆಗಳಿಗೆ ಏರಿಕೆಯಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಏಕ ಶಿಕ್ಷಕರನ್ನು ಹೊಂದಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು **ಕೋಷ್ಟಕ–4.4**ರಲ್ಲಿ ನೀಡಲಾಗಿದೆ.

ಕೋಷ್ಟಕ–4.4: ಏಕ ಶಿಕ್ಷಕ ಶಾಲೆಗಳ ವರ್ಷವಾರು ವಿವರಗಳು

ಶೈಕ್ಷಣಿಕ ವರ್ಷ	ಗ್ರಾಮೀಣ ಪ್ರಾಥಮಿಕ ಶಾಲೆಗಳು	ನಗರ ಪ್ರಾಥಮಿಕ ಶಾಲೆಗಳು	ಏಕ ಶಿಕ್ಷಕ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ
2017–18	4,519	133	4,652
2018–19	4,747	184	4,931
2019–20	4,712	310	5,022
2020–21	5,288	390	5,678
2021–22	6,239	377	6,616

ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಶಾಲೆಗಳಲ್ಲಿ ಏಕ ಶಿಕ್ಷಕರ ಶಾಲೆಗಳು ಹೆಚ್ಚಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಏಕ ಶಿಕ್ಷಕರ ಶಾಲೆಯಲ್ಲಿ, ಒಬ್ಬರೇ ಶಿಕ್ಷಕರು ಏಕಕಾಲದಲ್ಲಿ ಶಾಲೆಯ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಬೇಕಲ್ಲದೆ ವಿವಿಧ ತರಗತಿಗಳ ಮಕ್ಕಳನ್ನು ನಿರ್ವಹಿಸಬೇಕು. ಇದು ಆರ್ಟಿಇ ನಿಗದಿಪಡಿಸಿರುವ ಪ್ರತಿ ತರಗತಿಗೆ ಕಡ್ಡಾಯ ಕಲಿಕಾ ಸಮಯವನ್ನು ಒದಗಿಸುವ ಶಿಕ್ಷಕರ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.

ಈ ಶಾಲೆಗಳಲ್ಲಿ ಕಡಿಮೆ ದಾಖಲಾತಿಯನ್ನು ಪರಿಗಣಿಸಿ ಏಕ ಶಿಕ್ಷಕರನ್ನು ನಿಯೋಜಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಮೇ 2023). ಇಲಾಖೆಯು 11 ವಿದ್ಯಾರ್ಥಿಗಳವರೆಗಿನ ದಾಖಲಾತಿಗಾಗಿ ಶಾಲೆಗಳಿಗೆ ಓರ್ವ ಶಿಕ್ಷಕರ ಹುದ್ದೆಯನ್ನು ನಿಯೋಜಿಸುತ್ತದೆ ಮತ್ತು ಬಹು–ದರ್ಜೆಯ ಬೋಧನೆಯ "ನಲಿ–ಕಲಿ[19]" ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ ಎಂದೂ ಸಹ ತಿಳಿಸಿಲಾಯಿತು. ಆದರೆ, ಏಕ–ಶಿಕ್ಷಕರ ಶಾಲೆಗಳು ಶಿಕ್ಷಣ ಹಕ್ಕು ಕಾಯಿದೆಯಲ್ಲಿ ನಿರ್ದಿಷ್ಟಪಡಿಸಿದ ಮಾನದಂಡಗಳನ್ನು ಅನುಸರಿಸುವುದಿಲ್ಲ. ಏಕೆಂದರೆ ಇದು ಗುಣಮಟ್ಟದ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶವನ್ನು ಮಿತಿಗೊಳಿಸುವುದರಿಂದ ಹಾಗೂ ವೈಯಕ್ತಿಕ ಗಮನ ಮತ್ತು ಬೆಂಬಲವನ್ನು ಕಡಿಮೆ ಮಾಡುವುದರಿಂದ ಏಕ ಶಿಕ್ಷಕರ ಶಾಲೆಗಳು ಆ ಶಾಲೆಗಳಿಗೆ ದಾಖಲಾದ ಮಕ್ಕಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

4.4 ಶಿಕ್ಷಕರ ಖಾಲಿ ಹುದ್ದೆಗಳು

ಕೆಆರ್ಟಿಇ ನಿಯಮ 18ರ ಪ್ರಕಾರ ಪ್ರತಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ತಮ್ಮ ಜಿಲ್ಲೆಗಳಲ್ಲಿ ಶಿಕ್ಷಕರ ತರ್ಕಬದ್ಧ ನಿಯೋಜನೆಯನ್ನು ಖಚಿತಪಡಿಸಿಕೊಳ್ಳಬೇಕು. ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ವರ್ಷವಾರು ಶಿಕ್ಷಕರ ಖಾಲಿ ಹುದ್ದೆಗಳು ಈ ಕೆಳಗಿನಂತಿದ್ದವು:

[19] "ನಲಿ ಕಲಿ" ಎಂಬುದು ಕರ್ನಾಟಕ ಸರ್ಕಾರವು ಅಳವಡಿಸಿಕೊಂಡ ಸೃಜನಶೀಲ ಕಲಿಕೆಯ ವಿಧಾನವಾಗಿದ್ದು, ಇದು 1, 2 ಮತ್ತು 3ನೇ ತರಗತಿಗಳನ್ನು ಒಂದೇ ಬಹುದರ್ಜೆಯ ತರಗತಿಯಲ್ಲಿ ಸಂಯೋಜಿಸುತ್ತದೆ.

ಕೋಷ್ಠಕ–4.5: ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ಖಾಲಿ ಹುದ್ದೆಗಳ ವಿವರಗಳು

ವರ್ಷ	ಖಾಲಿ ಹುದ್ದೆಗಳ ಸಂಖ್ಯೆ
2017–18	16,000
2018–19	22,500
2019–20	22,150
2020–21	20,891
2021–22	48,182

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಶಿಕ್ಷಕರ ಖಾಲಿ ಹುದ್ದೆಯು ಮಂಜೂರಾದ ಒಟ್ಟು ಸಾಮರ್ಥ್ಯದ ಶೇಕಡಾ 10ನ್ನು ಮೀರಬಾರದು ಎಂದು ಮಾನದಂಡಗಳು ಸೂಚಿಸುತ್ತವೆ. ಎಲ್ಲಾ ಜಿಲ್ಲೆಗಳಲ್ಲಿ ಖಾಲಿ ಹುದ್ದೆಗಳು ಶೇಕಡಾ 10ಕ್ಕಿಂತ ಹೆಚ್ಚಾಗಿದ್ದವು ಎಂಬುದನ್ನು ಇಲಾಖೆ ನೀಡಿದ ಅಂಕಿಅಂಶಗಳ ವಿಶ್ಲೇಷಣೆಯು ತೋರಿಸಿತು. ರಾಜ್ಯದಲ್ಲಿ 1,88,415 ಶಿಕ್ಷಕರ ಒಟ್ಟು ಮಂಜೂರಾತಿಗೆ ಪ್ರತಿಯಾಗಿ 2021–22ನೇ ಅವಧಿಯಲ್ಲಿ 48,182 ಶಿಕ್ಷಕರ ಹುದ್ದೆಗಳು ಖಾಲಿಯಿದ್ದವು, ಇದು ಒಟ್ಟು ಮಂಜೂರಾದ ಸಾಮರ್ಥ್ಯದ ಶೇಕಡಾ 26ರಷ್ಟಿತ್ತು. ಖಾಲಿ ಹುದ್ದೆಗಳು ಶೇಕಡಾ 12ರಿಂದ (ದಾವಣಗೆರೆ ಜಿಲ್ಲೆ) ಶೇಕಡಾ 45ರ (ಯಾದಗಿರಿ ಜಿಲ್ಲೆ) ವ್ಯಾಪ್ತಿಯಲ್ಲಿದ್ದವು. ಮಂಜೂರಾದ ಸಾಮರ್ಥ್ಯ ಮತ್ತು ಖಾಲಿ ಹುದ್ದೆಯ ಜಿಲ್ಲಾವಾರು ಸ್ಥಾನವನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರ ಹುದ್ದೆ ಶೇಕಡಾ 27ರಷ್ಟಿದ್ದರೆ ನಗರ ಪ್ರದೇಶದಲ್ಲಿ ಶೇಕಡಾ 21ರಷ್ಟಿರುವುದನ್ನು ಗಮನಿಸಲಾಯಿತು. ಕೊಪ್ಪಳ ಜಿಲ್ಲೆಯಲ್ಲಿ 20.90 ಅಂಕಗಳೊಂದಿಗೆ ಮತ್ತು ನಂತರ ವಿಜಯಪುರ ಜಿಲ್ಲೆ 18.70 ಅಂಕಗಳೊಂದಿಗೆ ಖಾಲಿ ಹುದ್ದೆಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಅಂತರ ಹೆಚ್ಚಾಗಿದ್ದಿತು. ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳಿರುವುದು ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಲೆಕ್ಕಪರಿಶೋಧನೆಯ ವೀಕ್ಷಣೆಗಳನ್ನು ಸರ್ಕಾರವು ಒಪ್ಪಿಕೊಂಡಿತು (ಮೇ 2023) ಮತ್ತು ನಿಯಮಿತವಾಗಿ ನಿವೃತ್ತಿ, ಮರಣ, ಸ್ವಯಂ ನಿವೃತ್ತಿ ಇತ್ಯಾದಿಗಳಿಂದ ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ಎದುರಿಸಲು 27000 ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ ಎಂದು ತಿಳಿಸಿತು. ಆದರೆ, ನಿವೃತ್ತಿಯಂತಹ ಘಟನೆಗಳ ಮುನ್ಸೂಚನೆಯಿರುವ ಸಂಗತಿಯನ್ನು ಪರಿಗಣಿಸಲಿಲ್ಲ ಮತ್ತು ಈ ಅಂಶಗಳನ್ನು ಪರಿಗಣಿಸಿ ನಿಯಮಿತ ಆಧಾರದ ಮೇಲೆ ನೇಮಕಾತಿಯನ್ನು ಯೋಜಿಸಬಹುದು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ವರದಿಯು ಸಹ ಶಿಕ್ಷಕರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ನೇಮಕಾತಿ ಯೋಜನೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿತ್ತು.

ಶಿಕ್ಷಕರ ಕೊರತೆಯನ್ನು ಪರಿಹರಿಸುವುದು

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯ ಸವಾಲನ್ನು ಪರಿಹರಿಸಲು ಅಧ್ಯಯನ ವರದಿಯು ಈ ಕೆಳಗಿನವುಗಳನ್ನು ಸೂಚಿಸಿತ್ತು:

- ಅಂಕಿಅಂಶಗಳ ಮೂಲಕ ಶಿಕ್ಷಕರ ಖಾಲಿ ಹುದ್ದೆಗಳನ್ನು ಮುನ್ಸೂಚಿಸುವುದು ಜನಸಂಖ್ಯೆಯ ಬದಲಾವಣೆಗಳು ಮತ್ತು ನಿವೃತ್ತಿ ದರಗಳಂತಹ ಅಂಶಗಳ ಆಧಾರದ ಮೇಲೆ ಅವಶ್ಯಕತೆಗಳನ್ನು ನಿರ್ಣಯಿಸಲು ಸಹಾಯ ಮಾಡುತ್ತದೆ.
- ಶಾಲೆಗಳನ್ನು ಸ್ಥಾಪಿಸುವಲ್ಲಿ, ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಮತ್ತು ಶಿಕ್ಷಕರನ್ನು ನೇಮಿಸಿಕೊಳ್ಳುವಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು ಅನ್ವೇಷಿಸುವುದು.
- ನಿರ್ದಿಷ್ಟ ಅವಧಿಗಳಿಗೆ ಶಿಕ್ಷಕರ ಬದಲಿಗೆ ಸ್ಥಳೀಯ ಪದವೀಧರರು, ತಂತ್ರಜ್ಞಾನ ಪರಿಣಿತ ವ್ಯಕ್ತಿಗಳು ಮತ್ತು ನುರಿತ ವೃತ್ತಿಪರರಿಗೆ ಅಲ್ಪಾವಧಿಯ ತರಬೇತಿಯನ್ನು ನೀಡುವುದು.
- ಸಹಯೋಗವನ್ನು ಬೆಳೆಸಲು, ಸಂಪನ್ಮೂಲಗಳು ಮತ್ತು ಶಿಕ್ಷಕರನ್ನು ಹಂಚಿಕೊಳ್ಳಲು, ವೃತ್ತಿಪರ ಅಭಿವೃದ್ಧಿ ಅವಕಾಶಗಳನ್ನು ಒದಗಿಸಲು ಮತ್ತು ಶಾಲಾ ನಾಯಕತ್ವವನ್ನು ಬಲಪಡಿಸಲು ಶಾಲಾ ಸಂಕೀರ್ಣಗಳನ್ನು ರಚಿಸುವುದು.
- ಶಿಕ್ಷಕರನ್ನು ಒಟ್ಟುಗೂಡಿಸಲು ಮತ್ತು ಶಿಕ್ಷಕರ ಲಭ್ಯತೆಯನ್ನು ಸುಧಾರಿಸಲು

4.5 ಮುಖ್ಯ ಶಿಕ್ಷಕರ ಲಭ್ಯತೆ

ಶಿಕ್ಷಣ 2030 ಅಜೆಂಡಾದ ಸುಸ್ಥಿರ ಅಭಿವೃದ್ಧಿ ಗುರಿ–4ಸಿಯನ್ನು ಸಾಧಿಸಲು ಬೋಧನೆ ಮತ್ತು ಕಲಿಕೆಯನ್ನು ಸುಧಾರಿಸಲು ಶಾಲಾ ನಾಯಕತ್ವವನ್ನು ಬಲಪಡಿಸುವುದು ಮುಂದಿಟ್ಟಿರುವ ತಂತ್ರಗಳಲ್ಲಿ ಒಂದಾಗಿದೆ. ಕಡ್ಡಾಯ ವೃತ್ತಿಪರ ಅರ್ಹತೆ, ನಾಯಕತ್ವ, ನಾಯಕತ್ವ ತರಬೇತಿ ಮುಂತಾದ ಮಾನದಂಡಗಳನ್ನು ಸ್ಥಾಪಿಸುವುದು ಶಾಲಾ ನಾಯಕತ್ವವನ್ನು ಉತ್ತೇಜಿಸುತ್ತದೆ. ಸಮಗ್ರ ಶಿಕ್ಷಾ ಮಾರ್ಗಸೂಚಿಗಳ ಪ್ರಕಾರ ಶೇಕಡಾ 50ರಷ್ಟು ಮುಖ್ಯೋಪಾಧ್ಯಾಯರನ್ನು ನೇರ ನೇಮಕಾತಿ ಮಾಡಿಕೊಳ್ಳಬೇಕು.

ಇಲಾಖೆಯು ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಯಾವುದೇ ವೃತ್ತಿಪರ ವಿದ್ಯಾರ್ಹತೆಯನ್ನು ನಿಗದಿಪಡಿಸದಿರುವುದನ್ನು ಗಮನಿಸಲಾಯಿತು. ಹಿರಿಯ ಶಿಕ್ಷಕರಿಗೆ ಆ ಹುದ್ದೆಗಳನ್ನು ನೀಡಲಾಗುತ್ತಿತ್ತು. 2021–22ರ ಅವಧಿಯಲ್ಲಿ, ಹೆಚ್ಎಂ/ಜಿಹೆಚ್ಎಂ/ಎಸ್ಆರ್ಹೆಚ್ಎಂಗಳ[20] 16,446ರ ಮಂಜೂರಾದ ಹುದ್ದೆಗಳಿಗೆ ಪ್ರತಿಯಾಗಿ 4,854 (ಶೇಕಡಾ 29.51) ಮುಖ್ಯ ಶಿಕ್ಷಕರ ಹುದ್ದೆಗಳು ರಾಜ್ಯದಲ್ಲಿ ಖಾಲಿ ಇದ್ದವು.

ಅರ್ಹ ಸೇವಾನಿರತ ಶಿಕ್ಷಕರನ್ನು ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಲಾಗುತ್ತದೆ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಮುಖ್ಯೋಪಾಧ್ಯಾಯರ ಮತ್ತು ಹಿರಿಯ ಮುಖ್ಯೋಪಾಧ್ಯಾಯರಾಗಿ ಬಡ್ತಿ ನೀಡಲು ಪರೀಕ್ಷೆಯಲ್ಲಿ ಹೆಚ್ಚುವರಿ ವೃತ್ತಿಪರ ಅರ್ಹತೆ/ತೇರ್ಗಡೆಗೆ

[20] ಹೆಚ್ಎಮ್–ಮುಖ್ಯೋಪಾಧ್ಯಾಯ, ಜಿಹೆಚ್ಎಮ್–ಪದವೀಧರ ಮುಖ್ಯೋಪಾಧ್ಯಾಯ, ಎಸ್ಆರ್ಹೆಚ್ಎಮ್–ಹಿರಿಯ ಮುಖ್ಯೋಪಾಧ್ಯಾಯ.

ಒತ್ತಾಯಿಸಲು ಯಾವುದೇ ಅವಕಾಶವಿಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಆದಾಗ್ಯೂ, ಮುಖ್ಯೋಪಾಧ್ಯಾಯರ ಹುದ್ದೆಗಳಲ್ಲಿನ ಖಾಲಿ ಹುದ್ದೆಗಳು ಶಾಲೆಯ ಒಟ್ಟಾರೆ ಕಾರ್ಯನಿರ್ವಹಣೆಯ ಮೇಲೆ ಮತ್ತು ಅಂತಿಮವಾಗಿ ಶಾಲೆಯಲ್ಲಿ ಒದಗಿಸಲಾದ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ ಎಂಬುದು ವಾಸ್ತವಾಂಶವಾಗಿದೆ.

ನಾಯಕತ್ವದ ಸವಾಲುಗಳನ್ನು ಎದುರಿಸಲು ತಮ್ಮ ಸಲಹೆಗಳನ್ನು ನೀಡುವಾಗ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ವರದಿಯು ಪರಿಣಾಮಕಾರಿ ಶಾಲಾ ಮುಂದಾಳತ್ವದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದೆ.

ಶಾಲೆಯ ನಾಯಕತ್ವವನ್ನು ಬಲಪಡಿಸುವುದು

ಪ್ರಾಥಮಿಕ ಶಾಲೆಗಳಲ್ಲಿ ನಾಯಕತ್ವವನ್ನು ಸುಧಾರಿಸಲು ಬೆಂಗಳೂರು ನಗರ ವಿಶ್ವವಿದ್ಯಾಲಯದ ವರದಿಯು ಈ ಕೆಳಗಿನ ತಂತ್ರಗಳನ್ನು ಸೂಚಿಸಿದೆ:

- ಪ್ರತಿಭಾವಂತ ನಾಯಕರನ್ನು ಆಕರ್ಷಿಸಲು ಮತ್ತು ಉಳಿಸಿಕೊಳ್ಳಲು ಮತ್ತು ಮಹತ್ವಾಕಾಂಕ್ಷೆಯ ವ್ಯಕ್ತಿಗಳನ್ನು ಪ್ರೇರೇಪಿಸಲು ತರಗತಿಯ ಬೋಧನೆಯಿಂದ ಪ್ರತ್ಯೇಕವಾದ ನಾಯಕತ್ವದ ಮಾರ್ಗವನ್ನು ರಚಿಸುವುದು. ಇದನ್ನು ಪ್ರಮಾಣೀಕರಣಗಳು ಅಥವಾ ವೃತ್ತಿಜೀವನದ ಮೈಲಿಗಲ್ಲುಗಳಿಗೆ ಲಿಂಕ್ ಮಾಡಬಹುದು.
- ಶಾಲಾ ಮುಖ್ಯಸ್ಥರಿಗೆ ತರಬೇತಿ ಮತ್ತು ನಿರಂತರ ವೃತ್ತಿಪರ ಅಭಿವೃದ್ಧಿ ಅವಕಾಶಗಳನ್ನು ಒದಗಿಸುವುದು, ನಾಯಕತ್ವ ತಂತ್ರಗಳು, ಶಿಕ್ಷಣ ಮಾರ್ಗದರ್ಶನ ಮತ್ತು ಶಾಲೆಯ ಒಟ್ಟಾರೆ ಗುರಿಗಳ ಮೇಲೆ ಕೇಂದ್ರೀಕರಿಸುವುದು.
- ಕಾರ್ಯಕ್ಷಮತೆಯ ಮೌಲ್ಯಮಾಪನ, ಬೆಳವಣಿಗೆಯ ಗುರುತಿಸುವಿಕೆ ಮತ್ತು ನೇಮಕಾತಿ ತಂತ್ರಗಳಿಗೆ ಮಾನದಂಡಗಳಾಗಿ ಕಾರ್ಯನಿರ್ವಹಿಸುವ ಶಾಲಾ ನಾಯಕತ್ವಕ್ಕಾಗಿ ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು. ಇದು ನಾಯಕತ್ವವನ್ನು ಸ್ಥಾಪಿಸಲು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಸಹಾಯ ಮಾಡುತ್ತದೆ.

4.6 ವಿಷಯ–ನಿರ್ದಿಷ್ಟ ಶಿಕ್ಷಕರ ಲಭ್ಯತೆ

ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 25ರ ಪ್ರಕಾರ, ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಷಯ–ನಿರ್ದಿಷ್ಟ ಶಿಕ್ಷಕರನ್ನು (ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಇತ್ಯಾದಿ) ನಿಯೋಜಿಸಬೇಕಿತ್ತು. ಇಲಾಖೆಯಲ್ಲಿ ವಿಷಯ–ನಿರ್ದಿಷ್ಟ ಶಿಕ್ಷಕರ ಲಭ್ಯತೆ ಈ ಕೆಳಗಿನಂತಿತ್ತು:

ಕೋಷ್ಟಕ–4.6: ಪ್ರಾಥಮಿಕ ಶಾಲೆಗಳಲ್ಲಿ ವಿಷಯ ನಿರ್ದಿಷ್ಟ ಶಿಕ್ಷಕರ ಖಾಲಿ ಹುದ್ದೆಗಳು

ವಿಷಯ	ಮಂಜೂರಾದದ್ದು	ಕಾರ್ಯ ನಿರ್ವಹಿಸುತ್ತಿರುವವರು	ಖಾಲಿ ಹುದ್ದೆಗಳು	*ಶೇಕಡಾವಾರು*
ಭಾಷೆ	1,23,773	1,09,819	13,954	11.27
ಸಮಾಜ ವಿಜ್ಞಾನ	5,373	1,840	3,533	65.75
ಗಣಿತ, ವಿಜ್ಞಾನ	33,966	11,912	22,054	64.93
ದೈಹಿಕ ಶಿಕ್ಷಣ	6,771	4,334	2,437	35.99
ವಿಶೇಷ ಶಿಕ್ಷಕರು	481	218	263	54.68

ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ಶೇಕಡ 64.93ರಷ್ಟು ಖಾಲಿಯಿದ್ದು, ವಿಶೇಷ ಶಿಕ್ಷಕರ ವಿಭಾಗದಲ್ಲಿ ಶೇಕಡ 54.68ರಷ್ಟು ಹುದ್ದೆಗಳು ಖಾಲಿಯಿದ್ದವು. ಹೀಗೆ, ವಿಷಯ–ನಿರ್ದಿಷ್ಟ ಶಿಕ್ಷಕರ ಅನುಪಸ್ಥಿತಿಯು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ, ಇದು ಎಎಸ್ಇಆರ್–2022ರಲ್ಲಿ ದೃಢೀಕರಿಸಲ್ಪಟ್ಟಿದೆ, ಇದರಲ್ಲಿ ವಿದ್ಯಾರ್ಥಿಗಳ ಓದುವಿಕೆ, ಬರವಣಿಗೆ ಮತ್ತು ಅಂಕಗಣಿತದ ಕೌಶಲ್ಯಗಳಲ್ಲಿನ ಇಳಿಮುಖ ಪ್ರವೃತ್ತಿಯಿದ್ದಿತು.

1,614 ಗಣಿತ ಮತ್ತು 1,250 ಜೈವಿಕ ವಿಜ್ಞಾನ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

4.7 ಸೂಕ್ತ ಮಾಧ್ಯಮ ಶಿಕ್ಷಕರ ಲಭ್ಯತೆ

ಇಲಾಖೆಯು ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳಲ್ಲದೆ ಉರ್ದು, ತೆಲುಗು, ತಮಿಳು, ಮರಾಠಿ ಮುಂತಾದ ವಿವಿಧ ಮಾಧ್ಯಮಗಳ ಅಡಿಯಲ್ಲಿ ಶಾಲೆಗಳನ್ನು ನಡೆಸುತ್ತದೆ. ರಾಜ್ಯದಲ್ಲಿ ಮಾಧ್ಯಮ–ವಾರು ಶಾಲೆಗಳ ಸಂಖ್ಯೆಯನ್ನು **ಅನುಬಂಧ–4.3** ರಲ್ಲಿ ಸೂಚಿಸಲಾಗಿದೆ.

ಆಯಾ ಮಾಧ್ಯಮಗಳಲ್ಲಿ ಪ್ರವೀಣರಾಗಿರುವ ಶಿಕ್ಷಕರನ್ನು ಈ ಶಾಲೆಗಳಲ್ಲಿ ನಿಯೋಜಿಸಬೇಕು. ವಿವಿಧ ಮಾಧ್ಯಮಗಳಿಗೆ ಅಗತ್ಯವಿರುವ ಶಿಕ್ಷಕರ ಮಂಜೂರಾದ ಸಾಮರ್ಥ್ಯ, ಕಾರ್ಯ ನಿರ್ವಹಿಸುತ್ತಿರುವವರ ಸಾಮರ್ಥ್ಯ ಮತ್ತು ಖಾಲಿ ಹುದ್ದೆಗಳ ದತ್ತಾಂಶವನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. 38 ಉರ್ದು ಮಾಧ್ಯಮ ಶಾಲೆಗಳಲ್ಲಿ ಉರ್ದು ಪ್ರವೀಣ ಶಿಕ್ಷಕರು ಲಭ್ಯವಿರಲಿಲ್ಲ ಮತ್ತು ಕನ್ನಡ ಮಾಧ್ಯಮಕ್ಕೆ ಅರ್ಹರಾದ ಶಿಕ್ಷಕರನ್ನು ನಿಯೋಜಿಸಲಾಗಿತ್ತು ಎಂಬುದನ್ನು ಆಯ್ದ ಎಂಟು ಜಿಲ್ಲೆಗಳ ಉರ್ದು ಮಾಧ್ಯಮ ಶಾಲೆಗಳ ದಾಖಲೆಗಳ ಪರೀಕ್ಷಾ–ತನಿಖೆಯು ತೋರಿಸಿತು. ಬೋಧನಾ ಮಾಧ್ಯಮದಲ್ಲಿ ಪ್ರವೀಣರಲ್ಲದ ಶಿಕ್ಷಕರನ್ನು ನಿಯೋಜಿಸುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾಗಿ ಅವರ ಶೈಕ್ಷಣಿಕ ಪ್ರಗತಿಗೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಳ್ಳುವಾಗ (ಮೇ 2023) ನೇಮಕಾತಿ ಪ್ರಕ್ರಿಯೆಯಲ್ಲಿ ಉರ್ದು ಶಿಕ್ಷಕರ ಹುದ್ದೆಗಳಿಗೆ ಅಧಿಸೂಚನೆ ನೀಡಲಾಗಿತ್ತು ಆದರೆ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಿರಲಿಲ್ಲ ಎಂದು ಸರ್ಕಾರವು ತಿಳಿಸಿತು.

4.8 ಶಿಕ್ಷಕರ ನಿಯೋಜನೆ ಮತ್ತು ಶಿಕ್ಷಕರ ತರ್ಕಬದ್ಧತೆಯಲ್ಲಿ ಅಸಮತೋಲನ

ಇಲಾಖೆಯು ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಲಭ್ಯವಿರುವ ಶಿಕ್ಷಕರ ಅತ್ಯುತ್ತಮ ವಿತರಣೆಯನ್ನು ಖಚಿತಪಡಿಸಿಕೊಳ್ಳಬೇಕಾಗಿತ್ತು. ಆಯ್ದ ಎಂಟು ಜಿಲ್ಲೆಗಳಿಗೆ ಶಿಕ್ಷಕರ ಅವಶ್ಯಕತೆ, ಹೆಚ್ಚುವರಿ, ಅಗತ್ಯತೆ ಇತ್ಯಾದಿಗಳ ವಿವರಗಳು ಈ ಕೆಳಗಿನಂತಿವೆ:

ಕೋಷ್ಟಕ–4.7: ಆಯ್ದ 8 ಜಿಲ್ಲೆಗಳಲ್ಲಿ ಶಿಕ್ಷಕರ ಅಗತ್ಯತೆ, ಅಧಿಕ, ಅವಶ್ಯಕತೆ

ಜಿಲ್ಲೆಯ ಹೆಸರು	ಆರ್‌ಟಿಇ ಅಧಿನಿಯಮದ ಪ್ರಕಾರ ಅಗತ್ಯವಿರುವ ಶಿಕ್ಷಕರ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ	ಆರ್‌ಟಿಇ ಅಧಿನಿಯಮದ ಪ್ರಕಾರ ಅಗತ್ಯವಿರುವ ಹೆಚ್ಚುವರಿ ಶಿಕ್ಷಕರು	ತರ್ಕಬದ್ಧತೆಯ ಮೂಲಕ ಗುರುತಿಸಲಾದ ಹೆಚ್ಚುವರಿ ಶಿಕ್ಷಕರು	ತರ್ಕಬದ್ಧಗೊಳಿಸಿದರೆ ನಿವ್ವಳ ಅಗತ್ಯತೆ,
ಬಾಗಲಕೋಟೆ	10,435	5,509	4,926	3,017	1,909
ಬಳ್ಳಾರಿ	13,240	6,618	6,622	3,399	3,223
ಬೆಂಗಳೂರು (ಗ್ರಾಮೀಣ)	4,572	2,635	1,937	1,298	639
ಚಾಮರಾಜನಗರ	4,126	2,319	1,807	1,113	694
ಮೈಸೂರು	10,284	5,616	4,668	2,996	1,672
ರಾಯಚೂರು	10,812	5,462	5,350	2,363	2,987
ಶಿವಮೊಗ್ಗ	9,374	5,259	4,115	2,814	1,301
ಸಿಸಿ	5,119	2,774	2,345	1,391	954

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಹೀಗೆ, ಈ ಎಂಟು ಜಿಲ್ಲೆಗಳಲ್ಲಿ 31,770 ಶಿಕ್ಷಕರ ಅಗತ್ಯವಿದ್ದು, 18,391 ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಲಾಗಿದ್ದು, ಈ ಎಂಟು ಜಿಲ್ಲೆಗಳಲ್ಲಿ ಶಿಕ್ಷಕರ ಮರು ನಿಯೋಜನೆ ಮತ್ತು ತರ್ಕಬದ್ಧಗೊಳಿಸುವಿಕೆಯಿಂದ ಶೇಕಡಾ 58ರಷ್ಟು ಶಿಕ್ಷಕರ ಅಗತ್ಯವನ್ನು ಪೂರೈಸಬಹುದು ಎಂಬುದನ್ನು ಮೇಲಿನಿಂದ ಗಮನಿಸಬಹುದು. ಉದಾಹರಣೆಗೆ, ಶಿವಮೊಗ್ಗ ಜಿಲ್ಲೆಯಲ್ಲಿ ನಾಲ್ಕು ಬ್ಲಾಕ್‌ಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದ್ದರೆ ಬೇರೆ ಮೂರು ಬ್ಲಾಕ್‌ಗಳಲ್ಲಿ ಖಾಲಿ ಹುದ್ದೆಗಳಿದ್ದವು. ವಿವರಗಳನ್ನು **ಕೋಷ್ಟಕ–4.8**ರಲ್ಲಿ ಸೂಚಿಸಲಾಗಿದೆ.

ಕೋಷ್ಟಕ–4.8: ಶಿವಮೊಗ್ಗ ಜಿಲ್ಲೆಯಲ್ಲಿ ಬ್ಲಾಕ್‌ವಾರು ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು ಮತ್ತು ಅಧಿಕ

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳು	ಅಧಿಕ
1	ಭದ್ರಾವತಿ	0	155
2	ಹೊಸನಗರ	4	0
3	ಸಾಗರ	35	0
4	ಶಿಕಾರಿಪುರ	0	103
5	ಶಿವಮೊಗ್ಗ	0	156
6	ಸೊರಬ	81	0
7	ತೀರ್ಥಹಳ್ಳಿ	0	31
ಒಟ್ಟು		**120**	**445**

ಆಧಾರ: ಡಿಡಿಪಿಐ, ಶಿವಮೊಗ್ಗ

ವಿವಿಧ ಬ್ಲಾಕ್‌ಗಳು ಮತ್ತು ಜಿಲ್ಲೆಗಳಲ್ಲಿ ಶಿಕ್ಷಕರ ಲಭ್ಯತೆಯ ಅಸಮತೋಲನವು ರಾಜ್ಯದೊಳಗೆ ಶಿಕ್ಷಕರ ನಿಯೋಜನೆಯಲ್ಲಿ ತರ್ಕಬದ್ಧತೆಯ ಕೊರತೆಯನ್ನು ಎತ್ತಿ ತೋರಿಸುತ್ತದೆ.

ಲೆಕ್ಕಪರಿಶೋಧನೆಯ ಅವಲೋಕನವನ್ನು ಸ್ವೀಕರಿಸುವಾಗ (ಮೇ 2023) ವಿವಿಧ ಬ್ಲಾಕ್‌ಗಳು ಮತ್ತು ಜಿಲ್ಲೆಗಳಲ್ಲಿ, ಗ್ರಾಮೀಣ ಮತ್ತು ನಗರಗಳಾದ್ಯಂತ ಶಿಕ್ಷಕರ ನಿಯೋಜನೆಯಲ್ಲಿನ

ಅಸಮತೋಲನವನ್ನು ಪರಿಹರಿಸಲಾಗುವುದು ಎಂದು ಸರ್ಕಾರವು ತಿಳಿಸಿತು. ಆದಾಗ್ಯೂ, ಶಿಕ್ಷಕರ ಅಸಮಾನ ಹಂಚಿಕೆಯು ಶಿಕ್ಷಕರ ನಿಯೋಜನೆಯಲ್ಲಿ ಪರಿಣಾಮಕಾರಿ ತರ್ಕಬದ್ಧತೆಯ ಕೊರತೆಯನ್ನು ಸೂಚಿಸುತ್ತದೆ, ಇದು ವಿವಿಧ ಪ್ರದೇಶಗಳಿಗೆ ಶೈಕ್ಷಣಿಕ ಅವಕಾಶಗಳಲ್ಲಿ ಅಸಮಾನತೆಯನ್ನು ಶಾಶ್ವತಗೊಳಿಸುತ್ತದೆ ಎಂಬುದು ವಾಸ್ತವಾಂಶವಾಗಿದೆ.

4.9 ಒಂದೇ ಕೊಠಡಿಯಲ್ಲಿ ಬಹು ತರಗತಿಗಳಿಗೆ ಕಲಿಸುವುದು

ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 25ರ ಪ್ರಕಾರ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ, ಪ್ರತಿ ತರಗತಿಗೆ ಒಬ್ಬ ಶಿಕ್ಷಕರು ಲಭ್ಯವಾಗುವಂತೆ ಮಾಡಬೇಕಾಗಿತ್ತು. ಇಲಾಖೆಯು ತನ್ನ 'ನಲಿ ಕಲಿ[21] ಕಾರ್ಯಕ್ರಮ'ದ ಭಾಗವಾಗಿ ಸರ್ಕಾರಿ ಶಾಲೆಗಳಲ್ಲಿ 3ನೇ ತರಗತಿಯವರೆಗೆ ಬಹು ತರಗತಿಯ ಬೋಧನೆಯನ್ನು ಜಾರಿಗೊಳಿಸಿತು. ಬಹು–ತರಗತಿಯ ಶಿಕ್ಷಣದಲ್ಲಿ, ವೇಳಾಪಟ್ಟಿಯ ಅವಧಿಯೊಳಗೆ ಶಿಕ್ಷಕರು ಒಂದೇ ತರಗತಿಯಲ್ಲಿ ಕುಳಿತು ಎರಡು ಅಥವಾ ಹೆಚ್ಚಿನ ಪಠ್ಯಕ್ರಮದ ಶ್ರೇಣಿಗಳಲ್ಲಿ ಬೋಧನೆ ಮಾಡುತ್ತಾರೆ.

'ನಲಿ ಕಲಿ' ಕಾರ್ಯಕ್ರಮವು 3ನೇ ತರಗತಿವರೆಗೆ ಮಾತ್ರ ನಡೆಯಬೇಕಿದ್ದರೂ, ಶಿಕ್ಷಕರ ಕೊರತೆಯಿಂದ ಬಹು ತರಗತಿಯ ಬೋಧನೆಯನ್ನು 4ರಿಂದ 7ನೇ ಉನ್ನತ ತರಗತಿಗಳಿಗೆ ವಿಸ್ತರಿಸಿರುವುದನ್ನು ಗಮನಿಸಲಾಯಿತು. ಈ ಮಾದರಿಯು 1995ರಿಂದ ಜಾರಿಯಲ್ಲಿದ್ದರೂ ಕಲಿಕೆಯ ಫಲಿತಾಂಶದ ಮೌಲ್ಯಮಾಪನಗಳ ರೂಪದಲ್ಲಿ 'ನಲಿ–ಕಲಿ'ಯ ಬಹು–ತರಗತಿಯ ಬೋಧನೆಯನ್ನು ಮೌಲ್ಯಮಾಪನ ಮಾಡಲು ಇಲಾಖೆಯು ಇನ್ನೂ ಅಧ್ಯಯನವನ್ನು ಕೈಗೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇಲಾಖೆಯು 2017–18ರಿಂದ 2021–22ರ ಪರಿಶೀಲನಾ ಅವಧಿಯಲ್ಲಿ ಜನಗಣತಿ ಆಧಾರಿತ ರಾಜ್ಯ ಸಾಧನೆ ಸಮೀಕ್ಷೆ (ಸಿಎಸ್ಎಎಸ್) ದತ್ತಾಂಶವನ್ನು ವಿಶ್ಲೇಷಿಸಿರಲಿಲ್ಲ. ಹೀಗೆ, ರಾಜ್ಯದಲ್ಲಿ ಅಳವಡಿಸಲಾಗಿರುವ ಬಹು–ತರಗತಿಯ ಬೋಧನಾ ಮಾದರಿಯ ಪರಿಣಾಮಕಾರಿತ್ವವನ್ನು ನಿರ್ಣಯಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

ಬಹು–ತರಗತಿಯ ಬೋಧನೆ ವ್ಯವಸ್ಥೆಯು ಮಕ್ಕಳನ್ನು ತಮ್ಮ ಗೆಳೆಯರಿಂದ ಕಲಿಯಲು ಪ್ರೋತ್ಸಾಹಿಸುತ್ತದೆ ಮತ್ತು ತರಗತಿಯಲ್ಲಿನ ವ್ಯತ್ಯಾಸಗಳ ಅಡೆತಡೆಗಳನ್ನು ಮುರಿಯುತ್ತದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಮಕ್ಕಳ ಸಂಖ್ಯೆ ಕಡಿಮೆ ಇರುವ ಉನ್ನತ ವರ್ಗಗಳಿಗೂ ಸಹ ಈ ವ್ಯವಸ್ಥೆಯನ್ನು ವಿಸ್ತರಿಸಲಾಗಿದೆ ಎಂದೂ ತಿಳಿಸಲಾಯಿತು. ಆದರೆ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಬಹು–ತರಗತಿಯ ಬೋಧನೆಯು ಆರ್‌ಟಿಇ ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿರಲಿಲ್ಲ.

4.10 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ

"ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳ ನಿಯಮಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ), 1967 ಮತ್ತು ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ" ಪ್ರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ 'ಕೇಂದ್ರೀಕೃತ ಪ್ರವೇಶ ಕೋಶ'ದಿಂದ ಪ್ರಾಥಮಿಕ ಶಿಕ್ಷಕರ ನೇಮಕಾತಿಯನ್ನು ಕೈಗೊಳ್ಳಲಾಗುತ್ತದೆ. 2017–18ರಿಂದ ಇಲ್ಲಿಯವರೆಗಿನ (ಜನವರಿ 2023) ಶಿಕ್ಷಕರ ನೇಮಕಾತಿಗಳ ವರ್ಷವಾರು ವಿವರಗಳು ಕೆಳಗಿನಂತಿವೆ.

[21] ನಲಿ ಕಲಿ – ಕರ್ನಾಟಕದ ಚಟುವಟಿಕೆ ಆಧಾರಿತ ಕಲಿಕಾ ಕಾರ್ಯಕ್ರಮ

ಕೋಷ್ಟಕ–4.9: ಶಿಕ್ಷಕರ ನೇಮಕಾತಿಯ ವಿವರಗಳು

ವರ್ಷ	ಹೆಸರು	ಅಧಿಸೂಚಿಸಿದ ಖಾಲಿ ಹುದ್ದೆಗಳು	ಅರ್ಜಿ ಹಾಕಿದ ಅಭ್ಯರ್ಥಿಗಳ ಸಂಖ್ಯೆ	ಭರ್ತಿ ಮಾಡಿದ ಖಾಲಿ ಹುದ್ದೆಗಳ ಸಂಖ್ಯೆ	ಭರ್ತಿ ಮಾಡದ ಹುದ್ದೆಗಳ ಸಂಖ್ಯೆ	ಭರ್ತಿ ಮಾಡದ ಹುದ್ದೆಗಳ ಶೇಕಡಾವಾರು
2017–18	6ರಿಂದ 8ನೇ ತರಗತಿಗೆ ಪದವಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರು	10,000	68,332	3,389	6,611	66.11
2019–20	6ರಿಂದ 8ನೇ ತರಗತಿಗೆ ಪದವಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರು	10,565	76,986	1,994	8,571	81.13
2022–23	6ರಿಂದ 8ನೇ ತರಗತಿಗೆ ಪದವಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರು	15,000	1,06,083	ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.		

ಆಧಾರ: ಶಿಕ್ಷಣ ಇಲಾಖೆ

2017–18 ಮತ್ತು 2019–20ರ ಅವಧಿಯಲ್ಲಿ ನಿಗದಿತ ವಿದ್ಯಾರ್ಹತೆಯೊಂದಿಗೆ ಸಾಕಷ್ಟು ಸಂಖ್ಯೆಯ ಅರ್ಜಿದಾರರು ಲಭ್ಯವಿಲ್ಲದ ಕಾರಣ ಖಾಲಿ ಹುದ್ದೆಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿರಲಿಲ್ಲ. ಹಾಗಾಗಿ, 2022ರಲ್ಲಿ ಪ್ರಾರಂಭವಾದ ನೇಮಕಾತಿ ಪ್ರಕ್ರಿಯೆಯಲ್ಲಿ ಸರ್ಕಾರವು ಒಂದು–ಬಾರಿಯ ಕ್ರಮವಾಗಿ ಶಿಕ್ಷಕರ ಅರ್ಹತಾ ಮಾನದಂಡಗಳನ್ನು ಸಡಿಲಗೊಳಿಸಿತು. ಕಡಿಮೆ ನೇಮಕಾತಿ ಮತ್ತು ನೇಮಕಾತಿಯಲ್ಲಿನ ವಿಳಂಬವು ಶಾಲೆಗಳಲ್ಲಿ ದೀರ್ಘಕಾಲದ ಸಿಬ್ಬಂದಿ ಕೊರತೆಗೆ ಕಾರಣವಾಗುತ್ತದೆ ಮತ್ತು ಇದು ಅಂತಿಮವಾಗಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಗಳನ್ನು ಅಂಗೀಕರಿಸಿತು ಮತ್ತು 2017–18ರಿಂದ 2019–20ರವರೆಗೆ 20,565 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು 1,45,318 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು ಆದರೆ 5,383 ಅಭ್ಯರ್ಥಿಗಳು ಮಾತ್ರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದರು ಎಂದು ತಿಳಿಸಿತು (ಮೇ 2023). 15,000 ಖಾಲಿ ಹುದ್ದೆಗಳ ನೇಮಕಾತಿ ಪ್ರಗತಿಯಲ್ಲಿದೆ ಎಂದೂ ತಿಳಿಸಲಾಯಿತು.

4.10.1 ಕೇಂದ್ರೀಕೃತ ಪ್ರವೇಶ ಕೋಶದಿಂದ ಆಯ್ಕೆ ಪಟ್ಟಿಯ ತಯಾರಿಕೆ

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಕೇಂದ್ರೀಕೃತ ಪ್ರವೇಶ ಕೋಶವು ನಡೆಸುತ್ತದೆ. ಕೋಶವು ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಉಪನಿರ್ದೇಶಕರಡಿಯಲ್ಲಿ ಶಿಕ್ಷಕರ ಖಾಲಿ ಹುದ್ದೆಯ ವಿವರಗಳನ್ನು ಸಂಗ್ರಹಿಸುತ್ತದೆ ಮತ್ತು ಖಾಲಿ ಹುದ್ದೆಗಳನ್ನು ಅಧಿಸೂಚಿಸಿ ಕೇಂದ್ರೀಕೃತ ಪ್ರವೇಶ ಕೋಶದಿಂದ ನಿರ್ವಹಿಸಲ್ಪಡುವ ಆನ್‌ಲೈನ್ ಅಪ್ಲಿಕೇಶನ್ ವಿಂಡೋ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಕೋಶವು ಆಯ್ಕೆ ಪ್ರಕ್ರಿಯೆಯನ್ನು ನಿರ್ವಹಿಸುತ್ತದೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಿದ ನಂತರ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುತ್ತದೆ. ಜಿಲ್ಲಾವಾರು ಆಯ್ಕೆ ಪಟ್ಟಿಯನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಜಾಲತಾಣದಲ್ಲಿ ಆಯ್ಕೆ ಪಟ್ಟಿಯನ್ನು ಅಪ್‌ಲೋಡ್ ಮಾಡುವ ಮೊದಲು, ಕೇಂದ್ರೀಕೃತ ಪ್ರವೇಶ ಕೋಶವು ಆಯ್ಕೆ ಪಟ್ಟಿಯನ್ನು ದೃಢೀಕರಿಸದಿರುವುದನ್ನು ಗಮನಿಸಲಾಯಿತು. ಪ್ರವೇಶ ಕೋಶದಲ್ಲಿರುವ ಯಾವುದೇ ಅಧಿಕಾರಿಗಳು ಆಯ್ಕೆ ಪಟ್ಟಿಗೆ ಅನುಮೋದನೆ, ದೃಢೀಕರಣ ಮತ್ತು ಆಯ್ಕೆ ಪಟ್ಟಿಯ ಅಂತಿಮಗೊಳಿಸುವಿಕೆಯ ಸಂಕೇತವಾಗಿ ಸಹಿ ಮಾಡಿರಲಿಲ್ಲ. ಜಿಲ್ಲೆಗಳ ಡಿಡಿಪಿಐಗಳಿಗೂ ಸಹಿ ಮಾಡಿರುವ ಆಯ್ಕೆ ಪಟ್ಟಿಯ ಪ್ರತಿಯನ್ನು ಕಳುಹಿಸಿರಲಿಲ್ಲ. ಪ್ರವೇಶ ಕೋಶದ ಜಾಲತಾಣದಿಂದ ಡೌನ್‌ಲೋಡ್ ಮಾಡಲಾದ ಆಯ್ಕೆ ಪಟ್ಟಿಗಳ ಅನಧಿಕೃತ ವಿದ್ಯುನ್ಮಾನ ಪ್ರತಿಗಳ ಆಧಾರದ ಮೇಲೆ ಡಿಡಿಪಿಐಗಳು ನೇಮಕಾತಿ ಆದೇಶಗಳನ್ನು ನೀಡಿದ್ದರು. ಅಂತಹ ಡೌನ್‌ಲೋಡ್

ಮಾಡಿದ ವಿದ್ಯುನ್ಮಾನ ಪ್ರತಿಗಳನ್ನು ಸುಲಭವಾಗಿ ಮಾರ್ಪಾಡು ಮಾಡಬಹುದು. ಡಿಡಿಪಿಐಗಳು ನೇಮಕಾತಿ ಮಾಡಿದ ಅಭ್ಯರ್ಥಿಗಳ ವಾಸ್ತವಿಕ ಪಟ್ಟಿಯನ್ನು ಪಡೆಯಲು ಮತ್ತು ಡಿಡಿಪಿಐಗಳು ನೇಮಕ ಮಾಡಿದ ಅಭ್ಯರ್ಥಿಗಳು ಮೂಲ ಆಯ್ಕೆ ಪಟ್ಟಿಯಲ್ಲಿರುವವರು ಮತ್ತು ವರದಿ ಮಾಡದ ಅಭ್ಯರ್ಥಿಗಳ ವಿವರಗಳನ್ನು ಖಚಿತಪಡಿಸಿಕೊಳ್ಳಲು ಪ್ರವೇಶ ಕೋಶದಲ್ಲಿ ಯಾವುದೇ ಕಾರ್ಯವಿಧಾನಗಳು ಅಸ್ತಿತ್ವದಲ್ಲಿರಲಿಲ್ಲ.

ನೇಮಕಾತಿಗೆ ಅನಧಿಕೃತ ವಿದ್ಯುನ್ಮಾನ ದತ್ತಾಂಶದ ಬಳಕೆ ಮತ್ತು ಪ್ರವೇಶ ಕೋಶದ ಆಯ್ಕೆ ಪಟ್ಟಿಗೆ ಪ್ರತಿಯಾಗಿ ಅಂತಿಮವಾಗಿ ನೇಮಕಗೊಂಡ ಅಭ್ಯರ್ಥಿಗಳ ನೇಮಕಾತಿಗಳನ್ನು ಟ್ರ್ಯಾಕಿಂಗ್/ಹೊಂದಾಣಿಕೆ ಮಾಡದಿರುವುದು ಅನಧಿಕೃತ ಮಾರ್ಪಾಡುಗಳಾಗುವ ಅಪಾಯದಿಂದ ತುಂಬಿತ್ತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಅಕ್ರಮ ನೇಮಕಾತಿಗಳ ನಿದರ್ಶನಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು (ಸಿಪಿಐ) ಗಮನಿಸಿದ್ದಾರೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರಗತಿಯಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಅಕ್ರಮ ನೇಮಕಾತಿಯನ್ನು ಕೂಡಲೇ ರದ್ದುಮಾಡಿ ಸಿಪಿಐ ಕಚೇರಿಗೆ ವರದಿ ಕಳುಹಿಸುವಂತೆ ಎಲ್ಲ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಸಿಪಿಐ ಸೂಚಿಸಿದರು. ಅಕ್ರಮ ನೇಮಕಾತಿಗಳ ವಿವರಗಳು ಮತ್ತು ಅಂತಹ ನೇಮಕಾತಿಗಳ ಪ್ರತಿಯಾಗಿ ತೆಗೆದುಕೊಂಡ ಕ್ರಮಗಳು ಇತ್ಯಾದಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಆಯ್ಕೆ ಪಟ್ಟಿಯ ವಿದ್ಯುನ್ಮಾನ ದತ್ತಾಂಶ, ನೇಮಕಗೊಂಡ ಶಿಕ್ಷಕರ ದತ್ತಾಂಶ ಇತ್ಯಾದಿಗಳನ್ನು ಕೋರಲಾಗಿದ್ದರೂ ಸಹ ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ದತ್ತಾಂಶದ ಅನುಪಸ್ಥಿತಿಯಲ್ಲಿ, ನೇಮಕಗೊಂಡ ಶಿಕ್ಷಕರ ಪಟ್ಟಿಯೊಂದಿಗೆ ಆಯ್ಕೆ ಪಟ್ಟಿಯನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಲೆಕ್ಕಪರಿಶೋಧನಾ ವೀಕ್ಷಣೆಗೆ ಇಲಾಖೆಯು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

4.11 ಶಿಕ್ಷಕರ ಕಾರ್ಯಕ್ಷಮತೆಯ ಮೌಲ್ಯಮಾಪನ

"ಶಾಲಾ ಸಿದ್ಧಿ" ಎನ್ನುವುದು ಶಿಕ್ಷಕರು ಮತ್ತು ಶಾಲೆಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಪರಿಚಯಿಸಲಾದ ಮೌಲ್ಯಮಾಪನ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯ ಮೂಲಕ ರಾಜ್ಯದ ಶಿಕ್ಷಕರು ಸ್ವಯಂ ಮೌಲ್ಯಮಾಪನ ವರದಿಗಳನ್ನು ಸಲ್ಲಿಸುತ್ತಾರೆ. ಆದರೆ, ಶಿಕ್ಷಕರಲ್ಲಿನ ಕಾರ್ಯಕ್ಷಮತೆಯ ಕೊರತೆಯನ್ನು ಗುರುತಿಸಲು ಮತ್ತು ಅಗತ್ಯ ಮಧ್ಯಸ್ಥಿಕೆಗಳನ್ನು ರೂಪಿಸಲು ಆ ವರದಿಗಳಿಂದ ಬರುವ ದತ್ತಾಂಶವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯಾವುದೇ ಕಾರ್ಯವಿಧಾನವಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ತತ್ಪರಿಣಾಮವಾಗಿ, ಶಿಕ್ಷಕರ ವೃತ್ತಿಪರ ಅಭಿವೃದ್ಧಿಗಾಗಿ ಸಮಗ್ರ ತರಬೇತಿ ಅಗತ್ಯಗಳ ಮೌಲ್ಯಮಾಪನವನ್ನು ನಡೆಸಲು ಅಥವಾ ಮೌಲ್ಯಮಾಪನ ದತ್ತಾಂಶದ ಆಧಾರದ ಮೇಲೆ ಬೋಧನೆಯ ಗುಣಮಟ್ಟವನ್ನು ಹೆಚ್ಚಿಸಲು ತಂತ್ರಗಳನ್ನು ಅಭಿವೃದ್ಧಿಪಡಿಸಲು ಇಲಾಖೆಗೆ ಸಾಧ್ಯವಾಗಲಿಲ್ಲ. ಶಿಕ್ಷಕರ 'ಸ್ವ–ಮೌಲ್ಯಮಾಪನ ದತ್ತಾಂಶದ ಬಳಕೆ ಮಾಡದಿರುವುದು ಸುಧಾರಣೆಯ ಕ್ಷೇತ್ರಗಳನ್ನು ಗುರುತಿಸಲು ಇರುವ ಸಾಧ್ಯತೆಗಳಿಂದ ಇಲಾಖೆಯನ್ನು ವಂಚಿತಗೊಳಿಸುತ್ತದೆ ಮತ್ತು ಅದು ಅಂತಿಮವಾಗಿ ಬೋಧನೆಯ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ತರಬೇತಿ ಅವಧಿಗಳಲ್ಲಿ ತರಬೇತಿ–ಪೂರ್ವ ಮತ್ತು ತರಬೇತಿ–ನಂತರದ ಮೌಲ್ಯಮಾಪನವನ್ನು ನಡೆಸಲಾಗುತ್ತದೆ ಮತ್ತು ಲೆಕ್ಕಪರಿಶೋಧನೆಯ ವೀಕ್ಷಣೆಯನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

4.12 ಶಿಕ್ಷಕರ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳು

ರಾಷ್ಟ್ರೀಯ ಶಿಕ್ಷಣ ನೀತಿ, 2020 ನಿರಂತರ ವೃತ್ತಿಪರ ಅಭಿವೃದ್ಧಿ, ಪ್ರಚಾರಗಳು ಮತ್ತು ಪ್ರೋತ್ಸಾಹಕ್ಕಾಗಿ ನೀತಿ ಬದಲಾವಣೆಗಳ ಮೂಲಕ ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕರಿಸುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಪ್ರಸ್ತಾವಿಸಲಾದ ಚಟುವಟಿಕೆಗಳನ್ನು ಇಲಾಖೆಯು ಇನ್ನೂ ಪ್ರಾರಂಭಿಸಬೇಕಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಡ್ತಿ ನಿಯಮಗಳ ಪರಿಷ್ಕರಣೆ, ಕಾರ್ಯಕ್ಷಮತೆ ಆಧಾರಿತ ಉತ್ತೇಜನ ಇತ್ಯಾದಿಗಳನ್ನು ಇನ್ನೂ ನಿರ್ಧರಿಸಿ ಅನುಷ್ಠಾನಗೊಳಿಸಬೇಕಿದೆ. ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿಯ ನಿರ್ಧಾರವೂ ಅನುಷ್ಠಾನಕ್ಕೆ ಬಾಕಿ ಉಳಿದಿದೆ.

ವೀಕ್ಷಣೆಯನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೂ, ರಾಷ್ಟ್ರೀಯ ಶಿಕ್ಷಣ ನೀತಿಯ ನಿಬಂಧನೆಗಳ ಅನುಷ್ಠಾನದಲ್ಲಿನ ವಿಳಂಬವು ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಅವಕಾಶಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದು ವಾಸ್ತವಾಂಶವಾಗಿದೆ.

4.13 ಕಲಿಕೆಯ ಫಲಿತಾಂಶಗಳನ್ನು ಬೆಂಬಲಿಸಲು ಪಠ್ಯಕ್ರಮದ ಆವಿಷ್ಕಾರಗಳು

4.13.1 ಪಠ್ಯಕ್ರಮದ ಪರಿಷ್ಕರಣೆ

ಬದಲಾಗುತ್ತಿರುವ ಕಲಿಕಾ ಅವಶ್ಯಕತೆಗಳಿಗೆ ಪಠ್ಯಕ್ರಮವನ್ನು ಹೊಂದಿಸಲು ಮತ್ತು ಕಲಿಯುವವರನ್ನು ಭವಿಷ್ಯಕ್ಕಾಗಿ ಸಿದ್ಧಪಡಿಸಲು ಪಠ್ಯಕ್ರಮದ ಆವರ್ತಕ ಪರಿಷ್ಕರಣೆ ಮುಖ್ಯವಾಗಿದೆ. ಆದರೆ, ರಾಜ್ಯ ಸರ್ಕಾರವು 2007ರ ರಾಜ್ಯ ಪಠ್ಯಕ್ರಮದ ಚೌಕಟ್ಟನ್ನು ಅನುಸರಿಸುತ್ತಿದೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅಗತ್ಯತೆಗಳನ್ನು ಉಲ್ಲೇಖಿಸಿ ಪಠ್ಯಕ್ರಮದ ಪರಿಷ್ಕರಣೆಯನ್ನು ಇನ್ನೂ ಕೈಗೊಳ್ಳಬೇಕಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಎನ್‌ಸಿಇಆರ್‌ಟಿ ಮತ್ತು ಎನ್‌ಸಿಎಫ್ ಮಾರ್ಗಸೂಚಿಗಳು ಮತ್ತು ಚೌಕಟ್ಟನ್ನು ಆಧರಿಸಿ ಎಸ್‌ಸಿಎಫ್ ಅನ್ನು ರಚಿಸಲಾಗಿದೆ ಮತ್ತು ವಿನ್ಯಾಸಗೊಳಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಎಲ್ಲಾ ಪಠ್ಯಪುಸ್ತಕಗಳನ್ನು ನಿಯತಕಾಲಿಕವಾಗಿ ಪರಿಷ್ಕರಿಸಲಾಗುತ್ತದೆ ಮತ್ತು ವೀಕ್ಷಣೆಯನ್ನು ಗಮನಿಸಲಾಗಿದೆ ಎಂದೂ ಸಹ ತಿಳಿಸಲಾಯಿತು. ಆದರೂ, ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿ ಪಠ್ಯಕ್ರಮವನ್ನು ಪರಿಷ್ಕರಿಸುವಲ್ಲಿನ ವಿಳಂಬವು ವಿದ್ಯಾರ್ಥಿಗಳ ಬದಲಾಗುತ್ತಿರುವ ಕಲಿಕೆಯ ಅಗತ್ಯಗಳನ್ನು ಪರಿಹರಿಸಲು ಅಗತ್ಯವಾದ ಸಮಕಾಲೀನ ಶೈಕ್ಷಣಿಕ ವಿಧಾನಗಳ ಸಂಯೋಜನೆಗೆ ಅಡ್ಡಿಯಾಗುತ್ತದೆ ಎಂಬುದು ವಾಸ್ತವಾಂಶವಾಗಿದೆ.

4.13.2 ತರಗತಿವಾರು ಮತ್ತು ವಿಷಯವಾರು ಫಲಿತಾಂಶಗಳು

ಶಿಕ್ಷಣ ಹಕ್ಕು ನಿಯಮ 23(2)(ಸಿ)ಯ ತಿದ್ದುಪಡಿ (ಫೆಬ್ರವರಿ 2017) ಪ್ರಕಾರ, ಎಲ್ಲಾ ರಾಜ್ಯಗಳು ಎಲ್ಲಾ ಪ್ರಾಥಮಿಕ ತರಗತಿಗಳಿಗೆ "ತರಗತಿವಾರು, ವಿಷಯವಾರು ಕಲಿಕೆಯ ಫಲಿತಾಂಶಗಳನ್ನು" ತಯಾರಿಸಬೇಕು ಮತ್ತು ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) ಜೊತೆಗೆ ವ್ಯಾಖ್ಯಾನಿಸಲಾದ ಕಲಿಕಾ ಫಲಿತಾಂಶಗಳನ್ನು ಸಾಧಿಸಲು ಲಿಂಕ್ ಮಾಡಬೇಕು. ಇವು ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮತ್ತು ಬೋಧನಾ ವ್ಯವಸ್ಥೆಯಲ್ಲಿ ಹೊಣೆಗಾರಿಕೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿವೆ.

ಆದರೆ, ರಾಜ್ಯವು ಇನ್ನೂ ತರಗತಿ–ವಾರು, ವಿಷಯ–ವಾರು ಕಲಿಕೆಯ ಫಲಿತಾಂಶಗಳನ್ನು ಅಂತಿಮಗೊಳಿಸಿರಲಿಲ್ಲ ಮತ್ತು ಅದನ್ನು ಸಿಸಿಇಯೊಂದಿಗೆ ಲಿಂಕ್ ಮಾಡಿರಲಿಲ್ಲ. ಸಿಸಿಇ ದತ್ತಾಂಶವನ್ನು ಬಳಸಿಕೊಂಡು ಶಾಲೆಗಳ ಕಾರ್ಯಕ್ಷಮತೆಯ ಫಲಿತಾಂಶಗಳನ್ನು ನಿರ್ಣಯಿಸಲು ರಾಜ್ಯವು ಕ್ರಮಗಳನ್ನು ಸಹ ತೆಗೆದುಕೊಂಡಿರಲಿಲ್ಲ. ಸರ್ಕಾರವು ಯಾವುದೇ ನಿರ್ದಿಷ್ಟ ಪ್ರತಿಕ್ರಿಯೆ ನೀಡಲಿಲ್ಲ (ಮೇ 2023).

4.13.3 ಸಹ–ಪಠ್ಯ ಚಟುವಟಿಕೆಗಳು

ಶೈಕ್ಷಣಿಕ ಪಠ್ಯಕ್ರಮದೊಂದಿಗೆ ಸಹಪಠ್ಯ ಚಟುವಟಿಕೆಗಳನ್ನು ಸಂಯೋಜಿಸುವುದು ಮಗುವಿನ ಒಟ್ಟಾರೆ ಬೆಳವಣಿಗೆಗೆ ಕೊಡುಗೆ ನೀಡುತ್ತದೆ. ಕೆಆರ್‌ಟಿಇ ನಿಯಮಗಳ ಪ್ರಕಾರ ಡಿಎಸ್‌ಇಆರ್‌ಟಿಯು ರಾಜ್ಯದ ಶಾಲೆಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸುವ ಜವಾಬ್ದಾರಿಯುತ ಶೈಕ್ಷಣಿಕ ಪ್ರಾಧಿಕಾರವಾಗಿದೆ.

ಸಹಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ನಡೆಸಲು ಮತ್ತು ಈ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಸಾಧನೆಗಳನ್ನು ನಿರ್ಣಯಿಸಲು ಡಿಎಸ್‌ಇಆರ್‌ಟಿ ಯಾವುದೇ ಚೌಕಟ್ಟನ್ನು ರೂಪಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಸಹಪಠ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಚೌಕಟ್ಟಿನ ಕೊರತೆಯು ಶೈಕ್ಷಣಿಕ ಕ್ಷೇತ್ರದ ಹೊರಗೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಪೋಷಿಸುವ ಗುರಿಗೆ ಅಡ್ಡಿಯಾಗುತ್ತದೆ.

ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಗಮನಿಸುತ್ತಾ (ಮೇ 2023) ಶಾಲಾ ಹಂತದಿಂದ ರಾಷ್ಟ್ರಮಟ್ಟದವರೆಗೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಸಹಪಠ್ಯ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ ಎಂದು ಸರ್ಕಾರವು ತಿಳಿಸಿತು. ಪ್ರತಿಭಾ ಕಾರಂಜಿ, ಕಲೋತ್ಸವ, ಕ್ರೀಡಾಕೂಟ, ವಿಜ್ಞಾನ ವಸ್ತುಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ಸಹ ನಡೆಸಲಾಯಿತು. ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಶಾಲಾ ವಿಹಾರ, ಸಾಹಿತ್ಯ ಚಟುವಟಿಕೆಗಳು, ಶಾಲಾ ಸಂಸತ್ತು, ರಸಪ್ರಶ್ನೆ, ಚಿತ್ರಕಲೆ ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು ಎಂದೂ ತಿಳಿಸಲಾಯಿತು

ಆದಾಗ್ಯೂ, ಈ ಕ್ಷೇತ್ರದಲ್ಲಿ ಏಕರೂಪದ ಚೌಕಟ್ಟು ಅಥವಾ ಯಾವುದೇ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಸರ್ಕಾರ ಪ್ರತಿಕ್ರಿಯೆ ನೀಡಲಿಲ್ಲ.

4.13.4 ಸಮಗ್ರ ಭಾಷಾ ಮೌಲ್ಯಮಾಪನ ಚೌಕಟ್ಟಿನ ಅನುಪಸ್ಥಿತಿ

ಬೋಧನಾ–ಕಲಿಕಾ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿ ಮೌಲ್ಯಮಾಪನವನ್ನು ಪರಿಗಣಿಸಿ, ಪ್ರಾಥಮಿಕ ಹಂತದಲ್ಲಿ ಎಲ್ಲಾ ವಿಷಯಗಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು (ಸಿಸಿಯು) ಬಳಸುವುದನ್ನು ಶಿಕ್ಷಣ ಹಕ್ಕು ಕಾಯಿದೆ, 2009 ಕಡ್ಡಾಯಗೊಳಿಸಿತು. ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ವರದಿಯು ಎಲ್ಲಾ ನಾಲ್ಕು ಭಾಷಾ ಕೌಶಲ್ಯಗಳನ್ನು ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಎಲ್ಲಾ ನಾಲ್ಕು ಭಾಷಾ ಕೌಶಲ್ಯಗಳನ್ನು ಒಳಗೊಂಡಿರುವ ಸಾಮಾನ್ಯ ಯುರೋಪಿಯನ್ ರೆಫರೆನ್ಸ್ ಫ್ರೇಮ್‌ವರ್ಕ್‌ನಂತಹ ಸಮಗ್ರ ಭಾಷಾ ಮೌಲ್ಯಮಾಪನ ಚೌಕಟ್ಟನ್ನು ರಚಿಸಲು ಶಿಫಾರಸು ಮಾಡಿದೆ. ಶಿಕ್ಷಣ ಇಲಾಖೆಯ ಭಾಷೆಗಳಲ್ಲಿನ ಕಲಿಕೆಯ ಸಾಧನೆಗಳ ಮೌಲ್ಯಮಾಪನವು ಮುಖ್ಯವಾಗಿ ವಿದ್ಯಾರ್ಥಿಗಳ ಎರಡು ಮೂಲಭೂತ ಕೌಶಲ್ಯಗಳನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ, ಅವುಗಳೆಂದರೆ, ಓದುವುದು ಮತ್ತು ಬರೆಯುವುದರಲ್ಲಿ ಪ್ರಾವೀಣ್ಯತೆ. ಕೇಳುವ ಮತ್ತು ಮಾತನಾಡುವ ಇತರ ಎರಡು ಕೌಶಲ್ಯಗಳಲ್ಲಿನ ಪ್ರಾವೀಣ್ಯತೆಯ ಮೌಲ್ಯಮಾಪನಕ್ಕೆ ಸರಿಯಾದ ಪ್ರಾಮುಖ್ಯತೆಯನ್ನು ನೀಡಿರಲಿಲ್ಲ. ಹೀಗೆ, ಭಾಷೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳ ಮೌಲ್ಯಮಾಪನವು ಅಂಶಿಕವಾಗಿತ್ತು ಮತ್ತು ಓದುವ ಮತ್ತು ಬರೆಯುವ ಕೌಶಲ್ಯಗಳಿಗೆ ಮಾತ್ರ ಸೀಮಿತವಾಗಿತ್ತು.

1ನೇ ತರಗತಿಯಿಂದ 10ನೇ ತರಗತಿಯವರೆಗಿನ ಪಠ್ಯ ಪುಸ್ತಕಗಳನ್ನು ವ್ಯವಸ್ಥಿತವಾಗಿ ಹೊಸ ಪದಗಳೊಂದಿಗೆ ಸಂಯೋಜಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಓದು ಕರ್ನಾಟಕ, ಆಲೂರು ವೆಂಕಟರಾವ್ ಭಾಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಗ್ರಹಿಕೆ ಮತ್ತು ಕಲಿಕೆಯ ಕೌಶಲ್ಯಗಳನ್ನು ಸುಧಾರಿಸಲು ವಿದ್ಯಾರ್ಥಿಗಳಿಗೆ ವರ್ಕ್‌ಬುಕ್‌ಗಳನ್ನು ಸರಬರಾಜು ಮಾಡಲಾಗುತ್ತದೆ ಮತ್ತು ವೀಕ್ಷಣೆಯನ್ನು ಗಮನಿಸಲಾಗಿದೆ ಎಂದೂ ತಿಳಿಸಿತು. ಆದರೆ, ಭಾಷಾ ಮೌಲ್ಯಮಾಪನ ಚೌಕಟ್ಟನ್ನು ಒದಗಿಸುವಲ್ಲಿ ಸರ್ಕಾರವು ಪ್ರತಿಕ್ರಿಯೆ ನೀಡಿಲ್ಲ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ವರದಿಯು ಸಹ ಭಾಷಾ ಬೋಧನೆ ಮತ್ತು ಮೌಲ್ಯಮಾಪನ ವಿಧಾನಗಳನ್ನು ಸುಧಾರಿಸುವ ಅಗತ್ಯವನ್ನು ಒತ್ತಿ ಹೇಳಿದೆ.

ಪ್ರಾಥಮಿಕ ಹಂತದಲ್ಲಿ ಕಲಿಯುವವರ ಭಾಷಾ ಕೌಶಲ್ಯಗಳನ್ನು ಮೌಲ್ಯಮಾಪನ ಮಾಡುವುದು

ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ಬೋಧನೆ ಮತ್ತು ಮೌಲ್ಯಮಾಪನವನ್ನು ಸುಧಾರಿಸಲು ಅಧ್ಯಯನ ವರದಿಯು ಈ ಕೆಳಗಿನ ಕ್ರಮಗಳನ್ನು ಪ್ರಸ್ತಾವಿಸಿದೆ:

- ಸುಸಜ್ಜಿತ ಭಾಷಾ ಕೌಶಲ್ಯ ಅಭಿವೃದ್ಧಿಗೆ ಅನುಕೂಲವಾಗುವಂತೆ ಶಿಕ್ಷಕರು ಟೇಪ್ ರೆಕಾರ್ಡರ್‌ಗಳು, ಟೆಲಿವಿಷನ್‌ಗಳು, ತಾಕ್ಷಣಿಕ ಭಾಷಾ ಸಂಪನ್ಮೂಲಗಳು ಮತ್ತು ಇತರ ಸಂವಾದಾತ್ಮಕ ಸಾಧನಗಳನ್ನು ಮತ್ತು ವೈವಿಧ್ಯಮಯ ಬೋಧನಾ ವಿಧಾನಗಳನ್ನು ಬಳಸಿಕೊಳ್ಳಬೇಕು,.
- ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ಪ್ರಯೋಗಾಲಯಗಳನ್ನು ಸ್ಥಾಪಿಸುವುದರಿಂದ ವಿದ್ಯಾರ್ಥಿಗಳಿಗೆ ಅವರ ಭಾಷಾ ಕೌಶಲ್ಯವನ್ನು ಅಭ್ಯಾಸ ಮಾಡಲು ಮತ್ತು ವೃದ್ಧಿಸಲು ಸುರಕ್ಷಿತ ಮತ್ತು ಬೆಂಬಲ ವಾತಾವರಣವನ್ನು ಒದಗಿಸಬಹುದು.
- ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವ ಎಲ್ಲಾ ನಾಲ್ಕು ಭಾಷಾ ಕೌಶಲ್ಯಗಳನ್ನು ಒಳಗೊಂಡಿರುವ ಕಾಮನ್ ಯುರೋಪಿಯನ್ ಫ್ರೇಮ್‌ವರ್ಕ್ ಆಫ್ ರೆಫರೆನ್ಸ್ ಫಾರ್ ಲಾಂಗ್ವೇಜಸ್‌ನಂತಹ ಒಂದು ಸಮಗ್ರ ಭಾಷಾ ಮೌಲ್ಯಮಾಪನ ಚೌಕಟ್ಟನ್ನು ರಚಿಸಬೇಕು.

4.14 ಕಲಿಕೆಯನ್ನು ಬೆಂಬಲಿಸಲು ತಂತ್ರಜ್ಞಾನದ ಬಳಕೆ

4.14.1 ಪ್ರಾಥಮಿಕ ಶಾಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಸಂವಹನ (ಐಸಿಟಿ) ಶಿಕ್ಷಣ

ಶಾಲಾ ವ್ಯವಸ್ಥೆಯಲ್ಲಿ ಪ್ರವೇಶ, ಗುಣಮಟ್ಟ ಮತ್ತು ದಕ್ಷತೆಯನ್ನು ಸುಧಾರಿಸಲು ಐಸಿಟಿ ಮತ್ತು ಐಸಿಟಿ ಸಕ್ರಿಯಗೊಳಿಸಿದ ಚಟುವಟಿಕೆಗಳು ಮತ್ತು ಪ್ರಕ್ರಿಯೆಗಳನ್ನು ರೂಪಿಸುವುದು, ವೇಗವರ್ಧನೆ ಮಾಡುವುದು, ಬೆಂಬಲಿಸುವುದು ಮತ್ತು ಉಳಿಸಿಕೊಳ್ಳುವುದು, ಇವುಗಳನ್ನು ಶಾಲಾ ಶಿಕ್ಷಣದಲ್ಲಿ ಐಸಿಟಿಯ ರಾಷ್ಟ್ರೀಯ ನೀತಿಯು ತನ್ನ ಧ್ಯೇಯವಾಗಿ ಹೇಳಿದೆ. 12ನೇ ಯೋಜನಾ ಅವಧಿಯ ಅಂತ್ಯದ ವೇಳೆಗೆ ಐಸಿಟಿ ಸಾಕ್ಷರತಾ ಕಾರ್ಯಕ್ರಮವನ್ನು ಉನ್ನತ ಪ್ರಾಥಮಿಕ ಹಂತಕ್ಕೆ ವಿಸ್ತರಿಸಲಾಗುವುದು ಎಂದು ನೀತಿಯ ಸೆಕ್ಷನ್ 4.2.5 ಒದಗಿಸುತ್ತದೆ. ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುವಲ್ಲಿ ಪ್ರಸ್ತುತ ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸಲು ಅಸ್ತಿತ್ವದಲ್ಲಿರುವ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಮತ್ತು ನಡೆಯುತ್ತಿರುವ ಐಸಿಟಿ–ಆಧಾರಿತ ಶೈಕ್ಷಣಿಕ ಉಪಕ್ರಮಗಳ ವಿಸ್ತರಣೆಗೆ ಮತ್ತು ಅತ್ಯುತ್ತಮ ಬಳಕೆಗೆ ಎನ್‌ಇಪಿ 2020 ಕರೆ ನೀಡಿದೆ.

ಪ್ರಾಥಮಿಕ ಶಾಲೆಗಳಿಗೆ ಐಸಿಟಿ ಶಿಕ್ಷಣವನ್ನು ವಿಸ್ತರಿಸಲು ಇಲಾಖೆಯು ಯಾವುದೇ ನೀತಿಯನ್ನು ತಯಾರಿಸದಿರುವುದನ್ನು ಗಮನಿಸಲಾಯಿತು. ಹೀಗೆ, ಸರ್ಕಾರಿ ಪ್ರಾಥಮಿಕ ವಲಯದಲ್ಲಿ ಐಸಿಟಿ ಅನುಷ್ಠಾನದ ಬಗ್ಗೆ ಇಲಾಖೆಗೆ ಇನ್ನೂ ಸ್ಪಷ್ಟ ನಿರ್ದೇಶನವಿರಲಿಲ್ಲ.

ಐಸಿಟಿ ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ಮಾಧ್ಯಮಿಕ ಶಾಲೆಗಳೊಂದಿಗೆ ಪ್ರಾಥಮಿಕ ಶಾಲೆಗಳನ್ನು ಗುಂಪು ಮಾಡುವುದನ್ನು ಪ್ರಯತ್ನಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

ಪ್ರಾಥಮಿಕ ಶಿಕ್ಷಣದಲ್ಲಿ ಐಸಿಟಿ ಅನುಷ್ಠಾನದ ಕುರಿತು ಅಧ್ಯಯನ ವರದಿಯ (ಬಿಸಿಯು) ಸಂಶೋಧನೆಗಳು ಈ ಕೆಳಗಿನಂತಿವೆ:

ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಶಿಕ್ಷಣದ ಬಳಕೆ

ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಶಿಕ್ಷಣವನ್ನು ಅನುಷ್ಠಾನಗೊಳಿಸುವುದರಿಂದ ಸುಧಾರಿತ ಕಲಿಕೆಯ ಫಲಿತಾಂಶಗಳು, ವಿದ್ಯಾರ್ಥಿಗಳ ಹೆಚ್ಚಿನ ಭಾಗವಹಿಸುವಿಕೆ, ವೈಯಕ್ತಿಕ ಕಲಿಕೆ, ಸಹಯೋಗದ ಕಲಿಕೆ, ಡಿಜಿಟಲ್ ಸಾಕ್ಷರತೆ, ವೃತ್ತಿ ಸನ್ನದ್ಧತೆ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಹೆಚ್ಚಿನ ಪ್ರವೇಶವನ್ನು ನೀಡುತ್ತದೆ ಎಂದು ಅಧ್ಯಯನ ವರದಿ ಹೇಳಿದೆ.

2018–19ನೇ ಸಾಲಿನ ವಾರ್ಷಿಕ ಯೋಜನೆಯು ₹122.90 ಕೋಟಿ ಅಂದಾಜು ವೆಚ್ಚದಲ್ಲಿ 5,121 ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾವನೆ ಸಲ್ಲಿಸಿದ್ದರೂ, ಯೋಜನೆಯನ್ನು ಅನುಷ್ಠಾನಗೊಳಿಸಲಿಲ್ಲ ಮತ್ತು 2021–22ರಲ್ಲಿ ಯೋಜನೆಯನ್ನು ಕೈಬಿಡಲಾಯಿತು. ಅದೇ ರೀತಿ, 2021–22ರಲ್ಲಿ ರಾಜ್ಯದ 502 ಶಾಲೆಗಳಲ್ಲಿ ಐಸಿಟಿ ಮಧ್ಯಸ್ಥಿಕೆಗಳ ಅನುಷ್ಠಾನಕ್ಕೆ ₹32.12 ಕೋಟಿ ಮಂಜೂರು ಮಾಡಲಾಗಿತ್ತು ಆದರೆ ಯೋಜಿತ ಮಧ್ಯಸ್ಥಿಕೆಗಳನ್ನು ಅನುಷ್ಠಾನಗೊಳಿಸಲಿಲ್ಲ. ಐಸಿಟಿಗೆ ಮೀಸಲಿಟ್ಟ ಹಣದ ಬಳಕೆ ಮಾಡದಿರುವುದಕ್ಕೆ ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿನ ವಿಳಂಬವು ಮುಖ್ಯ ಕಾರಣವಾಗಿತ್ತು. ಹೀಗೆ, ಸರ್ಕಾರವು ಹಣವನ್ನು ಒದಗಿಸಿದರೂ ವಿದ್ಯಾರ್ಥಿಗಳು ಐಸಿಟಿ ಶಿಕ್ಷಣದಿಂದ ವಂಚಿತರಾದರು.

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಯೋಜನೆಯನ್ನು ಅನುಷ್ಠಾನಗೊಳಿಸದಿರುವುದು ಸಮಕಾಲೀನ ಯುಗಕ್ಕೆ ಅಗತ್ಯವಾದ ತಂತ್ರಜ್ಞಾನ ಮತ್ತು ಡಿಜಿಟಲ್ ಕೌಶಲ್ಯಗಳಿಗೆ ವಿದ್ಯಾರ್ಥಿಗಳ ಅನಾವರಣವನ್ನು ಮಿತಿಗೊಳಿಸುತ್ತದೆ ಮತ್ತು ಐಸಿಟಿ ಸೌಲಭ್ಯಗಳನ್ನು ಒದಗಿಸುವ ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳ ನಡುವಿನ ಶೈಕ್ಷಣಿಕ ವಿಭಜನೆಯನ್ನು ಉಲ್ಬಣಗೊಳಿಸುತ್ತದೆ.

ರಾಜ್ಯದಲ್ಲಿ 502 ಶಾಲೆಗಳಿಗೆ ಐಸಿಟಿ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೂ, ಹಣವನ್ನು ಮಂಜೂರು ಮಾಡಿದ್ದರೂ ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಸೌಲಭ್ಯಗಳ ಅನುಷ್ಠಾನದಲ್ಲಿನ ವಿಳಂಬವು ವಿದ್ಯಾರ್ಥಿಗಳು ಐಸಿಟಿ ಸೌಲಭ್ಯಗಳಿಂದ ವಂಚಿತರಾಗಿದ್ದರು ಎಂಬುದು ವಾಸ್ತವಾಂಶವಾಗಿದೆ.

4.14.2 ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಮೂಲಸೌಕರ್ಯಗಳ ಲಭ್ಯತೆ

ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಮೂಲಸೌಕರ್ಯಗಳ ಲಭ್ಯತೆಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. 2021–22ರ ಅವಧಿಯಲ್ಲಿ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಲಭ್ಯವಿರುವ ಐಸಿಟಿ ಸೌಲಭ್ಯಗಳ ವಿವರಗಳು ಕೆಳಗಿನಂತಿವೆ.

ಕೋಷ್ಟಕ–4.10: ಪ್ರಾಥಮಿಕ ಶಾಲೆಗಳಲ್ಲಿ ಐಸಿಟಿ ಮೂಲ ಸೌಕರ್ಯ

ಆಡಳಿತ ವರ್ಗ	ಅಂತರ್ಜಾಲ ಹೊಂದಿದ ಶಾಲೆಗಳ ಶೇಕಡಾವಾರು	ಡಿಜಿಟಲ್ ಬೋರ್ಡ್ ಹೊಂದಿದ ಶಾಲೆಗಳ ಶೇಕಡಾವಾರು	ಸ್ಮಾರ್ಟ್ ಟಿವಿ ಹೊಂದಿದ ಶಾಲೆಗಳ ಶೇಕಡಾವಾರು	ಕಂಪ್ಯೂಟರ್ ಹೊಂದಿದ ಶಾಲೆಗಳ ಶೇಕಡಾವಾರು	ಪ್ರೊಜೆಕ್ಟರ್ ಹೊಂದಿದ ಶಾಲೆಗಳ ಶೇಕಡಾವಾರು
ಶಿಕ್ಷಣ ಇಲಾಖೆ	6.72	0.58	4.64	3.96	8.25
ಅನುದಾನ ರಹಿತ ಖಾಸಗಿ	58.27	10.75	21.12	33.90	30.84
ಸರ್ಕಾರಿ ಅನುದಾನಿತ	36.70	3.02	8.97	12.28	14.83

ಆಧಾರ: ಎಸ್ಎಟಿಎಸ್, ಶಿಕ್ಷಣ ಇಲಾಖೆ

ಶೇ.58.27ರಷ್ಟು ಅನುದಾನರಹಿತ ಶಾಲೆಗಳಲ್ಲಿ ಇಂಟರ್‌ನೆಟ್ ಸೌಲಭ್ಯವಿದ್ದರೆ, ಶೇಕಡಾ 6.72ರಷ್ಟು ಸರಕಾರಿ ಶಾಲೆಗಳಲ್ಲಿ ಮಾತ್ರ ಇಂಟರ್‌ನೆಟ್ ಸೌಲಭ್ಯವಿದ್ದಿತು. ಇದಲ್ಲದೆ, ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುವ ಶೇಕಡಾ 3.96ರಷ್ಟು ಶಾಲೆಗಳಿಗೆ ಪ್ರತಿಯಾಗಿ ಶೇಕಡಾ 33.90ರಷ್ಟು ಅನುದಾನರಹಿತ ಶಾಲೆಗಳು ಕಂಪ್ಯೂಟರ್‌ಗಳನ್ನು ಹೊಂದಿದ್ದವು. ಹೀಗೆ, ಖಾಸಗಿ ಅನುದಾನರಹಿತ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳಲ್ಲಿ ಐಸಿಟಿ ಮೂಲಸೌಕರ್ಯ ಸೌಲಭ್ಯಗಳ ಲಭ್ಯತೆಯಲ್ಲಿ ಗಮನಾರ್ಹ ಕೊರತೆಯಿದ್ದಿತು. ಆಧುನಿಕ ಜಗತ್ತಿನಲ್ಲಿ ಅಗತ್ಯವಿರುವ ಡಿಜಿಟಲ್ ಸಾಮರ್ಥ್ಯಗಳನ್ನು ಒದಗಿಸುವಲ್ಲಿನ ಸರ್ಕಾರಿ ಶಾಲೆಗಳ ಅಸಮರ್ಥತೆಯು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಶೈಕ್ಷಣಿಕ ಮತ್ತು ವೃತ್ತಿ ಭವಿಷ್ಯವನ್ನು ಮೊಟಕುಗೊಳಿಸುವುದು ಮತ್ತು ಈ ಎರಡು ವಿಭಾಗಗಳಲ್ಲಿ ದಾಖಲಾದ ಮಕ್ಕಳ ನಡುವಿನ ಡಿಜಿಟಲ್ ಅಂತರವನ್ನು ವಿಸ್ತರಿಸುವುದು.

ಐಸಿಟಿ ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ಮಾಧ್ಯಮಿಕ ಶಾಲೆಗಳೊಂದಿಗೆ ಪ್ರಾಥಮಿಕ ಶಾಲೆಗಳ ಗುಂಪು ಮಾಡಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

ಶಿಫಾರಸು–6: ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಕಲ್ಪಿಸಿದಂತೆ ಪ್ರತಿ ಶಾಲೆಯಲ್ಲಿ ಸಾಕಷ್ಟು ಸಂಖ್ಯೆಯ ಶಿಕ್ಷಕರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಶಾಲೆಗಳಲ್ಲಿ ಶಿಕ್ಷಕರ ನಿಯೋಜನೆಯನ್ನು ತರ್ಕಬದ್ಧಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮವನ್ನು ಪ್ರಾರಂಭಿಸಬೇಕು.

ಶಿಫಾರಸು–7: ರಾಜ್ಯ ಸರ್ಕಾರವು ಶಿಕ್ಷಕರ ಕಾರ್ಯಕ್ಷಮತೆಯನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡಬೇಕು ಮತ್ತು ಬೋಧನಾ ಕಲಿಕಾ ಉದ್ದೇಶಗಳಿಗಾಗಿ ಐಸಿಟಿಯನ್ನು ಅಳವಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಬೋಧನೆಯಲ್ಲಿ ಗುಣಮಟ್ಟವನ್ನು ಸುಧಾರಿಸಲು ಕ್ರಮವನ್ನು ಪ್ರಾರಂಭಿಸಬೇಕು.

ಅಧ್ಯಾಯ V
ಗುಣಮಟ್ಟ ಮಧ್ಯಸ್ಥಿಕೆಗಳು ಮತ್ತು ಫಲಿತಾಂಶದ ಮೌಲ್ಯಮಾಪನ

ಅಧ್ಯಾಯ–V

ಗುಣಮಟ್ಟ ಮಧ್ಯಸ್ಥಿಕೆಗಳು ಮತ್ತು ಫಲಿತಾಂಶದ ಮೌಲ್ಯಮಾಪನ

ಕಾರ್ಯಕ್ಷಮತೆ ಶ್ರೇಣೀಕರಣ ಸೂಚ್ಯಂಕದಲ್ಲಿ (ಪಿಜಿಐ) ರಾಜ್ಯದ ಸ್ಥಿತಿಯು 2017–18ರಲ್ಲಿನ 708ರಿಂದ 2021–22ರ ಅವಧಿಯಲ್ಲಿ 862ಕ್ಕೆ ಸ್ಥಿರವಾಗಿ ಸುಧಾರಿಸಿ ರಾಜ್ಯದ ಕಾರ್ಯಕ್ಷಮತೆಯಲ್ಲಿ ಸುಧಾರಣೆಗಳನ್ನು ಸೂಚಿಸಿದರೂ ಸಹ ಇಲಾಖೆಯು ಪ್ರತಿ ವರ್ಷ ಸಾಧನೆ ಸಮೀಕ್ಷೆಗಳನ್ನು ನಡೆಸಲಿಲ್ಲವಾದ್ದರಿಂದ ವಿದ್ಯಾರ್ಥಿಗಳ ಸಾಧನೆ ಮಟ್ಟವನ್ನು ನಿರ್ಣಯಿಸಲಾಗಲಿಲ್ಲ. ಆದರೆ, ಎಎಸ್ಇಆರ್ ನಡೆಸಿದ ಸಾಧನೆಯ ಸಮೀಕ್ಷೆಗಳು ರಾಜ್ಯದ ಶಾಲೆಗಳಲ್ಲಿ ಕಲಿಕೆಯ ಮಟ್ಟದ ಅಸಮರ್ಪಕ ಸಾಧನೆಯಾಗಿರುವುದನ್ನು ವರದಿ ಮಾಡಿದ್ದವು. ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆ ಕೌನ್ಸಿಲ್ (ಕೆಎಸ್ಕ್ಯುಎಎಸಿ) ಸಹಯೋಗದೊಂದಿಗೆ ಲೆಕ್ಕಪರಿಶೋಧನೆಯು ಕೈಗೊಂಡ ಕಲಿಕಾ ಮೌಲ್ಯಮಾಪನವು 128 ಮಾದರಿ ಶಾಲೆಗಳಲ್ಲಿ ಸುಮಾರು ಶೇಕಡಾ 70ರಷ್ಟು ವಿದ್ಯಾರ್ಥಿಗಳು ಕಲಿಕೆಯ ಸಾಧನೆಯಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಸಾಧಿಸುವುದರೊಂದಿಗೆ ಸಾಕಷ್ಟಿಲ್ಲದ ಮಟ್ಟದ ಸಾಧನೆಯನ್ನು ಸೂಚಿಸುತದೆ.

ಗುಣಮಟ್ಟ ಮಧ್ಯಸ್ಥಿಕೆಗಳು

ಸಮಗ್ರ ಶಿಕ್ಷಾ ಚೌಕಟ್ಟು ಶಿಕ್ಷಣದ ಗುಣಮಟ್ಟವನ್ನು ಪರಿವರ್ತಿಸುವ ಒಂದು ಸಮಗ್ರ ವಿಧಾನವನ್ನು ಕಲ್ಪಿಸುತ್ತದೆ. ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಸುಧಾರಿಸಲು, ಕೆಳಗೆ ಚರ್ಚಿಸಿದಂತೆ, ಯೋಜನೆಯು ಹಲವಾರು ಮಧ್ಯಸ್ಥಿಕೆಗಳನ್ನು ಒದಗಿಸುತ್ತದೆ.

5.1 ಕಾರ್ಯಕ್ಷಮತೆ ಶ್ರೇಣೀಕರಣ ಸೂಚ್ಯಂಕ

ಕಾರ್ಯಕ್ಷಮತೆ ಶ್ರೇಣೀಕರಣ ಸೂಚ್ಯಂಕವು (ಪಿಜಿಐ) ರಾಜ್ಯ/ಕೇಂದ್ರಾಡಳಿತ ಪ್ರದೇಶ ಮಟ್ಟದಲ್ಲಿ ಶಾಲಾ ಶಿಕ್ಷಣ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಶಿಕ್ಷಣ ಸಚಿವಾಲಯವು ರೂಪಿಸಿದ ಮೌಲ್ಯಮಾಪನ ಸಾಧನವಾಗಿದೆ. 70 ಸೂಚಕಗಳ ಮೌಲ್ಯಗಳನ್ನು ಪರಿಗಣಿಸಿ ಪಿಜಿಐಯನ್ನು ತಲುಪಲಾಗುತ್ತದೆ. ಕ್ಷೇತ್ರವಾರು ಮಾನದಂಡಗಳನ್ನು **ಅನುಬಂಧ–5.1**ರಲ್ಲಿ ನೀಡಲಾಗಿದೆ. ರಾಜ್ಯಗಳು ಪ್ರತಿಯೊಂದು ಸೂಚಕಗಳ ಮೇಲೆ ತಮ್ಮ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುವ ಮತ್ತು ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸುವ ಮೂಲಕ ತಮ್ಮ ಸೂಚಂಕಗಳು ಅಂಕಗಳು/ಶ್ರೇಣೀಕರಣವನ್ನು ಉನ್ನತೀಕರಿಸಲು ಪ್ರಸ್ತಾವನೆಗಳನ್ನು ರೂಪಿಸುವ ಅಗತ್ಯವಿದೆ. ಲೆಕ್ಕಪರಿಶೋಧನಾ ಅವಧಿಯಲ್ಲಿ ರಾಜ್ಯದ ಪಿಜಿಐ ಕೆಳಕಂಡಂತಿತ್ತು.

ಕೋಷ್ಠಕ–5.1: ಕರ್ನಾಟಕ ರಾಜ್ಯದ ಪಿಜಿಐ ವಿವರಗಳು

ಕ್ಷೇತ್ರ	ವಿವರಣೆ	ಒಟ್ಟು ಅಂಕ	2017–18	2018–19	2019–20	2020–21
1	ಕಲಿಕೆಯ ಫಲಿತಾಂಶ ಮತ್ತು ಗುಣಮಟ್ಟ	180	160	160	160	160
2	ಪ್ರವೇಶ	80	69	75	72	76
3	ಮೂಲಸೌಕರ್ಯ ಮತ್ತು ಸೌಲಭ್ಯಗಳು	150	100	81	96	123
4	ಈಕ್ವಿಟಿ	230	212	199	206	211
5	ಆಡಳಿತ ಪ್ರಕ್ರಿಯೆಗಳು	360	165	240	279	292
	ಒಟ್ಟು		**706**	**755**	**813**	**862**

ಆಧಾರ: ಸಮಗ್ರ ಶಿಕ್ಷಣ ಅಭಿಯಾನ, ಕರ್ನಾಟಕ

ದೇಶಾದ್ಯಂತ ಪಿಜಿಐನ ವಿವರವಾದ ವಿಶ್ಲೇಷಣೆಯು 2020–21ನೇ ಸಾಲಿನಲ್ಲಿ ರಾಜ್ಯವು ಪಿಜಿಐನಲ್ಲಿ 14ನೇ ಸ್ಥಾನದಲ್ಲಿತ್ತು ಎಂಬುದನ್ನು ತೋರಿಸಿತು. ರಾಜ್ಯವು 2017–18ರಿಂದ 2020–21ರವರೆಗೆ ತನ್ನ ಸ್ಥಾನವನ್ನು 701–750ರ ಮಟ್ಟದಿಂದ 850–900 ಮಟ್ಟಕ್ಕೆ ಸುಧಾರಿಸಿರುವುದನ್ನು ಗಮನಿಸಬಹುದು. ಕಲಿಕಾ ಫಲಿತಾಂಶ ವಿಭಾಗದಲ್ಲಿ ರಾಜ್ಯವು ಅತ್ಯುತ್ತಮ ಸಾಧನೆ ಮಾಡಿದ್ದರೂ, 2020–21ರ ಅವಧಿಯಲ್ಲಿ ಮೂಲಸೌಕರ್ಯ ಮತ್ತು ಸೌಲಭ್ಯಗಳ ವಿಭಾಗದಲ್ಲಿ ಅದರ ಕಾರ್ಯಕ್ಷಮತೆ ಕಳಪೆಯಾಗಿತ್ತು.

ವರದಿಗಳನ್ನು ಗಮನಿಸಲಾಗಿದೆ ಮತ್ತು ಮೂಲಸೌಕರ್ಯಗಳ ಸುಧಾರಣೆಗೆ ಕಾಳಜಿ ವಹಿಸಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

5.2 ಶಿಕ್ಷಣ ಮತ್ತು ಸಂಶೋಧನೆಯ ವಾರ್ಷಿಕ ಸಮೀಕ್ಷೆ

ಓದುವ, ಬರೆಯುವ ಮತ್ತು ಅಂಕಗಣಿತದಲ್ಲಿ ಮಕ್ಕಳ ಕಲಿಕೆಯ ಮಟ್ಟವನ್ನು ಪರೀಕ್ಷಿಸಿ 2018ರಲ್ಲಿ ದೇಶಾದ್ಯಂತ (596 ಜಿಲ್ಲೆಗಳಲ್ಲಿ) ಮಾದರಿ ಸಮೀಕ್ಷೆಗಳನ್ನು ನಡೆಸಿದ ರಾಷ್ಟ್ರೀಯ ಮಟ್ಟದ ಎನ್‌ಜಿಒ ಶಿಕ್ಷಣ ಮತ್ತು ಸಂಶೋಧನೆಯ ವಾರ್ಷಿಕ ಸಮೀಕ್ಷೆಯ (ಎಎಸ್‌ಇಆರ್) ಫಲಿತಾಂಶಗಳನ್ನು ವಿಷನ್ 2030 ಡಾಕ್ಯುಮೆಂಟ್ ಉಲ್ಲೇಖಿಸಿತ್ತು. ಎಎಸ್‌ಇಆರ್ ಸಮೀಕ್ಷೆಯ ಪ್ರಕಾರ 8ನೇ ತರಗತಿಗೆ ಹಾಜರಾಗುವ ಶೇಕಡಾ 25ರಷ್ಟು ವಿದ್ಯಾರ್ಥಿಗಳು ಮೂಲಭೂತ ಓದುವ ಕೌಶಲ್ಯದಲ್ಲಿ ಕಳಪೆಯಾಗಿದ್ದರು ಮತ್ತು ಶೇಕಡಾ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯವಕಲನ ಮತ್ತು ಸರಳ ಭಾಗಾಕಾರದಂತಹ ಮೂಲಭೂತ ಗಣಿತವನ್ನು ಮಾಡಲು ಅಸಮರ್ಥರಾಗಿದ್ದರು. ಸೌಕರ್ಯಗಳ ಸುಧಾರಣೆಯ ಹೊರತಾಗಿಯೂ ಕಲಿಕೆಯ ಮಟ್ಟವು ಗಮನಾರ್ಹವಾಗಿ ಸುಧಾರಿಸಿರಲಿಲ್ಲ ಎಂಬುದನ್ನು ಸಮೀಕ್ಷೆಯು ತೋರಿಸಿತು.

ಮಾರ್ಚ್ 2021ರ (ಕರ್ನಾಟಕ) ಎಎಸ್‌ಇಆರ್ ವರದಿಯು 2018ರ ಕಲಿಕೆಯ ಫಲಿತಾಂಶಗಳನ್ನು ಹೋಲಿಸಿತು ಮತ್ತು ಓದುವ ಮತ್ತು ಸಂಖ್ಯಾಶಾಸ್ತ್ರದ ಮಟ್ಟಗಳಲ್ಲಿ ವಿಶೇಷವಾಗಿ ಪ್ರಾಥಮಿಕ ತರಗತಿಗಳಿಗೆ ಕಲಿಕೆಯ ಮಟ್ಟಗಳು ಕುಸಿದಿದ್ದವು ಎಂಬುದನ್ನು ಫಲಿತಾಂಶಗಳಿಂದ ಕಂಡಂಬಂದಿತು. ವಿವರಗಳು ಕೆಳಕಂಡಂತಿವೆ:

(i) 2018ರಲ್ಲಿನ ಶೇಕಡಾ 40ಕ್ಕೆ ಹೋಲಿಸಿದರೆ ಸಮೀಕ್ಷೆ ನಡೆಸಿದ ಶೇಕಡಾ 56.8ರಷ್ಟು 1ನೇ ತರಗತಿ ವಿದ್ಯಾರ್ಥಿಗಳು ಅಕ್ಷರಗಳನ್ನು ಓದಲು ಅಸಮರ್ಥರಾಗಿದ್ದರು.
(ii) 2018ರಲ್ಲಿನ ಶೇಕಡಾ 70ಕ್ಕೆ ಹೋಲಿಸಿದರೆ 8 ತರಗತಿಯ ಶೇಕಡಾ 66ರಷ್ಟು ವಿದ್ಯಾರ್ಥಿಗಳು 2ನೇ ತರಗತಿಯ ಪಠ್ಯವನ್ನು ಓದಲು ಸಮರ್ಥರಾಗಿದ್ದರು.
(iii) 2018ರಲ್ಲಿ ಶೇಕಡಾ 19.2ಕ್ಕೆ ಹೋಲಿಸಿದರೆ 3ನೇ ತರಗತಿ ವಿದ್ಯಾರ್ಥಿಗಳಲ್ಲಿ ಕೇವಲ ಶೇಕಡಾ 9.8ರಷ್ಟು ಮಾತ್ರ 2ನೇ ತರಗತಿಯ ಪಠ್ಯವನ್ನು ಓದಲು ಸಮರ್ಥರಾಗಿದ್ದರು.
(iv) 2018ರಲ್ಲಿನ ಶೇಕಡಾ 29.7ಕ್ಕೆ ಹೋಲಿಸಿದರೆ 1ನೇ ತರಗತಿಯ ಶೇಕಡಾ 42.6ರಷ್ಟು ವಿದ್ಯಾರ್ಥಿಗಳು ಒಂದರಿಂದ ಒಂಬತ್ತರವರೆಗೆ ಸಂಖ್ಯೆಗಳನ್ನು ಗುರುತಿಸಲು ಅಸಮರ್ಥರಾಗಿದ್ದರು.
(v) 3ನೇ ತರಗತಿಯ ಶೇಕಡಾ 17.3ರಷ್ಟು ವಿದ್ಯಾರ್ಥಿಗಳು ವ್ಯವಕಲನ ಮಾಡಲು ಸಮರ್ಥರಾಗಿದ್ದರು, 2018ರಲ್ಲಿ ಅದು ಶೇಕಡಾ 26.3ರಷ್ಟಿತ್ತು. ಅದೇ ರೀತಿ, ಈ ವರ್ಷ 8ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಕೇವಲ 38.9ರಷ್ಟು ವಿದ್ಯಾರ್ಥಿಗಳು ಮಾತ್ರ ಭಾಗಾಕಾರ ಮಾಡಲು ಸಮರ್ಥರಾಗಿದ್ದರು.

ಹೀಗೆ, ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳ ಕಡೆಗೆ ಹೆಚ್ಚಿನ ಗಮನವನ್ನು ನೀಡುವ ಅಗತ್ಯವನ್ನು ಸಮೀಕ್ಷೆಯು ಸೂಚಿಸಿತು.

ಎಎಸ್ಇಆರ್ 2021ರ ವರದಿಗಳನ್ನು ಮತ್ತು ಮಾದರಿ ಆಧಾರಿತ ರಾಜ್ಯ ಮೌಲ್ಯಮಾಪನ ಸಮೀಕ್ಷೆ 2022ನ್ನು ಆಧರಿಸಿ ಕಲಿಕಾ ಮರುಪಡೆಯುವಿಕೆ ಕಾರ್ಯಕ್ರಮವಾದ 'ಕಲಿಕಾ ಚೇತರಿಕೆ'[22] ಯನ್ನು ಪ್ರಾರಂಭಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಎರಡು ಶೈಕ್ಷಣಿಕ ವರ್ಷಗಳ ಕಲಿಕೆಯ ನಷ್ಟವನ್ನು ಪರಿಹರಿಸಲು ಕಲಿಕಾ ಚೇತರಿಕೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದೂ ತಿಳಿಸಲಾಯಿತು.

5.3 ವಿದ್ಯಾರ್ಥಿಗಳಿಗೆ ಸಮಗ್ರ ವರದಿ ಕಾರ್ಡ್‌ಗಳು

ಸಮಗ್ರ ವರದಿ ಕಾರ್ಡ್ ವಿದ್ಯಾರ್ಥಿಯ ಸಾಮರ್ಥ್ಯಗಳು, ಕೌಶಲ್ಯಗಳು ಮತ್ತು ಸುಧಾರಣೆಯ ಅಗತ್ಯವಿರುವ ಕ್ಷೇತ್ರಗಳ ಸಮಗ್ರ ಮತ್ತು ಸಮತೋಲಿತ ಮೌಲ್ಯಮಾಪನವನ್ನು ಒದಗಿಸುವ ಗುರಿಯನ್ನು ಹೊಂದಿದೆ. 2017–22ರ ಅವಧಿಯಲ್ಲಿ ಇಲಾಖೆಯು ವಿದ್ಯಾರ್ಥಿಗಳಿಗೆ ಸಮಗ್ರ ವರದಿ ಕಾರ್ಡ್‌ಗಳನ್ನು ನೀಡಿರಲಿಲ್ಲ. ಮಾದರಿ ಶಾಲೆಗಳ ಲೆಕ್ಕಪರಿಶೋಧನೆಯ ಸಮಯದಲ್ಲಿ, ವಿದ್ಯಾರ್ಥಿಗಳಿಗೆ ರಚನಾತ್ಮಕ ಮತ್ತು ಸಂಕಲನಾತ್ಮಕ[23] ಮೌಲ್ಯಮಾಪನಗಳಿಗೆ ಸಂಬಂಧಿಸಿದಂತೆ ವರದಿ ಕಾರ್ಡ್‌ಗಳನ್ನು ನೀಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಸಮಗ್ರ ವರದಿ ಕಾರ್ಡ್‌ಗಳನ್ನು ತಯಾರಿಸಲು ಮತ್ತು ವಿತರಿಸಲು ಪ್ರಸ್ತಾಪಿಸಲಾದ ₹18.78 ಕೋಟಿಗಳಲ್ಲಿ, 2021–22ರ ಅವಧಿಯಲ್ಲಿ ಕೇವಲ ₹0.78 ಕೋಟಿ ಒದಗಿಸಲಾಗಿತ್ತು, ಆದರೆ, ಇಲಾಖೆಯು ಅನುಮೋದಿತ ಮೊತ್ತವನ್ನೂ ಸಹ ಬಳಸಿಕೊಂಡಿರಲಿಲ್ಲ. ಸಮಗ್ರ ವರದಿ ಕಾರ್ಡ್‌ಗಳ ಸ್ವರೂಪವನ್ನು ಅಂತಿಮಗೊಳಿಸುವಲ್ಲಿನ ವಿಳಂಬ ಮತ್ತು ಪರಿಣಾಮವಾಗಿ ಕಾರ್ಡ್‌ಗಳನ್ನು ನೀಡದಿರುವುದರಿಂದ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪ್ರಗತಿಯ ಮಾಹಿತಿಯನ್ನು ತಿಳಿದುಕೊಳ್ಳುವುದರಿಂದ ವಂಚಿತರಾದರು.

ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ನಿರ್ದೇಶನಗಳ ಪ್ರಕಾರ, ಸಮಗ್ರ ವರದಿ ಕಾರ್ಡ್‌ಗಳನ್ನು ಎನ್‌ಸಿಇಆರ್‌ಟಿಯ ಮಾರ್ಗದರ್ಶನದಲ್ಲಿ ವಿನ್ಯಾಸಗೊಳಿಸಬೇಕೆಂದು ಸರ್ಕಾರವು ತಿಳಿಸಿತು (ಮೇ 2023). ಆದ್ದರಿಂದ ಶಾಲೆಗಳಲ್ಲಿ ಸಮಗ್ರ ವರದಿ ಕಾರ್ಡ್‌ಗಳನ್ನು ವಿನ್ಯಾಸಗೊಳಿಸುವ ಮತ್ತು ಕಾರ್ಯಗತಗೊಳಿಸುವ ಚಟುವಟಿಕೆಯನ್ನು ಎನ್‌ಸಿಇಆರ್‌ಟಿಯಿಂದ ಸ್ವೀಕರಿಸಿದ ಅದರ ಅಂತಿಮ ಆವೃತ್ತಿಯ ನಂತರ ಪ್ರಾರಂಭಿಸಲಾಗುವುದು ಎಂದೂ ಸಹ ತಿಳಿಸಲಾಯಿತು.

5.4 ಅಂತರರಾಷ್ಟ್ರೀಯ ವಿದ್ಯಾರ್ಥಿ ಮೌಲ್ಯಮಾಪನ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು

ಅಂತರರಾಷ್ಟ್ರೀಯ ವಿದ್ಯಾರ್ಥಿ ಮೌಲ್ಯಮಾಪನ ಕಾರ್ಯಕ್ರಮ[24] (ಪಿಐಎಸ್ಎ) ಜನಪ್ರಿಯ ಸಾಮರ್ಥ್ಯ–ಆಧಾರಿತ ಮೌಲ್ಯಮಾಪನವಾಗಿದೆ, ಇದು ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಪ್ರಮುಖ ಸಾಮರ್ಥ್ಯಗಳನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಅಳೆಯುತ್ತದೆ. ಮೌಲ್ಯಮಾಪನವು ಗಣಿತ ಮತ್ತು ವಿಜ್ಞಾನವನ್ನು ಓದುವಲ್ಲಿ ಮಕ್ಕಳನ್ನು ಪರೀಕ್ಷಿಸುತ್ತದೆ. ರಾಜ್ಯಗಳಿಗೆ ಪಿಐಎಸ್ಎಗಾಗಿ ಯಾವುದೇ ನಿರ್ದಿಷ್ಟ ಚಟುವಟಿಕೆ ಅಥವಾ ನಿಧಿಯನ್ನು ನೀಡಲಾಗಿಲ್ಲವಾದರೂ, ಶಾಲಾ ವ್ಯವಸ್ಥೆಯಲ್ಲಿ ಸಾಮರ್ಥ್ಯ–ಆಧಾರಿತ ಪರೀಕ್ಷೆಯನ್ನು ಉತ್ತೇಜಿಸಲು ಮತ್ತು ಮೌಖಿಕ ಕಲಿಕೆಯಿಂದ ದೂರ ಸರಿಯುವ ಉದ್ದೇಶದಿಂದ ಭಾರತ ಸರ್ಕಾರವು ಪ್ರತಿ ರಾಜ್ಯದಲ್ಲಿ ಪಿಐಎಸ್ಎಗಾಗಿ ದೃಷ್ಟಿಕೋನ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮವನ್ನು ಪ್ರಸ್ತಾವಿಸಿತು.

---

[22] ಕಲಿಕಾ ಚೇತರಿಕೆಯು ಕೋವಿಡ್–19 ಸಾಂಕ್ರಾಮಿಕ ಅವಧಿಯಲ್ಲಿ ತರಗತಿಯ ಭೋದನೆಯಲ್ಲಿನ ಅಡಚಣೆಗಳಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಕಲಿಕೆಯ ನಷ್ಟವನ್ನು ಪರಿಹರಿಸಲು ಶಿಕ್ಷಣ ಇಲಾಖೆಯು 2022–23ರಲ್ಲಿ ಪ್ರಾರಂಭಿಸಿರುವ ಕಾರ್ಯಕ್ರಮವಾಗಿದೆ.

[23] ರಚನಾತ್ಮಕ ಮೌಲ್ಯಮಾಪನವು ತರಗತಿ ಮತ್ತು ಮನೆಯಲ್ಲಿ ವಿದ್ಯಾರ್ಥಿಯ ಕೆಲಸ, ಮೌಖಿಕ ಪರೀಕ್ಷೆಗಳು ಮತ್ತು ರಸಪ್ರಶ್ನೆಗಳಲ್ಲಿ ವಿದ್ಯಾರ್ಥಿಯ ಕಾರ್ಯಕ್ಷಮತೆ ಮತ್ತು ವಿದ್ಯಾರ್ಥಿಯು ಸಲ್ಲಿಸಿದ ಯೋಜನೆಗಳು ಅಥವಾ ಕಾರ್ಯನಿಯೋಜನೆಯ ಗುಣಮಟ್ಟವನ್ನು ಆಧರಿಸಿದೆ. ಸಂಕಲನಾತ್ಮಕ ಮೌಲ್ಯಮಾಪನವನ್ನು ಸಾಮಾನ್ಯವಾಗಿ ಪರೀಕ್ಷೆಗಳ ರೂಪದಲ್ಲಿ ನಡೆಸಲಾಗುತ್ತದೆ.

[24] ಓದುವಿಕೆ, ಗಣಿತ ಮತ್ತು ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಕೌಶಲ್ಯ ಮತ್ತು ಜ್ಞಾನವನ್ನು ಪರೀಕ್ಷಿಸಲು ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (ಒಇಸಿಡಿ) ರಚಿಸಿರುವ ಮೌಲ್ಯಮಾಪನ ಕಾರ್ಯಕ್ರಮ.

ಪಿಐಎಸ್ಎ ಮಟ್ಟದ ಸಾಮರ್ಥ್ಯಗಳಿಗಾಗಿ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡುವ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರವು ಇನ್ನೂ ತಯಾರಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಪಿಐಎಸ್ಎ ಮೌಲ್ಯಮಾಪನಕ್ಕಾಗಿ ನಕ್ಷೆಯನ್ನು ಸಿದ್ಧಪಡಿಸದಿರುವುದು ಸಾಮರ್ಥ್ಯ–ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಪ್ರಗತಿಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅದರ ಶೈಕ್ಷಣಿಕ ಫಲಿತಾಂಶಗಳನ್ನು ಮಾನದಂಡವಾಗಿ ಮಾಡುವ ರಾಜ್ಯಗಳ ಸಾಮರ್ಥ್ಯವನ್ನು ಕುಗ್ಗಿಸುತ್ತದೆ.


ವೀಕ್ಷಣೆಯನ್ನು ಗಮನಿಸಲಾಗಿದೆ ಮತ್ತು ರಾಜ್ಯ ಮಟ್ಟದ ಮೌಲ್ಯಮಾಪನಗಳ ಅನುಭವಗಳನ್ನು ಪಿಐಎಸ್ಎ ಮೌಲ್ಯಮಾಪನಕ್ಕೆ ಸಿದ್ಧಪಡಿಸಲು ಬಳಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).


5.5 ಕಲಿಕಾ ಫಲಿತಾಂಶಗಳ ಮೌಲ್ಯಮಾಪನ

ಸಮಗ್ರ ಶಿಕ್ಷಣ ಮಾರ್ಗಸೂಚಿಗಳ ಕಂಡಿಕೆ–6.8.3ರ ಪ್ರಕಾರ, ರಾಜ್ಯಗಳು ತಮ್ಮದೇ ಆದ ಜನಗಣತಿ ಆಧಾರಿತ ರಾಜ್ಯ ಮೌಲ್ಯಮಾಪನ ಸಮೀಕ್ಷೆಯನ್ನು ಕೈಗೊಳ್ಳಬೇಕು ಮತ್ತು ಅದರ ಫಲಿತಾಂಶಗಳನ್ನು ಶಾಲಾ ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಗಾಗಿ ಬಳಸಬೇಕು.

ಇಲಾಖೆಯು ಕೊನೆಯದಾಗಿ 2017–18ರಲ್ಲಿ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಿತ್ತು ಮತ್ತು ನಂತರದ ಅವಧಿಗಳಿಗೆ ಕಲಿಕಾ ಮೌಲ್ಯಮಾಪನದ ದತ್ತಾಂಶ ಲಭ್ಯವಿರಲಿಲ್ಲ. 4ನೇ ತರಗತಿ ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಗೆ ಕಲಿಕಾ ಮೌಲ್ಯಮಾಪನ ಪ್ರಶ್ನೆಗಳನ್ನು ಸಿದ್ಧಪಡಿಸಲು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯನ್ನು ಲೆಕ್ಕಪರಿಶೋಧನೆಯು ವಿನಂತಿಸಿತು ಮತ್ತು ರಾಜ್ಯದ 16 ಶೈಕ್ಷಣಿಕ ಬ್ಲಾಕ್‌ಗಳ 128 ಮಾದರಿ ಶಾಲೆಗಳಲ್ಲಿ ಮೌಲ್ಯಮಾಪನವನ್ನು (ಅಕ್ಟೋಬರ್ 2022) ನಡೆಸಲಾಯಿತು. ಲೆಕ್ಕಪರಿಶೋಧನಾ ತಂಡದ ಉಪಸ್ಥಿತಿಯಲ್ಲಿ ಮೌಲ್ಯಮಾಪನವನ್ನು ಕೈಗೊಳ್ಳಲಾಯಿತು ಮತ್ತು ಸಮೂಹದ ಶಿಕ್ಷಕರಿಂದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಿ ಅಂಕಗಳನ್ನು ಪಟ್ಟಿ ಮಾಡಲಾಯಿತು. ಅಂಕಗಳನ್ನು ಎ+ (90–100), ಎ (70–89), ಬಿ+ (50–69), ಬಿ (30–49) ಮತ್ತು ಸಿ (0–29) ಎಂದು ವರ್ಗೀಕರಿಸಲಾಯಿತು. ಮೌಲ್ಯಮಾಪನದ ಅವಧಿಯಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು **ನಕ್ಷೆ–5.1**ರಲ್ಲಿ ನೀಡಲಾಗಿದೆ.

ನಕ್ಷೆ–5.1: 4ರಿಂದ 7ನೇ ತರಗತಿಯವರೆಗೆ ವಿದ್ಯಾರ್ಥಿಗಳ ಕಾರ್ಯಕ್ಷಮತೆ





4ನೇ ತರಗತಿಯ ಶೇಕಡಾ 68.22ರಷ್ಟು ವಿದ್ಯಾರ್ಥಿಗಳು ಒಟ್ಟಾರೆ ಅಂಕಗಳಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವುದನ್ನು ಗಮನಿಸಲಾಯಿತು. 4ನೇ ತರಗತಿಯ ವಿದ್ಯಾರ್ಥಿಗಳು ಪಡೆದಿರುವ ವಿಷಯ–ವಾರು ಅಂಕಗಳನ್ನು **ಅನುಬಂಧ–5.2**ರಲ್ಲಿ ನೀಡಲಾಗಿದೆ.

- ಇಂಗ್ಲೀಷ್ ಭಾಷೆಯಲ್ಲಿ ಶೇಕಡಾ 69.98ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.
- ಗಣಿತದಲ್ಲಿ ಶೇಕಡಾ 63.80ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.
- ಪರಿಸರ ಅಧ್ಯಯನದಲ್ಲಿ ಶೇಕಡಾ 68.22ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.


7ನೇ ತರಗತಿಯ ಶೇಕಡಾ 72.90ರಷ್ಟು ವಿದ್ಯಾರ್ಥಿಗಳು ಒಟ್ಟಾರೆ ಅಂಕಗಳಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವುದನ್ನು ಗಮನಿಸಲಾಯಿತು. 7ನೇ ತರಗತಿಯ ವಿದ್ಯಾರ್ಥಿಗಳು ಪಡೆದಿರುವ ವಿಷಯ–ವಾರು ಅಂಕಗಳನ್ನು **ಅನುಬಂಧ–5.3ರಲ್ಲಿ** ನೀಡಲಾಗಿದೆ.

- ಇಂಗ್ಲೀಷ್ ಭಾಷೆಯಲ್ಲಿ ಶೇಕಡಾ 67.35ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.
- ಗಣಿತದಲ್ಲಿ ಶೇಕಡಾ 74.03ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.
- ವಿಜ್ಞಾನದಲ್ಲಿ ಶೇಕಡಾ 70.54ರಷ್ಟು ವಿದ್ಯಾರ್ಥಿಗಳು ಶೇಕಡಾ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದರು.

5.6 ಲೆಕ್ಕಪರಿಶೋಧನಾ ಅವಧಿಯಲ್ಲಿ ವಿದ್ಯಾರ್ಥಿಗಳ ಸಮೀಕ್ಷೆ

9ರಿಂದ 14 ವರ್ಷ ವಯಸ್ಸಿನ ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯಗಳ ಕುರಿತು ಅವರ ಅನುಭವಗಳು ಮತ್ತು ಗ್ರಹಿಕೆಗಳ ಬಗ್ಗೆ ಪ್ರತಿಕ್ರಿಯೆಯನ್ನು ಸಂಗ್ರಹಿಸಲು ಲೆಕ್ಕಪರಿಶೋಧನೆಯು ಸಮೀಕ್ಷೆಯನ್ನು ನಡೆಸಿತು. ವಿದ್ಯಾರ್ಥಿ ಸಮೀಕ್ಷೆಯ ಫಲಿತಾಂಶಗಳನ್ನು **ನಕ್ಷೆ–5.2ರಲ್ಲಿ** ನೀಡಲಾಗಿದೆ.

ನಕ್ಷೆ–5.2: ವಿದ್ಯಾರ್ಥಿಗಳ ಸಮೀಕ್ಷೆ



ಶಿಕ್ಷಕರು ಸಮಯಕ್ಕೆ ಸರಿಯಾಗಿ ತರಗತಿಗೆ ಬರುತ್ತಾರೆ. ಉಚಿತ ಪಠ್ಯಪುಸ್ತಕಗಳನ್ನು ಮತ್ತು ಮಧ್ಯಾಹ್ನದ ಊಟವನ್ನು ಪಡೆಯಲಾಗಿದೆ ಎಂದು ಸಮೀಕ್ಷೆಯಲ್ಲಿ ನಡೆಸಿದ ಎಲ್ಲಾ ವಿದ್ಯಾರ್ಥಿಗಳು ವರದಿ ಮಾಡಿದ್ದಾರೆ.

ಸಮೀಕ್ಷೆಯಲ್ಲಿನ ಪ್ರತಿಕ್ರಿಯೆಯ ಪ್ರಕಾರ, ಮಕ್ಕಳು ಕೈ ತೊಳೆಯುವ ಸೌಲಭ್ಯ, ಶೌಚಾಲಯಗಳು, ಆಟದ ಮೈದಾನ, ಗ್ರಂಥಾಲಯ ಮುಂತಾದವು ಲಭ್ಯತೆಯಿಲ್ಲದಿರುವುದು, ದೈಹಿಕ ಶಿಕ್ಷಣ ತರಗತಿ ಮತ್ತು ಕ್ರೀಡೆಗಳನ್ನು ನಡೆಸದಿರುವುದು, ಇತ್ಯಾದಿಗಳನ್ನು ವರದಿ ಮಾಡಿದ್ದರು. ಶೌಚಾಲಯಗಳ ಶುಚಿತ್ವದ ಬಗ್ಗೆ ಸಮೀಕ್ಷೆಯಲ್ಲಿ ಭಾಗವಹಿಸಿದ ಹೆಚ್ಚಿನ ವಿದ್ಯಾರ್ಥಿಗಳು ಶೌಚಾಲಯಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಿರಲಿಲ್ಲ ಎಂಬುದಾಗಿ ಹೇಳಿದ್ದಾರೆ.

ಲೆಕ್ಕಪರಿಶೋಧನಾ ವರದಿಗಳನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

ಶಿಫಾರಸು–8: ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ನಿಯತಕಾಲಿಕ ವಿಶ್ಲೇಷಣೆಯ ಜೊತೆಗೆ ಕಲಿಕಾ ಫಲಿತಾಂಶಗಳ ದತ್ತಾಂಶದ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕ್ರಮಗಳನ್ನು ಕೈಗೊಳ್ಳಬೇಕು.

ಶಿಫಾರಸು–9: ನಡೆಸಿದ ಸಾಧನಾ ಸಮೀಕ್ಷೆಗಳನ್ನು ಕಾರ್ಯಕ್ಷಮತೆಯ ನ್ಯೂನತೆಗಳ ವಿಶ್ಲೇಷಣೆಯೊಂದಿಗೆ ಅನುಸರಣೆ ಮಾಡಬೇಕು ಮತ್ತು ಬೋಧನಾ–ಕಲಿಕಾ ವಿಧಾನಗಳು, ಪಠ್ಯಕ್ರಮದ ಪರಿಷ್ಕರಣೆ ಮತ್ತು ಪರಿಹಾರ ಬೋಧನೆಯ ನಡವಳಿಕೆಯನ್ನು ಸುಧಾರಿಸಲು ಸಮೀಕ್ಷೆಗಳನ್ನು ನಡೆಸಬೇಕು.

ಅಧ್ಯಾಯ VI

ನಿಯಂತ್ರಕ ಮಧ್ಯಸ್ಥಿಕೆಗಳು

ಅಧ್ಯಾಯ–VI

ನಿಯಂತ್ರಕ ಮಧ್ಯಸ್ಥಿಕೆಗಳು

ಶಿಕ್ಷಣ ಇಲಾಖೆಯು ಖಾಸಗಿ ಶಾಲೆಗಳನ್ನು ಮುಖ್ಯವಾಗಿ ನೋಂದಣಿ, ಮಾನ್ಯತೆ ಮತ್ತು ಮಾನ್ಯತೆಯ ನವೀಕರಣದ ಮೂಲಕ ನಿಯಂತ್ರಿಸುತ್ತದೆ. ಈ ಪ್ರಕ್ರಿಯೆಯು ಶಾಲೆಯ ಮೂಲಸೌಕರ್ಯ, ಬೋಧನಾ ಕಲಿಕಾ ಸಂಪನ್ಮೂಲಗಳು, ಕಲಿಕಾ ಪರಿಸರದ ಸುರಕ್ಷತೆ ಮುಂತಾದವುಗಳ ಪರ್ಯಾಪ್ತತೆಯನ್ನು ನಿರ್ಣಯಿಸಲು ಇಲಾಖೆಗೆ ಅವಕಾಶವನ್ನು ನೀಡುತ್ತದೆ. ರಾಜ್ಯದ ಬಹುತೇಕ ಖಾಸಗಿ ಶಾಲೆಗಳು ಒಂದು ವರ್ಷ ತಾತ್ಕಾಲಿಕ ಮಾನ್ಯತೆ ಪಡೆಯುತ್ತವೆ ಮತ್ತು ಕಟ್ಟಡ ಸುರಕ್ಷತೆ, ಅಗ್ನಿ ಸುರಕ್ಷತಾ ಅವಶ್ಯಕತೆಗಳು, ಇತ್ಯಾದಿ ಮಾನ್ಯತೆಗೆ ನಿಗದಿತ ಷರತ್ತುಗಳನ್ನು ಖಾತ್ರಿಪಡಿಸಿಕೊಳ್ಳದೆ ತಾತ್ಕಾಲಿಕ ಮಾನ್ಯತೆಯನ್ನು ಪ್ರತಿ ವರ್ಷ ನವೀಕರಿಸಲಾಗುತ್ತದೆ. ಸರ್ಕಾರಿ ಇಲಾಖೆಗಳು ನಡೆಸುವ ಶಾಲೆಗಳು ಖಾಸಗಿ ಶಾಲೆಗಳಿಗೆ ಅನ್ವಯವಾಗುವ ನಿಯಂತ್ರಕ ಪ್ರಕ್ರಿಯೆಗೆ ಒಳಪಡುವುದಿಲ್ಲ ಮತ್ತು ತತ್ಪರಿಣಾಮವಾಗಿ ಸರ್ಕಾರಿ ಇಲಾಖೆಗಳಿಂದ ನಡೆಸಲ್ಪಡುವ ಶಾಲೆಗಳಲ್ಲಿನ ಶಾಲಾ ಮೂಲಸೌಕರ್ಯ ಮತ್ತು ಬೋಧನಾ ಸೌಲಭ್ಯಗಳ ಯಾವುದೇ ವ್ಯವಸ್ಥಿತ ಮೌಲ್ಯಮಾಪನ ಅಸ್ತಿತ್ವದಲ್ಲಿರಲಿಲ್ಲ.

ರಾಜ್ಯದಲ್ಲಿನ ಶೈಕ್ಷಣಿಕ ಕಾರ್ಯಗಳನ್ನು ಕರ್ನಾಟಕ ಶಿಕ್ಷಣ ಕಾಯಿದೆ, 1983 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ನಿಬಂಧನೆಗಳಿಂದ ನಿಯಂತ್ರಿಸಲಾಗುತ್ತದೆ. ಈ ಕಾಯಿದೆಯು ಪ್ರಾಥಮಿಕ ಶಿಕ್ಷಣವನ್ನು ನಿಯಂತ್ರಿಸಲು ಇಲಾಖೆಗೆ ಅಧಿಕಾರ ನೀಡುತ್ತದೆ ಮತ್ತು ಇಲಾಖೆಯ ನಿಯಂತ್ರಕ ಚಟುವಟಿಕೆಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

6.1 ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರದ ಸ್ಥಾಪನೆ

ಎಲ್ಲಾ ಶಾಲೆಗಳು ಅಗತ್ಯ ಗುಣಮಟ್ಟದ ಮಾನದಂಡಗಳಿಗೆ ಬದ್ಧವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸ್ವತಂತ್ರ ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರ (ಎಸ್ಎಸ್ಎಸ್ಎ) ಸ್ಥಾಪನೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್ಇಪಿ) ನಿಗದಿಪಡಿಸಿತ್ತು. ಎಲ್ಲಾ ಶಾಲೆಗಳು ಅನುಸರಿಸಬೇಕಾದ ಸುರಕ್ಷತೆ, ಮೂಲಸೌಕರ್ಯ, ಶಿಕ್ಷಕರ ಸಂಖ್ಯೆ, ಆರ್ಥಿಕ ಪಾರದರ್ಶಕತೆ ಮತ್ತು ಆಡಳಿತ ಪ್ರಕ್ರಿಯೆಗಳಂತಹ ಕ್ಷೇತ್ರಗಳನ್ನು ಒಳಗೊಂಡಿರುವ ಕನಿಷ್ಠ ಮಾನದಂಡಗಳನ್ನು ಎಸ್ಎಸ್ಎಸ್ಎ ವ್ಯಾಖ್ಯಾನಿಸುತ್ತದೆ.

ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರವನ್ನು ಇನ್ನೂ ಸ್ಥಾಪಿಸಿರಲಿಲ್ಲ. ಆದ್ದರಿಂದ, ಶಾಲೆಗಳಿಗಾಗಿ ಯೋಜಿತ ಏಕರೂಪದ ಕನಿಷ್ಠ ವೃತ್ತಿಪರ ಮತ್ತು ಗುಣಮಟ್ಟದ ಮಾನದಂಡಗಳನ್ನು ಇನ್ನೂ ಪ್ರಾರಂಭಿಸಬೇಕಾಗಿತ್ತು.

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ರಾಜ್ಯ ಶಾಲಾ ಗುಣಮಟ್ಟ ಪ್ರಾಧಿಕಾರದ ಸ್ಥಾಪನೆಯನ್ನು ಕುರಿತು ಸರ್ಕಾರವು ಯಾವುದೇ ನಿರ್ದಿಷ್ಟ ಪ್ರತಿಕ್ರಿಯೆ ನೀಡಲಿಲ್ಲ.

6.2 ರಾಜ್ಯ ಶೈಕ್ಷಣಿಕ ಸಲಹಾ ಮಂಡಳಿಯನ್ನು ರಚಿಸದಿರುವುದು

ಕರ್ನಾಟಕ ಶಿಕ್ಷಣ ಕಾಯಿದೆ, 1983ರ ಸೆಕ್ಷನ್ 109ರ ಪ್ರಕಾರ ಶೈಕ್ಷಣಿಕ ನೀತಿಗಳ ಕುರಿತು ಸರ್ಕಾರಕ್ಕೆ ಸಲಹೆ ನೀಡಲು ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಶೈಕ್ಷಣಿಕ ಸಲಹಾ ಮಂಡಳಿಯನ್ನು ರಚಿಸಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳು ಸ್ಥಾಯಿ ಸಮಿತಿಗಳನ್ನು

ಸ್ಥಾಪಿಸಬೇಕೆಂದು ಸೆಕ್ಷನ್ 110 ನಿಗದಿಪಡಿಸುತ್ತದೆ. ಶಿಕ್ಷಣ ಹಕ್ಕು ಕಾಯಿದೆ, 2009ರ ಸೆಕ್ಷನ್ 34ರ ಪ್ರಕಾರ, ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಪರಿಣಿತರನ್ನು ಒಳಗೊಂಡಿರುವ ರಾಜ್ಯ ಸಲಹಾ ಮಂಡಳಿಯನ್ನು ರಚಿಸುವ ಅಗತ್ಯವಿದೆ. ಕಾಯಿದೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವ ಕಾರ್ಯವನ್ನು ಈ ಮಂಡಳಿಯು ಮಾಡಬೇಕು.

ರಾಜ್ಯ ಸರ್ಕಾರವು ರಾಜ್ಯ ಶೈಕ್ಷಣಿಕ ಸಲಹಾ ಮಂಡಳಿ ಮತ್ತು ಸಾರ್ವಜನಿಕ ಶಿಕ್ಷಣ ಸ್ಥಾಯಿ ಸಮಿತಿಯನ್ನು ಇನ್ನೂ ರಚಿಸಿರಲಿಲ್ಲವೆಂಬುದನ್ನು ಗಮನಿಸಲಾಯಿತು. ಹೀಗೆ, ಕಾಯಿದೆಯಲ್ಲಿ ಕಲ್ಪಿಸಲಾದ ಉನ್ನತ ಮಟ್ಟದ ಸಮಿತಿಯಿಂದ ನೀತಿ ಒಳಹರಿವುಗಳನ್ನು ಹೇಳಲಾದ ಉದ್ದೇಶಗಳ ಸಾಧನೆಗಾಗಿ ಬಳಸಿಕೊಳ್ಳಲಾಗಲಿಲ್ಲ. ರಾಜ್ಯ ಮಟ್ಟದ ಸಲಹಾ ಮಂಡಳಿಯ ರಚನೆ, ಪರಿಷತ್ತಿನ ನಡಾವಳಿಗಳು ಇತ್ಯಾದಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಶಿಕ್ಷಣ ಹಕ್ಕು ಕಾಯಿದೆಯಿಂದ ನಿಗದಿಪಡಿಸಿದ ರಾಜ್ಯ ಶೈಕ್ಷಣಿಕ ಸಲಹಾ ಮಂಡಳಿ ಮತ್ತು ರಾಜ್ಯ ಸಲಹಾ ಮಂಡಳಿಯ ಅನುಪಸ್ಥಿತಿಯು ನೀತಿ ನಿರೂಪಣೆ ಮತ್ತು ಅನುಷ್ಠಾನದ ಕಾರ್ಯತಂತ್ರಗಳ ಮೇಲೆ ಪರಿಣಾಮ ಬೀರುವ ತಜ್ಞರ ಒಳಹರಿವಿನ ಪ್ರಯೋಜನಗಳಿಂದ ಇಲಾಖೆಯನ್ನು ವಂಚಿತಗೊಳಿಸಿತು.

ವರದಿಯನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

6.3 ಕರ್ನಾಟಕ ಶಾಲಾ ಗುಣಮಟ್ಟ ಭರವಸೆ ಮತ್ತು ಮಾನ್ಯತೆ ಪರಿಷತ್‌ನಿಂದ ಮಾನ್ಯತೆ

ಸಂಸ್ಥೆಗಳು ಉನ್ನತ ಗುಣಮಟ್ಟವನ್ನು ಹೊಂದಲು ಮತ್ತು ನಿರ್ವಹಿಸಲು 'ಮಾನ್ಯತೆ' ಮುಖ್ಯವಾಗಿದೆ ಮತ್ತು ಅದು ಸಾರ್ವಜನಿಕರಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಹೆಚ್ಚಿಸಿ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ. ಇದು, ಪಡೆದ ಮಾನ್ಯತೆಯ ಆಧಾರದ ಮೇಲೆ ಸಂಭಾವ್ಯ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳು ಸಂಸ್ಥೆಯ ಮೇಲೆ ಒಂದು ನಿರ್ದಿಷ್ಟ ಮಟ್ಟದ ನಂಬಿಕೆಯನ್ನಿಡಲು ಸಹಾಯ ಮಾಡುತ್ತದೆ. ಶಾಲೆಯ ಗುಣಮಟ್ಟ ಮತ್ತು ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಉತ್ತೇಜಿಸಲು ಸರ್ಕಾರವು ಕರ್ನಾಟಕ ಶಾಲಾ ಗುಣಮಟ್ಟ ಭರವಸೆ ಮತ್ತು ಮಾನ್ಯತೆ ಪರಿಷತ್ (ಕೆಎಸ್‌ಕ್ಯೂಎಎಸಿ) ಅನ್ನು ಸ್ಥಾಪಿಸಿತು (2005). ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಾನ್ಯತೆಯನ್ನು ನೀಡುವುದು ಇದರ ಉದ್ದೇಶವಾಗಿತ್ತು


2017–18ರಿಂದ 2021–22ರ ಅವಧಿಯಲ್ಲಿ ಕೆಎಸ್‌ಕ್ಯೂಎಎಸಿ ಮಾನ್ಯತೆಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗಾಗಿ, ಶಿಕ್ಷಣದಲ್ಲಿ ಗುಣಮಟ್ಟವನ್ನು ಸುಧಾರಿಸಲು ಮಾನ್ಯತೆಯ ಪ್ರಯೋಜನಗಳನ್ನು ಪಡೆಯುವ ಸ್ಥಿತಿಯಲ್ಲಿ ಶಾಲೆಗಳು ಇರಲಿಲ್ಲ.

ವರದಿಯನ್ನು ಗಮನಿಸಲಾಗಿದೆ ಮತ್ತು ಕೆಎಸ್‌ಕ್ಯೂಎಎಸಿಯ ವ್ಯಾಪ್ತಿಯಿಂದ ಮಾನ್ಯತೆ ಕಾರ್ಯವನ್ನು ಕೈಬಿಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಮಾನ್ಯತೆ ಎಂಬುದು ಮೂರನೇ ವ್ಯಕ್ತಿಯ ಮೌಲ್ಯಮಾಪನವನ್ನು ಒಳಗೊಂಡಿರುತ್ತದೆಯಾದರೆ ಶಾಲಾ ಸಿದ್ಧಿ ಕಾರ್ಯಕ್ರಮವು ನಿರಂತರ ಸುಧಾರಣೆಗಾಗಿ ಸ್ವಯಂ–ಮೌಲ್ಯಮಾಪನ ಸಾಧನವಾಗಿದೆ ಮತ್ತು ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವಲ್ಲಿ ಎರಡೂ ಪ್ರಕ್ರಿಯೆಗಳು ಪರಸ್ಪರ ಪೂರಕವಾಗಿರುತ್ತವೆ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

6.4 ಶಾಲೆಗಳ ಶ್ರೇಣೀಕರಣ

ಇಲಾಖೆಯು 2019–20ರ ಅವಧಿಯಲ್ಲಿ 44,424 ಸರ್ಕಾರಿ ಶಾಲೆಗಳನ್ನು[25] ಶ್ರೇಣೀಕರಣ ಮಾಡಲು ಪ್ರಯತ್ನಿಸಿತು. **ನಕ್ಷೆ–6.1**ರಲ್ಲಿ ತೋರಿಸಿರುವಂತೆ ಶಾಲಾ ಕಟ್ಟಡ, ಕಾಂಪೌಂಡ್ ಗೋಡೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್, ಆಟದ ಮೈದಾನ, ಅಡುಗೆ ಮನೆ, ಗ್ರಂಥಾಲಯ, ಮಾಹಿತಿ ತಂತ್ರಜ್ಞಾನ ಸೌಲಭ್ಯಗಳು, ಕಂಪ್ಯೂಟರ್ ಲ್ಯಾಬ್‌ಗಳು ಮತ್ತು ವಿಜ್ಞಾನ ಪ್ರಯೋಗಾಲಯದಂತಹ ಮೂಲಭೂತ ಸೌಕರ್ಯಗಳ ವಿವಿಧ ನಿಯತಾಂಕಗಳ ಆಧಾರದ ಮೇಲೆ ಶಾಲೆಗಳನ್ನು ಶ್ರೇಣೀಕರಿಸಲಾಗಿತ್ತು.

ನಕ್ಷೆ–6.1: ಮೂಲಸೌಕರ್ಯದ ಆಧಾರದ ಮೇಲೆ ಶಾಲೆಗಳ ಶ್ರೇಣೀಕರಣ



ಶಾಲೆಗಳನ್ನು ಎ, ಬಿ, ಸಿ ಮತ್ತು ಡಿ ಎಂದು ಶ್ರೇಣೀಕರಿಸಲಾಗಿದೆ ಮತ್ತು ಎ ವರ್ಗದ ಶಾಲೆಗಳು ಹೆಚ್ಚು ಅಂಕಗಳನ್ನು ಪಡೆದಿದ್ದರೆ ಡಿ ವರ್ಗವು ಕಡಿಮೆ ಅಂಕಗಳನ್ನು ಪಡೆದಿದ್ದವು. 22,341 ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕೇವಲ 86 (ಶೇಕಡಾ ಒಂದಕ್ಕಿಂತ ಕಡಿಮೆ) ಎ ಶ್ರೇಣಿ ಪಡೆದಿದ್ದವು ಮತ್ತು 22,083 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 3017 ಶಾಲೆಗಳು (ಶೇಕಡಾ 13.66) ಎ ಶ್ರೇಣಿ ಪಡೆದಿದವು.

2019–20ರ ನಂತರ, ಇಲಾಖೆಯು ಶಾಲೆಗಳ ಶ್ರೇಣಿಗಳನ್ನು ವಿಶ್ಲೇಷಿಸಲಿಲ್ಲ ಮತ್ತು ತತ್ಪರಿಣಾಮವಾಗಿ ಮೂಲಸೌಕರ್ಯಗಳ ಲಭ್ಯತೆಯ ವಿಷಯದಲ್ಲಿ ಶಾಲೆಗಳ ತುಲನಾತ್ಮಕ ಸ್ಥಾನವನ್ನು ಕಂಡುಹಿಡಿಯಲಾಗಲಿಲ್ಲ. ಹೀಗಾಗಿ, 2019–20ರ ನಂತರ ಶಾಲೆಗಳ ಶ್ರೇಣೀಕರಣವನ್ನು ಮುಂದುವರಿಸದಿದ್ದುದು ಶಾಲೆಗಳಲ್ಲಿನ ಮೂಲಸೌಕರ್ಯಗಳನ್ನು ಸುಧಾರಿಸುವಲ್ಲಿ ಪ್ರಗತಿಯನ್ನು ಗುರುತಿಸಲು ಮತ್ತು ತಿಳಿಸಲು ಇಲಾಖೆಯ ಸಾಮರ್ಥ್ಯವನ್ನು ದುರ್ಬಲಗೊಳಿಸಿತು.

ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆಯು ಮೂಲಸೌಕರ್ಯಕ್ಕೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸುತ್ತದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಆದಾಗ್ಯೂ, ಎಸ್‌ಎಟಿಎಸ್ ದತ್ತಾಂಶವನ್ನು ಸಂಗ್ರಹಿಸಿದ್ದರೂ, ಅದನ್ನು ಶ್ರೇಣೀಕರಣ ಮತ್ತು ವರದಿಗಾಗಿ ವಿಶ್ಲೇಷಿಸಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ.

[25] ಇಲಾಖೆಗಳ ವಿವಿಧ ವಿಭಾಗಗಳು ನಿರ್ವಹಿಸುವ ದತ್ತಾಂಶವು ಏಕರೂಪವಾಗಿಲ್ಲದ ಕಾರಣ ಸರ್ಕಾರಿ ಶಾಲೆಗಳ ಒಟ್ಟು ಸಂಖ್ಯೆಯು ವಿಭಿನ್ನವಾಗಿದೆ.

6.5 ನೋಂದಣಿ, ಮಾನ್ಯತೆ ಮತ್ತು ಮಾನ್ಯತೆಯ ನವೀಕರಣ

ಕರ್ನಾಟಕ ಶಿಕ್ಷಣ ಕಾಯಿದೆ, 1983ರ ಸೆಕ್ಷನ್ 30ರ ಪ್ರಕಾರ, ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ನೋಂದಾಯಿಸಬೇಕು ಮತ್ತು ಅಂತಹ ಸಂಸ್ಥೆಯನ್ನು ನೋಂದಾಯಿಸದ ಹೊರತು ಯಾವುದೇ ವ್ಯಕ್ತಿ ಅಥವಾ ಸ್ಥಳೀಯ ಪ್ರಾಧಿಕಾರವು ಈ ವಿಭಾಗದ ಅಡಿಯಲ್ಲಿ ನೋಂದಣಿ ಅಗತ್ಯವಿರುವ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬಾರದು ಅಥವಾ ನಡೆಸಬಾರದು ಅಥವಾ ನಿರ್ವಹಿಸಬಾರದು. ಇಲಾಖೆಯು ಖಾಸಗಿ ಅನುದಾನರಹಿತ ಸಂಸ್ಥೆಗಳಿಗೆ ಮೌಲ್ಯಮಾಪನದ ನಂತರ ಒಂದು ವರ್ಷ, ಮೂರು ವರ್ಷ ಅಥವಾ ಐದು ವರ್ಷಗಳ ಅವಧಿಗೆ ಮಾನ್ಯತೆ ನೀಡುತ್ತದೆ. ಸಂಸ್ಥೆಗಳು ಕಾರ್ಯನಿರ್ವಹಣೆಯನ್ನು ಮುಂದುವರಿಸಲು ತಮ್ಮ ಮಾನ್ಯತೆಯನ್ನು ನವೀಕರಿಸಬೇಕು. ಸೂಚನೆಗಳ ಪ್ರಕಾರ, ಅರ್ಜಿ ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ನವೀಕರಣ ಪ್ರಕ್ರಿಯೆಯನ್ನು ಇಲಾಖೆಯು ಪೂರ್ಣಗೊಳಿಸಬೇಕು. ಆದಾಗ್ಯೂ, ಲೆಕ್ಕಪರಿಶೋಧನೆಯು ಹಲವಾರು ನಿದರ್ಶನಗಳಲ್ಲಿ ಮಾನ್ಯತೆ ಮತ್ತು ನವೀಕರಣ ನೀಡುವುದು ವಿಳಂಬವಾಗಿತ್ತು ಮತ್ತು **ಕೋಷ್ಟಕ–6.1**ರಲ್ಲಿ ತೋರಿಸಿರುವಂತೆ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಅವಧಿಯಲ್ಲಿ ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

ಕೋಷ್ಟಕ–6.1: ಮಾನ್ಯತೆಯಿಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳ ವಿವರಗಳು

ಜಿಲ್ಲೆ	9 ತಿಂಗಳಿಗೂ ಹೆಚ್ಚು	6ರಿಂದ 9 ತಿಂಗಳು	4ರಿಂದ 6 ತಿಂಗಳ ನಡುವೆ	2ರಿಂದ 4 ತಿಂಗಳ ನಡುವೆ	2 ತಿಂಗಳ ಒಳಗೆ	ಒಟ್ಟು
ಬಾಗಲಕೋಟೆ	15	2	4	11	168	200
ಬಳ್ಳಾರಿ	1	4	6	42	230	283
ಬೆಂಗಳೂರು ಗ್ರಾಮಾಂತರ	2	1	1	15	138	157
ಚಾಮರಾಜನಗರ	0	0	0	4	52	56
ಮೈಸೂರು	49	50	2	23	191	315
ರಾಯಚೂರು	1	0	2	6	74	83
ಶಿವಮೊಗ್ಗ	22	16	6	38	200	282
ಉತ್ತರ ಕನ್ನಡ ಸಿರ್ಸಿ	0	0	0	8	74	82
ವಿಜಯನಗರ	0	0	0	1	3	4
ಒಟ್ಟು	**90**	**73**	**21**	**148**	**1,130**	**1,462**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಇದಲ್ಲದೆ, 2021–22ನೇ ಅವಧಿಯಲ್ಲಿ ಆಯ್ದ ಎಂಟು ಜಿಲ್ಲೆಗಳಲ್ಲಿ 66 ಶಾಲೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಅಸಮರ್ಪಕ ಸೌಲಭ್ಯಗಳು, ಅಗ್ನಿ ಸುರಕ್ಷತೆ ಮತ್ತು ಕಟ್ಟಡ ನಿಯಮಾವಳಿಗಳನ್ನು ಅನುಸರಿಸದಿರುವುದು ಇತ್ಯಾದಿಗಳನ್ನು ಉಲ್ಲೇಖಿಸಿ ಇಲಾಖೆಯು ತಿರಸ್ಕರಿಸಿತ್ತು ಎಂಬುದನ್ನು ಗಮನಿಸಲಾಯಿತು. ಆದರೆ, ಅರ್ಜಿಗಳನ್ನು ತಿರಸ್ಕರಿಸಿದ್ದರೂ ಸಹ ಮುಂದಿನ ಅನುಸರಣೆಯನ್ನು ಕೈಗೊಂಡಿರಲಿಲ್ಲ. 12,447 ಮಕ್ಕಳ ದಾಖಲಾತಿಯೊಂದಿಗೆ ಮಾನ್ಯತೆಯ ನವೀಕರಣವಿಲ್ಲದೆ ಶಾಲೆಗಳು ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದ್ದವು. ಮಾನ್ಯತೆ ನವೀಕರಣವಿಲ್ಲದೆ ಶಾಲೆಗಳ ಕಾರ್ಯನಿರ್ವಹಣೆಯು ಮಾನ್ಯವಾದ ಕಟ್ಟಡ ಪರವಾನಗಿ, ಅಗ್ನಿ ಸುರಕ್ಷತೆ ಮತ್ತು ವಿದ್ಯುತ್ ಸುರಕ್ಷತಾ ಪ್ರಮಾಣಪತ್ರಗಳಂತಹ ಕಡ್ಡಾಯವಾಗಿದ್ದ ನವೀಕರಣ ಅವಶ್ಯಕತೆಗಳನ್ನು ಅನುಸರಿಸದೆ ಶಾಲೆಗಳು ಕಾರ್ಯನಿರ್ವಹಿಸುವ ಅಪಾಯವನ್ನು ಹೊಂದಿತ್ತು. ಹೀಗೆ ಶಾಲಾ ಪರಿಸರದ ಸುರಕ್ಷತೆಗೆ ರಾಜಿ ಮಾಡಿಕೊಂಡಂತಾಯಿತು.

ಲೆಕ್ಕಪರಿಶೋಧನಾ ವರದಿ ಕುರಿತು ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ (ಮೇ 2023).

6.6 ಸರ್ಕಾರಿ ಇಲಾಖೆಗಳಿಂದ ನಡೆಸಲ್ಪಡುವ ಶಾಲೆಗಳನ್ನು ನವೀಕರಣ ಮತ್ತು ಮಾನ್ಯತೆ ಕಾರ್ಯವಿಧಾನಗಳ ಹೊರಗಿಟ್ಟಿರುವುದು

ನೋಂದಣಿಗೆ ಜವಾಬ್ದಾರರಾಗಿರುವ ಸಕ್ಷಮ ಪ್ರಾಧಿಕಾರವು ಖಾಸಗಿ ಶಾಲಾ ಸೌಲಭ್ಯಗಳನ್ನು ನಿರ್ಣಯಿಸುತ್ತದೆ ಮತ್ತು ನಿಗದಿತ ನಿಯಂತ್ರಕ ಮಾನದಂಡಗಳ ಅನುಸರಣೆಯನ್ನು ಜಾರಿಗೊಳಿಸುತ್ತದೆ. ಸರ್ಕಾರಿ ಇಲಾಖೆಗಳು ಸ್ಥಾಪಿಸಿದ ಮತ್ತು ನಿರ್ವಹಿಸುತ್ತಿರುವ ಶಾಲೆಗಳು ಕಡ್ಡಾಯ ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡುವುದಿಲ್ಲ. ತತ್ಪರಿಣಾಮವಾಗಿ, ಸರ್ಕಾರಿ ಇಲಾಖೆಗಳು ನಡೆಸುವ ಶಾಲೆಗಳಿಗೆ ಸಂಬಂಧಿಸಿದಂತೆ ಕಟ್ಟಡ ಸೌಕರ್ಯಗಳ ಸ್ಥಿತಿ, ಸಿಬ್ಬಂದಿಯ ಪರ್ಯಾಪ್ತತೆ ಮತ್ತು ಬೋಧನಾ ಸಾಧನಗಳ ಲಭ್ಯತೆ ಇತ್ಯಾದಿಗಳ ವ್ಯವಸ್ಥಿತ ಮೌಲ್ಯಮಾಪನವನ್ನು ನಿಯಮಿತ ಮಧ್ಯಂತರದಲ್ಲಿ ಕೈಗೊಂಡಿರಲಿಲ್ಲ. ಕೊರತೆಗಳೇನಾದರೂ ಇದ್ದಲ್ಲಿ ಅದನ್ನು ಕಾಲಮಿತಿಯಲ್ಲಿ ಸರಿಪಡಿಸಲು ಸರ್ಕಾರ ನಡೆಸುವ ಶಾಲೆಗಳಲ್ಲಿ ಶೈಕ್ಷಣಿಕ ಸೌಲಭ್ಯಗಳ ಲಭ್ಯತೆ, ಸುರಕ್ಷತಾ ಮಾನದಂಡಗಳ ಅನುಸರಣೆ ಮುಂತಾದವುಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವ ವ್ಯವಸ್ಥೆಯನ್ನು ಇಲಾಖೆಯು ಇನ್ನೂ ಅಭಿವೃದ್ಧಿಪಡಿಸಬೇಕಾಗಿತ್ತು. ಹಾಗಾಗಿ ಅಗ್ನಿ ಸುರಕ್ಷತೆ ಹಾಗೂ ಕಟ್ಟಡ ಸುರಕ್ಷತೆ ಪ್ರಮಾಣಪತ್ರ ಇಲ್ಲದೇ ಸರ್ಕಾರಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ಸರ್ಕಾರಿ ಶಾಲೆಗಳು ಶಿಥಿಲಗೊಂಡ ಕಟ್ಟಡಗಳಲ್ಲಿ ನಡೆಯುತ್ತಿರುವ ಕೆಲವು ನಿದರ್ಶನಗಳನ್ನು ಜಂಟಿ ಭೌತಿಕ ಪರೀಕ್ಷೆಯ ಸಮಯದಲ್ಲಿ ಗಮನಿಸಲಾಯಿತು. ಛಾಯಾಚಿತ್ರಗಳನ್ನು **ಪ್ರದರ್ಶಿಕೆ–6.1**ರಲ್ಲಿ ಪ್ರಸ್ತುತಪಡಿಸಲಾಗಿದೆ.

ಪ್ರದರ್ಶಿಕೆ–6.1: ಶಾಲೆಗಳ ಕಟ್ಟಡಗಳ ಕಳಪೆ ಸ್ಥಿತಿ

<table>
<tr><td>  </td><td>  </td></tr>
<tr><td>ನೆಲದ ಕಳಪೆ ಸ್ಥಿತಿ– ಸ.ಕಿ.ಪ್ರಾ.ಶಾಲೆ, ತಿಮ್ಮಸಂದ್ರ, ದೊಡ್ಡಬಳ್ಳಾಪುರ</td><td>ಛಾವಣಿಯ ಕಳಪೆ ಸ್ಥಿತಿ–ಸ.ಹಿ.ಪ್ರಾ.ಶಾಲೆ, ಬೂದಿಹಾಳ್, ಬಾಗಲಕೋಟೆ</td></tr>
<tr><td>  </td><td>  </td></tr>
<tr><td>ಹೊಸಕೋಟೆ, ಕುರುಬರಪೇಟೆಯ ಸ.ಹಿ.ಪ್ರಾ.ಶಾಲೆ ಕಟ್ಟಡದ ಸ್ಥಿತಿ</td><td>ಉತ್ತರಕನ್ನಡ, ಸಿರ್ಸಿಯ ಹುಲ್ಕುರ್ತಿಯ ಸ.ಹಿ.ಪ್ರಾ.ಶಾಲೆ ಕಟ್ಟಡದ ಸ್ಥಿತಿ</td></tr>
</table>

	
ಬೆಂಗಳೂರು ಗ್ರಾಮಾಂತರದ ದಿಣ್ಣೂರಕೋಟೆಯ ಸ.ಹಿ.ಪ್ರಾ.ಶಾಲೆ ಕಟ್ಟಡದ ನೆಲದ ಕಳಪೆ ಸ್ಥಿತಿ	ಹೊಸಕೋಟೆಯ ನಂದಗುಡಿಯ ಕರ್ನಾಟಕ ಪಬ್ಲಿಕ್ ಶಾಲೆ ಕಟ್ಟಡದ ಛಾವಣಿಯ ಕಳಪೆ ಸ್ಥಿತಿ

ಸರ್ಕಾರಿ ಶಾಲೆಗಳಿಗೆ ನಿಯಂತ್ರಕ ಮೌಲ್ಯಮಾಪನವು ಕಡ್ಡಾಯವಲ್ಲ ಎಂದು ಸರ್ಕಾರವು ತಿಳಿಸಿತು (ಮೇ 2023). ಆದರೆ, ಆವರ್ತಕ ಮೌಲ್ಯಮಾಪನದಲ್ಲಿ ಸರ್ಕಾರಿ ಶಾಲೆಗಳನ್ನು ಸೇರಿಸುವುದು ಮೂಲಸೌಕರ್ಯ ಮತ್ತು ಸುರಕ್ಷತಾ ಮಾನದಂಡಗಳಿಗೆ ಉತ್ತಮ ಅನುಸರಣೆಯನ್ನು ಒದಗಿಸುತ್ತದೆ ಎಂಬುದು ವಾಸ್ತವಾಂಶವಾಗಿದೆ.

6.7 ಶಾಲಾ ಸುರಕ್ಷತಾ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸದಿರುವುದು

ತಮಿಳುನಾಡಿನ ಕುಂಭಕೋಣಂ ಜಿಲ್ಲೆಯ ಶಾಲೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡ ಪ್ರಕರಣವನ್ನು ಪರಿಗಣಿಸುವಾಗ ಭಾರತದ ಸರ್ವೋಚ್ಚ ನ್ಯಾಯಾಲಯವು ಶಾಲೆಗಳಿಗೆ ಮಾನ್ಯತೆ ಅಥವಾ ಅನುಮೋದನೆಯನ್ನು ನೀಡುವ ಮೊದಲು ಶಾಲಾ ಕಟ್ಟಡಗಳು ಪ್ರತಿಯೊಂದು ಕೋನದಿಂದ ಸುರಕ್ಷಿತವಾಗಿವೆ ಮತ್ತು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆಯಲ್ಲಿ ಅಳವಡಿಸಲಾಗಿರುವ ಸುರಕ್ಷತಾ ಮಾನದಂಡಗಳ ಪ್ರಕಾರ ಅವುಗಳನ್ನು ನಿರ್ಮಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿತು (ಏಪ್ರಿಲ್ 2009). ಅಸ್ತಿತ್ವದಲ್ಲಿರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಲು ಸೂಚಿಸಲಾಗಿದೆ. ಶಾಲೆಯ ಕಟ್ಟಡದ ಅಂಶಗಳ ಮೌಲ್ಯಮಾಪನವನ್ನು ನಿಯತಕಾಲಿಕವಾಗಿ ಕೈಗೊಳ್ಳಬೇಕು.

ಶಾಲೆಗಳನ್ನು ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತೆ ತಪಾಸಣೆಗೆ ಒಳಪಡಿಸದಿರುವುದನ್ನು ಮಾದರಿ ಶಾಲೆಗಳ ಪರೀಕ್ಷಾ–ತನಿಖೆಯಲ್ಲಿ ಗಮನಿಸಲಾಯಿತು. ಮಧ್ಯಾಹ್ನದ ಊಟವನ್ನು ಒದಗಿಸಲು ಶಾಲಾ ಕಟ್ಟಡಗಳಿಗೆ ಹೊಂದಿಕೊಂಡಂತೆ ಅಡುಗೆ ಕೋಣೆಯಿದ್ದರೂ ಹೆಚ್ಚಿನ ಮಾದರಿ ಶಾಲೆಗಳು ಅಗ್ನಿಶಾಮಕ ಸೌಲಭ್ಯಗಳನ್ನು ಹೊಂದಿರಲಿಲ್ಲ. ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ, ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತೆ ಪ್ರಮಾಣಪತ್ರಗಳ ಅಗತ್ಯವನ್ನು ಇಲಾಖೆಯು ಮಾನ್ಯತೆ ನೀಡಲು ಷರತ್ತಾಗಿ ಕಡ್ಡಾಯಗೊಳಿಸಿತ್ತು. ಈ ಪ್ರಮಾಣಪತ್ರಗಳನ್ನು ಹೊಂದಿರದ ಶಾಲೆಗಳು ಮೂರು ತಿಂಗಳೊಳಗೆ ನವೀಕರಣದ ಷರತ್ತುಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಒಂದು ವರ್ಷದ ತಾತ್ಕಾಲಿಕ ಮಾನ್ಯತೆಯನ್ನು ಮಾತ್ರ ನೀಡಲಾಗುತ್ತಿತ್ತು. ಈ ಷರತ್ತನ್ನು ಅನುಪಾಲಿಸದೇ ಮುಂದುವರಿದಿರುವುದು ಕಂಡುಬಂದಿದ್ದು, ಶಾಲೆಗಳಿಗೆ ವರ್ಷದಿಂದ ವರ್ಷಕ್ಕೆ ಒಂದು ವರ್ಷದ ತಾತ್ಕಾಲಿಕ ಮಾನ್ಯತೆ ನೀಡಲಾಗಿತ್ತು. 2020–21ರ ಅವಧಿಯಲ್ಲಿ ಅಗ್ನಿಶಾಮಕ ಮತ್ತು ಕಟ್ಟಡ ಸುರಕ್ಷತಾ ಮಾನದಂಡಗಳ ಅನುಸರಣೆ ಬಾಕಿ ಉಳಿದಿರುವ 5,153 ಖಾಸಗಿ ಶಾಲೆಗಳಿಗೆ ತಾತ್ಕಾಲಿಕ ಮಾನ್ಯತೆ ನೀಡಲಾಗಿತ್ತು.

ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವಲ್ಲಿ ಕೆಳಗಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೋಷ್ಟಕ 6.2: ಶಾಲಾ ಸುರಕ್ಷತೆ ಮಾರ್ಗಸೂಚಿಗಳ ಅನುಷ್ಠಾನದಲ್ಲಿ ನ್ಯೂನತೆಗಳು

ವಿಷಯ	ವೀಕ್ಷಣೆ
ಸುರಕ್ಷಿತ ಶಾಲೆಯ ವಿಷಯದ ಕುರಿತು ಶಿಕ್ಷಣ ಇಲಾಖೆಗೆ ಸಲಹೆ ನೀಡಲು ರಾಜ್ಯ ಮಟ್ಟದಲ್ಲಿ ಶಾಲಾ ಸುರಕ್ಷತಾ ಸಲಹಾ ಸಮಿತಿ.	ಅಂತಹ ಸಮಿತಿಯನ್ನು ರಚಿಸಿರಲಿಲ್ಲ.
ಶಾಲೆಗಳನ್ನು ಸುರಕ್ಷಿತಗೊಳಿಸಬೇಕು ಎಂಬ ಜಿಲ್ಲಾವಾರು ತಪಶೀಲು ಪಟ್ಟಿಯನ್ನು ತಯಾರಿಸುವುದು.	ತಯಾರಿಸಿಲ್ಲ
ಕರ್ನಾಟಕದಲ್ಲಿನ ಪ್ರದೇಶಗಳಿಗೆ ನಿರ್ದಿಷ್ಟವಾದ ಸ್ಥಳೀಯ ಅಪಾಯಗಳನ್ನು ಗುರುತಿಸುವುದು ಮತ್ತು ಅದಕ್ಕಾಗಿ ಆ ಪ್ರದೇಶದ ಶಾಲೆಗಳನ್ನು ಸಜ್ಜುಗೊಳಿಸುವ ಅಗತ್ಯತೆ.	ಗುರುತಿಸಿರಲಿಲ್ಲ
ಶಾಲಾ ಸುರಕ್ಷತಾ ವಿಷಯಗಳ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಮಕ್ಕಳ ಸ್ನೇಹಿ ಬೋಧನಾ ಸಾಮಗ್ರಿಯನ್ನು ಅಭಿವೃದ್ಧಿಪಡಿಸುವುದು.	ಯಾವುದೇ ಶಾಲಾ ಸುರಕ್ಷತಾ ಪಠ್ಯಕ್ರಮವನ್ನು ತಯಾರಿಸಿರಲಿಲ್ಲ.
ಶಾಲಾ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳು/ಶಿಕ್ಷಕರಿಗೆ ಶಾಲಾ ಸುರಕ್ಷತೆಯ ಪರಿಕಲ್ಪನೆಗಳು ಮತ್ತು ಪ್ರಕ್ರಿಯೆಗಳ ಕುರಿತು ತರಬೇತಿಯನ್ನು ನಡೆಸುವುದು	ಯಾವುದೇ ತರಬೇತಿಗಳನ್ನು ನಡೆಸಲಾಗಿಲ್ಲ.


ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಅನೇಕ ಶಾಲೆಗಳು ತುರ್ತು ಸ್ಥಿತಿಯನ್ನು ಎದುರಿಸಲು ಸಿದ್ಧವಾಗಿರಲಿಲ್ಲ ಎಂಬುದನ್ನು 128 ಮಾದರಿ ಶಾಲೆಗಳ ಲೆಕ್ಕಪರಿಶೋಧನಾ ಪರಿಶೀಲನೆಯು ತೋರಿಸಿತು. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ನೀಡಿರುವ ಮಾಹಿತಿ ಪ್ರಕಾರ 2017–22ರ ಅವಧಿಯಲ್ಲಿ ಶಾಲಾ–ಕಾಲೇಜುಗಳಲ್ಲಿ 91 ಅಗ್ನಿ ಅವಘಡಗಳು ಸಂಭವಿಸಿದ್ದವು. ಈ ಅವಧಿಯಲ್ಲಿ ಯಾವುದೇ ಪ್ರಾಣಹಾನಿ ವರದಿಯಾಗಿಲ್ಲವಾದರೂ, ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಬೆಂಕಿ ಘಟನೆಗಳು ಅಗ್ನಿ ಸುರಕ್ಷತಾ ಮಾರ್ಗಸೂಚಿಗಳ ಅನುಷ್ಠಾನದ ಮಹತ್ವವನ್ನು ಒತ್ತಿಹೇಳುತ್ತವೆ.

ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಶಾಲಾ ಸುರಕ್ಷತೆಯ ಮಾರ್ಗಸೂಚಿಗಳು ವಿವಿಧ ಕ್ರಮಗಳನ್ನು ನಿರ್ದಿಷ್ಟಪಡಿಸಿವೆ.

ನಕ್ಷೆ–6.2ರಲ್ಲಿ ತೋರಿಸಿರುವಂತೆ ಆಸ್ಪತ್ರೆಗಳು, ಆಂಬ್ಯುಲೆನ್ಸ್, ವೈದ್ಯರು ಇತ್ಯಾದಿಗಳ ಸಂಪರ್ಕ ಸಂಖ್ಯೆಗಳಂತಹ ತುರ್ತು ಪ್ರತಿಕ್ರಿಯೆಗೆ ಅಗತ್ಯವಾದ ಅಗತ್ಯ ಮಾಹಿತಿಯನ್ನು ಶೇಕಡಾ 25ರಷ್ಟು ಮಾದರಿ ಶಾಲೆಗಳು ಪ್ರದರ್ಶಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ನಕ್ಷೆ–6.2 ತುರ್ತು ಸ್ಥಿತಿಗೆ ಸಜ್ಜಾಗುವುದು



ವಿಪತ್ತು ನಿರ್ವಹಣಾ ಮಾರ್ಗಸೂಚಿಗಳನ್ನು ಅನುಸರಿಸದಿರುವುದು ಶಾಲಾ ಪರಿಸರದಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಇತರರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ರಾಜಿ ಮಾಡಿಕೊಳ್ಳುವ ಅಪಾಯವನ್ನು ಹೊಂದಿತ್ತು.

ಕಟ್ಟಡ ಸುರಕ್ಷತೆ, ಅಗ್ನಿ ಸುರಕ್ಷತೆ, ಮಕ್ಕಳ ಸುರಕ್ಷತೆ ಮತ್ತು ಇತರ ನಿಯಮಗಳು ಮತ್ತು ನಿಯಂತ್ರಣಗಳನ್ನು ಕರ್ನಾಟಕ ಶಿಕ್ಷಣ ಕಾಯಿದೆಯಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಮತ್ತು ಅವುಗಳನ್ನು ಕಾರ್ಯಗತ ಗೊಳಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

6.7.1 ಶಾಲೆಗಳಲ್ಲಿ ಪ್ರಥಮ ಚಿಕಿತ್ಸೆ ಸೌಲಭ್ಯಗಳು

ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಶಾಲೆಗಳಲ್ಲಿ ಕಳೆಯುತ್ತಾರೆ ಮತ್ತು ಗಾಯಗಳಿಗೆ ಭೇದ್ಯವಾಗಿರುತ್ತಾರೆ. ಅಂತಹ ಪ್ರಕರಣಗಳನ್ನು ನಿರ್ವಹಿಸಲು ಶಾಲೆಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ನಿರ್ವಹಿಸಬೇಕಾಗಿತ್ತು.

ಆಯ್ದ ಹಲವು ಶಾಲೆಗಳಲ್ಲಿ ನಿರ್ವಹಿಸಲಾದ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳು ಬಳಕೆಗೆ ಯೋಗ್ಯವಾಗಿಲ್ಲದಿರುವುದು ಮತ್ತು ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳಲ್ಲಿ ಅವಧಿ ಮುಗಿದಿರುವ ಔಷಧಿಗಳಿದ್ದು ಅವುಗಳನ್ನು ಬದಲಾಯಿಸದೇ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಪ್ರದರ್ಶಿಕೆ–6.2: ಮಾದರಿ ಶಾಲೆಗಳಲ್ಲಿ ಪ್ರಥಮ ಚಿಕಿತ್ಸೆ ಸೌಲಭ್ಯಗಳ ಸ್ಥಿತಿ




ಸ.ಹಿ.ಪ್ರಾ.ಶಾಲೆ, ಹಸಿಗಾಲ ದಲ್ಲಿ ಖಾಲಿ ಇರುವ ಪ್ರಥಮ ಚಿಕಿತ್ಸೆ ಪೆಟ್ಟಿಗೆ



ಸ.ಕಿ.ಪ್ರಾ.ಶಾಲೆ, ಮುಗಳೀಪುರದಲ್ಲಿ ಅವಧಿ ಮುಕ್ತಾಯವಾಗಿರುವ ಪ್ರಥಮ ಚಿಕಿತ್ಸೆ ಔಷಧಗಳು

128 ಮಾದರಿ ಶಾಲೆಗಳಲ್ಲಿ ಪ್ರಥಮ ಚಿಕಿತ್ಸಾ ಸೌಲಭ್ಯದ ಲಭ್ಯತೆಯನ್ನು **ನಕ್ಷೆ–6.3ರಲ್ಲಿ** ನೀಡಲಾಗಿದೆ.

ನಕ್ಷೆ–6.3: ಪ್ರಥಮ ಚಿಕಿತ್ಸಾ ಕಿಟ್‌ಗಳ ಲಭ್ಯತೆ



ಶಾಲೆಗಳಲ್ಲಿ ಪ್ರಥಮ ಚಿಕಿತ್ಸಾ ಸೌಲಭ್ಯಗಳ ಅನುಪಸ್ಥಿತಿಯು ಆರೋಗ್ಯಕ್ಕೆ ಸಂಬಂಧಿಸಿದ ಘಟನೆಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಮತ್ತು ಸಕಾಲಿಕ ವೈದ್ಯಕೀಯ ನೆರವು ನೀಡುವ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ.

ಎಲ್ಲಾ ಶಾಲೆಗಳಿಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಸೂಕ್ತವಾಗಿ ಮತ್ತು ಮುಕ್ತಾಯ ದಿನಾಂಕ ಪರಿಶೀಲನೆಯೊಂದಿಗೆ ನಿರ್ವಹಿಸಲು ಸೂಚನೆಗಳನ್ನು ನೀಡಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

6.8 ಆನ್‌ಲೈನ್ ಶಾಲೆಗಳ ನಿಯಂತ್ರಣ

ಶಿಕ್ಷಣವನ್ನು ತಲುಪಿಸುವಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆಯ ಪ್ರವೃತ್ತಿಗೆ ಅನುಗುಣವಾಗಿ, ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಆನ್‌ಲೈನ್/ವರ್ಚುವಲ್ ಶಾಲೆಗಳನ್ನು ದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಈ ಆನ್‌ಲೈನ್ ಶಾಲೆಗಳು ಪ್ರಸ್ತುತ ಶಿಕ್ಷಣ ಇಲಾಖೆಯ ನಿಯಂತ್ರಣ ಚೌಕಟ್ಟಿನ

ವ್ಯಾಪ್ತಿಯಿಂದ ಹೊರಗಿವೆ. ಶಾಲೆಗಳಿಗೆ ಯುಡಿಐಎಸ್ಇ[26] ಕೋಡ್‌ಗಳನ್ನು ಒದಗಿಸಲಾಗಿಲ್ಲ ಮತ್ತು ಈ ಶಾಲೆಗಳಲ್ಲಿನ ದಾಖಲಾತಿಯ ವಿವರಗಳನ್ನು ಶಿಕ್ಷಣ ಇಲಾಖೆಯು ಮೇಲ್ವಿಚಾರಣೆ ಮಾಡುವುದಿಲ್ಲ. ಆನ್‌ಲೈನ್ ಶಾಲೆಗಳಿಗೆ ದಾಖಲಾದ ಮಕ್ಕಳ ಸಂಖ್ಯೆಯ ಮಾಹಿತಿಯು ಇಲಾಖೆಯಲ್ಲಿ ಲಭ್ಯವಿರಲಿಲ್ಲ.

ಹೀಗೆ, ಈ ಆನ್‌ಲೈನ್ ಶಾಲೆಗಳಿಗೆ ದಾಖಲಾದ ಮಕ್ಕಳಿಗೆ ಕಲಿಸುವ ಕಲಿಕೆಯ ಮಟ್ಟವನ್ನು ಮೇಲ್ವಿಚಾರಣೆ ಮಾಡಲು ಇಲಾಖೆಗೆ ಸಾಧ್ಯವಾಗಲಿಲ್ಲ. ಸರ್ಕಾರದ ನಿಯಂತ್ರಕ ಚೌಕಟ್ಟಿನ ಹೊರಗೆ ಕಾರ್ಯನಿರ್ವಹಿಸುವ ಆನ್‌ಲೈನ್ ಶಾಲೆಗಳು ಸರ್ಕಾರಿ ನಿಯಂತ್ರಿತ ಮತ್ತು ಅನಿಯಂತ್ರಿತ ಕಲಿಕೆಯ ನಡುವೆ ವಿಭಜನೆಯನ್ನು ಸೃಷ್ಟಿಸುತ್ತದೆ, ಇದು ಎರಡು ಕಲಿಕಾ ವ್ಯವಸ್ಥೆಗಳ ನಡುವಿನ ಗುಣಮಟ್ಟ, ಮಾನದಂಡಗಳು ಮತ್ತು ಹೊಣೆಗಾರಿಕೆಯ ವಿಷಯದಲ್ಲಿ ಅಸಮಾನತೆಗೆ ಕಾರಣವಾಗುತ್ತದೆ. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವರದಿಯು ಆನ್‌ಲೈನ್ ಶಾಲೆಗಳ ಚಟುವಟಿಕೆಗಳ ಬಗ್ಗೆ ಇಲಾಖೆಯು ಜಾಗೃತವಾಗಿರುವ ಅಗತ್ಯತೆಯನ್ನು ಸೂಚಿಸುತ್ತದೆ.

ಇದಕ್ಕೆ ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಆನ್‌ಲೈನ್ ಶಾಲೆಗಳ ನಿಯಂತ್ರಣ

ಪ್ರಾಥಮಿಕ ತರಗತಿಗಳಿಗೆ ನಿಯಮಿತ ಬೋಧನೆಯನ್ನು ನೀಡುವ ವಿವಿಧ ಆನ್‌ಲೈನ್ ಪ್ರಾಥಮಿಕ ಶಾಲೆಗಳು ಲಭ್ಯವಿದ್ದವು ಎಂದು ಅಧ್ಯಯನ ವರದಿ ಹೇಳಿದೆ. ಆನ್‌ಲೈನ್ ಶಾಲೆಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ವರದಿಯ ಅಭಿಪ್ರಾಯಗಳು ಈ ಕೆಳಗಿನಂತಿವೆ:

- ವರ್ಚುವಲ್ ಶಾಲೆಗಳನ್ನು ನಿಯಂತ್ರಿಸಲಾಗಿದೆಯೇ ಎಂಬುದನ್ನು ಲೆಕ್ಕಿಸದೆ ಅವುಗಳ ಕಾರ್ಯನಿರ್ವಹಣೆಯ ಬಗ್ಗೆ ಸರ್ಕಾರಕ್ಕೆ ತಿಳಿದಿರಬೇಕು.
- ಆನ್‌ಲೈನ್ ಶಾಲೆಗಳು ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ನಿಯಮಗಳು ಸಹಾಯ ಮಾಡುತ್ತವೆ.
- ವರ್ಚುವಲ್ ಶಾಲೆಗಳ ವಿಶಿಷ್ಟ ಗುಣಲಕ್ಷಣಗಳು ಮತ್ತು ಪ್ರಯೋಜನಗಳನ್ನು ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಅಪೇಕ್ಷಿತ ವಿದ್ಯಾರ್ಥಿ ಸಾಧನೆಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಪರಿಗಣಿಸಿ ನಿಯಮಾವಳಿಗಳನ್ನು ಎಚ್ಚರಿಕೆಯಿಂದ ರಚಿಸಬೇಕು.

6.9 ಖಾಸಗಿ ಅನುದಾನರಹಿತ ಸಂಸ್ಥೆಗಳು ವಿಧಿಸುವ ಶುಲ್ಕಗಳ ನಿಯಂತ್ರಣ

ಶಿಕ್ಷಣದ ವಾಣಿಜ್ಯೀಕರಣವನ್ನು ಎದುರಿಸಲು ಹಾಗೂ ನಿಲ್ಲಿಸಲು ತಪಾಸಣೆ ಮತ್ತು ಸಮತೋಲನಗಳೊಂದಿಗೆ ಬಹು ಕಾರ್ಯವಿಧಾನಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ–2020 ಕಲ್ಪಿಸುತ್ತದೆ. ನೀತಿಯು ಇದನ್ನು ನಿಯಂತ್ರಕ ವ್ಯವಸ್ಥೆಯ ಪ್ರಮುಖ ಆದ್ಯತೆಯೆಂದು ಘೋಷಿಸುತ್ತದೆ ಮತ್ತು ಶಿಕ್ಷಣ ಸಂಸ್ಥೆಗಳು 'ಲಾಭಕ್ಕಾಗಿ ಅಲ್ಲ' ಸ್ವಭಾವವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

[26] ಯುನಿಫೈಡ್ ಡಿಸ್ಟ್ರಿಕ್ಟ್ ಇನ್ಫಾರ್ಮೇಶನ್ ಸಿಸ್ಟಮ್ ಫಾರ್ ಎಜುಕೇಷನ್ (ಯುಡಿಐಎಸ್ಇ) ಎಂಬುದು ಭಾರತದಲ್ಲಿನ ಶಾಲೆಗಳ ಡಾಟಾಬೇಸ್ ಆಗಿದ್ದು ಇದನ್ನು ಅನೇಕ ಶಾಲಾ ಸಂಬಂಧಿತ ಕಾರ್ಯಾಚರಣೆಗಳಿಗಾಗಿ ಬಳಸಲಾಗುತ್ತದೆ. ಇದನ್ನು 2012–13ರ ಅವಧಿಯಲ್ಲಿ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಪ್ರಾರಂಭಿಸಿತು.

6.9.1 ಖಾಸಗಿ ಅನುದಾನರಹಿತ ಸಂಸ್ಥೆಗಳು ಸಂಗ್ರಹಿಸುವ ಶುಲ್ಕಗಳು ಮತ್ತು ಹಣದ ಪ್ರಮಾಣವನ್ನು ಮೇಲ್ವಿಚಾರಣೆ ಮಾಡುವ ಕಾರ್ಯವಿಧಾನದ ಅಸ್ತಿತ್ವದಲ್ಲಿಲ್ಲದಿರುವುದು

ಕರ್ನಾಟಕ ಶಿಕ್ಷಣ ಕಾಯಿದೆಯ ಸೆಕ್ಷನ್ 48ರ ಪ್ರಕಾರ, ಮಾನ್ಯತೆ ಪಡೆದ ಯಾವುದೇ ಶಿಕ್ಷಣ ಸಂಸ್ಥೆಯು ಯಾವುದೇ ಹೆಸರಿನಿಂದ ಕರೆಯುವ ಯಾವುದೇ ಶುಲ್ಕಗಳು ಅಥವಾ ದೇಣಿಗೆಗಳು ಅಥವಾ ಇತರ ಪಾವತಿಗಳನ್ನು ವಿಧಿಸಬಾರದು ಅಥವಾ ಸಂಗ್ರಹಿಸಬಾರದು.

ಖಾಸಗಿ ಅನುದಾನರಹಿತ ಸಂಸ್ಥೆಗಳು ಸಂಗ್ರಹಿಸಿದ ಶುಲ್ಕ ಮತ್ತು ಹಣದ ಪ್ರಮಾಣವನ್ನು ಮೇಲ್ವಿಚಾರಣೆ ಮಾಡಲು ಮತ್ತು ಅವರು ಕಾಯಿದೆಯ ಸೆಕ್ಷನ್ 48ರ ಅವಶ್ಯಕತೆಗಳನ್ನು ಅನುಸರಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಇಲಾಖೆಯು ಯಾವುದೇ ಕಾರ್ಯವಿಧಾನವನ್ನು ಹೊಂದಿರಲಿಲ್ಲ. ಮೇಲ್ವಿಚಾರಣೆಯ ಅನುಪಸ್ಥಿತಿಯು, **ಕಂಡಿಕೆ 6.9.2** ಮತ್ತು **6.9.3ರಲ್ಲಿ** ವಿವರಿಸಿದಂತೆ, ಶುಲ್ಕ ನಿಯಮಗಳ ಉಲ್ಲಂಘನೆಗೆ ಕಾರಣವಾಗುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣದ ಕೈಗೆಟುಕುವಿಕೆ ಮತ್ತು ಪ್ರವೇಶದ ಮೇಲೆ ಪರಿಣಾಮ ಬೀರುತ್ತದೆ.

6.9.2 ಆರ್‌ಟಿಇ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಆರ್‌ಟಿಇ ಶುಲ್ಕದ ಹೆಚ್ಚುವರಿ ಮರುಪಾವತಿ

ಕರ್ನಾಟಕ ಕೆಆರ್‌ಟಿಇ ನಿಯಮ–2ರ ನಿಬಂಧನೆಗಳಿಗೆ ಅನುಗುಣವಾಗಿ, ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಆರ್‌ಟಿಇ ಕೋಟಾದಡಿ ದಾಖಲಾದ ವಿದ್ಯಾರ್ಥಿಗಳ ಶುಲ್ಕವನ್ನು ಇಲಾಖೆಯು ಮರುಪಾವತಿ ಮಾಡುತ್ತದೆ. ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಆನ್‌ಲೈನ್‌ನಲ್ಲಿ ಮಾತ್ರ ನಡೆಯುವ ಶೈಕ್ಷಣಿಕ ಅವಧಿಗಳಿಂದಾಗಿ ಸೌಲಭ್ಯಗಳನ್ನು ಬಳಸಿಕೊಳ್ಳದೇ ಇರುವುದನ್ನು ಗಮನಿಸಿ, 2020–21ನೇ ಶೈಕ್ಷಣಿಕ ವರ್ಷಕ್ಕೆ ಶುಲ್ಕದಲ್ಲಿ ಶೇಕಡಾ 15ರಷ್ಟು ರಿಯಾಯಿತಿ ನೀಡುವಂತೆ ಕರ್ನಾಟಕ ಉಚ್ಚ ನ್ಯಾಯಾಲಯವು ರಾಜ್ಯದ ಖಾಸಗಿ ಶಾಲೆಗಳಿಗೆ ನಿರ್ದೇಶನ ನೀಡಿತ್ತು. ನ್ಯಾಯಾಲಯದ ನಿರ್ದೇಶನಗಳ ಆಧಾರದ ಮೇಲೆ, ಇಲಾಖೆಯು ಖಾಸಗಿ ಅನುದಾನರಹಿತ ಶಾಲೆಗಳಿಗೆ 2019–20ನೇ ಸಾಲಿನಲ್ಲಿ 2020–21ನೇ ಸಾಲಿನ ಶುಲ್ಕವಾಗಿ ಕೇವಲ ಶೇಕಡಾ 85ರಷ್ಟು ಬೋಧನಾ ಶುಲ್ಕವನ್ನು ಮಾತ್ರ ಸಂಗ್ರಹಿಸಲು ಸೂಚನೆಗಳನ್ನು ಜಾರಿಗೊಳಿಸಿತ್ತು (ನವೆಂಬರ್ 2021).

ಶಾಲೆಗಳು ನ್ಯಾಯಾಲಯದ ಆದೇಶವನ್ನು ಪಾಲಿಸದೆ ಹೆಚ್ಚುವರಿ ಶುಲ್ಕವನ್ನು ಕ್ಲೈಮ್ ಮಾಡಿರುವುದು ಅನುದಾನರಹಿತ ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ ಆರ್‌ಟಿಇ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮರುಪಾವತಿಗೆ ಸಂಬಂಧಿಸಿದ ಆರ್‌ಟಿಇ ಪೋರ್ಟಲ್‌ನಿಂದ ದತ್ತಾಂಶಗಳ ಪರಿಶೀಲನೆಯಿಂದ ಕಂಡುಬಂದಿತು. ಶಾಲೆಗಳು ಕ್ಲೇಮ್ ಮಾಡಿದ್ದ ₹7.07 ಕೋಟಿ ಹೆಚ್ಚುವರಿ ಶುಲ್ಕವನ್ನು ಸರ್ಕಾರ ಮರುಪಾವತಿ ಮಾಡಿತು. ಜಿಲ್ಲಾವಾರು ವಿವರಗಳನ್ನು **ಅನುಬಂಧ–6.1ರಲ್ಲಿ** ನೀಡಲಾಗಿದೆ.

6.9.3 ನ್ಯಾಯಾಲಯದ ನಿರ್ದೇಶನಗಳನ್ನು ಉಲ್ಲಂಘಿಸಿ ಆರ್‌ಟಿಇ–ಅಲ್ಲದ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಸಂಗ್ರಹಿಸಿರುವುದು

ನ್ಯಾಯಾಲಯದ ನಿರ್ದೇಶನಗಳ ಪ್ರಕಾರ, 2020–21ರ ಅವಧಿಯಲ್ಲಿ, ಅನುದಾನರಹಿತ ಖಾಸಗಿ ಶಾಲೆಗಳು 2019–20ನೇ ಶೈಕ್ಷಣಿಕ ವರ್ಷದಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ಶೇಕಡಾ 85ರಷ್ಟು ಶುಲ್ಕವನ್ನು ಮಾತ್ರ ಸಂಗ್ರಹಿಸಬೇಕಾಗಿತ್ತು. ಆದರೆ, ಹಲವು ಅನುದಾನರಹಿತ ಶಾಲೆಗಳು ಸೂಚನೆಗಳನ್ನು ಪಾಲಿಸಿರಲಿಲ್ಲ. 2020–21ರ ಅವಧಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳು ನ್ಯಾಯಾಲಯದ ನಿರ್ದೇಶನಗಳನ್ನು ಉಲ್ಲಂಘಿಸಿ ವಿದ್ಯಾರ್ಥಿಗಳಿಂದ ₹345.80 ಕೋಟಿ ಹೆಚ್ಚುವರಿ ಶುಲ್ಕವನ್ನು ಸಂಗ್ರಹಿಸಿದ್ದವು ಎಂಬುದನ್ನು ಅಂಕಿಅಂಶಗಳ ವಿಶ್ಲೇಷಣೆ ತೋರಿಸಿತು. ಜಿಲ್ಲಾವಾರು ವಿವರಗಳನ್ನು **ಅನುಬಂಧ–6.2** ರಲ್ಲಿ ನೀಡಲಾಗಿದೆ.

ಹೀಗೆ, ಇದು ಗೌರವಾನ್ವಿತ ಹೈಕೋರ್ಟಿನ ನಿರ್ದೇಶನಗಳನ್ನು ಅನುಪಾಲನೆ ಮಾಡದಿರುವಲ್ಲಿ ಪರಿಣಮಿಸಿ ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರ ಮೇಲೆ ಪರಿಣಾಮ ಬೀರಿತು.

ಶಿಫಾರಸು–10: ರಾಜ್ಯ ಸರ್ಕಾರವು ಎಲ್ಲಾ ಶಾಲೆಗಳು ಸುರಕ್ಷತಾ ಮಾರ್ಗಸೂಚಿಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಶಾಲೆಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಜವಾಬ್ದಾರರಾಗಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

ಶಿಫಾರಸು–11: ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ಗುಣಮಟ್ಟದ ಬೋಧನೆ ಮತ್ತು ಉತ್ತಮ ಮೂಲಸೌಕರ್ಯದೊಂದಿಗೆ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಸಾರ್ವತ್ರಿಕವಾಗಿ ನಿಯಂತ್ರಕ ನಿಯಮಗಳನ್ನು ಅಳವಡಿಸಿಕೊಳ್ಳಬೇಕು.

ಶಿಫಾರಸು–12: ಖಾಸಗಿ ಅನುದಾನ ರಹಿತ ಶಾಲೆಗಳು ಮಕ್ಕಳಿಂದ ಶುಲ್ಕ ಮತ್ತು ದೇಣಿಗೆ ಸಂಗ್ರಹಿಸುವಾಗ ಕರ್ನಾಟಕ ಶಿಕ್ಷಣ ಕಾಯ್ದೆಯ ಸೆಕ್ಷನ್ 48ರ ನಿಬಂಧನೆಗಳನ್ನು ಅನುಸರಿಸುತ್ತವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಸಮರ್ಪಕ ಮಾಹಿತಿಯನ್ನು ಸಂಗ್ರಹಿಸಬೇಕು.

ಶಿಫಾರಸುಗಳನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

ಅಧ್ಯಾಯ VII

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಅಧ್ಯಾಯ–VII

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳು ನಿರೀಕ್ಷಿತ ಸಮಯದ ಚೌಕಟ್ಟಿನೊಳಗೆ ಯೋಜಿತ ಉತ್ಪನ್ನಗಳು ಮತ್ತು ಫಲಿತಾಂಶಗಳ ಸಾಕಾರಗೊಳಿಸುವಿಕೆಯನ್ನು ಖಚಿತಪಡಿಸುತ್ತದೆ. ಶಾಲೆಗಳ ತಪಾಸಣೆ, ಯೋಜನಾ ಘಟಕಗಳ ಒಟ್ಟಾರೆ ಮೌಲ್ಯಮಾಪನವನ್ನು ಕೈಗೊಳ್ಳುವುದು, ಸಾಮಾಜಿಕ ಲೆಕ್ಕಪರಿಶೋಧನೆ, ಆಂತರಿಕ ಲೆಕ್ಕಪರಿಶೋಧನೆ ಇತ್ಯಾದಿಗಳಲ್ಲಿ ಕೊರತೆಗಳಿದ್ದಿತು.

7.1 ಮೌಲ್ಯಮಾಪನ

ಸಮಗ್ರ ಶಿಕ್ಷಣ ಕರ್ನಾಟಕದ ಮಾರ್ಗಸೂಚಿಗಳ ಪ್ರಕಾರ, ಅನುಷ್ಠಾನದಲ್ಲಿನ ನ್ಯೂನತೆಗಳನ್ನು ಗುರುತಿಸುವ ಗುರಿಯನ್ನು ಹೊಂದಿರುವ ಮೌಲ್ಯಮಾಪನವು ಕಾರ್ಯಕ್ರಮದ ಅವಿಭಾಜ್ಯ ಅಂಗವಾಗಿದೆ. ಆದಾಗ್ಯೂ, 2017–18 ರಿಂದ 2021–22ರ ಅವಧಿಯಲ್ಲಿ ಇಲಾಖೆಯು ಯಾವುದೇ ಯೋಜನಾ ಘಟಕಗಳ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ. ಮೌಲ್ಯಮಾಪನವನ್ನು ನಡೆಸದಿರುವುದು ನ್ಯೂನತೆಗಳನ್ನು ಪರಿಹರಿಸಲು ಮತ್ತು ಕಾರ್ಯಕ್ರಮದ ಫಲಿತಾಂಶಗಳನ್ನು ಸುಧಾರಿಸಲು ಇಲಾಖೆಯ ಸಾಮರ್ಥ್ಯವನ್ನು ಸೀಮಿತಗೊಳಿಸಿತ್ತು.

ಲೆಕ್ಕಪರಿಶೋಧನಾ ಅವಲೋಕನವನ್ನು ಗಮನಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

7.2 ಶಾಲೆಗಳ ತಪಾಸಣೆ

ಸಾರ್ವಜನಿಕ ಶಿಕ್ಷಣ ಆಯುಕ್ತರು ನೀಡಿದ ಸೂಚನೆಗಳ ಪ್ರಕಾರ ಶಾಲೆಗಳ ತಪಾಸಣೆಯನ್ನು ವಿವಿಧ ಶೈಕ್ಷಣಿಕ ಅಧಿಕಾರಿಗಳು ಕೈಗೊಳ್ಳಬೇಕು. ಇಲಾಖೆಯು ಬಿಇಒ ರವರಿಗೆ ತಿಂಗಳಿಗೆ ಎಂಟು ಶಾಲೆಗಳ ತಪಾಸಣೆಯ ಗುರಿಯನ್ನು ನಿಗದಿಪಡಿಸಿತ್ತು. ಇಲಾಖೆಯು ನಿಗದಿಪಡಿಸಿದ ಗುರಿಗಳಿಗೆ ಪ್ರತಿಯಾಗಿ ತಪಾಸಣೆಗಳಲ್ಲಿ ಕೊರತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2017–18ರಿಂದ 2021–22ರ ಅವಧಿಯಲ್ಲಿ ಮಾದರಿ ಜಿಲ್ಲೆಗಳಲ್ಲಿ ಬಿಇಒಗಳು ತಪಾಸಣೆ ಮಾಡಿದ ಶಾಲೆಗಳ ಶೇಕಡಾವಾರು ಪ್ರಮಾಣವನ್ನು **ಕೋಷ್ಟಕ–7.1**ರಲ್ಲಿ ನೀಡಲಾಗಿದೆ:

ಕೋಷ್ಟಕ–7.1: ಬಿಇಒಗಳು ನಡೆಸಿದ ತಪಾಸಣೆಗಳ ವಿವರಗಳು

ಬಿಇಒ ಕಛೇರಿಯ ಹೆಸರು	2017–22ರ ಅವಧಿಯಲ್ಲಿ ತಪಾಸಣೆಗೆ ನಿಗದಿಪಡಿಸಿದ ಗುರಿ	2017–22ರ ಅವಧಿಯಲ್ಲಿ ಬಿಇಒಗಳು ತಪಾಸಣೆ ಮಾಡಿದ ಶಾಲೆಗಳು	ಬಿಇಒಗಳು ತಪಾಸಣೆ ಮಾಡಿದ ಶಾಲೆಗಳ ಶೇಕಡಾವಾರು
ಬಾಗಲಕೋಟೆ	400	11	2.75
ಸಿದ್ದಾಪುರ	400	266	67
ದೊಡ್ಡಬಳ್ಳಾಪುರ	400	126	31.50
ಜೋಯಿಡಾ	400	45	11.25
ಸಾಗರ	400	47	11.75
ಹೊಸಕೋಟೆ	400	138	34.50

ಆಧಾರ: ಡಿಡಿಪಿಐ ಕಛೇರಿಗಳು ಮತ್ತು ಬಿಇಒ ಕಛೇರಿಗಳು

ಹೀಗೆ, ಬಿಇಒಗಳ ತಪಾಸಣೆಯಲ್ಲಿ ಗುರಿಗಳನ್ನು ಸಾಧಿಸುವಲ್ಲಿ ಗಮನಾರ್ಹ ಕೊರತೆಗಳು ಕಂಡುಬಂದವು. ಅಸಮರ್ಪಕ ತಪಾಸಣೆ ಮತ್ತು ಅನುಸರಣೆಯು ಸುಧಾರಣೆಗಳಿಗೆ

ಅವಕಾಶಗಳನ್ನು ಗುರುತಿಸದಿರುವಲ್ಲಿ ಪರಿಣಮಿಸುತ್ತದೆ ಮತ್ತು ಅಂತಿಮವಾಗಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ವೀಕ್ಷಣೆಯನ್ನು ಗಮನಿಸಲಾಗಿದೆ ಹಾಗೂ ಲೋಪದೋಷಗಳ ಬಗ್ಗೆ ವಿವರಣೆಯನ್ನು ಕೇಳಲಾಗುವುದು ಮತ್ತು ಉತ್ತರವನ್ನು ಸಲ್ಲಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

7.3 ಸರ್ಕಾರಿ ಶಾಲೆಗಳ ಭೂ ಆಸ್ತಿಗಳ ಮೇಲ್ವಿಚಾರಣೆ

ಸರ್ಕಾರಿ ಶಾಲೆಯ ಭೂಮಿಯನ್ನು ಅತಿಕ್ರಮಣ ಮತ್ತು ಪರಭಾರೆಯಿಂದ ರಕ್ಷಿಸಲು ಭೂ ದಾಖಲೆಗಳ ನಿಖರತೆ ಮತ್ತು ಸಂಪೂರ್ಣತೆ ಮುಖ್ಯವಾಗಿದೆ. ಇದಕ್ಕೆ ಎಲ್ಲಾ ಆಸ್ತಿ ದಾಖಲೆಗಳ ಸೂಕ್ತವಾದ ನಿರ್ವಹಣೆ ಮತ್ತು ಶಾಲೆಯಿಂದ ಅವುಗಳ ನವೀಕರಣದ ಅಗತ್ಯವಿದೆ. ಆದರೆ, 43,564 ಸರ್ಕಾರಿ ಶಾಲೆಗಳ ಪೈಕಿ ನವೀಕರಿಸಿದ ಭೂ ದಾಖಲೆಗಳು ಕೇವಲ 25205 ಶಾಲೆಗಳಲ್ಲಿ ಮಾತ್ರ ಲಭ್ಯವಿರುವುದನ್ನು ಗಮನಿಸಲಾಯಿತು. 18359 ಶಾಲೆಗಳಿಗೆ ಸಂಬಂಧಿಸಿದಂತೆ ಭೂ ದಾಖಲೆಗಳ ನೋಂದಣಿ ಮತ್ತು ನವೀಕರಣ ಇನ್ನೂ ಪೂರ್ಣಗೊಂಡಿರಲಿಲ್ಲ.

128 ಮಾದರಿ ಶಾಲೆಗಳಲ್ಲಿ 29 ಶಾಲೆಗಳು ಕಾಂಪೌಂಡ್ ಗೋಡೆಗಳನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಂಪೌಂಡ್ ಗೋಡೆಗಳು ಲಭ್ಯವಿಲ್ಲದಿರುವುದು ಮಕ್ಕಳ ಸುರಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಶಾಲೆಯ ಭೂಮಿಯನ್ನು ಅತಿಕ್ರಮಿಸುವ ಅಪಾಯವಿದ್ದಿತು. ಭೂ ದಾಖಲೆಗಳನ್ನು ನವೀಕರಿಸುವಲ್ಲಿನ ವಿಳಂಬವು ಅತಿಕ್ರಮಣದ ಅಪಾಯವನ್ನು ಹೆಚ್ಚಿಸುತ್ತದೆ ಮತ್ತು ಕಾನೂನು ವಿವಾದಗಳು, ಭೂ ಮಾಲೀಕತ್ವದ ನಷ್ಟ ಮತ್ತು ಶಾಲೆಯ ಕಾರ್ಯ ಚಟುವಟಿಕೆಗಳಿಗೆ ಅಡ್ಡಿಯಾಗುವುದು ಮುಂತಾದವುಗಳಲ್ಲಿ ಪರಿಣಮಿಸುತ್ತದೆ.

ಶಾಲಾ ಭೂಮಿಯನ್ನು ಆಯಾ ಸರ್ಕಾರಿ ಶಾಲೆಯ ಹೆಸರಿನಲ್ಲಿ ನೋಂದಾಯಿಸಲು ಇಲಾಖೆಯು ಆಗಸ್ಟ್ 2022ರಿಂದ ಅಕ್ಟೋಬರ್ 2022ರವರೆಗೆ ವಿಶೇಷ ಅಭಿಯಾನವನ್ನು ಪ್ರಾರಂಭಿಸಿದೆ ಮತ್ತು ಭೂ ರಕ್ಷಣೆಗಾಗಿ ಕಾಂಪೌಂಡ್ ಗೋಡೆಗಳ ನಿರ್ಮಾಣವನ್ನು ಪ್ರಸ್ತಾವಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023).

7.4 ಸಾಮಾಜಿಕ ಲೆಕ್ಕಪರಿಶೋಧನೆ

ಪರಿಣಾಮಕಾರಿ ಅನುಷ್ಠಾನಕ್ಕಾಗಿ ಯೋಜನೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಸಾಧನಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯು ಒಂದಾಗಿದೆ. ಯೋಜನೆಯ ಅನುಷ್ಠಾನವನ್ನು ಪಾರದರ್ಶಕ, ಜವಾಬ್ದಾರಿಯುತ ಮತ್ತು ರಚನಾತ್ಮಕವನ್ನಾಗಿ ಮಾಡಲು ಸ್ನಾತಕಪೂರ್ವ ವಿದ್ಯಾರ್ಥಿಗಳು, ಶಿಕ್ಷಕ ಪ್ರಶಿಕ್ಷಣಾರ್ಥಿಗಳು, ಎನ್ಎಸ್ಎಸ್, ಎನ್ಸಿಸಿ ಮುಂತಾದ ಯುವಜನರ ಗುಂಪಿನಿಂದ ಉತ್ತಮವಾಗಿ ವ್ಯಾಖ್ಯಾನಿಸಲಾದ ಪ್ರಮುಖ ಕಾರ್ಯಕ್ಷಮತಾ ಸೂಚಕಗಳ (ಕೆಪಿಐ) ಮೂಲಕ ಸಕ್ರಿಯಗೊಳಿಸಿದ ತಂತ್ರಜ್ಞಾನದಿಂದ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸಬೇಕು. ಐದು ವರ್ಷಗಳ ಅವಧಿಯಲ್ಲಿ ಎಲ್ಲಾ ಶಾಲೆಗಳು ವ್ಯಾಪ್ತಿಗೊಳಪಡಿಸುವಂತೆ ಪ್ರತಿ ವರ್ಗದ ಅಡಿಯಲ್ಲಿ ವಾರ್ಷಿಕವಾಗಿ ಕನಿಷ್ಠ ಶೇಕಡಾ 20ರಷ್ಟು ಶಾಲೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಮಾಡಬೇಕು. ಅಲ್ಲದೆ, ಕೆಜಿಬಿವಿಗಳು ಮತ್ತು ವಸತಿ ಶಾಲೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ ನಡೆಸಬೇಕು.

2017–22ರಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಇಲಾಖೆಯು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಾಮಾಜಿಕ ಲೆಕ್ಕಪರಿಶೋಧನೆ ನಡೆಸದಿರುವ ಮೂಲಕ

ಇಲಾಖೆಯು ಸರ್ಕಾರಿ ಶಾಲೆಗಳು ಮತ್ತು ಕೆಕೆಜಿಬಿವಿಗಳಲ್ಲಿನ ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ಅವಕಾಶವನ್ನು ಕಳೆದುಕೊಂಡಿತು.

2023–24ರಿಂದ ಮುಂದಿನ 5 ವರ್ಷಗಳಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಯೋಜಿಸಲಾಗಿದೆ ಮತ್ತು ಪ್ರತಿ ವರ್ಷ ಶೇಕಡಾ 20ರಷ್ಟು ಶಾಲೆಗಳನ್ನು ವ್ಯಾಪ್ತಿಗೊಳಪಡಿಸಲಾಗುತ್ತದೆ ಎಂದು ಸರ್ಕಾರವು ತಿಳಿಸಿತು (ಮೇ 2023).

7.5 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನೆಯು ಸಂಸ್ಥೆಯ ಕಾರ್ಯಾಚರಣೆಗಳನ್ನು ಸುಧಾರಿಸಲು ಮತ್ತು ಮೌಲ್ಯವನ್ನು ಸೇರಿಸಲು ವಿನ್ಯಾಸಗೊಳಿಸಲಾದ ಸ್ವತಂತ್ರ, ವಸ್ತುನಿಷ್ಠ ಭರವಸೆಯ ಚಟುವಟಿಕೆಯಾಗಿದೆ. ತನ್ನ ಆರ್ಥಿಕ ಮತ್ತು ಇತರ ಕಾರ್ಯಾಚರಣೆಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಲು ಮತ್ತು ಸುಧಾರಿಸಲು ವ್ಯವಸ್ಥಿತವಾದ, ಶಿಸ್ತಿನ ವಿಧಾನವನ್ನು ತರುವ ಮೂಲಕ ಇಲಾಖೆ/ಯೋಜನೆ ತನ್ನ ಉದ್ದೇಶಗಳನ್ನು ಸಾಧಿಸಲು ಅದು ಸಹಾಯ ಮಾಡುತ್ತದೆ. ಆಂತರಿಕ ಲೆಕ್ಕ ಪರಿಶೋಧನಾ ವ್ಯವಸ್ಥೆಗಳ ಮತ್ತು ಆಂತರಿಕ ಲೆಕ್ಕಪರಿಶೋಧನೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

ಇದಲ್ಲದೆ, ಇಲಾಖೆಯು ಪ್ರತಿ ವರ್ಷ ಶಾಲೆಗಳಿಗೆ ಅನುದಾನವನ್ನು ಒದಗಿಸುತ್ತದೆ. ಕರ್ನಾಟಕ ಶಿಕ್ಷಣ ಕಾಯಿದೆ, 1983ರ ಸೆಕ್ಷನ್ 56ರ ಜೊತೆಗೆ ರಾಜ್ಯದಲ್ಲಿರುವ ಮಾಧ್ಯಮಿಕ ಶಾಲೆಗಳ ಏಕರೂಪ ಸಂಹಿತೆಯ ಪ್ರಕಾರ, ರಾಜ್ಯದ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಲೆಕ್ಕಪತ್ರಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಇಲಾಖೆಯಿಂದ ಅನುಮೋದಿಸಲ್ಪಟ್ಟ ಲೆಕ್ಕಪರಿಶೋಧಕರಿಂದ ಅಥವಾ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಯಿಂದ ಲೆಕ್ಕಪರಿಶೋಧನೆ ಮಾಡಲಾಗುತ್ತದೆ. ಅನುದಾನಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಡೆಸಿದ ಲೆಕ್ಕ ಪರಿಶೋಧನೆಯ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಿಲ್ಲ. ನಂಬಿಕೆ, ಪಾರದರ್ಶಕತೆ ಮತ್ತು ಕಾರ್ಯಾಚರಣೆಗಳ ಸಮಗ್ರತೆಯನ್ನು ಎತ್ತಿಹಿಡಿಯಲು ಸಂಬಂಧಿತ ಮಧ್ಯಸ್ಥಗಾರರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದು ಸಂಸ್ಥೆಗಳಿಗೆ ಮುಖ್ಯವಾಗಿದೆ.

ವೀಕ್ಷಣೆಯನ್ನು ಗಮನಿಸುತ್ತಾ, ಬಿಇಒ ಕಚೇರಿಗಳ ನಿಯಮಿತ ಲೆಕ್ಕಪರಿಶೋಧನೆ ಮತ್ತು ತಪಾಸಣೆಯ ಸಮಯದಲ್ಲಿ, ಅನುದಾನಿತ ಸಂಸ್ಥೆಗಳಿಗೆ ಬಿಡುಗಡೆಯಾದ ಸಂಬಳ ಅನುದಾನವನ್ನು ಪರಿಶೀಲಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಮೇ 2023). ಶಿಕ್ಷಣ ಇಲಾಖೆಯಿಂದ ಸಹಾಯಧನ ಸಂಸ್ಥೆಗೆ ವೇತನ ಅನುದಾನ ಹೊರತುಪಡಿಸಿ ಬೇರೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿಲ್ಲ ಎಂದೂ ತಿಳಿಸಲಾಯಿತು. ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾದ ಅನುದಾನಿತ ಸಂಸ್ಥೆಗಳ ವಿವರಗಳನ್ನು ಸರ್ಕಾರವು ಉಲ್ಲೇಖಿಸಲಿಲ್ಲ.

7.6 ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯಿಂದ ಸಮೀಕ್ಷೆ

ಸಮಗ್ರ ಶಿಕ್ಷಣ ಕರ್ನಾಟಕವನ್ನು ಉನ್ನತ ಮಟ್ಟದಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯು ಬೆಂಬಲಿಸುತ್ತದೆ. ಆಡಳಿತ ಮಂಡಳಿಯ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ/ಶಿಕ್ಷಣ ಸಚಿವರು ಮತ್ತು ಕಾರ್ಯಕಾರಿ ಸಮಿತಿಯ ಅಧ್ಯಕ್ಷತೆಯನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ವಹಿಸುತ್ತಾರೆ. ಹಣಕಾಸು ಇಲಾಖೆ, ಯೋಜನಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಕಾರ್ಮಿಕ ಇಲಾಖೆ ಇತ್ಯಾದಿಗಳ ಪ್ರತಿನಿಧಿಗಳು ಈ ಉನ್ನತ ಮಟ್ಟದ ಸಂಸ್ಥೆಗಳ ಸದಸ್ಯರಾಗಿತ್ತಾರೆ.

ಎಸ್‌ಎಸ್‌ಕೆಯ ಆಡಳಿತ ಮಂಡಳಿಯು 2017–22ರ ಐದು ವರ್ಷಗಳ ಅವಧಿಯಲ್ಲಿ ಸಭೆ ನಡೆಸಿರಲಿಲ್ಲ. ಪ್ರತಿ ತ್ರೈಮಾಸಿಕಕ್ಕೆ ಕನಿಷ್ಠ ಒಂದು ಸಭೆಗೆ ಪ್ರತಿಯಾಗಿ, ಕಾರ್ಯಕಾರಿ ಸಮಿತಿಯು 2017–22ರ ಐದು ವರ್ಷಗಳ ಅವಧಿಯಲ್ಲಿ ಕೇವಲ ಐದು ಬಾರಿ ಸಭೆ ಸೇರಿತ್ತು. ಉನ್ನತ ಮಟ್ಟದಲ್ಲಿ ನಿಯಮಿತ ಪರಿಶೀಲನಾ ಸಭೆಗಳ ಅನುಪಸ್ಥಿತಿಯು ಕಂಡಿಕೆ–3.8, 3.10, 3.13 ಇತ್ಯಾದಿಗಳ ಅಡಿಯಲ್ಲಿ ಉಲ್ಲೇಖಿಸಿದಂತೆ ಮಧ್ಯಸ್ಥಿಕೆಗಳ ಅನುಷ್ಠಾನದ ಮೇಲೆ ಪರಿಣಾಮ ಬೀರಿತ್ತು.

ಸರ್ಕಾರವು (ಮೇ 2023) ಕಾರ್ಯಕಾರಿ ಸಮಿತಿ ಸಭೆಗಳ ಬಗೆಗಿನ ವಿವರಗಳನ್ನು ಅಂಗೀಕರಿಸಿತು ಆದರೆ ಆಡಳಿತ ಮಂಡಳಿಯ ಸಭೆಗಳ ಬಗ್ಗೆ ಮೌನವಾಗಿತ್ತು.

ಶಿಫಾರಸು–13: ಶಾಲೆಗಳು ಒದಗಿಸುವ ಕಲಿಕಾ ವಾತಾವರಣದ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರವು ಕಾಲಕಾಲಕ್ಕೆ ತಪಾಸಣೆಗಳನ್ನು ಖಚಿತಪಡಿಸಿಕೊಳ್ಳಬೇಕು.

ಶಿಫಾರಸು–14: ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸಲು ವಿವಿಧ ಮಧ್ಯಸ್ಥಿಕೆಗಳ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ಶಿಫಾರಸುಗಳನ್ನು ಗಮನಿಸಲಾಗಿದೆ ಮತ್ತು ಜಾರಿಗೊಳಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

ಶಾಂತಿಪ್ರಿಯ

(ಶಾಂತಿಪ್ರಿಯ ಎಸ್)
ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ 1)
ಕರ್ನಾಟಕ

ಬೆಂಗಳೂರು
10 Oct 2024

ಮೇಲುರುಜು ಮಾಡಲಾಗಿದೆ

(ಗಿರೀಶ್ ಚಂದ್ರ ಮುರ್ಮು)
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

ನವದೆಹಲಿ
23 Oct 2024

ಅನುಬಂಧಗಳು

ಅನುಬಂಧ–1.1

(ಕಂಡಿಕೆ–1.3.3–ಪುಟ–2)

ಮಾದರಿ ಶಾಲೆಗಳ ಪಟ್ಟಿ

ಆಯ್ಕೆ ಮಾಡಿದ ಶಿಕ್ಷಣ ಬ್ಲಾಕ್‌ಗಳು	ಆಯ್ಕೆ ಮಾಡಿದ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು	ಕ್ರಮ ಸಂಖ್ಯೆ	ಆಯ್ಕೆ ಮಾಡಿದ ಶಾಲೆಗಳು
1. ಬೆಂಗಳೂರು ಗ್ರಾಮಾಂತರ ಶೈಕ್ಷಣಿಕ ಜಿಲ್ಲೆ			
ದೊಡ್ಡಬಳ್ಳಾಪುರ	ಅಂಜನಾಮೂರ್ತಿನಗರ–2921020018	1	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೆಜ್ಜಗದ ಹಳ್ಳಿ
		2	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೊಡ್ಡ ತುಮಕೂರು
		3	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾದಗೊಂಡಹಳ್ಳಿ
		4	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕರೀಂ ಸೊನ್ನೇನಹಳ್ಳಿ
	ಬಶೆಟ್ಟಿಹಳ್ಳಿ–2921020001	5	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾಗದೇನಹಳ್ಳಿ
		6	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವೀರಪುರ
		7	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಆದಿನಾರಾಯಣ ಹೊಸಹಳ್ಳಿ
		8	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಉಬದೇನಹಳ್ಳಿ
ಹೊಸಕೋಟೆ	ಅಲಪ್ಪನಹಳ್ಳಿ–2921040006	9	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಮ್ಮಸಂದ್ರ
		10	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಸಿಗಾಳ
		11	ಸರ್ಕಾರಿ ಪ್ರೌಢಶಾಲೆ, ಕುಂಬಳಹಳ್ಳಿ
		12	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮುಗಳೀಪುರ
	ಬೈಲನರಸಾಪುರ–2921040020	13	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾರಹಳ್ಳಿ
		14	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊರಟಿ
		15	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ದಿನ್ನೇಕೊರಟಿ (ಚಿಕ್ಕೊರಟಿ)
		16	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಗಸರಹಳ್ಳಿ
2. ಶಿವಮೊಗ್ಗ ಶೈಕ್ಷಣಿಕ ಜಿಲ್ಲೆ			
ಸಾಗರ	ಆಚಾಪುರ–2915030016	17	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಡೂರು
		18	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಡೇಹಳ್ಳಿ
		19	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮೂಡಲಿಸರ
		20	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಲಕ್ಕವಳ್ಳಿ
	ಬೆಳಾಲಮಕ್ಕಿ–2915030013	21	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಟ್ಯಾಂಕ್ ಸಾಗರ್
		22	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಣ್ಣಮನೆ ಎಕ್ಸಟೆನ್ಷನ್, ಸಾಗರ
		23	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅರಳೀಕೊಪ್ಪ
		24	ಸ.ಮಾ.ಹಿ.ಪ್ರಾ.ಶಾಲೆ, ಬೆಳೆಲಮಕ್ಕಿ
ಶಿವಮೊಗ್ಗ	ಆಯನೂರು–2915050008	25	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವೀರಣ್ಣನ ಬೆನವಳ್ಳಿ
		26	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಯನೂರು
		27	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚನ್ನಹಳ್ಳಿ
		28	ಸ.ಮಾ.ಹಿ.ಪ್ರಾ.ಶಾಲೆ, ಆಯನೂರು
	ಚೋರಡಿ–2915050028	29	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಣೆ ಹೊಸೂರು
		30	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತುಪ್ಪೂರು
		31	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೊರಬೈಲು
		32	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬೈಡನಲು
3. ಚಾಮರಾಜನಗರ ಶೈಕ್ಷಣಿಕ ಜಿಲ್ಲೆ			
ಗುಂಡ್ಲುಪೇಟೆ	ಅಗತಗೌಡನಹಳ್ಳಿ–2927020316	33	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಲತೂರು
		34	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಂಚಹಳ್ಳಿ
		35	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, , ದೇಸಿಪುರ ಕಾಲೋನಿ.
		36	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸಿದ್ದಯ್ಯನಪುರ ಕಾಲೋನಿ
	ಬೇಗೂರು–2927020261	37	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಚಲವಾಡಿ
		38	ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ

ಆಯ್ಕೆ ಮಾಡಿದ ಶಿಕ್ಷಣ ಬ್ಲಾಕ್‌ಗಳು	ಆಯ್ಕೆ ಮಾಡಿದ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು	ಕ್ರಮ ಸಂಖ್ಯೆ	ಆಯ್ಕೆ ಮಾಡಿದ ಶಾಲೆಗಳು
		39	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಾಲನಹುಂಡಿ
		40	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೇಗೂರು
ಕೊಳ್ಳೇಗಾಲ	ಕಾಮಗೆರೆ–2927050289	41	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೂದಬಾಳು
		42	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಂಪನಪಾಳ್ಯ
		43	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಲಕ್ಕರಸನಪಾಳ್ಯ
		44	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಗಾನಲ್ಲೂರು
	ಕೊಳ್ಳೇಗಾಲ–1–2927050005	45	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸನಗಳ್ಳಿ
		46	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೀಮನಗರ
		47	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಉಪ್ಪಲಗೇರಿ
		48	ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಳ್ಳೇಗಾಲ ನಗರ
4. ಮೈಸೂರು ಶೈಕ್ಷಣಿಕ ಜಿಲ್ಲೆ			
ಕೆ.ಆರ್.ನಗರ	ಅರಕೆರೆ ಕೊಪ್ಪಲು–2926060311	49	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಾಲನಹಳ್ಳಿ
		50	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರಕೆರೆ ಕೊಪ್ಪಲು
		51	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಲಾಲನದೇವನಹಳ್ಳಿ
		52	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಉರ್ದು, ದೊಡ್ಡೆಕೊಪ್ಪಲು
	ಬ್ಯಾಡರಹಳ್ಳಿ–2926060317	53	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮರಿಗುಡಿ ಕೊಪ್ಪಲು
		54	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿದ್ಧನಕೊಪ್ಪಲು
		55	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಾಳೇನಹಳ್ಳಿ–1
		56	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, , ಕೆಂಪನಕೊಪ್ಪಲು
ಮೈಸೂರು ದಕ್ಷಿಣ	ಅಶೋಕಪುರಂ–2926121203	57	ಸಿಕೆಸಿ, ಹೆಚ್‌ಪಿಎಸ್, ವಾರ್ಡ್–7
		58	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪೈಲವಾನ್ ಬಸವಯ್ಯನ ನಗರ
		59	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಜಯನಗರ
		60	ಸಿಕೆಸಿ ಎಲ್‌ಪಿಎಸ್, ವಾರ್ಡ್–7
	ಕುರುಬರಹಳ್ಳಿ–2926121207	61	ಮರಿಮಲ್ಲಪ್ಪ ಹಿರಿಯ ಪ್ರಾಥಮಿಕ ಶಾಲೆ
		62	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಹಾರಾಣಿ, ಎನ್‌ಟಿಎಮ್‌ಎಸ್
		63	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಇಟ್ಟಿಗೆ ಗೂಡು
		64	ಥಿಯೋಬಾಲ್ಡ್ ಕಿ.ಪ್ರಾ.ಶಾಲೆ, ವಾರ್ಡ್–36
5. ಬಾಗಲಕೋಟೆ ಶೈಕ್ಷಣಿಕ ಜಿಲ್ಲೆ			
ಬಾಗಲಕೋಟೆ	ಬಾಗಲಕೋಟೆ–2902020015	65	ಸರ್ಕಾರಿ ಕೆಬಿ ಮಾಡೆಲ್ ಪ್ರಾಥಮಿಕ ಶಾಲೆ, ನಂ.1 ಬಾಗಲಕೋಟೆ
		66	ಗಾಯಿತ್ರಿ ಹಿರಿಯ ಪ್ರಾಥಮಿಕ ಶಾಲೆ, ಬಾಗಲಕೋಟೆ, ಅನುದಾನಿತ
		67	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–21, ಹಳಪೇಟೆ, ಬಾಗಲಕೋಟೆ
		68	ಸರ್ಕಾರಿ ಕೆಜಿ ಹಿರಿಯ ಪ್ರಾಥಮಿಕ ಶಾಲೆ, ನಂ.3, ಬಾಗಲಕೋಟೆ
	ಬೇವೂರು–2902020033	69	ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಬೇವೂರು
		70	ಎಐಡಿ–ಜ್ಞಾನಗಂಗ ಹಿರಿಯ ಪ್ರಾಥಮಿಕ ಶಾಲೆ, ಬೇವೂರು
		71	ಸರ್ಕಾರಿ ಕೆಬಿ ಹಿರಿಯ ಪ್ರಾಥಮಿಕ ಶಾಲೆ, ಬೇವೂರು
		72	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೋದನಾಯಕದಿನ್ನಿ
ಹುನಗುಂದ	ಐಹೊಳೆ–2902070053	73	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಐಹೊಳೆ
		74	ಸರ್ಕಾರಿ ಕನ್ನಡ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಕಳ್ಳಿಗುಡ್ಡ
		75	ಸರ್ಕಾರಿ ಕನ್ನಡ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಹೂವಿನಹಳ್ಳಿ
		76	ಸರ್ಕಾರಿ ಕನ್ನಡ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಐಹೊಳೆ
	ಬೂದಿಹಾಳ್, ಎಸ್ ಕೆ–2902070052	77	ಸರ್ಕಾರಿ ಕನ್ನಡ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಬೆನಕನದೋಣಿ
		78	ಸರ್ಕಾರಿ ಕನ್ನಡ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಹೆಮ್ಮವಡಗಿ
		79	ಸರ್ಕಾರಿ ಕನ್ನಡ ಬಾಲಕರ ಕಿರಿಯ ಪ್ರಾಥಮಿಕ ಶಾಲೆ, ಕೊನ್ನೂರು

ಆಯ್ಕೆ ಮಾಡಿದ ಶಿಕ್ಷಣ ಬ್ಲಾಕ್‌ಗಳು	ಆಯ್ಕೆ ಮಾಡಿದ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು	ಕ್ರಮ ಸಂಖ್ಯೆ	ಆಯ್ಕೆ ಮಾಡಿದ ಶಾಲೆಗಳು
		80	ಸರ್ಕಾರಿ ಕನ್ನಡ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಬೂದಿಹಾಳ್, ಎಸ್‌ಕೆ
6. ಸಿಸಿ ಶೈಕ್ಷಣಿಕ ಜಿಲ್ಲೆ			
ಜೋಯಡಾ	ಅನಶಿ–2934110012	81	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನುಜ್ಜಿ
		82	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅನಶಿ
		83	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಬಾಲಿ
		84	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮೈನಾಲ್
	ಅನ್‌ಮೋಡ್–2934110011	85	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಕೇಟಿ
		86	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೌಡ್ಸ್‌ದ್
		87	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ರಂಗರುಕ್
		88	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕಟ್ಟೆಗಾಲಿ
ಸಿದ್ದಾಪುರ	ಬೆಡಕಣಿ–2934060009	89	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾಡೆಲ್ ಬೆಡಕಣಿ
		90	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡಕೇರಿ
		91	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಂಕುಲಿ
		92	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಿಕ್ಕಳಿಸೆ
	ಬೀಳಗಿ–2934060012	93	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಳ್ಳಿಬೈಲ್
		94	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಿಲವಳ್ಳಿ
		95	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೆಮ್ಮನಬೇಲ್
		96	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಲಕುಟ್ರಿ
7. ಬಳ್ಳಾರಿ ಶೈಕ್ಷಣಿಕ ಜಿಲ್ಲೆ			
ಹಡಗಲಿ	ಹಡಗಲಿ ಗ್ರಾಮೀಣ–2912020034	97	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊನ್ನನಾಯಕನ ಹಳ್ಳಿ
		98	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಗನೂರು
		99	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆ, ಕೊಂಬಳಿ
		100	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಯಿಲರಗಟ್ಟಿ
	ಹಗರನೂರು–2912020020	101	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಿಪ್ಪಾಪುರ
		102	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಗರನೂರು
		103	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ವಡ್ಡಿನಹಳ್ಳಿ ತಾಂಡ
		104	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಜನೂರು
ಹೊಸಪೇಟೆ	ಅಂಬೇಡ್ಕರ್, ಜೆ ರೋಡ್, ಹೊಸಪೇಟೆ.–2912050068	105	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೀತಾ ಹೊಸಪೇಟೆ
		106	ಹಿರಿಯ ಪ್ರಾಥಮಿಕ ಶಾಲೆ, ಕಟ್ಟ ನಂಜಪ್ಪ
		107	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ರಾಜೀವ್‌ಗಾಂಧಿ ಕೊರಚರಹಟ್ಟಿ
		108	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಪೂಜಿ 20ನೇ ವಾರ್ಡ್, ಹರಿಜನಕೆರೆ, ಹೊಸಪೇಟೆ
	ದೇವಸಮುದ್ರ–2912050072	109	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕಜೈಗನೂರು
		110	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಂಪದೇವನಹಳ್ಳಿ
		111	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಆಶ್ರಯ ಕಾಲೋನಿ, ದೇವಸಮುದ್ರ
		112	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಸಮುದ್ರ
8. ರಾಯಚೂರು ಶೈಕ್ಷಣಿಕ ಜಿಲ್ಲೆ			
ಲಿಂಗಸೂಗುರು	ಅಮದೀಹಾಳ್–2906050069	113	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಶಿಹಾಳ್ ತಾಂಡ
		114	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಣಸವಿ
		115	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕಲೆಕ್ಕಿಹಾಳ್
		116	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಮದಿಹಾಳ್
	ದೇವರಭೂಪುರ್–2906050067	117	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವರಭೂಪುರ್

ಆಯ್ಕೆ ಮಾಡಿದ ಶಿಕ್ಷಣ ಬ್ಲಾಕ್‌ಗಳು	ಆಯ್ಕೆ ಮಾಡಿದ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು	ಕ್ರಮ ಸಂಖ್ಯೆ	ಆಯ್ಕೆ ಮಾಡಿದ ಶಾಲೆಗಳು
		118	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಡ್ಡದಹಾಳ್
		119	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗಲಗಿನದೊಡ್ಡಿ
		120	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಉಪ್ಪಾರದೊಡ್ಡಿ
ರಾಯಚೂರು	ಬಿಜನಿಗೆರ–2906070089	121	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಯಜಾಪೂರು
		122	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ , ಜುಲುಮಗೆರಾ
		123	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ರಾಜಲಬಂಡ
		124	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೋಲಮನದೊಡ್ಡಿ
	ದೇವಸುಗೂರ್–2906070011	125	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಸುಗೂರು
		126	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೊದಲನೇ ಅಡ್ಡರಸ್ತೆ, ಶಕ್ತಿನಗರ
		127	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಡಿ ಯಾದಲಾಪುರ, ಉನ್ನತೀಕೃತ ಆರ್‌ಎಮ್‌ಎಸ್‌ಎ
		128	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೇವಿನಬೆಂಚಿ

ಅನುಬಂಧ–2.1

(ಕಂಡಿಕೆ–2.3.1 ಪುಟ–8)

2021–22ರ ಅವಧಿಯಲ್ಲಿ ಜಿಲ್ಲಾವಾರು ನಿವ್ವಳ ದಾಖಲಾತಿ ದರದ ವಿವರಗಳು

(ಶೇಕಡಾವಾರು)

ಶೈಕ್ಷಣಿಕ ಜಿಲ್ಲೆ	ಕಿಪ್ರಾ	ಕಿಪ್ರಾ	ಕಿಪ್ರಾ	ಹಿಪ್ರಾ	ಹಿಪ್ರಾ	ಹಿಪ್ರಾ	ಪ್ರಾ	ಪ್ರಾ	ಪ್ರಾ
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
ಬಾಗಲಕೋಟೆ	96.66	94.43	95.59	87.49	89.18	88.30	93.28	92.51	92.91
ಬಳ್ಳಾರಿ	98.82	96.05	97.47	88.76	91.67	90.16	95.15	94.48	94.82
ಬೆಳಗಾವಿ	101.69	101.31	101.51	85.20	90.23	87.58	95.37	97.17	96.24
ಬೆಳಗಾವಿ ಚಿಕ್ಕೋಡಿ	99.84	98.72	99.31	89.78	94.92	92.18	96.10	97.35	96.70
ಬೆಂಗಳೂರು ಗ್ರಾಮಾಂತರ	100.67	98.18	99.46	88.67	90.43	89.51	96.12	95.33	95.74
ಬೆಂಗಳೂರು ನಗರ ಉತ್ತರ	112.49	109.59	111.08	98.47	102.40	100.33	107.23	106.97	107.10
ಬೆಂಗಳೂರು ನಗರ ದಕ್ಷಿಣ	124.07	124.16	124.12	112.30	114.41	113.31	119.87	120.71	120.27
ಬೀದರ್	102.93	100.59	101.80	81.81	81.33	81.58	94.80	93.21	94.04
ಚಾಮರಾಜನಗರ	79.15	79.39	79.26	72.02	72.98	72.48	76.43	76.97	76.69
ಚಿಕ್ಕಬಳ್ಳಾಪುರ	83.31	82.18	82.76	73.25	75.26	74.22	79.50	79.58	79.54
ಚಿಕ್ಕಮಗಳೂರು	89.25	88.39	88.83	74.02	76.43	75.17	83.16	83.72	83.43
ಚಿತ್ರದುರ್ಗ	89.92	88.75	89.35	81.00	83.36	82.13	86.57	86.77	86.67
ದಕ್ಷಿಣ ಕನ್ನಡ	101.82	102.97	102.38	89.66	88.18	88.95	97.17	97.35	97.25
ದಾವಣಗೆರೆ	100.18	98.29	99.26	79.81	80.57	80.18	92.27	91.47	91.88
ಧಾರವಾಡ	108.60	107.35	107.99	90.63	93.48	91.99	101.73	102.14	101.93
ಗದಗ	99.55	97.69	98.65	86.84	88.52	87.65	94.79	94.31	94.56
ಹಾಸನ	88.19	85.58	86.91	72.38	74.46	73.39	81.88	81.25	81.57
ಹಾವೇರಿ	98.78	99.94	99.34	83.36	85.43	84.36	93.02	94.53	93.75
ಕಲಬುರಗಿ	100.24	99.98	100.12	84.10	89.12	86.47	94.10	95.94	94.98
ಕೊಡಗು	84.67	83.04	83.87	74.53	73.77	74.16	80.58	79.41	80.01
ಕೋಲಾರ	84.85	82.99	83.94	74.39	75.32	74.84	80.89	80.12	80.52
ಕೊಪ್ಪಳ	99.98	98.81	99.41	87.15	88.65	87.87	95.22	95.08	95.15
ಮಂಡ್ಯ	80.49	77.90	79.24	70.41	72.60	71.44	76.57	75.88	76.24

ಶೈಕ್ಷಣಿಕ ಜಿಲ್ಲೆ	ಕೆಪ್ರಾ	ಕೆಪ್ರಾ	ಕೆಪ್ರಾ	ಹಿಪ್ರಾ	ಹಿಪ್ರಾ	ಹಿಪ್ರಾ	ಪ್ರಾ	ಪ್ರಾ	ಪ್ರಾ
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
ಮೈಸೂರು	89.13	87.85	88.51	81.60	83.91	82.71	86.24	86.35	86.29
ರಾಯಚೂರು	102.72	101.32	102.05	81.33	85.57	83.36	94.64	95.45	95.04
ರಾಮನಗರ	84.73	83.07	83.93	75.22	79.65	77.32	81.05	81.78	81.40
ಶಿವಮೊಗ್ಗ	96.43	95.25	95.86	80.59	82.43	81.47	90.20	90.30	90.25
ತುಮಕೂರು	88.62	87.12	87.89	82.88	82.87	82.88	86.38	85.53	85.97
ತುಮಕೂರು ಮಧುಗಿರಿ	84.42	82.84	83.65	75.78	74.21	75.02	81.18	79.61	80.42
ಉಡುಪಿ	103.23	102.27	102.77	90.13	88.43	89.31	98.12	96.94	97.55
ಉತ್ತರ ಕನ್ನಡ	89.52	96.21	92.73	78.93	86.43	82.48	85.49	92.55	88.85
ಉತ್ತರ ಕನ್ನಡ ಸಿರ್ಸಿ	93.74	94.74	94.23	81.66	87.11	84.23	89.04	91.89	90.41
ವಿಜಯಪುರ	112.86	108.53	110.78	96.93	99.85	98.31	106.95	105.38	106.20
ಯಾದಗಿರಿ	95.25	91.89	93.62	81.80	83.95	82.83	90.28	89.02	89.67
ಕರ್ನಾಟಕ ರಾಜ್ಯ	99.85	98.43	99.16	86.41	88.79	87.55	94.78	94.85	94.81

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಅನುಬಂಧ–2.2

(ಕಂಡಿಕೆ–2.3.2 ಪುಟ–10)

2021–22ರ ಅವಧಿಯಲ್ಲಿ ಜಿಲ್ಲಾವಾರು ಶಾಲೆಯಿಂದ ಹೊರಗುಳಿದ ಮಕ್ಕಳ ದರಗಳು

(ಶೇಕಡಾವಾರು)

ಶೈಕ್ಷಣಿಕ ಜಿಲ್ಲೆ	ಕೆಪ್ರಾ	ಕೆಪ್ರಾ	ಕೆಪ್ರಾ	ಹಿಪ್ರಾ	ಹಿಪ್ರಾ	ಹಿಪ್ರಾ	ಪ್ರಾ	ಪ್ರಾ		ಪ್ರಾ
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು		ಒಟ್ಟು
ಬಾಗಲಕೋಟೆ	0.38	0.01	0.21	0.93	0.38	0.66	0.58	0.15		0.38
ಬಳ್ಳಾರಿ	0.00	0.00	0.00	0.00	0.00	0.00	0.00	0.00		0.00
ಬೆಳಗಾವಿ	0.11	0.00	0.00	0.64	0.40	0.52	0.30	0.01		0.16
ಬೆಳಗಾವಿ ಚಿಕ್ಕೋಡಿ	0.00	0.00	0.00	0.00	0.12	0.00	0.00	0.00		0.00
ಬೆಂಗಳೂರು ಗ್ರಾಮಾಂತರ	0.00	0.00	0.00	0.00	0.00	0.00	0.00	0.00		0.00
ಬೆಂಗಳೂರು ನಗರ ಉತ್ತರ	0.89	0.57	0.74	2.94	1.97	2.47	1.64	1.09		1.38
ಬೆಂಗಳೂರು ನಗರ ದಕ್ಷಿಣ	2.08	1.69	1.89	4.23	3.65	3.95	2.84	2.39		2.62
ಬೀದರ್	0.00	0.00	0.00	0.00	0.00	0.00	0.00	0.00		0.00
ಚಾಮರಾಜನಗರ	0.00	0.00	0.00	0.61	0.58	0.60	0.00	0.00		0.00
ಚಿಕ್ಕಬಳ್ಳಾಪುರ	0.00	0.00	0.00	1.04	0.44	0.75	0.00	0.00		0.00
ಚಿಕ್ಕಮಗಳೂರು	0.00	0.00	0.00	0.05	0.00	0.00	0.00	0.00		0.00
ಚಿತ್ರದುರ್ಗ	0.00	0.00	0.00	0.00	0.00	0.00	0.00	0.00		0.00
ದಕ್ಷಿಣ ಕನ್ನಡ	0.00	0.00	0.00	0.00	0.00	0.00	0.00	0.00		0.00
ದಾವಣಗೆರೆ	0.00	0.00	0.00	0.82	0.27	0.56	0.23	0.00		0.09
ಧಾರವಾಡ	0.00	0.00	0.00	0.53	0.43	0.48	0.11	0.02		0.06
ಗದಗ	0.00	0.00	0.00	0.00	0.19	0.00	0.00	0.00		0.00
ಹಾಸನ	0.00	0.00	0.00	0.00	0.00	0.00	0.00	0.00		0.00
ಹಾವೇರಿ	0.03	0.00	0.00	0.87	1.11	0.99	0.33	0.28		0.31
ಕಲಬುರಗಿ	0.00	0.00	0.00	0.00	0.00	0.00	0.00	0.00		0.00
ಕೊಡಗು	0.10	0.06	0.08	0.46	0.33	0.39	0.24	0.17		0.21
ಕೋಲಾರ	0.00	0.00	0.00	0.38	0.22	0.30	0.00	0.00		0.00
ಕೊಪ್ಪಳ	0.00	0.00	0.00	0.76	0.45	0.61	0.03	0.00		0.00
ಮಂಡ್ಯ	0.00	0.00	0.00	0.00	0.00	0.00	0.00	0.00		0.00

ಶೈಕ್ಷಣಿಕ ಜಿಲ್ಲೆ	ಕಿಪ್ರಾ	ಕಿಪ್ರಾ	ಕಿಪ್ರಾ	ಹಿಪ್ರಾ	ಹಿಪ್ರಾ	ಹಿಪ್ರಾ	ಪ್ರಾ	ಪ್ರಾ		ಪ್ರಾ
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು		ಒಟ್ಟು
ಮೈಸೂರು	0.00	0.00	0.00	0.00	0.00	0.00	0.00	0.00		0.00
ರಾಯಚೂರು	0.00	0.00	0.00	0.22	0.07	0.15	0.00	0.00		0.00
ರಾಮನಗರ	0.00	0.00	0.00	0.00	0.00	0.00	0.00	0.00		0.00
ಶಿವಮೊಗ್ಗ	0.00	0.00	0.00	0.59	0.15	0.38	0.00	0.00		0.00
ತುಮಕೂರು	0.00	0.00	0.00	0.00	0.00	0.00	0.00	0.00		0.00
ತುಮಕೂರು ಮಧುಗಿರಿ	0.00	0.00	0.00	0.19	0.38	0.28	0.00	0.00		0.00
ಉಡುಪಿ	0.00	0.00	0.00	0.00	0.00	0.00	0.00	0.00		0.00
ಉತ್ತರಕನ್ನಡ	0.00	0.00	0.00	0.00	0.00	0.00	0.00	0.00		0.00
ಉತ್ತರ ಕನ್ನಡ ಸಿರ್ಸಿ	0.00	0.00	0.00	0.47	0.44	0.46	0.00	0.00		0.00
ವಿಜಯಪುರ	0.00	0.00	0.00	1.37	1.95	1.65	0.26	0.39		0.32
ಯಾದಗಿರಿ	0.00	0.00	0.00	1.47	1.26	1.37	0.43	0.01		0.23
ಕರ್ನಾಟಕ ರಾಜ್ಯ	**0.11**	**0.07**	**0.09**	**0.55**	**0.44**	**0.49**	**0.21**	**0.13**		**0.17**

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಅನುಬಂಧ–2.3

(ಕಂಡಿಕೆ–2.5 ಪುಟ–12)

ಎಸ್‌ಡಿಜಿ ಸೂಚಕಗಳ ಮೇಲಿನ ದತ್ತಾಂಶ

ಸೂಚಕ	ಸೂಚಕದ ವಿವರಣೆ	ಉದ್ದೇಶ	ಅಗತ್ಯವಿದ್ದ ದತ್ತಾಂಶ
4.1.2	ಪೂರ್ಣಗೊಳಿಸುವಿಕೆಯ ಪ್ರಮಾಣ (ಪ್ರಾಥಮಿಕ ಶಿಕ್ಷಣ, ಕಿರಿಯ ಮಾಧ್ಯಮಿಕ ಶಿಕ್ಷಣ, ಹಿರಿಯ ಮಾಧ್ಯಮಿಕ ಶಿಕ್ಷಣ)	ಪೂರ್ಣಗೊಂಡ ದರವು ನಿರ್ದಿಷ್ಟ ವಯಸ್ಸಿನ ಗುಂಪಿನಲ್ಲಿ ಎಷ್ಟು ವ್ಯಕ್ತಿಗಳು ಸಂಬಂಧಿತ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಪ್ರತಿ ಹಂತದ ಶಿಕ್ಷಣವನ್ನು ಪೂರ್ಣಗೊಳಿಸಲು ಸೈದ್ಧಾಂತಿಕ ವಯೋಮಿತಿಗಿಂತ ಸ್ವಲ್ಪ ಹಳೆಯ ವಯಸ್ಸಿನ ಗುಂಪನ್ನು ಆಯ್ಕೆ ಮಾಡುವ ಮೂಲಕ, ಎಷ್ಟು ಮಕ್ಕಳು ಮತ್ತು ಹದಿಹರೆಯದವರು ಹೆಚ್ಚು ಕಡಿಮೆ ಸಮಯಕ್ಕೆ ಶಾಲೆಗೆ ಪ್ರವೇಶಿಸುತ್ತಾರೆ ಮತ್ತು ಹೆಚ್ಚಿನ ವಿಳಂಬವಿಲ್ಲದೆ ಶಿಕ್ಷಣ ವ್ಯವಸ್ಥೆಯ ಮೂಲಕ ಪ್ರಗತಿ ಸಾಧಿಸುತ್ತಾರೆ ಎಂಬುದನ್ನು ಸೂಚಕವು ಅಳೆಯುತ್ತದೆ.	ಉನ್ನತ ಮಟ್ಟದ ಶಿಕ್ಷಣ ಅಥವಾ ಪೂರ್ಣಗೊಂಡ ದರ್ಜೆಯ ಮೂಲಕ ಸಂಬಂಧಿತ ವಯಸ್ಸಿನ ಜನಸಂಖ್ಯೆ; ಪ್ರತಿ ಹಂತದ ಶಿಕ್ಷಣದ ರಚನೆ (ಪ್ರವೇಶ ವಯಸ್ಸು ಮತ್ತು ಅವಧಿ) ಮೇಲಿನ ದತ್ತಾಂಶ. ಶಾಲಾ ವರ್ಷದ ಆರಂಭದಲ್ಲಿ ವಯಸ್ಸನ್ನು ಲೆಕ್ಕಾಚಾರ ಮಾಡಲು ಸಂದರ್ಶನದ ದಿನಾಂಕ ಮತ್ತು ಹುಟ್ಟಿದ ತಿಂಗಳಿನಲ್ಲಿ ದತ್ತಾಂಶವನ್ನು ಆದರ್ಶವಾಗಿ ಲಭ್ಯವಾಗುವಂತೆ ಮಾಡಬೇಕು.
4.1.3	ಕೊನೆಯ ದರ್ಜೆಗೆ ಒಟ್ಟು ತೆಗೆದುಕೊಳ್ಳುವ ಅನುಪಾತ (ಪ್ರಾಥಮಿಕ ಶಿಕ್ಷಣ, ಕಿರಿಯ ಮಾಧ್ಯಮಿಕ ಶಿಕ್ಷಣ)	ಪ್ರಾಥಮಿಕ ಶಿಕ್ಷಣದ ಕೊನೆಯ ದರ್ಜೆಯ ಒಟ್ಟು ತೆಗೆದುಕೊಳ್ಳುವಿಕೆಯ ದರವನ್ನು ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ಪೂರ್ಣಗೊಳಿಸುವಿಕೆಯ ಅಳತೆ ಎಂದು ಪರಿಗಣಿಸಲಾಗುತ್ತದೆ.	ಪ್ರತಿ ಹಂತದ ಶಿಕ್ಷಣದ ಕೊನೆಯ ಗ್ರೇಡ್‌ಗೆ ಹೊಸ ಪ್ರವೇಶಿಗಳು (ಅಥವಾ ಕೊನೆಯ ದರ್ಜೆಯಲ್ಲಿ ದಾಖಲಾತಿಯಿಂದ ಪುನರಾವರ್ತಕರನ್ನು ಕಳೆಯುವುದು); ಪ್ರತಿ ಹಂತದ ಶಿಕ್ಷಣದ ಕೊನೆಯ ದರ್ಜೆಯವರೆಗಿನ ಉದ್ದೇಶಿತ ಪ್ರವೇಶ ವಯಸ್ಸಿನ ಜನಸಂಖ್ಯೆ ಮತ್ತು ಪ್ರತಿ ಹಂತದ ಶಿಕ್ಷಣದ ರಚನೆಯ (ಪ್ರವೇಶ ವಯಸ್ಸು ಮತ್ತು ಅವಧಿ) ದತ್ತಾಂಶ.
4.1.5	ತರಗತಿಗೆ ಹೆಚ್ಚಿನ ವಯಸ್ಸಿನ ಮಕ್ಕಳ ಶೇಕಡಾವಾರು (ಪ್ರಾಥಮಿಕ ಶಿಕ್ಷಣ, ಕಿರಿಯ ಮಾಧ್ಯಮಿಕ ಶಿಕ್ಷಣ)	ಎಲ್ಲಾ ಬಾಲಕಿಯರು ಮತ್ತು ಬಾಲಕರು ಗುಣಮಟ್ಟದ ಪ್ರಾಥಮಿಕ ಮತ್ತು ಕಿರಿಯ ಮಾಧ್ಯಮಿಕ ಶಿಕ್ಷಣದ ಪೂರ್ಣ ಚಕ್ರವನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಸೂಚಕವು ಪ್ರಗತಿಯನ್ನು ಅಳೆಯುತ್ತದೆ ಮತ್ತು ಪ್ರತಿ ಹಂತದಲ್ಲಿ ಓದುವಿಕೆ ಮತ್ತು ಗಣಿತದಲ್ಲಿ ಕನಿಷ್ಠ ಮಟ್ಟದ ಪ್ರಾವೀಣ್ಯತೆಯನ್ನು ಸಾಧಿಸುತ್ತದೆ.	ಪ್ರತಿ ತರಗತಿಯಲ್ಲಿ ಒಂದೇ ವರ್ಷದ ವಯಸ್ಸಿನ ದಾಖಲಾತಿ, ಒಂದೇ ವರ್ಷದ ವಯಸ್ಸಿನ ಜನಸಂಖ್ಯೆಯ ಅಂದಾಜು ಮತ್ತು ಪ್ರತಿ ಹಂತದ ಶಿಕ್ಷಣದ ರಚನೆ (ಪ್ರವೇಶ ವಯಸ್ಸು ಮತ್ತು ಅವಧಿ) ದತ್ತಾಂಶ.
4.1.6	ತರಗತಿ 2 ಅಥವಾ 3 ರಲ್ಲಿ ರಾಷ್ಟ್ರೀಯ ಪ್ರಾತಿನಿಧಿಕ ಕಲಿಕೆಯ ಮೌಲ್ಯಮಾಪನ (ಎ) ಆಡಳಿತ; (ಬಿ) ಪ್ರಾಥಮಿಕ ಶಿಕ್ಷಣದ ಕೊನೆಯಲ್ಲಿ; ಮತ್ತು (ಸಿ) ಕಿರಿಯ ಮಾಧ್ಯಮಿಕ ಶಿಕ್ಷಣದ ಕೊನೆಯಲ್ಲಿ	ಪ್ರಗತಿ ಮತ್ತು ದೌರ್ಬಲ್ಯಗಳನ್ನು ಪತ್ತೆಹಚ್ಚಲು ಪ್ರತಿ ಶೈಕ್ಷಣಿಕ ಹಂತದಲ್ಲಿ ದೇಶಗಳು ಜ್ಞಾನದ ಸ್ವಾಧೀನವನ್ನು ಮೌಲ್ಯಮಾಪನ ಮಾಡುತ್ತಿದ್ದರೆ ಸೂಚಕವು ಅಳೆಯುವ ಗುರಿಯನ್ನು ಹೊಂದಿದೆ.	ಪ್ರತಿ ವಿಷಯದಲ್ಲಿ ಮತ್ತು ಶಿಕ್ಷಣದ ಪ್ರತಿ ಹಂತದಲ್ಲಿ ಕಲಿಕೆಯ ಮೌಲ್ಯಮಾಪನಗಳ ಅನುಷ್ಠಾನದ ಮಾಹಿತಿ.
4.1.7	ಕಾನೂನು ಚೌಕಟ್ಟಿನಲ್ಲಿ ಖಾತರಿಪಡಿಸಲಾದ (ಎ) ಉಚಿತ ಮತ್ತು (ಬಿ) ಕಡ್ಡಾಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ವರ್ಷಗಳ ಸಂಖ್ಯೆ	ಮಕ್ಕಳು ಮತ್ತು ಯುವಜನರಿಗೆ ಶಿಕ್ಷಣದ ಹಕ್ಕನ್ನು ಖಾತರಿಪಡಿಸುವ ಸರ್ಕಾರದ ಬದ್ಧತೆಯನ್ನು ಅಳೆಯಲು.	ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಶ್ರೇಣಿಗಳ ಸಂಖ್ಯೆ (ಎ) ಬೋಧನಾ ಶುಲ್ಕದಿಂದ ಮುಕ್ತವಾಗಿದೆ ಮತ್ತು/ಅಥವಾ (ಬಿ) ರಾಷ್ಟ್ರೀಯ ಶಾಸನದ ಪ್ರಕಾರ ಕಡ್ಡಾಯವಾಗಿದೆ.
4.2.1	ಆರೋಗ್ಯ, ಕಲಿಕೆ ಮತ್ತು ಮಾನಸಿಕ ಸಾಮಾಜಿಕ ಯೋಗಕ್ಷೇಮದಲ್ಲಿ ಬೆಳವಣಿಗೆಯ ಹಾದಿಯಲ್ಲಿರುವ 24–59 ತಿಂಗಳ ವಯಸ್ಸಿನ ಮಕ್ಕಳ ಪ್ರಮಾಣ	ಆರಂಭಿಕ ಬಾಲ್ಯದ ಬೆಳವಣಿಗೆ ಜೀವನ ಪರ್ಯಂತ ಅಭಿವೃದ್ಧಿ ಹೊಂದಲು ವೇದಿಕೆಯನ್ನು ಹೊಂದಿಸುತ್ತದೆ. ಮಾನವ ಬಂಡವಾಳವನ್ನು ನಿರ್ಮಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ವಯಸ್ಕರ ಆರೋಗ್ಯ, ಶಿಕ್ಷಣ ಮತ್ತು ಉತ್ಪಾದಕತೆಯನ್ನು ಸುಧಾರಿಸಲು ದೇಶವು ಮಾಡಬಹುದಾದ ಅತ್ಯಂತ ನಿರ್ಣಾಯಕ ಮತ್ತು ವೆಚ್ಚ–ಪರಿಣಾಮಕಾರಿ ಹೂಡಿಕೆಗಳಲ್ಲಿ ಆರಂಭಿಕ ಬಾಲ್ಯದ ಬೆಳವಣಿಗೆ ಹೂಡಿಕೆಯು ಒಂದಾಗಿದೆ. ಆರಂಭಿಕ ಬಾಲ್ಯದ ಬೆಳವಣಿಗೆ ಆರಂಭದಿಂದಲೂ ಸಮಾನವಾಗಿದೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಉತ್ತಮ ಸೂಚನೆಯನ್ನು ನೀಡುತ್ತದೆ. ಆರಂಭಿಕ ಬಾಲ್ಯದ ಬೆಳವಣಿಗೆಯನ್ನು ಸುಧಾರಿಸುವ ಪ್ರಯತ್ನಗಳು	ಆರೋಗ್ಯ, ಕಲಿಕೆ ಮತ್ತು ಮನೋಸಾಮಾಜಿಕ ಯೋಗಕ್ಷೇಮದಲ್ಲಿ ಬೆಳವಣಿಗೆಯ ಹಾದಿಯಲ್ಲಿರುವ 24 ರಿಂದ 59 ತಿಂಗಳ ವಯಸ್ಸಿನ ಮಕ್ಕಳ ಸಂಖ್ಯೆ; • 24 ರಿಂದ 59 ತಿಂಗಳ ವಯಸ್ಸಿನ ಮಕ್ಕಳ ಒಟ್ಟು ಸಂಖ್ಯೆ.

ಸೂಚಕ	ಸೂಚಕದ ವಿವರಣೆ	ಉದ್ದೇಶ	ಅಗತ್ಯವಿದ್ದ ದತ್ತಾಂಶ
		ವ್ಯಕ್ತಿಗಳು ಮತ್ತು ಸಮಾಜಗಳಿಗೆ ಮಾನವ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ತರಬಹುದು.	
4.2.2	ಸಂಘಟಿತ ಕಲಿಕೆಯಲ್ಲಿ ಭಾಗವಹಿಸುವಿಕೆ ದರ (ಅಧಿಕೃತ ಪ್ರಾಥಮಿಕ ಪ್ರವೇಶ ವಯಸ್ಸಿನ ಒಂದು ವರ್ಷದ ಮೊದಲು)	ಪ್ರಾಥಮಿಕ ಶಾಲೆಯ ಅಧಿಕೃತ ಆರಂಭಿಕ ವಯಸ್ಸಿನ ಒಂದು ವರ್ಷದ ಮೊದಲು ಮಕ್ಕಳ ಸಂಘಟಿತ ಕಲಿಕೆಯ ಚಟುವಟಿಕೆಗಳಿಗೆ ಒಡ್ಡಿಕೊಳ್ಳುವುದನ್ನು ಸೂಚಕ ಅಳೆಯುತ್ತದೆ.	ಒಂದು ವರ್ಷದ ವಯಸ್ಸಿನ ಮೂಲಕ ಸಂಘಟಿತ ಕಲಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆ; ಒಂದು ವರ್ಷದ ವಯಸ್ಸಿನ ಜನಸಂಖ್ಯೆಯ ಅಂದಾಜುಗಳು (ಆಡಳಿತಾತ್ಮಕ ದತ್ತಾಂಶವನ್ನು ಬಳಸಿದರೆ); ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಅಧಿಕೃತ ಪ್ರವೇಶ ವಯಸ್ಸಿನ ದತ್ತಾಂಶ.
4.2.3	ಧನಾತ್ಮಕ ಮತ್ತು ಉತ್ತೇಜಕ ಮನೆ ಕಲಿಕೆಯ ವಾತಾವರಣವನ್ನು ಅನುಭವಿಸುತ್ತಿರುವ 5 ವರ್ಷದೊಳಗಿನ ಮಕ್ಕಳ ಶೇಕಡಾವಾರು	ಸೂಚಕವು ಮಕ್ಕಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಹಾನಿ ಮಾಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಕಲಿಕೆಯ ವಾತಾವರಣವನ್ನು ಮೌಲ್ಯಮಾಪನ ಮಾಡುವ ಗುರಿಯನ್ನು ಹೊಂದಿದೆ.	ಅಳತೆ ಮಾಡಿದ ಪ್ರದೇಶಗಳಲ್ಲಿ ಚಟುವಟಿಕೆಗಳಲ್ಲಿ ಭಾಗವಹಿಸುವ 36–59 ತಿಂಗಳ ವಯಸ್ಸಿನ ಮಕ್ಕಳ ಸಂಖ್ಯೆ ಮತ್ತು ಅದೇ ವಯಸ್ಸಿನ ಮಕ್ಕಳ ಒಟ್ಟು ಸಂಖ್ಯೆ.
4.2.4	(ಎ) ಪ್ರಾಥಮಿಕ–ಪೂರ್ವ ಶಿಕ್ಷಣ ಮತ್ತು (ಬಿ) ಬಾಲ್ಯದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಒಟ್ಟು ಆರಂಭಿಕ ಬಾಲ್ಯ ಶಿಕ್ಷಣ ದಾಖಲಾತಿ ಅನುಪಾತ	ಬಾಲ್ಯದ ಶಿಕ್ಷಣದ ಎರಡು ವಿಭಾಗಗಳಲ್ಲಿ ಭಾಗವಹಿಸುವಿಕೆಯ ಸಾಮಾನ್ಯ ಮಟ್ಟವನ್ನು ಪ್ರತ್ಯೇಕವಾಗಿ ತೋರಿಸಲು: ಪ್ರಾಥಮಿಕ–ಪೂರ್ವ ಶಿಕ್ಷಣ ಮತ್ತು ಆರಂಭಿಕ ಬಾಲ್ಯದ ಶೈಕ್ಷಣಿಕ ಅಭಿವೃದ್ಧಿ. ಬಾಲ್ಯದ ಶಿಕ್ಷಣದ ವಯಸ್ಸಿನ ಮಕ್ಕಳನ್ನು ಸೇರಿಸಲು ಶಿಕ್ಷಣ ವ್ಯವಸ್ಥೆಯ ಸಾಮರ್ಥ್ಯವನ್ನು ಮೌಲ್ಯಗಳು ಸೂಚಿಸುತ್ತವೆ.	ಪ್ರಾಥಮಿಕ–ಪೂರ್ವ ಶಿಕ್ಷಣ ಮತ್ತು ಆರಂಭಿಕ ಬಾಲ್ಯದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ದಾಖಲಾತಿ; ಒಂದು ವರ್ಷದ ವಯಸ್ಸಿನ ಜನಸಂಖ್ಯೆಯ ಅಂದಾಜುಗಳು (ಆಡಳಿತಾತ್ಮಕ ದತ್ತಾಂಶವನ್ನು ಬಳಸುತ್ತಿದ್ದರೆ) ಮತ್ತು ಬಾಲ್ಯದ ಶಿಕ್ಷಣದ ರಚನೆಯ (ಪ್ರವೇಶ ವಯಸ್ಸು ಮತ್ತು ಅವಧಿ) ಡೇಟಾ.
4.2.5	ಕಾನೂನು ಚೌಕಟ್ಟಿನಲ್ಲಿ ಖಾತರಿಪಡಿಸಲಾದ (ಎ) ಉಚಿತ ಮತ್ತು (ಬಿ) ಕಡ್ಡಾಯ ಪ್ರಾಥಮಿಕ–ಪೂರ್ವ ಶಿಕ್ಷಣದ ವರ್ಷಗಳ ಸಂಖ್ಯೆ	ಮಕ್ಕಳು ಮತ್ತು ಯುವಜನರಿಗೆ ಶಿಕ್ಷಣದ ಹಕ್ಕನ್ನು ಖಾತರಿಪಡಿಸುವ ಸರ್ಕಾರದ ಬದ್ಧತೆಯನ್ನು ಅಳೆಯಲು.	ಶಿಕ್ಷಣವು (ಎ) ಉಚಿತ ಮತ್ತು/ಅಥವಾ (ಬಿ) ಕಡ್ಡಾಯವಾಗಿರುವ ವಯಸ್ಸಿನ ಶ್ರೇಣಿ. ಪ್ರತಿ ಹಂತದ ಶಿಕ್ಷಣದ ರಚನೆಯ (ಪ್ರವೇಶ ವಯಸ್ಸು ಮತ್ತು ಅವಧಿ) ದತ್ತಾಂಶ ಸಹ ಅಗತ್ಯವಿದೆ.
4.5.1	ವಿಂಗಡಣೆ ಮಾಡಬಹುದಾದ ಈ ಪಟ್ಟಿಯಲ್ಲಿರುವ ಎಲ್ಲಾ ಶಿಕ್ಷಣ ಸೂಚಕಗಳಿಗೆ ಸಮಾನತೆಯ ಸೂಚ್ಯಂಕಗಳು (ಮಹಿಳೆ/ಪುರುಷ, ಗ್ರಾಮೀಣ/ನಗರ, ತಳ/ಉನ್ನತ ಸಂಪತ್ತು ಮತ್ತು ಇತರ ಅಂಗವೈಕಲ್ಯ ಸ್ಥಿತಿ, ಸ್ಥಳೀಯ ಜನರು ಮತ್ತು ಸಂಘರ್ಷ–ಪೀಡಿತರು, ಡೇಟಾ ಲಭ್ಯವಾಗುವಂತೆ)	ನಿರ್ದಿಷ್ಟ ಸೂಚಕಕ್ಕೆ ಸಂಬಂಧಿಸಿದಂತೆ ಆಸಕ್ತಿಯ ಎರಡು ಉಪ–ಜನಸಂಖ್ಯೆಗಳ ನಡುವಿನ ಅಸಮಾನತೆಯ ಸಾಮಾನ್ಯ ಮಟ್ಟವನ್ನು ಅಳೆಯಲು.	ಆಸಕ್ತಿಯ ಉಪ–ಜನಸಂಖ್ಯೆಗಳಿಗೆ ಸೂಚಕ ಮೌಲ್ಯಗಳು.
4.5.2	ಎ) ಆರಂಭಿಕ ಶ್ರೇಣಿಗಳು, ಬಿ) ಪ್ರಾಥಮಿಕದ ಕೊನೆಯಲ್ಲಿ ಮತ್ತು ಸಿ) ತಮ್ಮ ಮೊದಲ ಅಥವಾ ಮನೆ ಭಾಷೆಯನ್ನು ಬೋಧನಾ ಭಾಷೆಯಾಗಿ ಹೊಂದಿರುವ ಕಿರಿಯ ಮಾಧ್ಯಮಿಕ ಶಿಕ್ಷಣದ ಕೊನೆಯಲ್ಲಿ ಶೇಕಡಾವಾರು ವಿದ್ಯಾರ್ಥಿಗಳು	ತರಗತಿಯಲ್ಲಿ ಸಂವಹನ ಮತ್ತು ತಿಳುವಳಿಕೆಗೆ ಭಾಷೆ ಪ್ರಮುಖವಾಗಿದೆ. ಮಾತೃಭಾಷೆಯಲ್ಲಿನ ಶಿಕ್ಷಣವು ಸುಧಾರಿತ ಕಲಿಕೆಯ ಫಲಿತಾಂಶಗಳೊಂದಿಗೆ ಸಂಬಂಧ ಹೊಂದಿದೆ. ಮಾತೃಭಾಷೆಯ ಸೂಚನೆಯು ಕಲಿಕೆಯ ಫಲಿತಾಂಶಗಳನ್ನು ಸುಧಾರಿಸುತ್ತದೆ ಎಂದು ಸಂಶೋಧನೆ ಸೂಚಿಸುತ್ತದೆ, ಇದರಲ್ಲಿ ಮಕ್ಕಳು ನಂತರ ಶಾಲೆಯಲ್ಲಿ ಭಾಷೆಗಳನ್ನು ಕಲಿಯುವ ಸಾಮರ್ಥ್ಯವೂ ಸೇರಿದೆ.	ಮನೆಯಲ್ಲಿ ಹೆಚ್ಚಾಗಿ ಮಾತನಾಡುವ ಮತ್ತು ಕಲಿಸುವಾಗ ಶಿಕ್ಷಕರು ಮಾತನಾಡುವ ಭಾಷೆಯನ್ನು ಸಂಗ್ರಹಿಸುವ ಮನೆಯ ಸಮೀಕ್ಷೆಗಳ ಡೇಟಾ; ಮನೆಯಲ್ಲಿ ಮಾತನಾಡುವ ಭಾಷೆಯ ಕುರಿತು ವಿದ್ಯಾರ್ಥಿಗಳ ಮೌಲ್ಯಮಾಪನಗಳ ಹಿನ್ನೆಲೆ ಪ್ರಶ್ನಾವಳಿಗಳಿಂದ ಡೇಟಾ; ಮತ್ತು ದೇಶದ ಮೂಲಕ ಐಎಸ್‌ಸಿಇಡಿ ಮ್ಯಾಪಿಂಗ್.

ಸೂಚಕ	ಸೂಚಕದ ವಿವರಣೆ	ಉದ್ದೇಶ	ಅಗತ್ಯವಿದ್ದ ದತ್ತಾಂಶ
4.5.3	ಅನನುಕೂಲಕರ ಜನಸಂಖ್ಯೆಗೆ ಶಿಕ್ಷಣ ಸಂಪನ್ಮೂಲಗಳನ್ನು ಮರುಹಂಚಿಕೆ ಮಾಡಲು ಹಣಕಾಸಿನ ಕಾರ್ಯವಿಧಾನಗಳ ಅಸ್ತಿತ್ವ	ಈ ಸೂಚಕವು ಶಿಕ್ಷಣದಲ್ಲಿನ ಅಸಮಾನತೆಯನ್ನು ಕಡಿಮೆ ಮಾಡಲು ದೇಶಗಳು ಮಾಡುವ ಪ್ರಯತ್ನಗಳನ್ನು ನೋಡುವ ಗುರಿಯನ್ನು ಹೊಂದಿದೆ. ದೊಡ್ಡ ಶ್ರೇಣಿಯ ನೀತಿಗಳು ಸಮಾನತೆಗೆ ಕೊಡುಗೆ ನೀಡುತ್ತವೆ; ಈ ಸೂಚಕವು ಹಣಕಾಸು ನೀತಿಗಳ ಉಪವಿಭಾಗ ಮತ್ತು ಅವುಗಳ ಕಾರ್ಯಕ್ರಮಗಳ ಮೇಲೆ ಕೇಂದ್ರೀಕರಿಸುತ್ತದೆ. ಇದರ ಉದ್ದೇಶ ರಚನೆಯಾಗಿದೆ: ಈ ಪ್ರಮುಖ ವಿಷಯದ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಆಸಕ್ತಿಯನ್ನು ಹುಟ್ಟುಹಾಕಲು ಮತ್ತು ಭವಿಷ್ಯದಲ್ಲಿ ಉತ್ತಮ ನೀತಿಗಳನ್ನು ವಿನ್ಯಾಸಗೊಳಿಸಲು ದೇಶಗಳಿಗೆ ಸಹಾಯ ಮಾಡಲು.	ರಾಷ್ಟ್ರೀಯ ಮೂಲಗಳಿಂದ ನೀತಿ ದಾಖಲೆಗಳು.
4.5.4	ಶಿಕ್ಷಣದ ಮಟ್ಟ ಮತ್ತು ನಿಧಿಯ ಮೂಲದಿಂದ ಪ್ರತಿ ವಿದ್ಯಾರ್ಥಿಗೆ ಶಿಕ್ಷಣ ವೆಚ್ಚ	ಈ ಸೂಚಕವು ಒಬ್ಬ ವಿದ್ಯಾರ್ಥಿಯಲ್ಲಿ ಸರಾಸರಿ ಹೂಡಿಕೆ ಮಾಡಲಾದ ಸಂಪನ್ಮೂಲಗಳ ಪ್ರಮಾಣವನ್ನು ಪ್ರತಿಬಿಂಬಿಸುತ್ತದೆ, ಸರ್ಕಾರಿ ಮೂಲಗಳನ್ನು ಮೀರಿ ನಿಜವಾದ ಘಟಕ ವೆಚ್ಚವನ್ನು ಲೆಕ್ಕಹಾಕಬಹುದು. ಶಿಕ್ಷಣದ ಮಟ್ಟಗಳ ನಡುವೆ, ಕಾಲಾನಂತರದಲ್ಲಿ ಅಥವಾ ದೇಶಗಳ ನಡುವೆ ಹೋಲಿಕೆ ಮಾಡಲು ಪ್ರತಿ ವಿದ್ಯಾರ್ಥಿಯ ಆಧಾರವನ್ನು ಬಳಸುವುದು ಉಪಯುಕ್ತವಾಗಿದೆ. ತಲಾವಾರು ಜಿಡಿಪಿಯ ಶೇಕಡಾವಾರು ಅಥವಾ ಪಿಪಿಪಿ ನಲ್ಲಿ ಸೂಚಕವನ್ನು ವ್ಯಕ್ತಪಡಿಸುವುದು, ದೇಶಗಳ ನಡುವಿನ ಹೋಲಿಕೆಗಳನ್ನು ಅನುಮತಿಸುತ್ತದೆ ಮತ್ತು ಸಮಯ–ಸರಣಿಯನ್ನು ನೋಡುವಾಗ ಸ್ಥಿರ ಮೌಲ್ಯಗಳನ್ನು ಬಳಸುವುದು ಹೇಗೆ ನೈಜ (ಹಣದುಬ್ಬರದ ಪರಿಣಾಮಗಳನ್ನು ತೆಗೆದುಹಾಕುವುದು) ಸಂಪನ್ಮೂಲಗಳು ಹೇಗೆ ವಿಕಸನಗೊಳ್ಳುತ್ತಿವೆ ಎಂಬುದನ್ನು ಮೌಲ್ಯಮಾಪನ ಮಾಡಲು ಅವಶ್ಯಕವಾಗಿದೆ.	ಶಿಕ್ಷಣದ ಮಟ್ಟ ಮತ್ತು ಸಂಸ್ಥೆಯ ಪ್ರಕಾರದ ಮೂಲಕ ಶಿಕ್ಷಣದ ಮೇಲಿನ ಕೇಂದ್ರ, ಪ್ರಾದೇಶಿಕ ಮತ್ತು ಸ್ಥಳೀಯ ಸರ್ಕಾರದ ವೆಚ್ಚದ ಡೇಟಾ; ಶಿಕ್ಷಣದ ಮಟ್ಟ ಮತ್ತು ಸಂಸ್ಥೆಯ ಪ್ರಕಾರದಿಂದ ಶಿಕ್ಷಣದ ಮೇಲಿನ ಮನೆಯ ಮತ್ತು (ಆದರ್ಶವಾಗಿ) ಇತರ ಖಾಸಗಿ ವೆಚ್ಚಗಳು; ಶಿಕ್ಷಣದ ಮಟ್ಟ ಮತ್ತು ಸಂಸ್ಥೆಯ ಪ್ರಕಾರದಿಂದ ಶಿಕ್ಷಣದ ಮೇಲಿನ ಅಂತರರಾಷ್ಟ್ರೀಯ ಖರ್ಚು; ಶಿಕ್ಷಣದ ಮಟ್ಟ ಮತ್ತು ಸಂಸ್ಥೆಯ ಪ್ರಕಾರದಿಂದ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ.
4.ಎ.1	ಸೇವೆಯ ಪ್ರಕಾರ, ಮೂಲಭೂತ ಸೇವೆಗಳನ್ನು ಒದಗಿಸುವ ಶಾಲೆಗಳ ಪ್ರಮಾಣ	ಎಲ್ಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಪ್ರಮುಖ ಮೂಲಭೂತ ಸೇವೆಗಳು ಮತ್ತು ಸೌಲಭ್ಯಗಳಿಗೆ ಶಾಲೆಗಳಲ್ಲಿನ ಪ್ರವೇಶವನ್ನು ಸೂಚಕವು ಅಳೆಯುತ್ತದೆ.	ನೀಡಿರುವ ಸೌಲಭ್ಯಗಳನ್ನು ಹೊಂದಿರುವ ಪ್ರವೇಶವಿರುವ ಮತ್ತು ಪ್ರವೇಶವಿಲ್ಲದ ಶಿಕ್ಷಣದ ಪ್ರತಿ ಹಂತದಲ್ಲಿರುವ ಶಾಲೆಗಳ ಸಂಖ್ಯೆ.
4.ಎ.2	ಎ) ಪ್ರಾಥಮಿಕ ಮತ್ತು ಬಿ) ಕಿರಿಯ ಮಾಧ್ಯಮಿಕ ಶಿಕ್ಷಣದಲ್ಲಿ ಕಳೆದ 12 ತಿಂಗಳುಗಳಲ್ಲಿ ಬೆದರಿಸುವಿಕೆಯನ್ನು ಅನುಭವಿಸುತ್ತಿರುವ ವಿದ್ಯಾರ್ಥಿಗಳ ಶೇಕಡಾವಾರು	ಈ ಸೂಚಕವು ಬೆದರಿಕೆಗೆ ಸಂಬಂಧಿಸಿದ ಅನುಭವಗಳನ್ನು ಅಳೆಯಲು ಉದ್ದೇಶಿಸಿದೆ, ಉದಾಹರಣೆಗೆ ಆಕ್ರಮಣಕಾರಿ ಅಡ್ಡಹೆಸರಿನಿಂದ ಕರೆಯುವುದು, ನೋಯಿಸುವುದಾಗಿ ಬೆದರಿಕೆ ಹಾಕುವುದು ಅಥವಾ ಇತರ ವಿದ್ಯಾರ್ಥಿಗಳು ಅವರ ಬಗ್ಗೆ ಆಕ್ಷೇಪಾರ್ಹ ಚಿತ್ರಗಳು ಅಥವಾ ಪಠ್ಯಗಳನ್ನು ಪೋಸ್ಟ್ ಮಾಡುವುದು. ಬಲಿಪಶುಗಳಿಗೆ ಮತ್ತು ಅಪರಾಧಿಗಳಿಗೆ ಶೈಕ್ಷಣಿಕ ಮತ್ತು ಆರೋಗ್ಯದ ಫಲಿತಾಂಶಗಳನ್ನು ಕಡಿಮೆ ಮಾಡಲು ಬೆದರಿಸುವಿಕೆಯನ್ನು ಲಿಂಕ್ ಮಾಡಲಾಗಿದೆ.	ನಿರ್ದಿಷ್ಟಪಡಿಸಿದ ಶಿಕ್ಷಣದ ಮಟ್ಟಕ್ಕೆ ಅನುಗುಣವಾದ ತರಗತಿ ಅಥವಾ ವಯಸ್ಸಿನ–ಶ್ರೇಣಿಯ ದತ್ತಾಂಶ ಪ್ರತಿನಿಧಿಸುತ್ತದೆ. ವ್ಯಾಖ್ಯಾನಿಸಿದಂತೆ ಬೆದರಿಸುವಿಕೆಗೆ ಮಗುವನ್ನು ಒಡ್ಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಒಳಗೊಂಡಿರುತ್ತದೆ.
4.ಎ.3	ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಸಂಸ್ಥೆಗಳ ಮೇಲಿನ ದಾಳಿಗಳ ಸಂಖ್ಯೆ	ಸೂಚಕವು ಕಲಿಕೆಯ ಪರಿಸರದ ಸುರಕ್ಷತೆಯ ವಿಶೇಷವಾಗಿ ಸಶಸ್ತ್ರ ಸಂಘರ್ಷ ಮತ್ತು ರಾಜಕೀಯ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ವಿಶಾಲ ಅಳತೆಯಾಗಿದೆ. ಜಾಗತಿಕ ಟ್ರ್ಯಾಕಿಂಗ್‌ಗಾಗಿ ಲಭ್ಯವಿರುವ ದತ್ತಾಂಶವನ್ನು ಪ್ರಸ್ತುತ ದೇಶ–ಮಟ್ಟದ ಮತ್ತು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾಧ್ಯಮ ವರದಿಗಳಲ್ಲಿ ಕೆಲಸ ಮಾಡುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಎನ್‌ಜಿಒಗಳು ಸೇರಿದಂತೆ ವಿವಿಧ ಮಧ್ಯಸ್ಥಗಾರರ ವರದಿಯಿಂದ ಸಂಗ್ರಹಿಸಲಾಗಿದೆ.	ವಿದ್ಯಾರ್ಥಿಗಳು, ಶಿಕ್ಷಣ ಸಿಬ್ಬಂದಿ ಮತ್ತು ಶೈಕ್ಷಣಿಕ ಮೂಲಸೌಕರ್ಯಗಳ ಮೇಲಿನ ದಾಳಿಯ ಸಂಖ್ಯೆಗಳು ಮತ್ತು ಪ್ರಕಾರಗಳ ಮಾಹಿತಿ.
4.ಬಿ.1	ವಲಯ ಮತ್ತು ಅಧ್ಯಯನದ ಪ್ರಕಾರದಿಂದ ವಿದ್ಯಾರ್ಥಿವೇತನಕ್ಕಾಗಿ ಅಧಿಕೃತ ಅಭಿವೃದ್ಧಿ ನೆರವಿನ ಪ್ರಮಾಣಧ ಹರಿವು.	ಒಡಿಎ ಎನ್ನುವುದು ಅಂತರಾಷ್ಟ್ರೀಯ ಅಭಿವೃದ್ಧಿ ಸಹಕಾರದ ಅಂಗೀಕೃತ ಅಳತೆಯಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಒಟ್ಟು ಒಡಿಎ ಹರಿವು ದಾನಿಗಳು ವಿದ್ಯಾರ್ಥಿವೇತನಕ್ಕಾಗಿ ಒದಗಿಸುವ ಸಾರ್ವಜನಿಕ ಪ್ರಯತ್ನವನ್ನು ಪ್ರಮಾಣೀಕರಿಸುತ್ತದೆ. ದಾನಿ ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶದ ಪ್ರಜೆಗಳಿಗೆ	ಫಲಾನುಭವಿ ದೇಶದ ವಿದ್ಯಾರ್ಥಿಗಳಿಗೆ ನೀಡಲಾದ ವಲಯ ಮತ್ತು ಅಧ್ಯಯನದ ಪ್ರಕಾರದ ಮೂಲಕ ವಿದೇಶದಲ್ಲಿ ಅಧ್ಯಯನಕ್ಕಾಗಿ ವಿದ್ಯಾರ್ಥಿ ವೇತನಕ್ಕಾಗಿ ಒಟ್ಟು ಅಧಿಕೃತ ಅಭಿವೃದ್ಧಿ ಸಹಾಯದ ಒಟ್ಟು ವಿತರಣೆಗಳು.

